ಸಂವಾದ

ನವೆಂಬರ್ ೨೦೦೬ ರೂ. ೨೦



ನೆನಪು:
ಮಹಾನ್
ರಾಷ್ಟ್ರ ನಾಯಕ
ಕಾನ್ಷಿರಾಂ

ವಂದೇ ಮಾತರಂ
ಅಂತರಂಗ-ಬಹಿರಂಗ

ಗಾಡಿಗಾಲ್ಲ ವಾಸ್ತವತೆ

ಸಂವಾದ

ಮಾಸ ಪತ್ರಿಕೆ

ಸಂಪುಟ ೫ ಸಂಚಿಕೆ ೧

ನವಂಬರ್ ೨೦೦೬

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು.ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧
© ೨೩೨೮೭೯೪೩/೯೪೪೮೦ ೪೮೩೦೬
ಇ-ಮೇಲ್ : samvaada@hotmail.com
honnapura@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
© 080-23287943, 94480 48306
e- mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

- ಪತ್ರಗಳು ೩
- ಹೊಸ ಪುಸ್ತಕ ೪
- ಅಂತ ರಂಗ ೫
- ಗಡಿಗಳ ವಾಸ್ತವತೆ ೬
  - ಡಾ॥ ವಸು
- ಹಿಂದುತ್ವವಾದಿಗಳ ಅಟ್ಟಹಾಸ ೧೦
  - ನಾ. ದಿವಾಕರ



- ನನ್ನ ಪ್ರೀತಿಯ ಕಡಲು ೧೪
  - ಡಾ॥ ಎಚ್. ನಾಗವೇಣಿ
- ವಂದೇ ಮಾತರಮ್ ಬಗ್ಗೆ ೧೮
  - ಪಿ.ಎಸ್. ಶ್ರೀಧರ್ ಮೂರ್ತಿ
- ವಂದೇ ಮಾತರಂನ ರಾಷ್ಟ್ರೀಯತೆ? ೨೦
  - ಎ.ಕೆ. ಕುಕ್ಕಿಲ
- ಮಹಾನ್ ರಾಷ್ಟ್ರ ನಾಯಕ ಕಾನ್ಷಿರಾಂ ೨೪
  - ಶ್ರೀಧರ ಕಲಿವೀರ
- ಬ್ರಾಹ್ಮಿನ್ ಫೋಬಿಯಾ ೨೮
  - ಡಾ॥ ಸಿ.ಜಿ. ಲಕ್ಷ್ಮಿಪತಿ
- 'ಕಾಡು ಪ್ರತಿಭೆ ಮಾರಪ್ಪ' ಕುರಿತು ೩೦
  - ವಿ. ಚಂದ್ರಶೇಖರ ನಂಗಲಿ
- ಸಿದ್ದರಾಮಯ್ಯ 'ಅಹಿಂದ'ದ ದಿಕ್ಕು ತಪ್ಪಿಸಿದರೇ? ೩೪
  - ವೈ. ಮರಿಸ್ವಾಮಿ
- ಅಂಬೇಡ್ಕರ್ ಮತ್ತು ಮಹಿಳಾ ಚಳವಳಿ ೩೬
  - ಸಣ್ಣಂಗಿರಾಜ
- ದಲಿತ್ ಡೈರಿ ೩೮
  - ಚಂದ್ರ ಭಾನ್ ಪ್ರಸಾದ್
- ಬುದ್ಧಾಯಣ ೪೨
  - ಸಿ. ಎಚ್. ರಾಜಶೇಖರ್



ಕವನಗಳು :
- ಝೂನ್ ಗಜಲುಗಳು ೨೨
- ಕಬೀರರ ವಚನಗಳು ೩೩

ಮುಖಪುಟ ಕಲೆ: ಬಿ.ಸಿ. ಶಿವಕುಮಾರ್, ವಿನ್ಯಾಸ: ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಆರ್ಥಿಕ ಸಮಾನತೆಗೆ ಹೋರಾಡಬೇಕು



ಪ್ರೀತಿಯ ಸಂಪಾದಕರೇ,

ಆಗಸ್ಟ್ ತಿಂಗಳ ದಲಿತ್ ಡೈರಿ ಬರೆದಿರುವ ಚಂದ್ರಭಾನ್ ಪ್ರಸಾದ್ ಹೊಸ ದಲಿತ ತಲೆಮಾರಿನಲ್ಲಿ ಕೆಲವರಾದರೂ ಲಕ್ಷಾದಿಪತಿಗಳು ಕೋಟ್ಯಾಧಿಪತಿಗಳು ಎಂಪಿಗಳಾಗಬೇಕೆಂದು ಬಲವಾಗಿ ವಾದ ಮಾಡಿದ್ದಾರೆ. ಯಾಕಾಗಬಾರದು? ಹಾಗೆ ಲಕ್ಷಾಧಿಪತಿಗಳಾದವರು ಬ್ರಾಹ್ಮಣರನ್ನೂ, ವೈಶ್ಯರನ್ನೂ, ಕ್ಷತ್ರಿಯರನ್ನೂ ತಮ್ಮ ಅಧೀನರಾಗಿ ಕೆಲಸ ಮಾಡಲು ಕರೆಯಲೂಬಹುದು ಎಂದು ಅವರು ಅಭಿಪ್ರಾಯ ಪಡುತ್ತಾರೆ. ಆ ಜನ ಹಣಕ್ಕಾಗಿ ಬಾಯ್ಬಿಡುವವರಾಗಿರುವುದರಿಂದ ಈ ಅವಕಾಶವನ್ನು ಅವರು ಸದುಪಯೋಗ ಮಾಡಿಕೊಳ್ಳಲೂಬಹುದು. ಅಂದ ಮಾತ್ರಕ್ಕೆ ಅವರೆಲ್ಲ ಸಮಾಜದಲ್ಲಿ ಕೀಳಾದೆವು ಎಂದು ಭಾವಿಸುವುದಿಲ್ಲ.

ದಲಿತರೆಲ್ಲರೂ ಕೋಟ್ಯಾಧಿಪತಿಗಳಾಗಲು ಸಾಧ್ಯವಿಲ್ಲ. ಈ ಕನಸನ್ನು ಕಟ್ಟಿಕೊಂಡವರಲ್ಲಿ ಬೆರಳೆಣಿಕೆಯಷ್ಟು ಜನ ಕೋಟ್ಯಾಧಿಪತಿಗಳಾಗಬಹುದು. ಇವರು ಎಂಪಿಗಳೂ ಆಗಬಹುದು. ಇದರಿಂದ ದಲಿತ ಸಮುದಾಯಕ್ಕೆ ಆಗುವ ಲಾಭವೇನು ಎಂಬುದೇ ಮುಖ್ಯ ಪ್ರಶ್ನೆ. ಬ್ರಾಹ್ಮಣ ಹೆಂಗಸರನ್ನು ನಮ್ಮ ಮನೆ ಕೆಲಸಕ್ಕೆ ಇಟ್ಟುಕೊಳ್ಳಬೇಕು ಎಂದು ಅಭಿಪ್ರಾಯಪಟ್ಟ ಬಸವಲಿಂಗಪ್ಪನವರ ನಿಲುವೇ ಚಂದ್ರಭಾನು ಪ್ರಸಾದರದು ಎಂದು ನಾನು ಭಾವಿಸುತ್ತೇನೆ. ಬ್ರಾಹ್ಮಣ ಹೆಂಗಸಿಗೆ ತಿಂಗಳಿಗೆ ೫೦೦-೧೦೦೦ ಸಿಕ್ಕಿದರೆ ಲಕ್ಷಾಧಿಪತಿ ದಲಿತರಿಂದ ೧೦ ಸಾವಿರ ೨೦ ಸಾವಿರ, ಅವರಲ್ಲಿ ಕೆಲಸಕ್ಕೆ ಬರುವ ಉಚ್ಚವರ್ಗದವರಿಗೆ ಸಿಗಬಹುದು ಅಷ್ಟೆ.

ಚಂದ್ರ ಭಾನ್ ಪ್ರಸಾದ್ ತಮಗರಿವಿಲ್ಲದೆಯೇ ಬಂಡಾವಾಳಶಾಹಿ ಪದ್ಧತಿ ಎತ್ತಿ ಹಿಡಿಯುವ ಮಾತನ್ನಾಡುತ್ತಿದ್ದಾರೆ. ಅದರಿಂದ ದಲಿತ ಸಮುದಾಯಕ್ಕೆ ಸಿಗುವುದಾದರೂ ಏನು? ಬಂಡವಾಳಶಾಹಿಯ ಗುರಿ ಲಾಭ ಗಳಿಕೆ. ಬಂಡವಾಳಶಾಹಿಗಳೆಲ್ಲ ಒಂದೇ ಜಾತಿಯವರು. ಶ್ರೀಮಂತರ ಜಾತಿ ಅವರದು, ಅವರಿಗೆ ಬಡವರನ್ನು, ದಲಿತರನ್ನು ಕಟ್ಟಿಕೊಂಡು ಏನಾಗಬೇಕಾಗಿದೆ? ಶ್ರೀಮಂತರು ದಲಿತರಾಗಬಹುದು, ಬೇರೆ ಜಾತಿಯವರಾಗಿರಬಹುದು. ಅವರೆಲ್ಲ ಬಡವರನ್ನು, ದಲಿತರನ್ನು ಕಡೆಗಣಿಸಿ ನೋಡುವವರೇ. ಚಂದ್ರ ಭಾನ್ ಪ್ರಸಾದ್‌ರಿಗೆ ಒಂದು ಭ್ರಮೆ, ಲಕ್ಷಾಧಿಪತಿಯಾದರೆ ದಲಿತ ಎಂಪಿಯಾದರೆ ತನ್ನ ಜನಾಂಗವನ್ನೇ ಮೇಲೆತ್ತುವ ನಂಬ ಭ್ರಮೆ. ಶೋಷಕನೆಲ್ಲಾದರೂ ಶೋಷಣೆಯ ವಿರೋಧವಾಗಿ ಹೋರಾಡುವನೇ? ಶೋಷಣಾಮುಕ್ತ, ಸಮಾಜ ರಚನೆ ಬಯಸುವನೇ?

ಹಿಡಿ ಜನರನ್ನು ಲಕ್ಷಾಧಿಪತಿಗಳು ಮಾಡುವ ವಿಚಾರ ಬಿಟ್ಟು ಎಲ್ಲ ದಲಿತರನ್ನು ಆರ್ಥಿಕವಾಗಿ ಮೇಲೆತ್ತುವ ಕೆಲಸ ಮಾಡಬೇಕು. ವಿದ್ಯೆ ನೀಡಬೇಕು. ಆರ್ಥಿಕವಾಗಿ ಅನುಕೂಲವಾಗಿರುವವರನ್ನು ಈ ಸಮಾಜ ಗೌರವಿಸುತ್ತದೆ. ಅವರ ಮಾತಿಗೆ ನಿಗಾ ಕೊಡುತ್ತದೆ. ಆರ್ಥಿಕವಾಗಿ ನಾನು ಎಲ್ಲ ದಲಿತರನ್ನು ಮೇಲೆತ್ತುವುದಾದರೆ, ಅವರಿಗೆ ಆರ್ಥಿಕ ಭದ್ರತೆ ಒದಗಿಸುವುದಾದರೆ, ಸಮಾಜದಲ್ಲಿ ಸರ್ಕಾರದಲ್ಲಿ ದಲಿತನ ಮಾತಿಗೆ ಬೆಲೆ ದೊರೆಯುತ್ತದೆ. ಸರ್ಕಾರ ದಲಿತರ ಈ ಹಕ್ಕನ್ನೂ ಮಾನ್ಯ ಮಾಡದೇ, ರಾಜ್ಯಾಂಗಕ್ಕೇ ಅಪಚಾರ ಮಾಡಿದೆ. ದಲಿತರು ಆರ್ಥಿಕ ಸಮಾನತೆಗಾಗಿ ಹೋರಾಟ ಮಾಡಿಯಾದರೂ ಈ ಹಕ್ಕನ್ನು ಪಡೆಯಬೇಕು.

ಹೆಚ್.ಎಸ್.ದೊರೆಸ್ವಾಮಿ,
ಬೆಂಗಳೂರು

ಪತ್ರಗಳು

ಪ್ರಜ್ವಲಿಸುವ ದೀಪವಾಗಲಿ

"ಸಂವಾದ" ಪತ್ರಿಕೆಯ ಸಂಪಾದಕರಿಗೆ,

ಆಕಸ್ಮಿಕವಾಗಿ ಬಂಧುಗಳ ಮನೆಯಲ್ಲಿ ನಿಮ್ಮ ಪತ್ರಿಕೆ ಕಣ್ಣಿಗೆ ಬಿತ್ತು. ಅಗಾಧ ವಸ್ತ್ರವೊಂದು ಸಿಕ್ಕಂಥಹ ಖುಷಿಯಾಯ್ತು, ಜಾತಿ, ಮತ, ಧರ್ಮಗಳ ಕಪಿ ಮುಷ್ಠಿಯಲ್ಲಿ ಸಿಲುಕಿರುವ ಪ್ರತಿಯೋರ್ವ ವ್ಯಕ್ತಿಗೆ ವೈಚಾರಿಕತೆಯ ಅಗತ್ಯ ಅನಿವಾರ್ಯತೆ, ಪತ್ರಿಕೆ ಒದಗಿಸುತ್ತದೆ.

ದಲಿತರ ನೋವಿನ ಮಿಡಿತಕ್ಕೆ, ಕುಳಿತ ದಲಿತರನ್ನು ನಿಲ್ಲಿಸುವ ಪ್ರಯತ್ನಕ್ಕೆ ನಿಮ್ಮ ಪತ್ರಿಕೆ ಪ್ರಜ್ವಲಿಸುವ ದೀಪವಾಗಲೆಂಬುದು ನನ್ನ ಅಂತರಾತ್ಮದ ಆಸೆ.

ಡಿ. ಶಾರದಮ್ಮ ಕಂಪಾಲಿ
ಗುತ್ತೂರು,
ದಾವಣಗೆರೆ ಜಿಲ್ಲೆ

ಬುದ್ಧ - ಬಸವರು ಯಾರಿಗೆ ಬೇಕು?

ಪ್ರೀತಿಯ ಸಂಪಾದಕರೇ,

'ರಾಜಕೀಯದಲ್ಲಿ ನೈತಿಕತೆ' ಕುರಿತಾದ ಶ್ರೀಮತಿ ಬಿ.ಯು ಸುಮಾ ಅವರ ಲೇಖನ ಗಂಭೀರವಾಗಿದೆ. ಆದರೆ ರಾಜಕೀಯದಲ್ಲಿ ನೈತಿಕತೆಯನ್ನು ಹುಡುಕುವುದಾದರೂ ಹೇಗೆ? ಸುಮಾ ಅವರು ಹೇಳುವ ನೈತಿಕತೆಯನ್ನು ಕನಸಿನಲ್ಲಿ ಮಾತ್ರ ಕಾಣಬಹುದೇನೊ? ಬುದ್ಧ- ಬಸವ- ಅಂಬೇಡ್ಕರ್ ಅವರ ಆದರ್ಶಗಳು ಇಂದು ಯಾರಿಗೆ ಬೇಕಾಗಿವೆ?.

ಬುದ್ಧ ಬೌದ್ಧರಿಗೆ ಬೇಕಾಗಿಲ್ಲ. ಅಂಬೇಡ್ಕರ್ ದಲಿತರಿಗೆ ಬೇಕಾಗಿಲ್ಲ. ಇನ್ನು ಬಸವಣ್ಣ! ಯಾವ ಲಿಂಗಾಯಿತ ತಾನೆ ಬಸವಣ್ಣನನ್ನು ಪ್ರೀತಿಸುತ್ತಾನೆ? ಅದೇನೇ ಇರಲಿ ಲೇಖನ ಚೆನ್ನಾಗಿದೆ.

ಕೆ.ವಿ. ಸುಭಾಷ್ ಚಂದ್ರ, ಮೈಸೂರು

ದುರ್ಬಲರ ಧ್ವನಿಯಾಗಿ 'ಸಂವಾದ'

ಗೌರವನೀಯ ಶ್ರೀ ಇಂದೂಧರ ಹೊನ್ನಾಪುರ, ಸಂಪಾದಕರು, ಸಂವಾದ, ಬೆಂಗಳೂರು ಅವರಿಗೆ-ಶರಣು.

ಮಾನ್ಯರೇ,

ತಮ್ಮೊಂದಿಗೆ ದೂರವಾಣಿಯಲ್ಲಿ ಮಾತನಾಡಿದ ಪ್ರಕಾರ ಪೂಜ್ಯ ಸ್ವಾಮೀಜಿಯವರ ಸಲಹೆಯ ಮೇರೆಗೆ 'ಸಂವಾದ' ಪತ್ರಿಕೆಗೆ ಅಜೀವ ಚಂದಾ ೫,೦೦೦-೦೦ (ಐದು ಸಾವಿರ ಡಿ.ಡಿ. ನಂ. ೪೩೮೯೦ ವಿಜಯಬ್ಯಾಂಕ್ ದಿನಾಂಕ ೫-೧೦-೦೬) ರೂಪಾಯಿಗಳ ಡಿ.ಡಿ. ಇದರೊಂದಿಗೆ ಕಳಿಸಲಾಗಿದೆ.

ಎಡಪರ ನಿಲುವುಗಳೊಂದಿಗೆ, ನೈಜವಾಗಿ ಮೂಡಿಬರುತ್ತಿರುವ ಈ ಪತ್ರಿಕೆ ಪೂಜ್ಯ ಗುರುಗಳಿಗೆ ತುಂಬ ಮೆಚ್ಚಿನ ಪತ್ರಿಕೆ. ಪತ್ರಿಕೆಯಲ್ಲಿ ಬರುವ ಬಹುತೇಕ ಲೇಖನಗಳನ್ನು ತಪ್ಪದೆ ಓದುವರು.

ಈ ಪತ್ರಿಕೆ ಇನ್ನೂ ಚೆನ್ನಾಗಿ ಬೆಳೆಯುವ ಮೂಲಕ, ಶೋಷಿತರ, ಅಸಹಾಯಕ, ದುರ್ಬಲರ ಧ್ವನಿಯಾಗಿ ನಿರಂತರ ಮೂಡಿ ಬರಲೆಂದು ಶ್ರೀಗಳವರು ಆಶಿಸಿದ್ದಾರೆ.

ವಂದನೆಗಳೊಂದಿಗೆ

ಶಿವನ ಗೌಡ, ಕಾರ್ಯದರ್ಶಿ,
ಶ್ರೀ ತೋಂಟದಾರ್ಯಮಠ, ಡಂಬಳ
ಗದಗ

'ಕ್ಯಾಸ್ಟ್ ಕೆಮಿಸ್ಟ್ರಿ' ವಿಶೇಷ

ಗೌರವಾನ್ವಿತ ಇಂದೂಧರ ಸರ್‌ಗೆ,

'ಸಂವಾದ' ತುಂಬಾ ಚೆನ್ನಾಗಿ ಬರುತ್ತಿದೆ. ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟಿಸಿರುವ ಡಾ॥ ಸಿ.ಜಿ. ಲಕ್ಷ್ಮಿಪತಿ ಅವರ 'ಕ್ಯಾಸ್ಟ್ ಕೆಮಿಸ್ಟ್ರಿ' ತುಂಬಾ ವಿಶೇಷವಾಗಿದೆ. ಜಾತಿ ಕುರಿತ ಅವರ ವಿಶ್ಲೇಷಣೆಯಲ್ಲಿ ಹೊಸತನವಿದೆ.

ಜಾತಿ ಎಂದರೇನು ಎಂಬ ಬಗ್ಗೆ ನನ್ನಲ್ಲಿ ತುಂಬಾ ಅನುಮಾನಗಳಿದ್ದವು. ಆ ಅನುಮಾನಗಳಿಗೆಲ್ಲ ಲೇಖನದಲ್ಲಿ ಉತ್ತರ ಸಿಕ್ಕಿವೆ. ಮುಂದಿನ ಭಾಗಗಳಲ್ಲಿ ಇನ್ನು ಹೆಚ್ಚು ಸ್ಪಷ್ಟವಾಗಬಹುದೆಂದು ಆಶಿಸುತ್ತೇನೆ.

ಲೆಬನಾನಿನ ಮೇಲೆ ಇಸ್ರೇಲ್ ನಡೆಸಿದ ಧಾಳಿ ಕುರಿತ ಗೇತ್ ಅಬ್ದುಲ್ ಮಹಮದ್‌ರ ಪ್ರತ್ಯಕ್ಷ ವರದಿ ಕರುಳು ಕಿವಿಚಿತು. ವಂದನೆಗಳು.

ಶಂಕರಲಿಂಗಪ್ಪ, ಹಾವೇರಿ

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ	ರೂ.೧೦೦/-	ರೂ.೩೦೦/-	ರೂ.೫೦೦/-
ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೩೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮೂಲಕ ಕಳುಹಿಸಬೇಕು.



ಕಾಮ ದಹನ

ಲೇ: ಡಾ॥ ಸಣ್ಣರಾಮ

ಬೆಲೆ: ರೂ. ೭೦/-

ಜನಪರ ಚಳವಳಿಗಳ ಹಿನ್ನೆಲೆಯಿಂದ ಬಂದಿರುವ ಡಾ॥ ಸಣ್ಣರಾಮ ಅವರ ಎರಡನೇ ಕಥಾ ಸಂಕಲನ ಇದು. ತಮ್ಮ ಸುತ್ತಲಿನ ಸಾಮಾಜಿಕ ಹಾಗೂ ಆರ್ಥಿಕ ಅದ್ವಾನಗಳನ್ನು ಸೂಕ್ಷ್ಮವಾಗಿ ಗಮನಿಸಿರುವ ಲೇಖಕರು 'ಕಾಮ ದಹನ'ದಲ್ಲಿ ತಾವು ಕಂಡುಂಡ ಬದುಕಿನ ವಾಸ್ತವಗಳನ್ನು ಸುಂದರವಾಗಿ ಬಿಚ್ಚಿಡುತ್ತಾರೆ. ಗ್ರಾಮ ಸಮಾಜದ ವೈಪರೀತ್ಯಗಳನ್ನು ಪ್ರಾಮಾಣಿಕವಾಗಿ ದಾಖಲಿಸುವ ಕಥೆಗಾರರು ತಾವು ಹುಟ್ಟಿ ಬಂದ ಸಮಾಜದ ಪ್ರೀತಿ- ಹಿಂಸೆ, ಬಡತನ ಜೀವನೋತ್ಸಾಹ ಇತ್ಯಾದಿಗಳ ಬಗ್ಗೆ ನಿರ್ಲಿಪ್ತರಾಗಿ ನಿರೂಪಿಸಿದ್ದಾರೆ. ಮನುಷ್ಯ ಸಂಬಂಧಗಳ ಸೂಕ್ಷ್ಮಗಳು ಅತ್ಯಂತ ಮಾನವೀಯವಾಗಿ ಮೂಡಿ ಬಂದಿದೆ.

ಪ್ರಕಾಶಕರು: ಶ್ರೀಮತಿ ಹೆಚ್.ಎಸ್. ನಾಗರತ್ನ ಶಿವಮೊಗ್ಗ

ವಸುಂಧರೆಯ ಗ್ಯಾನ

ಲೇ: ಡಾ॥ ಎಚ್. ನಾಗವೇಣಿ

ಬೆಲೆ: ರೂ. ೩೫/-

'ಗಾಂಧಿ ಬಂದ' ಮತ್ತು 'ಮೀಯುವ ಆಟ' ಕೃತಿಗಳ ಮೂಲಕ ಕನ್ನಡ ಸಾಹಿತ್ಯದಲ್ಲಿ ಶಾಶ್ವತ ಸ್ಥಾನ ಸಂಪಾದಿಸಿರುವ ನಾಗವೇಣಿ ಅವರ ಮೂರನೇ ಕೃತಿ ಇದು. ಕಡಲ ತಡಿಯ ಬದುಕಿಗೆ ಅರ್ಥಪೂರ್ಣ ಶಬ್ಧ ಚಿತ್ರ ಕಟ್ಟಿಕೊಡುವ ಲೇಖಕಿ, ಏಕಮುಖಿ ಸಾಹಿತ್ಯ ಕೃಷಿಗೆ ಬಹುಮುಖಿ ಅನನ್ಯತೆಯನ್ನು ತಂದು ಕೊಡುವ ಮೂಲಕ ದಕ್ಷಣ ಕನ್ನಡದ ಸಾಂಸ್ಕೃತಿಕ ಲೋಕದ ಅದ್ಭುತ ಅಚ್ಚರಿಗಳನ್ನು ಕನ್ನಡ ಓದುಗರಿಗೆ ಉಣಬಡಿಸಿದ್ದಾರೆ. 'ವಸುಂಧರೆಯ ಗ್ಯಾನ' ಸಧ್ಯದ ಉತ್ತಮ ಪುಸ್ತಕಗಳಲ್ಲಿ ಮುಖ್ಯವಾದುದು.

ಪ್ರಕಾಶಕರು: ಲೋಹಿಯಾ ಪ್ರಕಾಶನ, ಕಪ್ಪಗಲ್ಲು ರಸ್ತೆ, ಬಳ್ಳಾರಿ

ಪ್ರಜಾಧಿಕಾರ

ಲೇ: ವಿವಿಧ ಲೇಖಕರು

ಬೆಲೆ: ರೂ. ೨೨೫/-

ಮತದಾರರ ಜಾಗೃತಿ ಮತ್ತು ಪ್ರಜಾಧಿಕಾರ ಪ್ರತಿಪಾದನೆಯ ಪ್ರಕ್ರಿಯೆಗಳ ದಾಖಲಾತಿಯ ಅಪರೂಪದ ಪ್ರಯತ್ನ ಇದು. ಜನ ಪ್ರತಿನಿಧಿಗಳು ಉತ್ತರದಾಯಿತ್ವ ಹೊಂದಿರಬೇಕು. ಹೀಗೆ ಮಾಡುವಲ್ಲಿ ಸ್ವಯಂ ಸೇವಾ ಸಂಸ್ಥೆಗಳು, ಜನಾಂದೋಲಗಳು ಹಾಗೂ ಸಂಘಟನೆಗಳು ಪ್ರಮುಖ ಪಾತ್ರ ವಹಿಸಬೇಕು. ಕೇವಲ ಸರ್ಕಾರವನ್ನು ದೂರುತ್ತಾ ನಾವೇ ಆದರ್ಶ, ಸರ್ಕಾರಕ್ಕಿಂತಲೂ ಮಿಗಿಲು ಎಂದು ಬಿಂಬಿಸುವುದು ಸರಿಯಾದದ್ದಲ್ಲ ಎಂಬ ಅರಿವು ಈ ಕೃತಿಯಿಂದ ಮೂಡುತ್ತದೆ.

ಪ್ರಕಾಶಕರು: ನಾಗರಿಕ ಸೇವಾ ಟ್ರಸ್ಟ್, ಪ್ರಜಾಧಿಕಾರ ಪ್ರತಿಪಾದನಾ ಸಮಿತಿ ಗುರುವಾಯನಕೆರೆ-೫೭೪೨೧೭

ಬಂಡಾಯ: ಕಾಲು ಶತಮಾನ

ಸಂ. ಕಾ.ವೆಂ. ಶ್ರೀನಿವಾಸ ಮೂರ್ತಿ

ಬೆಲೆ: ರೂ. ೬೦/-

೭೦ ರ ದಶಕದ ಕೊನೆ ಭಾಗದಲ್ಲಿ ಆರಂಭವಾದ ಬಂಡಾಯ ಸಾಹಿತ್ಯ ಚಳವಳಿಗೆ ೨೫ ವರ್ಷ ತುಂಬಿದ ಸಂದರ್ಭಕ್ಕಾಗಿ ಸಿದ್ಧ ಪಡಿಸಿದ ಪುಸ್ತಕ ಇದು. ಚಳವಳಿ ಕಾಲು ಶತಮಾನ ಪೂರೈಸಿದ ಹಿನ್ನೆಲೆಯಲ್ಲಿ ನಡೆದ 'ಬಂಡಾಯ- ೨೫' ಎಂಬ ರಾಜ್ಯ ಸಮಾವೇಶ ಮತ್ತು ಬೆಂಗಳೂರಿನಲ್ಲಿ ನಡೆದ ಚಿಂತನಗೋಷ್ಠಿ ಹಾಗೂ ಕವಿಗೋಷ್ಠಿಯ ದಾಖಲೆಯಾಗಿ ಪ್ರಸ್ತುತ ಕೃತಿ ಹೊರ ಬಂದಿದೆ.

ಪ್ರಕಾಶಕರು: ಬಂಡಾಯ ಸಾಹಿತ್ಯ ಸಂಘಟನೆ ರಾಜ್ಯ ಸಮಿತಿ, ಬೆಂಗಳೂರು.

ಹೊಸ ಪುಸ್ತಕ



ದಕ್ಷಿಣ ಕನ್ನಡದ ದೇವರ ಕಾಡುಗಳು

ಲೇ: ಡಾ॥ ಕೆ. ಪ್ರಭಾಕರ ಆಚಾರ್, ವಿದ್ಯಾ ಎಸ್. ನಾಯಕ್

ಬೆಲೆ: ರೂ. ೧೫೦/-

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಆಯ್ಕೆ ೧೫ ಗ್ರಾಮಗಳ ದೇವರ ಕಾಡುಗಳ ಸಮೀಕ್ಷಾಧಾರಿತ ಅಧ್ಯಯನ ಇದು. ನಾಗಬನಗಳು ಮತ್ತು ಭೂತ ಸ್ಥಾನಗಳು ಕರಾವಳಿ ನಾಡಿನ ಪ್ರಕೃತಿ ಮತ್ತು ಪರಿಸರ ರಕ್ಷಣೆಯ ಉತ್ತಮ ಸಂಕೇತಗಳಾಗಿವೆ. ಪೂರ್ವಿಕರಿಗೆ ಪ್ರಕೃತಿಯೇ ದೇವರಾಗಿತ್ತು. ಹಾಗಾಗಿಯೇ ಇಲ್ಲಿನ ನಾಗಬನ ಮತ್ತು ಭೂತಸ್ಥಾನಗಳು ಇಂದಿಗೂ ಪ್ರಕೃತಿ ಸಿರಿಯ ನಡುವೆಯೇ ಇವೆ. ಇಂಥ ದೇವರ ಕಾಡುಗಳ ಬಗೆಗಿನ ಪಾಂಡಿತ್ಯ ಪೂರ್ಣ ಅಧ್ಯಯನ ಈ ಕೃತಿಯಲ್ಲಿದೆ.

ಪ್ರಕಾಶಕರು: ನಾಗರಿಕ ಸೇವಾ ಟ್ರಸ್ಟ್, ಗುರುವಾಯನಕೆರೆ-೫೭೪೨೧೭



ಅವೈದಿಕ ಚಿಂತನೆ

ಲೇ: ಡಾ॥ ಎಚ್.ಟಿ. ಪೋತೆ

ಬೆಲೆ: ರೂ. ೧೦೦/-

ಅಂಬೇಡ್ಕರ್ ಚಿಂತನೆಗಳ ಹಿನ್ನೆಲೆಯಲ್ಲಿ ಅಧ್ಯಯನ ಶೀಲರಾಗಿರುವ ಡಾ॥ ಎಚ್.ಟಿ. ಪೋತೆ ಬರೆದಿರುವ ೧೪ ಲೇಖನಗಳ ಸಂಗ್ರಹ ಇದು 'ಅವೈದಿಕ ಚಿಂತನೆ' ಹೆಸರೇ ಹೇಳುವಂತೆ ಜೀವಪರ, ಜನಪರ ಆಲೋಚನೆಗಳ ವಿವಿಧ ಆಯಾಮಗಳನ್ನು ಚರ್ಚಿಸುತ್ತದೆ. ಅಸ್ಪೃಶ್ಯತೆ ಮಡಿವಂತಿಕೆಗಳ ಜನ ವಿರೋಧಿ ವೈದಿಕತೆಯ ಎಲ್ಲ ಢೋಂಗಿತನಗಳನ್ನು ಬಯಲಿಗೆಳೆದು, ಶಾಶ್ವತ ಮೌಲ್ಯಗಳಾದ ಪ್ರೀತಿ, ಸಮಾನತೆ, ಸಹಬಾಳ್ವೆ ಮುಂತಾದ ಮಾನವೀಯ ಅಂಶಗಳನ್ನು ಎತ್ತಿ ಹಿಡಿಯುವುದೇ ಕೃತಿಯ ಮುಖ್ಯ ಧ್ಯೇಯ. ಚಿಂತನೆ, ಜಿಜ್ಞಾಸೆ, ವ್ಯಕ್ತಿ ಚಿತ್ರಗಳು ಕೃತಿಯ ಪ್ರಮುಖ ಅಂಶಗಳು.

ಪ್ರಕಾಶಕರು: ತಿಪ್ಪಣ್ಣಂಬು ಪ್ರಕಾಶನ, ಸರಸ್ವತಿ ಪುರಂ ಗುಲ್ಬರ್ಗಾ-೬

ಸಂಪಾದಕೀಯ



ನಿಮ್ಮ ಹೆಗಲ ಮೇಲಿದೆ ಜವಾಬ್ದಾರಿ!

ನನ್ನ ಮುಂದೆ ಈಗ ಕೆಲವು ಪತ್ರಗಳಿವೆ.

ಕಳೆದ ನಾಲ್ಕು ವರ್ಷಗಳಿಂದಲೂ ನಿರಂತರವಾಗಿ 'ಸಂವಾದ' ಓದುತ್ತಿರುವ ಬೆಳಗಾವಿಯ ಶೀಲಾರಾಣಿ ಒಂಭತ್ತು ಜನರನ್ನು ಹೊಸದಾಗಿ ಚಂದಾದಾರರನ್ನಾಗಿ ಮಾಡಿಸಿ ಡಿ.ಡಿ. ಸಮೇತ ಧೀರ್ಘ ಪತ್ರ ಬರೆದಿದ್ದಾರೆ. 'ಸಂವಾದ' ತಳಸಮುದಾಯಗಳ ಚಿಂತನಾಕ್ರಮಕ್ಕೆ ಅಪಾರ ಶಕ್ತಿ ದ್ರವ್ಯವನ್ನು ಒದಗಿಸುತ್ತಿದ್ದು, 'ಯಾವುದೇ ಪೂರ್ವಾಗ್ರಹವಿಲ್ಲದ ವೈಚಾರಿಕ ತಳಹದಿಯನ್ನು ಒದಗಿಸಿಕೊಡುತ್ತಿದೆ' ಎಂದು ತಿಳಿಸಿದ್ದಾರೆ. ತಿಂಗಳಲ್ಲಿ ಕನಿಷ್ಟ ಒಂದೆರಡು ದಿನವಾದರೂ 'ಸಂವಾದ'ದ ಕೆಲಸ ಮಾಡುವುದಾಗಿ ಪ್ರತಿಜ್ಞೆ ಮಾಡಿದ್ದಾರೆ. 'ಇದು ನನ್ನ ಪಾಲಿನ ಭಾಗ್ಯ' ಎನ್ನುವ ಮೂಲಕ ನನ್ನಲ್ಲಿ ಮುಜುಗರ ಉಂಟು ಮಾಡಿದ್ದಾರೆ.

ಚಾಮರಾಜನಗರದ ಪ್ರಾಥಮಿಕ ಶಾಲೆಯೊಂದರಲ್ಲಿ ಶಿಕ್ಷಕರಾಗಿರುವ ಅರುಣಕುಮಾರ್ ಐದು ಮಂದಿ ಸಹೋದ್ಯೋಗಿಗಳ ಚಂದಾ ಮಾಡಿಸಿ ಕಳುಹಿಸಿದ್ದಾರೆ. ಅವರ ಪತ್ರದ ಜತೆಯಲ್ಲಿ ಹೊಸದಾಗಿ ಚಂದಾದಾರರಾಗಿರುವ ಆರ್. ಪ್ರೇಮಕುಮಾರಿ ಅವರ ಸಣ್ಣ ಪತ್ರವಿದೆ. ಅದರಲ್ಲಿನ ಕೆಲವು ಸಾಲುಗಳು ನನ್ನನ್ನು ಕಾಡಿಸುತ್ತಿವೆ. ಅವರು ಬರೆದಿದ್ದಾರೆ: 'ದಲಿತರು ಪ್ರತ್ಯೇಕ ಅಸ್ತಿತ್ವ, ಪ್ರತ್ಯೇಕ ಚಳವಳಿ ಇತ್ಯಾದಿಗಳನ್ನು ಇನ್ನೆಷ್ಟು ದಿನ ಮಾಡಬೇಕು. ದಲಿತ ಪ್ರಜ್ಞೆ ಇವತ್ತು ಒಡೆದು ಚೂರಾಗಿ ಬೇರೆ ಬೇರೆ ಜಾತಿ ಗುಂಪುಗಳಾಗಿ ಸತ್ತು ಬಿದ್ದಿದೆ. ಸತ್ತ ಹೆಣ ಇಟ್ಟುಕೊಂಡು ಅತ್ತವರಂತೆ ಸಂಘಟನೆಗಳ ಮುಖಂಡರು ಕಿರಿಚಾಡುತ್ತಿದ್ದಾರೆ. ಇದಕ್ಕೊಂದು ಅಂತ್ಯ ಬೇಡವೇ? ಹೊಸದೇನನ್ನಾದರೂ ಮಾಡಲು ನಮಗೆ ಸಾಧ್ಯವಿಲ್ಲವೆ?'. ಪ್ರೇಮಕುಮಾರಿಯವರ ಪತ್ರಕ್ಕೆ ಉತ್ತರ ಬರೆಯಲು ತಡಕಾಡುತ್ತಿದ್ದೇನೆ. 'ಸಂವಾದ'ದ ಲೇಖನಗಳಲ್ಲಿ ಅವರಿಗೆ ಉತ್ತರ ಸಿಗಬಹುದೆಂದು ನನಗೆ ನಾನೇ ಸಮಾಧಾನ ಮಾಡಿಕೊಳ್ಳುತ್ತಿದ್ದೇನೆ.

ರಾಯಚೂರಿನ ಶಿವಶರಣಪ್ಪ ಎಂಬ ವಿದ್ಯಾರ್ಥಿ ನೂರು ರೂಪಾಯಿಗಳ ನೋಟೊಂದನ್ನು ಕವರಿನಲ್ಲಿಟ್ಟು ಕಳುಹಿಸಿದ್ದಾನೆ. 'ನೂರು ರೂ. ಎಂ.ಒ ಮಾಡಲು ತನ್ನಲ್ಲಿ ಕಮೀಷನ್ ಹಣ ಇಲ್ಲ ಅದಕ್ಕಾಗಿ ನೋಟನ್ನು ಕವರಿನಲ್ಲಿಟ್ಟು ಕಳುಹಿಸುತ್ತಿದ್ದೇನೆ. 'ಸಂವಾದ' ಓದದೇ ಇರಲು ಸಾಧ್ಯವಾಗುತ್ತಿಲ್ಲ. ದಯವಿಟ್ಟು ಪತ್ರಿಕೆ ಕಳುಹಿಸಿ ಕೊಡಿ' ಎಂದು ಕೋರಿದ್ದಾನೆ. ಇಡೀ ಸಮಾಜ ಅಧೋಗತಿಗೆ ಹೋಗುತ್ತಿದೆ ಎಂಬುದು ಅವನ ಕೊರಗು. ಕುಮಾರ ಸ್ವಾಮಿ-ಯಡಿಯೂರಪ್ಪನವರಂತ ಜನ ಸರ್ಕಾರದ ಹೆಸರಿನಲ್ಲಿ ಮಾಡುತ್ತಿರುವ ಮೋಸ-ವಂಚನೆಗೆ ಮಾಧ್ಯಮಗಳು ನೀಡುತ್ತಿರುವ ಬೆಂಬಲ ಆತನನ್ನು ಕಂಗೆಡಿಸಿವೆ. ಪತ್ರಿಕೆಗಳು ಬಳಸುತ್ತಿರುವ ಭಾಷೆ-ವಿಶೇಷಣಗಳಿಂದ ಆತ ನೊಂದುಕೊಂಡಿದ್ದಾನೆ. ರಾಯಚೂರಿನಲ್ಲಿ 'ಸಂವಾದ'ದ ಯಾವುದೇ ಕೆಲಸಗಳಿದ್ದರೂ, ತನ್ನ ಮಿತಿಯಲ್ಲಿ ಸಹಾಯ ಮಾಡಲು ಸಿದ್ಧ ಎಂದು ಘೋಷಿಸಿಕೊಂಡಿದ್ದಾನೆ.

ಮೈಸೂರಿನ ಶಿವರಾಜು, ಕನಕಪುರದ ನಾಗರಾಜು, ಕೋಲಾರದ ಮುನಿರಾಜು, ಚಳ್ಳಕೆರೆಯ ಬಸವಲಿಂಗಪ್ಪ, ಚಿತ್ರದುರ್ಗದ ಮಹಂತೇಶ, ಗುಲ್ಬರ್ಗಾದ ಅನಿತಾ ಕಾಂಬಳೆ, ಉಡುಪಿಯ ಶಕುಂತಲಾಶೆಟ್ಟಿ ಇವರೆಲ್ಲಾ 'ಸಂವಾದ'ದ ನಿರಂತರ ಓದುಗರು. ತಪ್ಪದೇ ಚಂದಾ ಕಳಿಸುತ್ತಾರೆ. ಲೇಖನಗಳನ್ನು ವಿಶ್ಲೇಷಿಸಿ ಪತ್ರ ಬರೆಯುತ್ತಾರೆ. ಸಂವಾದ ತನ್ನದೇ ಆದ ಓದುಗ ಬಳಗವನ್ನು ಸೃಷ್ಟಿಸಿಕೊಂಡಿರುವ ಬಗ್ಗೆ ಹೆಮ್ಮೆ ಪಡುತ್ತಾರೆ. ಗುಲ್ಬರ್ಗಾದ ಅನಿತಾ ಅವರ ಪ್ರಕಾರ 'ಸಂವಾದ'ದ ಲೇಖನಗಳ ಬಗ್ಗೆ ಪ್ರತೀ ತಿಂಗಳು ಎರಡನೇ ಶನಿವಾರ 'ಚಿಂತನ ಗೋಷ್ಠಿ' ನಡೆಯುತ್ತದೆ. ಕನಿಷ್ಟ 8-10 ಜನ ಭಾಗವಹಿಸಿ ಚರ್ಚಿಸುತ್ತಾರೆ.

ಇಷ್ಟೆಲ್ಲವನ್ನು ಯಾಕಾಗಿ ಬರೆಯುತ್ತಿದ್ದೀನೆಂದು ಆಶ್ಚರ್ಯವಾಗುತ್ತಿದೆಯೆ? ಇದು ಖಂಡಿತ ನಮ್ಮ ಬೆನ್ನುತಟ್ಟಿಕೊಳ್ಳುವುದಕ್ಕಲ್ಲ. ಕೆಲವೇ ಸಾವಿರ ಚಂದಾದಾರರಿರುವ ಸಣ್ಣ ಪತ್ರಿಕೆಯೊಂದು ಇಷ್ಟೊಂದು ಪ್ರಭಾವ ಬೀರಿದೆಯಲ್ಲ! ಅದು ಹೇಗೆ ಸಾಧ್ಯವಾಯಿತು? ಎಂದು ನನ್ನನ್ನು ನಾನೇ ವಿಶ್ಲೇಷಿಸಿಕೊಳ್ಳುವುದಕ್ಕೆ! ಇಡೀ ಸಮಾಜವೇ ಇದ್ದುದನ್ನು ಇದ್ದಂತೇ ಉಳಿಸಿಕೊಳ್ಳುವ ವ್ಯಾವಹಾರಿಕ ಕುಶಲತೆಯಲ್ಲಿ ಮುಳುಗಿ ಹೋಗಿರುವಾಗ ಕೆಲವರಾದರೂ ಬದಲಾವಣೆಗೆ ಕಾತರರಾಗಿದ್ದಾರಲ್ಲ ಎನ್ನುವುದನ್ನು ಎಲ್ಲರೊಂದಿಗೆ ಹಂಚಿಕೊಳ್ಳುವುದಕ್ಕೆ! ಜತೆಗೆ 'ಸಂವಾದ'ದ ಕೆಲಸ ಮಾಡಲು ಸ್ವಯಂ ಪ್ರೇರಣೆಯಿಂದ ಜನರು ಮುಂದೆ ಬರುತ್ತಿರುವುದರ ಸಂತೋಷಕ್ಕೆ!

'ಸಂವಾದ'ಕ್ಕೀಗ ನಾಲ್ಕು ವರ್ಷ ತುಂಬಿವೆ. ಈಗ ನಿಮ್ಮ ಕೈಯಲ್ಲಿರುವುದು ಐದನೇ ವರ್ಷದ ಮೊದಲ ಸಂಚಿಕೆ. ನಾಲ್ಕು ವರ್ಷಗಳ ಹಿಂದೆ 'ಸಂವಾದ' ಆರಂಭವಾದಾಗ ಅದಕ್ಕಿದ್ದುದು 'ಸ್ಫೂರ್ತಿಧಾಮ'ದ ಅಧ್ಯಕ್ಷರಾದ ಶ್ರೀ.ಎಸ್. ಮರಿಸ್ವಾಮಿ ಅವರ ಇಚ್ಚಾಶಕ್ತಿ ಮಾತ್ರ. ಸಾಮಾಜಿಕ ಕಳಕಳಿ, ಪೂರ್ವಾಗ್ರಹವಿಲ್ಲದ ಮನಸ್ಸು, ಹೊಸ ಆಲೋಚನೆಗಳೊಂದಿಗೆ 'ಸಂವಾದ'ವನ್ನು ರೂಪಿಸಬೇಕೆಂಬುದು ನಮ್ಮೆಲ್ಲರ ಆಸೆಯಾಗಿತ್ತು. ಆದರೆ ಅದಕ್ಕಾಗಿ ನಾವು ಸಿದ್ಧರಾದಾಗ ಅದು ಅತ್ಯಂತ ಕಷ್ಟದ ಕೆಲಸವೆನಿಸತೊಡಗಿತು.

ಕೆಲಸ ಆರಂಭಿಸಿದ ಕೂಡಲೇ ನಮಗೆ ಎದುರಾದದ್ದು ಲೇಖನಗಳ ಕೊರತೆ. ಕನ್ನಡದಲ್ಲಿ ಸ್ವತಂತ್ರ ವೈಚಾರಿಕ ಲೇಖನಗಳ ಕೊರತೆ ಎಷ್ಟಿದೆ ಎಂದರೆ ಆರಂಭದ ಕೆಲವು ತಿಂಗಳು ಹಿಂದೆಯೇ ಪ್ರಕಟವಾಗಿದ್ದ ಕೆಲವು ಲೇಖನಗಳನ್ನೇ ಮತ್ತೆ ಪ್ರಕಟಿಸಬೇಕಾಯ್ತು. ಅನಿವಾರ್ಯವಾಗಿ ಇಂಗ್ಲೀಷ್ ಭಾಷಾಂತರಕ್ಕೆ ಮೊರೆ ಹೋಗಬೇಕಾಯ್ತು. ಈಗ ಪರಿಸ್ಥಿತಿ ಸುಧಾರಿಸಿದೆಯಾದರೂ ಉತ್ತಮ ಲೇಖನಗಳ ಕೊರತೆ ಇದ್ದೇ ಇದೆ. ಆದರೂ 'ಸಂವಾದ' ತನ್ನ ಗುಣಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಎಂಬುದಕ್ಕೆ ಓದುಗರ ಪ್ರತಿಕ್ರಿಯೆಯೇ ಸಾಕ್ಷಿಯಾಗಿದೆ.

'ಸಂವಾದ'ವನ್ನು ಮತ್ತಷ್ಟು ಸಮೃದ್ಧಗೊಳಿಸಬೇಕೆಂಬ ಉದ್ದೇಶ ನಮಗಿದೆ. ಅದರಲ್ಲಿ ಮೊದಲನೆಯದು ಚಂದಾದಾರರ ಸಂಖ್ಯೆಯನ್ನು ಹೆಚ್ಚು ಮಾಡುವುದು. ಕನಿಷ್ಟ ದ್ವಿಗುಣಗೊಳಿಸಬೇಕೆಂಬುದು ನಮ್ಮ ಸಧ್ಯದ ಕಾರ್ಯಕ್ರಮ. (ಅದರ ಜತೆಯಲ್ಲೇ ಪತ್ರಿಕೆಯ ಪುಟಗಳನ್ನು ಹೆಚ್ಚಿಸುವ ಯೋಚನೆ ಕೂಡ ಇದೆ) ಅದಕ್ಕಾಗಿ ನಾವು ನಮ್ಮ ಓದುಗರನ್ನೇ ಮೊರೆ ಹೋಗಬೇಕೆಂದು ನಿರ್ಧರಿಸಿದ್ದೇವೆ. 'ಸಂವಾದ'ದ ನಿರಂತರ ಓದುಗರಾದ ನೀವು ಮನಸ್ಸು ಮಾಡಿದರೆ ಇದು ಕಷ್ಟದ ಕೆಲಸವೇನಲ್ಲ. ನೀವು ಪ್ರತಿಯೊಬ್ಬ ಚಂದಾದಾರರೂ ನಿಮ್ಮ ಗೆಳೆಯರು, ಹಿತೈಷಿಗಳು, ಬಂಧುಗಳನ್ನು ಚಂದಾದಾರರನ್ನಾಗಿಸುವ ಮೂಲಕ ಈ ಕೆಲಸಕ್ಕೆ ನೆರವು ನೀಡಬೇಕೆಂದು ವಿನಂತಿಸುತ್ತೇವೆ.

ಯಾವುದೇ ಬಂಡವಾಳವಿಲ್ಲದೆ, ಜಾಹೀರಾತಿನ ಬೆಂಬಲವಿಲ್ಲದೆ ಪತ್ರಿಕೆಯನ್ನು ಹೊರತರುವುದು ಎಷ್ಟು ಕಷ್ಟ ಎಂಬುದು ನಿಮಗೇ ಗೊತ್ತಿದೆ. ಇದಕ್ಕೆಲ್ಲ ಒಂದೇ ಮದ್ದು; ನಾವು ನೀವೆಲ್ಲ ಮಾಡಬಹುದಾದದ್ದು; ಚಂದಾದಾರರ ಸಂಖ್ಯೆಯನ್ನು ಹೆಚ್ಚಿಸುವುದು ಮಾತ್ರ

ಆ ಜವಾಬ್ದಾರಿ ಈಗ ನಿಮ್ಮ ಹೆಗಲ ಮೇಲಿದೆ! ನಾವೆಲ್ಲಾ ಸೇರಿ 'ಸಂವಾದ'ವನ್ನ ಮುನ್ನಡೆಸೋಣ.

○ ಇಂದೂಧರ ಹೊನ್ನಾಪುರ



ಗಡಿಗಳ ವಾಸ್ತವತೆ

ಬೆಳಗಾವಿ ಗಡಿ ಗಲಾಟೆ ನಿಜವಾಗಿಯೂ ಗಡಿಗಾಗಿ ನಡೆಯುತ್ತಿರುವ ಹೋರಾಟವೇ ಅಥವಾ ತಮ್ಮ ಅಸ್ತಿತ್ವಕ್ಕಾಗಿ ರಾಜಕಾರಣಿಗಳು ನಡೆಸುತ್ತಿರುವ ರಾಜಕೀಯ ದೊಂಬರಾಟವೇ ಎಂಬ ಜಿಜ್ಞಾಸೆ ವ್ಯಾಪಕವಾಗಿ ನಡೆಯುತ್ತಿದೆ. ಕರ್ನಾಟಕ ಏಕೀಕರಣ ಹೋರಾಟದ ಫಲವಾಗಿ, ೧೯೫೬ರ ರಾಜ್ಯ ಪುನರ್ ವಿಂಗಡಣಾ ಸಮಿತಿಯ ವರದಿಯ ಮೇರೆಗೆ ನಮ್ಮ ಗಡಿರೇಖೆಯನ್ನು ಗುರುತಿಸಲಾಯಿತು. ಭಾಷೆಯ ಹಿನ್ನೆಲೆಯಲ್ಲಿ ಜನರನ್ನು ಒಂದುಗೂಡಿಸಿ ಗೆರೆ ಎಳೆಯಲಾಯಿತು. ಅದು ಗೆರೆ ಮಾತ್ರವಾಗಿ ಉಳಿದಿದೆಯೇ? ಗಡಿಯ ಕಲ್ಪನೆ ಎಷ್ಟು ವಾಸ್ತವ ಅಥವಾ ಎಷ್ಟು ಕೃತಕ ಎಂದು ಅರಿಯಬೇಕಾದರೆ ಅದರ ವಿಭಿನ್ನ ಆಯಾಮಗಳನ್ನು ಪರಿಶೀಲಿಸಬೇಕಾಗುತ್ತದೆ. ಕರ್ನಾಟಕವನ್ನು ಚಾರಿತ್ರಿಕ ಕರ್ನಾಟಕ, ಭೌಗೋಳಿಕ ಕರ್ನಾಟಕ, ಸಾಂಸ್ಕೃತಿಕ ಕರ್ನಾಟಕ ಹಾಗೂ ಆರ್ಥಿಕ ಕರ್ನಾಟಕವೆಂದು ವಿಭಿನ್ನ ಸ್ಥರಗಳಲ್ಲಿ ಅರ್ಥೈಸಬಹುದಾಗಿದೆ.

ಡಾ|| ವಸು

ಕರ್ನಾಟಕವೆಂದಾಗ ೨೭ ಜಿಲ್ಲೆಗಳನ್ನೊಳಗೊಂಡ ಕರ್ನಾಟಕ ರಾಜ್ಯದ ಭೂಪಟ ನಮ್ಮ ಕಣ್ಣಮುಂದೆ ಬಂದು ನಿಲ್ಲುತ್ತದೆ. ಗೋವಾ, ಮಹಾರಾಷ್ಟ್ರ, ಆಂಧ್ರ, ತಮಿಳುನಾಡು, ಕೇರಳ ಹಾಗೂ ಅರಬ್ಬೀ ಸಮುದ್ರಗಳಿಂದ ಆವರಿಸಿದ ಈ ರಾಜ್ಯದ ಎಲ್ಲೆಯನ್ನು ಐವತ್ತು ವರ್ಷಗಳ ನಂತರವಾದರೂ ಪುನರ್ ವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ಭಾಷಾವಾರು ಪ್ರಾಂತ್ಯದ ಆಧಾರದ ಮೇಲೆ, ಕರ್ನಾಟಕ ಏಕೀಕರಣ ಹೋರಾಟದ ಫಲವಾಗಿ, ೧೯೫೬ರ ರಾಜ್ಯ ಪುನರ್ ವಿಂಗಡಣಾ ಸಮಿತಿಯ ವರದಿಯ ಮೇರೆಗೆ ನಮ್ಮ ಗಡಿ ರೇಖೆಯನ್ನು ಗುರುತಿಸಲಾಯಿತು. ಭಾಷೆಯ ಹಿನ್ನೆಲೆಯಲ್ಲಿ ಜನರನ್ನು ಒಂದುಗೂಡಿಸಿ ಗೆರೆ ಎಳೆಯಲಾಯಿತು. ಅದು ಗೆರೆ ಮಾತ್ರ ವಾಗಿ ಉಳಿದಿದೆಯೇ?



ಗಡಿಯ ಕಲ್ಪನೆ ಎಷ್ಟು ವಾಸ್ತವ ಅಥವಾ ಎಷ್ಟು ಕೃತಕ ಎಂದು ಅರಿಯಬೇಕಾ ದರೆ ಅದರ ವಿಭಿನ್ನ ಆಯಾಮಗಳನ್ನು ಪರಿಶೀಲಿಸಬೇ ಕಾಗುತ್ತದೆ. ಕರ್ನಾಟಕವನ್ನು ಚಾರಿತ್ರಿಕ ಕರ್ನಾಟಕ, ಭೌಗೋಳಿಕ ಕರ್ನಾಟಕ, ಸಾಂಸ್ಕೃತಿಕ ಕರ್ನಾಟಕ ಹಾಗೂ ಆರ್ಥಿಕ ಕರ್ನಾಟಕವೆಂದು ವಿಭಿನ್ನ ಸ್ಥರಗಳಲ್ಲಿ ಅರ್ಥೈಸಬಹುದಾಗಿದೆ.

ಚರಿತ್ರೆಯಲ್ಲಿ ಕರ್ನಾಟಕಕ್ಕೊಂದು ಗಡಿ ಇತ್ತೆ?

ಕನ್ನಡನಾಡಿನ ಮೇರೆಯನ್ನು ಉಲ್ಲೇಖಿಸುವಾಗ ಕವಿ ರಾಜ ಮಾರ್ಗ ಕೃತಿಯ ಸಾಲುಗಳನ್ನು ನೆನೆಯುತ್ತೇವೆ.

"ಕಾವೇರಿಯಿಂದ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ", ಎಂಬ ಸಾಲು ಕ್ರಿಶ ೯ನೆಯ ಶತಮಾನದ ಹಾಗೂ ಅದರ ಹಿಂದಿನ ಭೌಗೋಳಿಕ ಪ್ರದೇಶವೊಂದನ್ನು ಸೂಚಿಸುತ್ತದೆ. ಕಾವೇರಿಯಿಂದ ಗೋದಾವರಿವರೆಗಿನದು ಒಂದು ರಾಜ್ಯವೆಂದಾಗಲೀ, ರಾಜಕೀಯ ಗಡಿಯೆಂದಾಗಲೀ ಅದು ಸೂಚಿಸುವುದಿಲ್ಲ. ಅದು ಒಂದು ಭೌಗೋಳಿಕ ಪ್ರದೇಶ ಮಾತ್ರವಾಗಿತ್ತು. ಈ ಕರ್ನಾಟಕ ಭೂಭಾಗದಲ್ಲಿ ಕನ್ನಡ ಮಾತನಾಡುವ ಜನ ವಾಸಿಸುತ್ತಿದ್ದರು. ಆ ಕನ್ನಡದಲ್ಲೂ ಹಲವು ಬಗೆಗಳಿದ್ದವೆಂದು ಕವಿರಾಜಮಾರ್ಗ ದಿಂದಲೇ ತಿಳಿದುಬರುತ್ತದೆ.

ಚಾರಿತ್ರಿಕವಾಗಿ ಕರ್ನಾಟಕವನ್ನು ಗುರುತಿಸುವಾಗ ಕರ್ನಾಟಕದ ರಾಜವಂಶಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡುತ್ತಾ ಬಂದಿದ್ದೇವೆ. ಕನ್ನಡ ಮೂಲದ ರಾಜರ ಆಳ್ವಿಕೆಗೆ ಒಳಪಟ್ಟ ಪ್ರದೇಶವನ್ನು ಗುರುತಿಸುತ್ತಾ ಕರ್ನಾಟಕದ ವಿಸ್ತಾರವನ್ನು ವೈಭವದಿಂದ ನೆನೆಸಿಕೊಳ್ಳುತ್ತೇವೆ. ಪುಲಕೇಶಿ ಕ್ರಿ.ಶ ಏಳನೆಯ ಶತಮಾನದಲ್ಲಿ ನರ್ಮದಾ ತೀರದಲ್ಲಿ ಹರ್ಷವರ್ಧನನನ್ನು ಸೋಲಿಸಿ 'ದಕ್ಷಿಣಾ ಪಥೇಶ್ವರ' ಎನಿಸಿಕೊಂಡ. ಆದ್ದರಿಂದ ಕರ್ನಾಟಕದ ಸೀಮೆ ನರ್ಮದಾ ನದಿಯವರೆಗೆ ಹರಡಿತ್ತೆಂದು ಹೇಳುತ್ತೇವೆ. ಹಾಗೆಯೇ ಕನ್ನಡ ಸಾಹಿತ್ಯಕ್ಕೆ ಅಪಾರ ಪ್ರೋತ್ಸಾಹವನ್ನು ನೀಡಿದ ರಾಷ್ಟ್ರಕೂಟರು ವಿಶಾಲವಾದ ಪ್ರದೇಶವನ್ನು ಆಳಿದವರೆಂದೂ ಹೆಮ್ಮೆಪಡುತ್ತೇವೆ. ಕನ್ನಡಿಗರಂತೆ ಮರಾಠಿಗರೂ ಅಭಿಮಾನದಿಂದ ರಾಷ್ಟ್ರಕೂಟರನ್ನು ಸ್ಮರಿಸುತ್ತಾರೆ. ಅಷ್ಟೇ ಅಲ್ಲದೆ ಮಹಾರಾಷ್ಟ್ರದ ಹೆಸರಿನ ಮೂಲದಲ್ಲೂ ರಾಷ್ಟ್ರಕೂಟರನ್ನೇ ಗುರುತಿಸುತ್ತಾರೆ. ಗಂಗರು, ಕಲ್ಯಾಣಿ ಚಾಲುಕ್ಯರು ಮತ್ತು ಹೊಯ್ಸಳರು ಆಳಿದ ಪ್ರದೇಶವನ್ನು ಕನ್ನಡನಾಡಿನ ಚರಿತ್ರೆಯೆಂದು ಅಧ್ಯಯನ ಮಾಡುತ್ತಾ ಪ್ರಾಚೀನ ಕರ್ನಾಟಕದ ಸೀಮೆಯ ಚಿತ್ರಣವನ್ನು ಕಟ್ಟಿಕೊಳ್ಳುತ್ತೇವೆ. ಕನ್ನಡ ಮೂಲದ ರಾಜರು ಕನ್ನಡ ಪ್ರದೇಶವನ್ನು ಆಳಿದಂತೆ ಕರ್ನಾಟಕದ ಹೊರಗೂ ತಮ್ಮ ರಾಜ್ಯಭಾರವನ್ನು ವಿಸ್ತರಿಸಿದ್ದರು.

ಚರಿತ್ರೆಯನ್ನು ಆಧರಿಸಿ ಇಂದಿನ ಕರ್ನಾಟಕದ ಮೇರೆಯನ್ನು ಗುರುತಿಸಬಹುದೇ ಎನ್ನುವ ಪ್ರಶ್ನೆ ಹಲವು ಬಾರಿ ನನ್ನನ್ನು ಕಾಡಿಸಿದ್ದು ಅದಕ್ಕಾಗಿ ಉತ್ತರ ವನ್ನು ಹುಡುಕುವ ಪ್ರಯತ್ನ ಇದಾಗಿದೆ. ಏಕೆಂದರೆ ಕನ್ನಡ ನಾಡು ನುಡಿಯ ಬಗ್ಗೆ ಆವೇಶದಿಂದ ಮಾತನಾಡುವ ಸಂದರ್ಭಗಳಲ್ಲಿ ಕರ್ನಾಟಕದ ಮೇರೆಯ ಆಚೆ ಸಿಗುವ ಶಾಸನಗಳನ್ನು ಉಲ್ಲೇಖಿಸಿ ಕರ್ನಾಟಕ ಒಂದು ಕಾಲಕ್ಕೆ ನರ್ಮದಾ ನದಿಯವರೆಗಿತ್ತು ಅಥವಾ ಆಂಧ್ರ ಪ್ರದೇಶದ ಭಾಗಗಳು ತಿರುಳ್ಗನ್ನಡ ನಾಡಾಗಿತ್ತೆಂದು ಹೇಳಿ ಕೊಳ್ಳುತ್ತಾ ಆ ನಾಡಿನ ಜನ ನಮ್ಮ ಭೂಭಾಗವನ್ನು ಕಸಿದು ಕೊಂಡಿದ್ದಾರೆಂಬ ಭಾವನೆಯನ್ನು ಬಿತ್ತುವುದು ಕಾಣಬರು ತ್ತದೆ. ಕನ್ನಡಿಗರ ಆಡಳಿತ ಭಾಗ ವಿಶಾಲವಾಗಿತ್ತೆಂಬ ಗತ ವೈಭವ ದುರಭಿಮಾನಕ್ಕೆ ತಿರುಗದಿರಲೆಂಬ ಕಾರಣಕ್ಕಾಗಿ ಮತ್ತಷ್ಟು ಉದಾಹರಣೆಗಳನ್ನು ನೋಡಬೇಕಾಗಿದೆ. ಕನ್ನಡಿ ಗರು ಕರ್ನಾಟಕದ ಎಲ್ಲೆಯನ್ನು ಅರಿಯಲು ಬಯಸುವಂತೆ ನೆರೆನಾ ಡಿನ ಜನರೂ ತಮ್ಮ ನಾಡಿನ ಎಲ್ಲೆಗಳನ್ನು ಚರಿತ್ರೆಗಳಲ್ಲಿ ಹುಡುಕು ವುದು ಸೋಜಿಗದ ವಿಷಯವೇನಲ್ಲ. ಬಾದಾಮಿ ಚಾಲುಕ್ಯರು ಕಂಚಿ ಯವರೆಗೆ ತಮ್ಮ ರಾಜ್ಯವನ್ನು ವಿಸ್ತರಿಸಿದಂತೆ, ಪಲ್ಲವರು ಹಿಂತಿರುಗಿ ಬಾದಾಮಿಯನ್ನು ವಶಪಡಿಸಿಕೊಂಡು ಕೆಲವು ಕಾಲ ಆಳಿದ್ದರು. ಅಷ್ಟೇ ಏಕೆ ಕದಂಬರು ಅಧಿಕಾರಕ್ಕೆ ಬಂದಾಗ ಕನ್ನಡನಾಡಿನ ಬಹು ತೇಕ ಪ್ರದೇಶಗಳು ತಮಿಳು ಪಲ್ಲವರ ಆಳ್ವಿಕೆಗೆ ಒಳಪಟ್ಟಿತ್ತು. ಚರಿತ್ರೆಯ ಪುಟಗಳನ್ನು ಇನ್ನೂ ಹಿಂದಕ್ಕೆ ತಿರುಗಿಸಿದರೆ ಆಂಧ್ರರು ಎನಿಸಿಕೊಂಡ ಶಾತವಾಹನರು ಕ್ರಿ.ಶ.ದ ಆರಂಭದಲ್ಲಿ ಕರ್ನಾಟಕದ ಪ್ರದೇಶಗಳನ್ನು ಆಳಿದ್ದರು. ಕರ್ನಾಟಕದ ರಾಜಕೀಯ ಚರಿತ್ರೆಯನ್ನು ಆರಂಭಿಸುವುದೇ ಮೌರ್ಯರ ಕಾಲದಿಂದ. ಅಶೋಕನ ಶಾಸನಗಳನ್ನು ಕರ್ನಾಟಕದಲ್ಲಿ ಕಂಡಾಗ ನಮ್ಮ ಅರಿವಿಗೆ ಬಂದದ್ದು ಕ್ರಿಪೂ. ೩ನೆಯ ಶತಮಾನದಲ್ಲಿ ಇಂದಿನ ಕರ್ನಾಟಕ ಪ್ರದೇಶ ಅಶೋಕನ ಆಳ್ವಿಕೆಗೆ ಒಳಪಟ್ಟಿತ್ತು. ಒಂದು ರೀತಿಯಲ್ಲಿ ಕರ್ನಾಟಕದ ರಾಜಕೀಯ ಸಂಸ್ಥೆಯ ಬೆಳವಣಿಗೆ ಕನ್ನಡೇತರ ಪ್ರದೇಶದ ಆಡಳಿತಗಾರರಿಂದ ಆರಂಭಗೊಂಡಿತಲ್ಲವೇ? ಹಾಗಾದರೆ ಅದು ನಮ್ಮ ಅಭಿಮಾನಕ್ಕೆ ಚ್ಯುತಿ ತರುವ ವಿಚಾರವೇ?

ಚೋಳರು ತಮಿಳರಾಗಿದ್ದು ಬಹು ದೀರ್ಘಕಾಲ ದಕ್ಷಿಣ ಕರ್ನಾಟಕ ಪ್ರಾಂತ್ಯಗಳನ್ನು ಆಳುತ್ತಿದ್ದರು. ತಮಿಳರಲ್ಲದೇ ತೆಲುಗು,

ಗುಜರಾತಿ, ಉರ್ದು, ಮರಾಠಿ ಮೂಲದ ದೊರೆಗಳು ಕರ್ನಾಟಕ ಪ್ರದೇಶವನ್ನು ಆಳಿದ್ದಾರೆ. ವಿಜಯನಗರ ಸಾಮ್ರಾಜ್ಯದ ಆರಂಭದಲ್ಲಿ ಕನ್ನಡ ಮೂಲದ ದೊರೆಗಳೂ ಆನಂತರ ತುಳು ಹಾಗೂ ತೆಲುಗು ಮೂಲದ ದೊರೆಗಳು ಅಧಿಕಾರವನ್ನು ವಹಿಸಿಕೊಂಡಿದ್ದರು. ಅವರ ರಾಜ್ಯ ಕೇವಲ ಕನ್ನಡನಾಡಿಗೆ ಮೀಸಲಾಗದೆ ಆಂಧ್ರ, ತಮಿಳುನಾಡುಗಳನ್ನು ಒಳಗೊಂಡಿತ್ತು. ಕನ್ನಡ-ಆಂಧ್ರ ರಮಾರಮಣನೆನಿಸಿಕೊಂಡಿದ್ದ ಕೃಷ್ಣದೇವರಾಯನ ಆಸ್ಥಾನದಲ್ಲಿ ತೆಲುಗರು ಹೆಚ್ಚಿನ ಆದ್ಯತೆಯನ್ನು ಪಡೆದುಕೊಂಡಿದ್ದರು. ಬಹುಮನಿ ಸುಲ್ತಾನರು ಕನ್ನಡ ಮತ್ತು ತೆಲುಗು ಭಾಷೆಗಳ ಜೊತೆಗೆ ಮೂರನೆಯ ಭಾಷೆ 'ಪರ್ಷಿಯನ್'ನನ್ನು ಪರಿಚಯಿಸಿದರು. ಇಸ್ಲಾಂ ಸಂಸ್ಕೃತಿಯನ್ನು ನಾಡಿಗೆ ಪರಿಚಯಿಸಿದರು. ವಿಜಯನಗರ ಸಾಮ್ರಾಜ್ಯದ ನಂತರ ವಿಸ್ತಾರವಾದ ರಾಜ್ಯವನ್ನು ಕಟ್ಟಿದವರೆಂದರೆ ಹೈದರ್ ಮತ್ತು ಟಿಪು. ಕನ್ನಡದ ಭಾಗಗಳಲ್ಲದೆ ಕೇರಳ-ತಮಿಳುನಾಡಿನ ಬಹು ಭಾಗ ಆತನ ರಾಜ್ಯಕ್ಕೆ ಒಳಪಟ್ಟಿತ್ತು. ಅಂದರೆ ಸ್ವಾತಂತ್ರ್ಯಪೂರ್ವದ ರಾಜ್ಯದ ಕಲ್ಪನೆಗೂ ಇಂದಿನ ರಾಜ್ಯದ ಕಲ್ಪನೆಗೂ ಅಜಗಜಾಂತರ. ಅಂದಿನ ರಾಜ್ಯ ಅದರ ಗಡಿಗಳು ರಾಜನ ಶಕ್ತಿ ಸಾಮರ್ಥ್ಯವನ್ನು ಒಳಗೊಂಡಿತ್ತು. ರಾಜಕೀಯ ಬಲಾಬಲಕ್ಕೆ ಅನುಗುಣವಾಗಿ ಮೇರೆಗಳು ಬದಲಾಗುತ್ತಿದ್ದವು. ಅಂದಿನ ರಾಜಕೀಯ ಆಕ್ರಮಣಗಳಿಗೆ ರಾಜ್ಯ ವಿಸ್ತರಣೆಗೆ ಭಾಷೆ ಕಾರಣವಾಗಿರಲಿಲ್ಲ.



ಭೌಗೋಳಿಕ ನೆಲೆ : ಇನ್ನು ಕನ್ನಡಿಗರ ವಾಸದ ನೆಲೆಗಳನ್ನು ಗಮನಿಸಿದರೆ ಅದೂ ಸಹ ನಿರಂತರ ಬದಲಾವಣೆಗೆ ಒಳಗಾಗಿದೆ. ಕವಿರಾಜಮಾರ್ಗಕಾರ- 'ಕಾವೇರಿಯಿಂದ ಗೋದಾವರಿ ವರಮಿರ್ದ ನಾಡದಾ ಕನ್ನಡದೊಳ್', ಭಾವಿಸಿದ ಜನಪದ. ಈ ಜನಪದವನ್ನು ಕನ್ನಡ ಮಾತನಾಡುವ ಜನರೆಂದು ಗುರುತಿಸಿರುವುದರಿಂದ, ಆನಂತರದಲ್ಲಿ ಜನ ಗೋದಾವರಿ ಪ್ರದೇಶದಿಂದ ದಕ್ಷಿಣಕ್ಕೆ ಸರಿದಿರಬೇಕು. ಇದು ಹತ್ತನೆಯ ಶತಮಾನದ ಮತ್ತು ಅದರ ಹಿಂದಿನ ಚಿತ್ರಣವಾಗಿದ್ದರೆ, ಶಾತವಾಹನರ ಕಾಲಕ್ಕೆ ಅಂದರೆ ಕ್ರಿ.ಶ ಒಂದನೆಯ ಶತಮಾನದಲ್ಲಿ ಗೋದಾವರಿ ಪ್ರದೇಶದಲ್ಲಿ ಆಂಧ್ರರು ಎನಿಸಿಕೊಂಡ ಶಾತವಾಹನರು ಆಳುತ್ತಿದ್ದರು. ಶಾತವಾಹನರ ಪತನಾನಂತರ ಕನ್ನಡಿಗರಿಂದ ಆಂಧ್ರರು ಒತ್ತರಿಸಿದರೆ? ಇಂತಹ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾಗುತ್ತದೆ. ಆನಂತರ ಕ್ರಿ.ಶ ೧೪ನೆಯ ಶತಮಾನದಲ್ಲಿ ವಿಜಯನಗರ ಕಾಲದಲ್ಲಿ ಆಂಧ್ರರು ಕನ್ನಡ ನಾಡಿನ ಕಡೆಗೆ ಹರಿದುಬಂದರು. ವಿಜಯನಗರ ಕಾಲದಲ್ಲಿ ಆಂಧ್ರರು ಸಾಮ್ರಾಜ್ಯದ ಆಸರೆಗಾಗಿ ಅವಕಾಶವನ್ನು ಅರಸಿ ಬಂದಿದ್ದರೆ, ವಿಜಯನಗರ ಪತನಾನಂತರ ಬುಡಕಟ್ಟು ಜನರ ವಲಸೆ ನಿರಂತರವಾಗಿ ಕಾಣಬರುತ್ತದೆ. ಕರ್ನಾಟಕದ ಹಳ್ಳಿಗಳಲ್ಲಿ ಹರಡಿ ಹೋಗಿರುವ ಹಲವಾರು ಬುಡಕಟ್ಟು ಜನರು ಆಂಧ್ರ ಮೂಲದವರಾಗಿದ್ದಾರೆ.

ತಮಿಳರ ಕರ್ನಾಟಕ ವಲಸೆಗೆ ಅವರದೇ ಆದ ಜಾಡುಗಳಿವೆ. ಹಲವು ಪಾಳೆಯಗಾರರ ಕಥೆಗಳಲ್ಲಿ ತಮ್ಮ ಮೂಲವನ್ನು ಉತ್ತರದಲ್ಲಿ ಹುಡುಕಿದರೆ, ಕೆಲವರು ದಕ್ಷಿಣ ದೇಶದಿಂದ ಬಂದುದಾಗಿ ಹೇಳಿಕೊಳ್ಳುತ್ತಾರೆ. ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಬಂದ ಉಲ್ಲೇಖ ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ಕಂಡುಬರುತ್ತದೆ. ರಾಮಾನುಜಾಚಾರ್ಯರಿಗೆ ಆಶ್ರಯವನ್ನು ನೀಡಿ ಸ್ವತಃ ಜೈನ ಧರ್ಮದಿಂದ ವೈಷ್ಣವ ಧರ್ಮವನ್ನು ಸ್ವೀಕರಿಸಿದಾಗ ವೈಷ್ಣವರು ಸಾಕಷ್ಟು ಸಂಖ್ಯೆಯಲ್ಲಿ ಕರ್ನಾಟಕಕ್ಕೆ ಬಂದು ಆಶ್ರಯ ಪಡೆದುಕೊಂಡರು. ಬ್ರಿಟಿಷರು ಮೈಸೂರು ಸಂಸ್ಥಾನವನ್ನು ವಶಪಡಿಸಿಕೊಂಡಾಗ, ಬ್ರಿಟಿಷ್ ಪ್ರಾಂತ್ಯವಾಗಿದ್ದ ಮದರಾಸಿನಿಂದ ಅಧಿಕಾರಿಗಳಾಗಿ ತಮಿಳರು ಮೈಸೂರು ಪ್ರಾಂತ್ಯಕ್ಕೆ ಬರತೊಡಗಿದರು. ಈ ಎರಡೂ ಸಂದರ್ಭದಲ್ಲಿ ಮೇಲ್ವರ್ಗದ ತಮಿಳರು ಕರ್ನಾಟಕದೆಡೆಗೆ ವಲಸೆ ಬಂದರೆ ಸ್ವಾತಂತ್ರ್ಯಾನಂತರದ ಚಿತ್ರಣವೇ ಬೇರೆ. ಬೆಂಗಳೂರು ಕೈಗಾರಿಕಾ ನಗರವಾಗಿ ಬೆಳೆದಂತೆ ತಾಂತ್ರಿಕ ಹಿನ್ನೆಲೆಯ ವರ್ಗ ಹಾಗೂ ಕೂಲಿ ಕಾರ್ಮಿಕರಿಬ್ಬರೂ ವಲಸೆ ಬರತೊಡಗಿದ್ದರು.

ಸ್ವಾತಂತ್ರ್ಯಾ ನಂತರದಲ್ಲಿ ಕನ್ನಡಿಗರು ಮುಂಬೈ, ಮದರಾಸಿಗೆ ವಲಸೆ ಹೋದರೆ, ೮೦ರ ದಶಕದಿಂದ ವಿದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ನೆರೆನಾಡಿನಿಂದ ವಲಸೆ ಬರುತ್ತಿರುವವರಲ್ಲಿ ಕೇರಳದ ಜನರೂ ಮುಖ್ಯರೆ. ಕರ್ನಾಟಕ ಕೇರಳದ ಗಡಿಯಲ್ಲಿ ಕಾಫಿ ತೋಟಗಳನ್ನು ಕೊಳ್ಳುವ ಮೂಲಕ ಕರ್ನಾಟಕದ ಕಡೆ ವಿಸ್ತರಿಸಿದರೆ, ಶಿಕ್ಷಣ ಹಾಗೂ ಉದ್ಯೋಗಕ್ಕಾಗಿ ಬೆಂಗಳೂರಿನ ಕಡೆ ಬರುವ ಪ್ರಕ್ರಿಯೆ ನಿರಂತರವಾಗಿ ಸಾಗಿದೆ. ಆದರೆ ಕರ್ನಾಟಕದಿಂದ ಕೇರಳದ ಕಡೆ ಸಾಗುವ ಜನರ ಪ್ರಮಾಣ ಬಹು ಕಡಿಮೆ. ಆಂಧ್ರದ ಕಡೆ ವಲಸೆ ಹೋಗುತ್ತಿರುವ ಉತ್ತರ ಕರ್ನಾಟಕದ ಜನರ ಸಂಖ್ಯೆ ಹೆಚ್ಚಿದೆ.

ಗಡಿ ರಾಜಕಾರಣಕ್ಕೆ ಹೊಸ ವೇಷ-ಭೂಷಣ

ಇಷ್ಟೆಲ್ಲಾ ವಿವರಣೆಯನ್ನು ನೀಡುವ ಮೂಲಕ ಜನ ನಿರಂತರವಾಗಿ ಒಂದು ಪ್ರದೇಶದಿಂದ ಮತ್ತೊಂದಕ್ಕೆ ವಲಸೆ ಹೋಗುತ್ತಿದ್ದಾರೆ. ಅವರ ವಲಸೆ ಹೋಗುವ ಕಾರಣಗಳು ಬಹು ಮುಖ್ಯವಾಗಿ ಉದ್ಯೋಗಾವಕಾಶವೇ ಆಗಿದ್ದರೂ, ಅದೊಂದೇ ಕಾರಣವೂ ಅಲ್ಲ ಎಂಬುದನ್ನು ಸಮರ್ಥಿಸಬೇಕಾಗಿದೆ. ಭಾಷೆ ಚರಿತ್ರೆಯ ಕಾಲದಲ್ಲಿ ಗಡಿಯಾಗಿ, ಗೋಡೆಯಾಗಿ ಕಂಡು ಬಂದಿಲ್ಲ. ಸ್ವಾತಂತ್ರ್ಯಾ ನಂತರವಷ್ಟೇ-ಭಾಷಾವಾರು ರಾಜ್ಯಗಳ ರಚನೆ ವಲಸೆಗೊಂದು ಕಡಿವಾಣವನ್ನು ಹಾಕಿದೆ. ನೆಲದೊಡನೆ ಗುರುತಿಸಿಕೊಳ್ಳುವ ಹೊಸ ಐಡೆಂಟಿಟಿಗಳನ್ನು ಕೊಡುತ್ತಾ ಬಂದಿದೆ. ಕನ್ನಡಿಗರು ವಾಸಿಸಿದ ನೆಲೆಯನ್ನು ಆಧರಿಸಿ ಭೂಪಟಗಳನ್ನು ರಚಿಸಿದರೆ ಕಾಲಕಾಲಕ್ಕೆ ಹೇಗೆ ಭಿನ್ನವಾಗಿತ್ತೆಂದು ಅರಿಯಬಹುದು.

ವಲಸೆ ಹೋಗುವ ಕಾರಣಗಳು ಬಹು ಮುಖ್ಯವಾಗಿ ಉದ್ಯೋಗಾವಕಾಶವೇ ಆಗಿದ್ದರೂ, ಅದೊಂದೇ ಕಾರಣವೂ ಅಲ್ಲ ಎಂಬುದನ್ನು ಸಮರ್ಥಿಸಬೇಕಾಗಿದೆ. ಭಾಷೆ ಚರಿತ್ರೆಯ ಕಾಲದಲ್ಲಿ ಗಡಿಯಾಗಿ, ಗೋಡೆಯಾಗಿ ಕಂಡುಬಂದಿಲ್ಲ. ಸ್ವಾತಂತ್ರ್ಯಾನಂತರವಷ್ಟೇ-ಭಾಷಾವಾರು ರಾಜ್ಯಗಳ ರಚನೆ ವಲಸೆಗೊಂದು ಕಡಿವಾಣವನ್ನು ಹಾಕಿದೆ. ನೆಲದೊಡನೆ ಗುರುತಿಸಿಕೊಳ್ಳುವ ಹೊಸ ಐಡೆಂಟಿಟಿಗಳನ್ನು ಕೊಡುತ್ತಾ ಬಂದಿದೆ.

ಕಾಲಕಾಲಕ್ಕೆ ಜನ ವಲಸೆ ಹೋಗುವ ಕಾರಣಗಳು ಬದಲಾಗುತ್ತವೆ. ಜಾಗತೀಕರಣ ಜನರ ಚಲನೆಯನ್ನು ಹೆಚ್ಚಿಸಿದೆ. ವಲಸೆಯ ಪ್ರಕ್ರಿಯೆ 'ಗಡಿ'ಯ ಕಲ್ಪನೆಗಿರುವ ದೊಡ್ಡ ಸವಾಲೇ ಸರಿ.

ಸಾಂಸ್ಕೃತಿಕ ಹರವು : ರಾಜಕೀಯ ಗಡಿಯ ಕಲ್ಪನೆಯನ್ನು ಸದಾ ಪ್ರಶ್ನಿಸುವ ಶಕ್ತಿ ಸಂಸ್ಕೃತಿಗಿದೆ. ಸಂಸ್ಕೃತಿ ಪರಿಮಳದಂತೆ ಪಸರಿಸುತ್ತದೆ. ಅದನ್ನು ಬಂಧಿಸಿಡಲಾಗುವುದಿಲ್ಲ. ನಮ್ಮೆಡೆಗೆ ಹರಿದುಬರುವ ಅಥವಾ ನಮ್ಮಿಂದ ಹೊರಹೋಗುವ ಪರಿಮಳಕ್ಕೆ ಅಡ್ಡಗೋಡೆಗಳನ್ನು ಹೇಗೆ ಹಾಕಲಾರೆವೋ, ಹಾಗೆಯೇ ಸಂಸ್ಕೃತಿಯು ನಿರಂತರ ಕೊಡುಕೊಳುಗೆಯೊಂದಿಗೆ ಮುಂದೆ ಸಾಗುತ್ತದೆ. ಅದು ತನ್ನ ಸುತ್ತ ಒಂದು ಪ್ರಭಾವಳಿಯನ್ನು ಸೃಷ್ಟಿಸಿಕೊಳ್ಳುತ್ತ

ದೆಯೇ ಹೊರತು, ಚೌಕಟ್ಟುಗಳನ್ನು ಹಾಕಿಕೊಳ್ಳುವುದಿಲ್ಲ.

ಸಂಸ್ಕೃತಿಯನ್ನು ಹೊತ್ತು ಸಾಗುವ ಬಹುಮುಖ್ಯ ಸಾಧನ ಭಾಷೆ. ಸಾಹಿತ್ಯ, ಸಂಗೀತ, ನೃತ್ಯ, ಉಡುಗೆ–ತೊಡುಗೆಗಳು, ಮತಾಚರಣೆಗಳು, ಬದುಕಿನ ರೀತಿನೀತಿಗಳ ಮೂಲಕ ಜನ ತಮ್ಮ ಸಂಸ್ಕೃತಿಯನ್ನು ಕಟ್ಟಿಕೊಳ್ಳುತ್ತಾರೆ. ಕನ್ನಡದ ಜನ ಜಗತ್ತಿನಲ್ಲಿ ಎಲ್ಲೆಲ್ಲಿ ನೆಲೆಸಿರುತ್ತಾರೆ ಅಲ್ಲೆಲ್ಲ ಕನ್ನಡದ ಕಂಪು ಹರಿದೇ ಇರುತ್ತದೆ. ಅದು ಅವರ ಅರಿವಿಗೆ ಬಾರದೆಯೂ ಇರಬಹುದು. ಕನ್ನಡಿಗರು ಒಂದು ಕಾಲಕ್ಕೆ ನೆಲೆಸಿದ್ದ ಪ್ರದೇಶಗಳಲ್ಲಿ ಕನ್ನಡದ ಶಾಸನಗಳು ಕಾಣಬರುತ್ತವೆ. ಅಮೆರಿಕಾದಲ್ಲಿ 'ಅಕ್ಕಾ' ಸಾಹಿತ್ಯ ಸಮ್ಮೇಳನಗಳನ್ನು ಮಾಡಿ ಅದಕ್ಕೊಂದು ಅಧಿಕೃತ ಮೆರುಗನ್ನು ನೀಡುತ್ತಾ ಬಂದಿದ್ದಾರೆ. ಕನ್ನಡದ ಚಲನಚಿತ್ರಗಳು ಕನ್ನಡದ ಕಂಪನ್ನು ಹೊತ್ತು ಸಾಗುತ್ತಿವೆ. ಭಾಷೆಯ ಮೂಲಕ ವ್ಯಕ್ತವಾಗುವ ಸಾಹಿತ್ಯ, ಸಂಗೀತ, ಸಂಸ್ಕೃತಿಯ ನಿರಂತರ ವಾಹಕಗಳಾಗಿವೆ. ಭಾರತದಾದ್ಯಂತ ಜನ ಕನ್ನಡಿಗರಂತೆ ಸೀರೆಯನ್ನು ಉಡಲು ಬಯಸಿದರೆ, ಕರ್ನಾಟಕದ ಸಂಗೀತವನ್ನು ಕಲಿಯಲು ಜಗತ್ತಿನಾದ್ಯಂತ ಜನ ಉತ್ಸುಕರಾಗಿದ್ದಾರೆ. ಅಷ್ಟೇ ಮುಕ್ತವಾಗಿ ಕನ್ನಡಿಗರೂ ನೂರಾರು ವಿಚಾರಗಳನ್ನು ಹೊರಗಿನಿಂದ ಪಡೆಯುತ್ತಾ ಬಂದಿದ್ದಾರೆ. ಇಂಗ್ಲಿಷ್‌ನ ವರ್ಡ್ಸ್‌ವರ್ತ್ ಕನ್ನಡಿಗರ ಭಾವಗೀತೆಗಳಲ್ಲಿ ಸೇರಿದ್ದರೆ, ಠಾಗೂರರು ಕನ್ನಡಸಾಹಿತ್ಯಕ್ಕೆ ಒಂದಷ್ಟು ದಾರಿ ತೋರಿದ್ದಾರೆ. ಉರ್ದುವಿಲ್ಲದ ಉತ್ತರ ಕರ್ನಾಟಕದ ಭಾಷೆಯನ್ನಾಗಲೀ ಸಾಹಿತ್ಯವನ್ನಾಗಲಿ ನೆನೆಯಲಾದೀತೆ. ಹಿಂದೂ ಮುಸ್ಲಿಂ ಬೆರೆತ ಶಿಲ್ಪ ಶೈಲಿ ಕರ್ನಾಟಕದ ವಿಶಿಷ್ಟ ಶೈಲಿಯಾಗಿ ವಿಜಯನಗರ–ಬಹುಮನಿ ಸುಲ್ತಾನರ ಕಾಲದಿಂದ ಬೆಳೆದು ಬಂದಿದೆ. ಕರ್ನಾಟಕ ಸಂಸ್ಕೃತಿಯನ್ನು ರೂಪಿಸುವಾಗ ಇತರ ಸಂಸ್ಕೃತಿಗಳು ನೆರವಾದಂತೆ, ಪರರ ಸಂಸ್ಕೃತಿಯಲ್ಲೂ ಕನ್ನಡ ರಮಿಸಿದೆ. ಕನ್ನಡ ಸಾಹಿತ್ಯ ಜಗತ್ತಿನ ಹಲವು ಭಾಷೆಗಳಿಗೆ ತರ್ಜುಮೆಯಾಗಿದೆ. ಸಂಸ್ಕೃತಿ ವಿನಿಮಯ ಕಾರ್ಯಕ್ರಮಗಳು ಈ ನಿಟ್ಟಿನಲ್ಲಿ ಉತ್ತಮ ಕಾರ್ಯನಿರ್ವಹಿಸುತ್ತಿವೆ. ಸರ್ಕಾರ ತನ್ನ ನೀತಿ ನಿರೂಪಣೆಯಲ್ಲಿ ಪ್ರಸಕ್ತ ಪರಿಸ್ಥಿತಿಯಲ್ಲಿ ಗಡಿಯ ಬಗೆಗೆ ಹೋರಾಡುವುದಕ್ಕಿಂತ ಸಾಂಸ್ಕೃತಿಕ ವಿಸ್ತರಣೆಯ ಕಾರ್ಯ ಸೃಜನಶೀಲವಾಗುತ್ತದೆ. ಕನ್ನಡದ ಕಲಿಕೆಗೆ ಹೊರ ರಾಜ್ಯಗಳಲ್ಲಿ ಅವಕಾಶ ಮಾಡಿಕೊಡುವುದು ಈ ನಿಟ್ಟಿನ ಒಂದು ಪ್ರಯತ್ನವಾದೀತು.

ಸಂಸ್ಕೃತಿಯ ವಿನಿಮಯ ನಮ್ಮ ಅಹಂಮಿಕೆಯನ್ನು ನೀಗಿಸುತ್ತದೆ. ಉಳಿವಿಗಾಗಿ ನಡೆಯುವ ಹೋರಾಟ ಒಂದು ಕಡೆಯದಾದರೆ, ಅಹಂಮಿಕೆಯಿಂದ ಮತ್ತೊಬ್ಬರ ಮೇಲಿನ ದೌರ್ಜನ್ಯ ಮತ್ತೊಂದು ಕಡೆ ನಡೆದೇ ಇದೆ. ಇದನ್ನು ಸಾಂಸ್ಕೃತಿಕ ರಾಜಕೀಯವೆಂದೇ ಕರೆಯಬೇಕಾಗುತ್ತದೆ. ಕರ್ನಾಟಕದಲ್ಲೇ ಕನ್ನಡ ಭಾಷಾ ಕಲಿಕೆಗಾಗಿ ಹೋರಾಟ ನಡೆದರೆ, ಯಾವ ಹೋರಾಟವೂ ಇಲ್ಲದೆ ಸಂಸ್ಕೃತ ಭಾಷೆಯ ಬೋಧನೆ ಶಾಲಾ ಹಂತದಲ್ಲಿ ಮುಂದುವರೆದಿದೆ. ಇದು ಭಾಷಾ ರಾಜಕೀಯವಲ್ಲವೇ? ಸಂಸ್ಕೃತಿಯ ಅಂಶಗಳು ಆರ್ಥಿಕ ವಿಚಾರಗಳ ಜೊತೆ ಸೇರಿದಂತೆ ಪೈಪೋಟಿ ಹೆಚ್ಚುತ್ತದೆ. ಕರ್ನಾಟಕದಲ್ಲಿ ಇತರ ಭಾಷಾ ಚಲನಚಿತ್ರಗಳನ್ನು ವಿರೋಧಿಸಿದಾಗ ಅದು ತನ್ನ ಭಾಷೆಯ, ಸಂಸ್ಕೃತಿಯ ಉಳಿವಿಗಾಗಿ ಮಾತ್ರವಾಗಿರಲಿಲ್ಲ, ಅದಕ್ಕೂ ಮಿಗಿಲಾಗಿ ಆರ್ಥಿಕ ಪೈಪೋಟಿಯಾಗಿತ್ತು. ತಾರ್ಕಿಕವಾಗಿ 'ಕನ್ನಡ ಚಲನಚಿತ್ರ' ಎಂದರೆ ಚಲನ ಚಿತ್ರದ ಭಾಷೆ ಮಾತ್ರ ಕನ್ನಡವಾಗಿರಬೇಕೆಂದು ಅರ್ಥವೇ, ಅದರ ನಟರೆಲ್ಲರೂ ಕನ್ನಡಿಗರಾಗಿರಬೇಕೆಂದು ಗ್ರಹಿಸಬೇಕೆ, ಬಂಡವಾಳ ಕನ್ನಡಿಗರದೆಂದು ಭಾವಿಸಬೇಕೆ, ಕರ್ನಾಟಕದಲ್ಲಲ್ಲದೆ ಬೇರೆಲ್ಲೂ ಪ್ರದರ್ಶನವಾಗುವುದಿಲ್ಲವೆಂದು ಪಣ ತೊಟ್ಟಿದೆಯೇ, ತಂತ್ರಜ್ಞಾನ ಕರ್ನಾಟಕದಲ್ಲೇ ಬೆಳೆಯುತ್ತಿದೆಯೇ? ಇದು ಸಂಸ್ಕೃತಿಯ ಪೈಪೋಟಿ ಮಾತ್ರವಲ್ಲ, ಭಾಷಾ ಹೊದಿಕೆಯ ಹಿಂದೆ ಆರ್ಥಿಕ ಲಾಭದ ಹೋರಾಟವೆಂಬುದು ಸ್ಪಷ್ಟವಾಗುತ್ತದೆ. ಇದೂ ಒಂದು ರೀತಿ ಕಲೆಗೆ ಹಾಕುವ ಚೌಕಟ್ಟೇ ತಾನೆ? ಇಲ್ಲಿ ಆವೇಶದ ಹೋರಾಟಕ್ಕಿಂತ ಬೇಕಾದುದು ಗುಣಮಟ್ಟದ ಹೆಚ್ಚಳ. ಸತ್ಯಜಿತ್ ರೇ ಅವರ ಸಿನಿಮಾಗಳು ಬಂಗಾಳದ ಗಡಿದಾಟಿ ಜಗತ್ತನ್ನು ಪಸರಿಸಲಿಲ್ಲವೇ?

ಸಂಸ್ಕೃತಿಯನ್ನು ಹೊತ್ತು ಸಾಗುವ ಬಹು ಮುಖ್ಯ ಸಾಧನ ಭಾಷೆ. ಸಾಹಿತ್ಯ, ಸಂಗೀತ, ನೃತ್ಯ, ಉಡುಗೆ–ತೊಡುಗೆಗಳು, ಮತಾಚರಣೆಗಳು, ಬದುಕಿನ ರೀತಿನೀತಿಗಳ ಮೂಲಕ ಜನ ತಮ್ಮ ಸಂಸ್ಕೃತಿಯನ್ನು ಕಟ್ಟಿಕೊಳ್ಳುತ್ತಾರೆ. ಕನ್ನಡದ ಜನ ಜಗತ್ತಿನಲ್ಲಿ ಎಲ್ಲೆಲ್ಲಿ ನೆಲೆಸಿರುತ್ತಾರೆ ಅಲ್ಲೆಲ್ಲ ಕನ್ನಡದ ಕಂಪು ಹರಿದೇ ಇರುತ್ತದೆ. ಅದು ಅವರ ಅರಿವಿಗೆ ಬಾರದೆಯೂ ಇರಬಹುದು. ಕನ್ನಡಿಗರು ಒಂದು ಕಾಲಕ್ಕೆ ನೆಲೆಸಿದ್ದ ಪ್ರದೇಶಗಳಲ್ಲಿ ಕನ್ನಡದ ಶಾಸನಗಳು ಕಾಣಬರುತ್ತವೆ. ಅಮೆರಿಕಾದಲ್ಲಿ 'ಅಕ್ಕಾ' ಸಾಹಿತ್ಯ ಸಮ್ಮೇಳನಗಳನ್ನು ಮಾಡಿ ಅದಕ್ಕೊಂದು ಅಧಿಕೃತ ಮೆರುಗನ್ನು ನೀಡುತ್ತಾ ಬಂದಿದ್ದಾರೆ. ಕನ್ನಡದ ಚಲನಚಿತ್ರಗಳು ಕನ್ನಡದ ಕಂಪನ್ನು ಹೊತ್ತು ಸಾಗುತ್ತಿವೆ. ಭಾಷೆಯ ಮೂಲಕ ವ್ಯಕ್ತವಾಗುವ ಸಾಹಿತ್ಯ, ಸಂಗೀತ, ಸಂಸ್ಕೃತಿಯ ನಿರಂತರ ವಾಹಕಗಳಾಗಿವೆ.

ಪರರ ಸಂಸ್ಕೃತಿಯನ್ನು ಜನ ಸುಲಭವಾಗಿಯೇನು ಸ್ವೀಕರಿಸುವುದಿಲ್ಲ. ಅದರಲ್ಲೂ ಒತ್ತಾಯಪೂರ್ವಕವಾಗಿ ಕಲಿಸುವುದು ಮತ್ತೂ ಕಷ್ಟಸಾಧ್ಯವಾದುದು. ಬ್ರಿಟೀಷರು ಭಾರತವನ್ನು ೨೦೦ ವರ್ಷಗಳ ಕಾಲ ಆಳಿದರೂ ಅವರ ಭಾಷೆ ಎಷ್ಟೇ ಹೇರಿದರೂ ಅದು ನಮಗೆ ವಿದೇಶೀಯವಾಗಿಯೇ ಉಳಿದಿದೆ. ಇಂಗ್ಲಿಷ್ ಸಂಸ್ಕೃತಿ ಎಲ್ಲವೂ ನಮ್ಮದಾಗಲಿಲ್ಲ. ಬೇಕಷ್ಟನ್ನು ಮಾತ್ರವೇ ಜನ ಸ್ವೀಕರಿಸಿದರು.

ಆರ್ಥಿಕ ಸವಾಲು: ಸಾಂಸ್ಕೃತಿಕ ಕರ್ನಾಟಕವನ್ನು ಬೆಳೆಸುವಂತೆ ಆರ್ಥಿಕ ಕರ್ನಾಟಕವೊಂದನ್ನು ಗುರುತಿಸಿಕೊಳ್ಳುವುದು ಅಭಿವೃದ್ಧಿ ದೃಷ್ಟಿಯಿಂದ ಅಗತ್ಯವಾದುದು. ಅಭಿವೃದ್ಧಿ ಕಾರ್ಯ ಎಲ್ಲ ಪ್ರದೇಶಗಳಲ್ಲೂ ಸಮಾನವಾಗಿ ನಡೆಯದೆ ಬೆಂಗಳೂರಿನಲ್ಲಿ ಕೇಂದ್ರೀಕೃತವಾಗುತ್ತಿದೆ. ಇದು ಮತ್ತಷ್ಟು ಪ್ರಾದೇಶಿಕ ಆರ್ಥಿಕ ಅಸಮಾನತೆಯನ್ನು ಸೃಷ್ಟಿಸುತ್ತಿದೆ. ಏಕೀಕರಣದ ಸಮಯದಲ್ಲಿ ಪ್ರಾದೇಶಿಕ ಆರ್ಥಿಕ ಅಸಮಾನತೆ ಮಾರಕವಾಗಿತ್ತೆಂಬುದನ್ನು ಈ ಹೊತ್ತಿನಲ್ಲಿ ನೆನೆಯಬಹುದು. ಉತ್ತರಕರ್ನಾಟಕದ ಪ್ರಾಂತ್ಯಗಳು ಆರ್ಥಿಕವಾಗಿ ಹಿಂದೆ ಬಿದ್ದಿದ್ದು ಏಕೀಕರಣದಿಂದ ಮೈಸೂರು ಸಂಸ್ಥಾನದ ಪ್ರಗತಿ ಕುಂಟಿತವಾಗಬಹುದೆಂಬುದು ಅವರ ವಾದವಾಗಿತ್ತು. ಕೊಡಗು ಹಾಗೂ ತುಳುನಾಡಿನಲ್ಲಿ ಕೇಳಿಬಂದ ಪ್ರತ್ಯೇಕ ರಾಜ್ಯದ ಕೂಗಿಗೂ ಆರ್ಥಿಕ ಅಸಮಾನತೆ ಒಂದು ಪ್ರಮುಖ ಕಾರಣವಾಗಿದೆ. ಬೆಳೆಯುತ್ತಿರುವ ನಕ್ಸಲೀಯ ಸಮಸ್ಯೆಗೂ ಆರ್ಥಿಕ ಅಸಮಾನತೆ ಪ್ರಮುಖ ಕಾರಣವೆಂಬುದನ್ನು ಮರೆಯಲಾಗದು. ಮೂಲಭೂತ ಸೌಕರ್ಯಗಳನ್ನು ಎಲ್ಲರಿಗೂ ಒದಗಿಸುವುದು ಇದಕ್ಕಿರುವ ಉತ್ತರ.

ಕನ್ನಡಿಗರ ಅಭಿವೃದ್ಧಿಯೇ ಕನ್ನಡದ ಅಭಿವೃದ್ಧಿ ಎಂಬುದು ಗಮನಕ್ಕೆ ಬಂದಿರುವ ವಿಚಾರ. ಕನ್ನಡಿಗರಿಗೆ ಆದ್ಯತೆ ಎಂಬ ಪ್ರಶ್ನೆ ತಲೆದೋರಿರುವುದು ಆರ್ಥಿಕ ಅವಕಾಶಗಳ ಸಂದರ್ಭದಲ್ಲೇ. ಕರ್ನಾಟಕದಲ್ಲಿ ಕನ್ನಡಿಗರಿಗೆ ಉದ್ಯೋಗ ಮೀಸಲುಗೊಳಿಸಬೇಕು ಎಂಬ ಕೂಗು ಏಳುತ್ತದೆ. ಹಾಗಾದರೆ ಕನ್ನಡಿಗರು ಯಾರು ಎಂಬ ಪ್ರಶ್ನೆಯೂ ಜೊತೆಯಲ್ಲೇ ತಲೆಯೆತ್ತುತ್ತದೆ. ಕನ್ನಡ ನಾಡಿನಲ್ಲೇ ಉದ್ಯೋಗಾವಕಾಶಗಳಿಂದ ವಂಚಿತರಾದಾಗ ತಮ್ಮ ನಾಡಿನಲ್ಲೇ ತಾವು ಪರರೇ ಎಂಬ ಆತಂಕ ಕಾಡುತ್ತದೆ. ಅದಕ್ಕಾಗಿ ಹೋರಾಟಗಳೂ ನಡೆದಿವೆ. ಕರ್ನಾಟಕದಲ್ಲಿ ಬಂಡವಾಳ ಹೂಡುವವರು ಕನ್ನಡಿಗರು ಮಾತ್ರವೇ ಆಗಿಲ್ಲ. ಕಡೆಗೆ ಭಾರತೀಯರು ಮಾತ್ರವೂ ಆಗಿರದೆ ಜಾಗತಿಕ ಶಕ್ತಿಗಳು ಕರ್ನಾಟಕದಲ್ಲಿ ಬಂಡವಾಳವನ್ನು ಹೂಡುತ್ತಿದ್ದಾರೆ. ಬಂಡವಾಳಗಾರರಿಗೆ ಕೆಂಪು ಕಂಬಳಿ ಹಾಸುವ ಹೊತ್ತಿನಲ್ಲಿ ಕನ್ನಡಿಗರ ಸ್ಥಳೀಯರ ಹಿತವನ್ನು ಕಾಯುವ ಚಿಂತನೆ ಆಡಳಿತಶಾಹಿಗೆ ಇರಬೇಕಾದುದು ಅಗತ್ಯ.

ಉದ್ಯೋಗಾವಕಾಶದ ದೃಷ್ಟಿಯಿಂದ ಸರೋಜಿನಿ ಮಹಿಷಿ ವರದಿ ಕನ್ನಡ ನಾಡಿನಲ್ಲಿ ಹದಿನೈದು ವರ್ಷಗಳಿಂದ ವಾಸಿಸುವವರೆಲ್ಲರೂ ಕನ್ನಡಿಗರೆಂದು ವ್ಯಾಖ್ಯಾನಿಸಿದೆ. ಸರಳ ಕಲ್ಪನೆಯಲ್ಲಿ ಕನ್ನಡ ಮಾತೃಭಾಷೆಯಾಗಿ ಹೊಂದಿರುವವರೆಂದು ಗ್ರಹಿಸುತ್ತೇವೆ. ಮಾತೃಭಾಷೆ ಯಾವುದೇ ಇರಲಿ ಕನ್ನಡ ರಾಜ್ಯಭಾಷೆಯಾಗಿ ಈ ನಾಡಿನ ಸಂವಹನ ಭಾಷೆಯಾಗಿ ಜನ ರೂಢಿಸಿಕೊಂಡಿದ್ದಾರೆ. ಉರ್ದು, ಮರಾಠಿ, ಕೊಡವ, ತುಳು ಇತ್ಯಾದಿ ಭಾಷೆಗಳನ್ನು ಮಾತೃ ಭಾಷೆಯಾಗಿ ಹೊಂದಿರುವವರು ಸಹಜವಾಗಿ ದ್ವಿಭಾಷಿಗಳಾಗಿದ್ದಾರೆ. ಯಾವುದೇ ಹೇರಿಕೆಯಿಲ್ಲದೆಯೂ ಕನ್ನಡವನ್ನು ರೂಢಿಸಿಕೊಂಡಿದ್ದಾರೆ. ಭಾರತದ ನಾಗರಿಕರಾಗಿ ಸಂವಿಧಾನ ಬದ್ಧವಾಗಿ ಯಾರು ಯಾವ ರಾಜ್ಯದಲ್ಲಾದರೂ ಬದುಕುವ ಮತ್ತು ವಲಸೆಹೋಗುವ ಅವಕಾಶ ವಿರುವುದರಿಂದ ಸಮಕಾಲೀನ ಅರ್ಥದಲ್ಲಿ ಕನ್ನಡಿಗರೆಂದರೆ ಕನ್ನಡ ಬಲ್ಲವರೆಂದು ಒಪ್ಪಿಕೊಳ್ಳಬೇಕಾಗುತ್ತದೆ.

ಆರ್ಥಿಕ ಕರ್ನಾಟಕವೂ ಸಹ ರಾಜಕೀಯ ಗಡಿಯನ್ನು ಮುರಿದು ನಿಲ್ಲುತ್ತದೆ. ಯಾವುದೇ ಪ್ರದೇಶದ ಆರ್ಥಿಕ ಬೆಳವಣಿಗೆ ಇಂದು ಸ್ವಾವಲಂಬಿಯಲ್ಲ ನದಿ ನೀರಿನ ವಿವಾದಗಳಲ್ಲಿ ಇದು ಸ್ಪಷ್ಟವಾಗುತ್ತದೆ. ನದಿ ನೀರನ್ನು ಭಾಷಾ ನೆಲೆಯಲ್ಲಿ, ಭಾವುಕ ನೆಲೆಯಲ್ಲಿ ಚರ್ಚಿಸಿ ಸಮಸ್ಯೆಯನ್ನು ಕಗ್ಗಂಟಾಗಿಸಿಕೊಂಡಿದ್ದೇವೆ. ಹರಿಯುವ ನದಿಗೆ ಕನ್ನಡಿಗರು, ತೆಲುಗರು, ತಮಿಳರೆಂಬ ಭೇದ ಭಾವ

ವಿಲ್ಲದಿರುವುದರಿಂದ, ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ನದಿ ನೀರನ್ನು ಹಂಚಿಕೊಳ್ಳುವ, ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳಿಗೆ ಆದ್ಯತೆ ನೀಡುವ ಸಂಸ್ಕೃತಿಯನ್ನು ಮೆರೆಯಬೇಕಾಗಿದೆ.

ಆರ್ಥಿಕ ಬಲ ಭಾಷೆಗೆ ಬಲ ತಂದುಕೊಡುತ್ತದೆಂಬುದು ಸರ್ವವಿಧಿತವಾದ ವಿಚಾರ. ಬ್ರಿಟಿಷರ ಆರ್ಥಿಕ ಸಾಮರ್ಥ್ಯ ಇಂಗ್ಲಿಷ್‌ಗೆ ಮಾನ್ಯತೆಯನ್ನು ತಂದುಕೊಟ್ಟಿತು. ಹಾಗೆಯೇ ಇಂದು ಚೀನಾ ಮತ್ತು ಜಪಾನ್ ತಮ್ಮ ಆರ್ಥಿಕ ಬಲವನ್ನು ಹೆಚ್ಚಿಸಿಕೊಳ್ಳುವ ಮೂಲಕ ಯುರೋಪ್, ಅಮೇರಿಕಾ ರಾಷ್ಟ್ರಗಳು ಚೀನಿ ಹಾಗೂ ಜಪಾನಿ ಭಾಷೆಗಳ ಕಲಿಕೆ ಆದ್ಯತೆಯನ್ನು ಪಡೆದುಕೊಳ್ಳುತ್ತಿದೆ.

ಭಾಷಾವಾರು ರಾಜ್ಯಗಳು : ಭಾಷಾವಾರು ಕಲ್ಪನೆಗೆ ಮೊದಲು ಚಾಲನೆ ಕೊಟ್ಟವರು ಗಾಂಧೀಜಿ. ೧೯೨೦ರಲ್ಲಿ ಗಾಂಧೀಜಿ ಕಾಂಗ್ರೆಸ್‌ಅನ್ನು ಪ್ರವೇಶಿಸಿದಾಗ ಅದಕ್ಕೊಂದು ಸ್ವರೂಪವನ್ನು ಕೊಟ್ಟರು. ಭಾಷಾವಾರು ಆಧಾರದ ಮೇಲೆ ಪ್ರದೇಶ ಕಾಂಗ್ರೆಸ್ ಎಂದು ಕಾಂಗ್ರೆಸ್‌ನ್ನು ವಿಕೇಂದ್ರೀಕರಿಸಿದರು. ಇದೇ ಮುಂದುವರಿದು ಸ್ವಾತಂತ್ರ್ಯ ಚಳುವಳಿಯ ಜೊತೆ ಜೊತೆಯಲ್ಲಿ ಭಾಷಾವಾರು ಪ್ರಾಂತ್ಯಗಳು ತಮ್ಮ ಐಡೆಂಟಿಟಿಗಾಗಿ ಹೋರಾಡತೊಡಗಿದವು. ಕರ್ನಾಟಕದ ಏಕೀಕರಣ ಹೋರಾಟ ಆರಂಭವಾಯಿತು. ಆಲೂರು ವೆಂಕಟರಾಯರು ಕರ್ನಾಟಕ ಗತ ವೈಭವವನ್ನು ಬರೆದರು. ಬಿ.ಎಂ.ಶ್ರೀ ಅವರು ಹಳ್ಳಿ ಹಳ್ಳಿಗಳಲ್ಲಿ ಕನ್ನಡದ ಪ್ರಜ್ಞೆಯನ್ನು ಬೆಳೆಸಿದರು. ಮುದವೀಡು ಕೃಷ್ಣರಾವ್ ಅವರಿಂದ ಕುವೆಂಪುವರೆಗೆ ಕವಿಗಳು, ಸಾಹಿತಿಗಳು, ರಾಜಕಾರಣಿಗಳು, ಪತ್ರಿಕೆಗಳು, ಸಂಘ ಸಂಸ್ಥೆಗಳು ಇದಕ್ಕಾಗಿ ಹೋರಾಟ ನಡೆಸಿದರು.

ನೆರೆಹೊರೆಯ ರಾಜ್ಯಗಳೂ ತಮ್ಮ ತಮ್ಮ ರಾಜ್ಯಗಳಲ್ಲಿ ಕನ್ನಡಿಗರಂತೆಯೇ ಹೋರಾಟ ಮಾಡಿದ್ದಾರೆ. ಅದರಲ್ಲೂ ಆಂಧ್ರಪ್ರದೇಶ ಮುಂಚೂಣಿ ಯಲ್ಲಿತ್ತು. ರಾಜ್ಯ ಪುನರ್ ವಿಂಗಡಣಾ ಸಮಿತಿ ೧೯೫೬ ರಲ್ಲಿ ಕರ್ನಾಟಕದ ಗಡಿಯನ್ನು ಗುರುತಿಸಿತು. ಕನ್ನಡ ಭಾಷಾ ಬಹುಸಂಖ್ಯಾತರಿರುವ ಕಾಸರಗೂಡು, ಊಟಿ, ಶ್ರೀಶೈಲ, ಮಡಕಶಿರಾ ಮುಂತಾದ ಪ್ರದೇಶಗಳು ಕರ್ನಾಟಕದಿಂದ ಹೊರಗುಳಿದವು. ಹಾಗೆಯೇ ಪರಭಾಷಾ ನೆಲೆಗಳು ಕರ್ನಾಟಕದ ಒಳಸೇರಿದವು. ಗಡಿಯನ್ನು ಗುರುತಿಸುವಾಗ ಹಳ್ಳಿ, ಅಥವಾ ಊರುಗಳು ಘಟಕಗಳಾಗದೆ ಜಿಲ್ಲೆಗಳನ್ನು ಘಟಕಗಳಾಗಿ ನೋಡಲಾಯಿತು. ಇಂತಹ ರಾಜಕೀಯ ಗಡಿಯನ್ನು ಗುರುತಿಸುವಾಗ ಮೇಲೆ ಚರ್ಚಿಸಿದ ರಾಜಕೀಯ ಅಂಶಗಳು, ನಿರಂತರ ವಲಸೆಯಿಂದ ಬದಲಾಗುವ ಭೌಗೋಳಿಕ ನೆಲೆಗಳು, ಭಾಷಾ ನೆಲೆಯ ಹೋರಾಟಗಳು, ರಾಜಕೀಯ ಒತ್ತಡಗಳು ಕಾರಣವಾಗಿವೆ.

ದ್ವಿಭಾಷಾ ನೆಲೆಗಳು: ಎರಡು ಭಾಷಾ ಪ್ರದೇಶದ ಎಲ್ಲೆಯಲ್ಲಿ ಬದುಕುವ ಜನರನ್ನು ವಿಭಿನ್ನವಾಗಿ ನೋಡಬೇಕಾದ ಅಗತ್ಯವಿದೆ. ಸಹಜವಾಗಿ ಅವರು ಎರಡು ಭಾಷೆಗಳನ್ನು ಬಲ್ಲವರಾಗಿರುತ್ತಾರೆ. ಕರ್ನಾಟಕ –ಆಂಧ್ರ ಗಡಿಯಲ್ಲಿ ಬದುಕುವ ಜನರು ಕನ್ನಡ – ತೆಲುಗು ಭಾಷೆಗಳೆರಡನ್ನು ಬಲ್ಲವರಾಗಿರುತ್ತಾರೆ. ಮತ್ತೆ ಕೆಲವರು ಕನ್ನಡ–ತೆಲುಗು ಉರ್ದು ಭಾಷೆಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಕರ್ನಾಟಕದ ಭಾಗದಲ್ಲಿರುವವರು ಕನ್ನಡ ಶಾಲೆಗಳಲ್ಲಿ

ಗಡಿ ರಾಜಕೀಯಕ್ಕೊಂದು ವಿಶೇಷ ಅಧಿವೇಶನ.
ಅಲ್ಲಿ ಗಡಿ ಬಿಟ್ಟು ಬೇರೆಲ್ಲಾ ಚರ್ಚೆ

ಕಲಿತು ಕನ್ನಡದಲ್ಲಿ ಓದು ಬರಹವನ್ನು ಮುಂದುವರೆಸಿದರೂ, ಸಂಪರ್ಕ ಮಾಧ್ಯಮವಾಗಿ ತೆಲುಗು ಭಾಷೆಯನ್ನು ಬಳಸುತ್ತಿದ್ದಾರೆ. ಕೋಲಾರದ ಕೆಲವು ಶಾಲೆಗಳಲ್ಲಿ ಉರ್ದು ಹೆಚ್ಚಾಗಿ ಬಲ್ಲ ಮಕ್ಕಳಿಗೆ ಕನ್ನಡದ ಓದು ಬರಹ ತೊಡಕಾಗುತ್ತಿದೆ, ಬೆಳಗಾಂನ ಭಾಗದಲ್ಲಿ ಕನ್ನಡ ಬಲ್ಲವರಾದರೂ ಮರಾಠಿಯನ್ನು ಹೆಚ್ಚಾಗಿ ಬಳಸುವ ಜನ ವಾಸಿಸುತ್ತಿದ್ದಾರೆ. ಹಾಗೆಯೇ ಶ್ರೀ ಶೈಲಂನ ಕನ್ನಡಿಗರು ತಮ್ಮ ರಾಜ್ಯದ ಕಾರಣಕ್ಕಾಗಿ ತೆಲುಗನ್ನು ಕಲಿತರೂ ಕನ್ನಡ ಅವರ ಮಾತೃಭಾಷೆ ಅಥವಾ ಸಂಪರ್ಕ ಭಾಷೆಯಾಗಿದೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಇಂದು ಹೊಸ ಸೂತ್ರವನ್ನು ಕಂಡುಕೊಳ್ಳಬೇಕಾಗಿದೆ.

ದ್ವಿಭಾಷಿಗರಿಗಾಗಿ ಸರಿಯಾದ ಚಿಂತನೆಯಿಲ್ಲದೆ ಗಡಿ ಪ್ರದೇಶದ ಜನ ನರಳುವಂತಾಗಿದೆ. ಇಂದಿನ ಗಡಿ ಸಮಸ್ಯೆಗಳನ್ನು ಪರಿಗಣಿಸುವಾಗ ಒಂದು ಭಾಷೆಯನ್ನಾಡುವ ಜನರು ಮತ್ತೊಂದು ರಾಜ್ಯದಲ್ಲಿರಬೇಕೆ ಬೇಡವೇ ಎಂದು ಹೋರಾಡುವುದಕ್ಕಿಂತ ಆಧುನಿಕತೆಯ ಅನಿವಾರ್ಯತೆಗಳಿಗೆ ಅನುಗುಣವಾಗಿ ಹೆಚ್ಚು ವಿಸ್ತಾರವಾದ ತಳಹದಿಯ ಮೇಲೆ ಯೋಜನೆಗಳು ರೂಪಿತವಾಗಬೇಕು. ಗಡಿಗಳು, ರಾಜ್ಯಗಳು ಆಡಳಿತದ ಅನುಕೂಲಕ್ಕಾಗಿ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ಇವೆಯೇ ಹೊರತು, ಜನರ ಪ್ರಗತಿಯ ದೃಷ್ಟಿಯಿಂದ ಗಡಿಗಳು ಗೌಣವಾಗುತ್ತಾ ಹೋಗುತ್ತವೆ. ಬೆಳಗಾಂನ ಸಮಸ್ಯೆಗೆ ಈ ನಿಟ್ಟಿನಲ್ಲಿ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯ.

೧. ಗಡಿಯ ಎರಡೂ ಭಾಗದ ಜನರನ್ನು ಗಮನದಲ್ಲಿಟ್ಟುಕೊಂಡು ದ್ವಿಭಾಷಾ ನೆಲೆಗಳನ್ನು ಗುರುತಿಸುವುದು.

೨. ದ್ವಿಭಾಷಾ ಪ್ರದೇಶದ ಜನರ ಅಭಿವೃದ್ಧಿಗೆ ಎರಡೂ ರಾಜ್ಯಗಳು ಗಮನಹರಿಸುವುದು.

೩. ದ್ವಿಭಾಷಾ ನೆಲೆಯ ಮಕ್ಕಳಿಗೆ ಎರಡು ಭಾಷೆಗಳನ್ನು ಓದಲು, ವ್ಯವಹರಿಸಲು ಅವಕಾಶ ಕಲ್ಪಿಸುವುದು.

೪. ದ್ವಿಭಾಷೆಯನ್ನು ವ್ಯಕ್ತಿಯ ಸಾಮರ್ಥ್ಯ (Pote tiality) ವೆಂದು ಪರಿಗಣಿಸಿ ಅದಕ್ಕೆ ಪೂರಕವಾದ ನೀತಿ ನಿಯಮಗಳನ್ನು ಜಾರಿಗೊಳಿಸಬೇಕು.

೫. ಸ್ಥಳೀಯವಲ್ಲದ ಹಿಂದಿಯನ್ನೋ, ಸಂಪರ್ಕ ಭಾಷೆಯಲ್ಲದ ಸಂಸ್ಕೃತವನ್ನೋ ಕಲಿಯುವುದಕ್ಕಿಂತ ತಮ್ಮ ದಿನನಿತ್ಯದ ಬದುಕಿಗೆ ಬೇಕಾದ ಎರಡು ಭಾಷೆಗಳನ್ನು ಕಲಿಯಬಾರದೇಕೆ?

ದ್ವಿಭಾಷಿಗರಿಗಾಗಿ ಸರಿಯಾದ ಚಿಂತನೆಯಿಲ್ಲದೆ ಗಡಿ ಪ್ರದೇಶದ ಜನ ನರಳುವಂತಾಗಿದೆ. ಇಂದಿನ ಗಡಿ ಸಮಸ್ಯೆಗಳನ್ನು ಪರಿಗಣಿಸುವಾಗ ಒಂದು ಭಾಷೆಯನ್ನಾಡುವ ಜನರು ಮತ್ತೊಂದು ರಾಜ್ಯದಲ್ಲಿರಬೇಕೆ ಬೇಡವೇ ಎಂದು ಹೋರಾಡುವುದಕ್ಕಿಂತ ಆಧುನಿಕತೆಯ ಅನಿವಾರ್ಯತೆಗಳಿಗೆ ಅನುಗುಣವಾಗಿ ಹೆಚ್ಚು ವಿಸ್ತಾರವಾದ ತಳಹದಿಯ ಮೇಲೆ ಯೋಜನೆಗಳು ರೂಪಿತವಾಗಬೇಕು. ಗಡಿಗಳು, ರಾಜ್ಯಗಳು ಆಡಳಿತದ ಅನುಕೂಲಕ್ಕಾಗಿ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ಇವೆಯೇ ಹೊರತು, ಜನರ ಪ್ರಗತಿಯ ದೃಷ್ಟಿಯಿಂದ ಗಡಿಗಳು ಗೌಣವಾಗುತ್ತಾ ಹೋಗುತ್ತವೆ. ಬೆಳಗಾಂನ ಸಮಸ್ಯೆಗೆ ಈ ನಿಟ್ಟಿನಲ್ಲಿ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯ. ಬೆಳಗಾಂನ ಮರಾಠಿಗರು ತಮ್ಮ ಮಕ್ಕಳನ್ನು ಬಯಸಿದಲ್ಲಿ, ಮಹಾರಾಷ್ಟ್ರದಲ್ಲಿ ಓದಿಸಲು ಅವಕಾಶ ಕಲ್ಪಿಸಬೇಕು. ಬೆಳಗಾಂ ಪ್ರದೇಶದ ಶಾಲೆಗಳಲ್ಲಿ ಕನ್ನಡ ಮತ್ತು ಮರಾಠಿ ಎರಡೂ ಭಾಷೆಯ ಅಧ್ಯಯನಕ್ಕೆ ಅವಕಾಶ ಕಲ್ಪಿಸಬೇಕು. ಗಡಿ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಕಾಳಜಿ ವಹಿಸಬೇಕು. 'ಗಡಿ' ಎಂದರೆ ಅಭಿವೃದ್ಧಿಯ ದೃಷ್ಟಿಯಿಂದಲೂ ಅಂಚಿನ ಜನರೆಂದು ಭಾವಿಸುವಂತಾಗಬೇಕಿಲ್ಲ. ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮತೋಲನವನ್ನು ತಪ್ಪಿಸಿದರೆ ಸಹಜವಾಗಿ ಗಡಿಯ ಹೋರಾಟಗಳೂ ಕಡಿಮೆಯಾಗುತ್ತದೆ.

ಕನ್ನಡ ನಾಡಿನಲ್ಲಿ ಕನ್ನಡದ ಉಳಿವಿಗಾಗಿ ಹೋರಾಡುವುದು ಎಷ್ಟು ಮುಖ್ಯವೋ ಅದರೊಳಗೆ ಬದುಕುತ್ತಿರುವ ಅಲ್ಪ ಸಂಖ್ಯಾತರ ಭಾಷೆಗಳನ್ನು ಉಳಿಸಿಕೊಳ್ಳುವುದೂ ಅಷ್ಟೇ ಮುಖ್ಯ. ಲಿಪಿ ಇರುವ ಇಲ್ಲದಿರುವ, ಭಾಷೆಗಳ ಉಳಿವು ಈ ನೆಲದ ಜವಾಬ್ದಾರಿ. ಯಾವ ಭಾಷೆ ಸತ್ತರೂ ಅದರ ಜೊತೆ ಜ್ಞಾನ ಭಂಡಾರ ನಾಶವಾದಂತೆ.

ಎರಡು ಜಿಲ್ಲೆಯ ನಡುವಿನ ಮೇರೆಗಳು ಎಷ್ಟು ಗೌಣವೋ ಎರಡು ರಾಜ್ಯಗಳ ಗಡಿಯೂ ಅಷ್ಟೇ ಗೌಣವಾಗಬೇಕು. ಗಡಿಗಳನ್ನು ಕೋಟೆಗಳೆಂದು ಭಾವಿಸಿ ನಾವೇ ಕಂದಕವನ್ನು ಸೃಷ್ಟಿಸಿದರೆ, ದೇಶಗಳ ಗಡಿಗಳನ್ನು ಒಡೆಯುವ ಜಾಗತಿಕ ಶಕ್ತಿಗಳ ವಿರುದ್ಧ ಹೋರಾಡುವವರು ಯಾರು ? □

ಟಿಪ್ಪು ಆಳಿದ ಗಲನೆಯ ಶತಮಾನದಲ್ಲಿ ಮೈಸೂರು ಪ್ರಾಂತ್ಯ ಕನ್ನಡನಾಡು ಎಂದು ಗುರುತಿಸಲ್ಪಟ್ಟಿ ರಲಿಲ್ಲ. ಕನ್ನಡ ರಾಜ್ಯ ಭಾಷೆಯಾಗಲು ಅಂದಿನ ಕಾಲಘಟ್ಟದಲ್ಲಿ ಯಾವ ಬೇಡಿಕೆಗಳೂ ಇರಲಿಲ್ಲ. ತುಳು, ಕೊಡವ, ಕೊಂಕಣಿ, ಹೀಗೆ ಹಲ ವಾರು ಭಾಷೆಗಳ ರಾಜರುಗಳು ಮೈಸೂರು ಪ್ರಾಂತ್ಯವನ್ನಾಳುತ್ತಿದ್ದರು. ಅಂತಹ ಐತಿಹಾಸಿಕ ಕಾಲಘಟ್ಟದಲ್ಲಿ ಟಿಪ್ಪು ಪರ್ಶಿಯನ್ ಭಾಷೆ ಬಳಸಿದ್ದನ್ನೇ ದೇಶದ್ರೋಹ ಎನ್ನುವುದಾದರೆ, ಕರ್ನಾ ಟಕ ರಾಜ್ಯ ಸ್ಥಾಪನೆ ಯಾಗಿ ಐವತ್ತು ವರ್ಷ ಗಳಾದರೂ ಇಂದಿಗೂ ಕನ್ನಡವನ್ನು ಪೂರ್ಣ ಪ್ರಮಾಣ ಅಧಿಕೃತ ರಾಜ್ಯಭಾಷೆಯನ್ನಾಗಿ ಮಾಡಲು ವಿಫಲರಾಗಿ ರುವ ಶಂಕರಮೂರ್ತಿ ಮತ್ತು ಇತರ ರಾಜಕೀಯ ನಾಯಕರುಗಳನ್ನು ಏನೆನ್ನಬೇಕು? ಪರ್ಶಿ ಯನ್ ಭಾಷೆಯನ್ನು ಬಳಸಿದ ಮಾತ್ರಕ್ಕೇ ಟಿಪ್ಪು ದೇಶದ್ರೋಹಿಯಾದರೆ, ತೆಲಗು ಸಾಹಿತ್ಯ ರಚಿಸಿದ ಕೃಷ್ಣದೇವರಾಯ ಕನ್ನಡಿ ಗರ ನೆಚ್ಚಿನ ಸಾಮ್ರಾಟ ಹೇಗಾಗುತ್ತಾನೆ.

ನಾ. ದಿವಾಕರ

ಹಿಂದುತ್ವವಾದಿಗಳ ಅಟ್ಟಹಾಸ- ಗುಜರಾತ್ ನಂತರ ಕರ್ನಾಟಕವೇ?

ಕಳೆದ ಲೋಕಸಭಾ ಚುನಾವಣೆಯಲ್ಲಿ ಸೋಲನುಭವಿಸಿದ ನಂತರದಲ್ಲಿ ಅತ್ಯಂತ ಗಂಭೀರ ಸ್ವರೂಪದ ಗೊಂದಲಕ್ಕೆ ಸಿಲುಕಿರುವ ಏಕೈಕ ಪಕ್ಷ ಭಾರತೀಯ ಜನತಾ ಪಕ್ಷ ಎಂದು ಹೇಳಬಹುದು. ವಾಜಪೇಯಿಯವರ ವರ್ಚಸ್ಸು, ಎನ್.ಡಿ.ಎ ಸರ್ಕಾರದ ಸಾಧನೆ, ಭಾರತ, ಪ್ರಕಾಶಿಸುತ್ತಿದೆ ಎಂಬ ಅಬ್ಬರದ ಪ್ರಚಾರ ಇವಾವುದೂ ಪಕ್ಷದ ನೆರವಿಗೆ ಬರದಿದ್ದುದ್ದು, ಪಕ್ಷವನ್ನು ಕಂಗೆಡಿಸಿದ್ದರೆ, ಇನ್ನೊಂದೆಡೆ, ರಾಮ ಮಂದಿರ, ಗೋಹತ್ಯೆ ವಿರೋಧ, ಸಮಾನ ನಾಗರೀಕ ಸಂಹಿತೆ, ಕ್ರೈಸ್ತ ಮಿಷನರಿಗಳ ಮತಾಂತರ ಪ್ರಕ್ರಿಯೆ, ಭಯೋತ್ಪಾದನೆ ಇವಾವುದೂ ಫಲ ನೀಡದೆ, ಸಂಘ ಪರಿವಾರ ಕಂಗೆಟ್ಟಿತ್ತು. ಪ್ರಸ್ತುತ ಕೇಂದ್ರದಲ್ಲಿನ ಯು.ಪಿ.ಎ ಸರ್ಕಾರ ಶೀಘ್ರ ಪತನ ಹೊಂದುತ್ತದೆ ಎಂಬ ಭ್ರಮೆಯಲ್ಲಿ ಕೆಲವು ದಿನ ಕಾಲ ಕಳೆದ ಭಾ.ಜ.ಪಕ್ಷ ಈಗ ನಿರಾಸೆಯ ಕಾರ್ಮೋಡ ಕವಿಯುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ.

ಕೆಲವು ರಾಜ್ಯಗಳಲ್ಲಾದರೂ ತನ್ನ ಕೈಲಿ ರುವ ಅಧಿಕಾರವನ್ನು ಉಳಿಸಿಕೊಳ್ಳುವ ತವಕದಲ್ಲಿ, ತನ್ನ ಸೈದ್ಧಾಂತಿಕ (ಫ್ಯಾಸಿಸ್ಟ್) ನಿಲುವು ಗಳೆಲ್ಲವಕ್ಕೆ ತಿಲಾಂಜಲಿ ನೀಡಿರುವ ಪಕ್ಷಕ್ಕೆ ತನ್ನ ಮುಂದಿರುವ ಬೃಹತ್ ಸವಾಲೆಂದರೆ, ಕೇಂದ್ರದಲ್ಲಿ ಮರಳಿ ಅಧಿಕಾರಗಳಿಸುವುದು. ಈ ನಿಟ್ಟಿನಲ್ಲಿ ಈಗಾಗಲೇ ಅನೇಕ ಹಿನ್ನಡೆಗಳನ್ನು ಕಂಡಿರುವ ಭಾ.ಜ.ಪ, ಉಮಾ ಭಾರತಿ, ಮದನ್‌ಲಾಲ್ ಖುರಾನಾ ರಂತಹ ನಾಯಕರನ್ನು ಕಳೆದುಕೊಂಡಿದೆ. ಪಕ್ಷದ ಯುವ ಪೀಳಿ ಗೆಯ ನಾಯಕರಾಗಿದ್ದ ಪ್ರಮೋದ್ ಮಹಾಜನ್‌ರವರನ್ನೂ ಕಳೆದು ಕೊಂಡಿದೆ. ಗುಜರಾತ್ ಹತ್ಯಾಕಾಂಡದ ಹಿನ್ನೆಲೆಯಲ್ಲಿ ತನ್ನ ನೈತಿಕತೆ ಯನ್ನು ಒತ್ತೆ ಇಟ್ಟು ನರೇಂದ್ರ ಮೋದಿಯನ್ನು ಬೆಂಬಲಿಸಿದ ಭಾ.ಜ.ಪಕ್ಕೆ, ಈಗ ತನ್ನ ರಾಜಕೀಯ ಪ್ರತಿಷ್ಟೆ ಉಳಿಸಿಕೊಳ್ಳಲು ಸಂಘ ಪರಿವಾರವನ್ನೇ ಅವಲಂಬಿಸುವ ಪರಿಸ್ಥಿತಿ ಬಂದೊದಗಿದೆ. ಇನ್ನೊಂದು ಗುಜರಾತ್ ತನ್ನ ರಾಜಕೀಯ ಭವಿಷ್ಯವನ್ನು ಬದಲಿ ಸಬಹುದೆಂಬ ಅಭಿಪ್ರಾಯ ಹಿಂದುತ್ವವಾದಿಗಳಲ್ಲಿರುವುದು ಕಂಡು ಬರುತ್ತದೆ.

ಆದರೆ ಸಂಘ ಪರಿವಾರವೂ ಸಹ ತನ್ನ ರಾಜಕೀಯ ಪಕ್ಷ ದಂತೆಯೇ ಗೊಂದಲಗಳ ಸುಳಿಯಲ್ಲಿ ಸಿಲುಕಿ ಪರದಾಡುತ್ತಿದೆ. ೯೦ರ ದಶಕದಲ್ಲಿ ಅಪಾರ ಜನಸ್ತೋಮದ ಮನ್ನಣೆ ಗಳಿಸಿದ ರಾಮನಾಮ ಸವಕಲು ನಾಣ್ಯವಾಗಿದೆ. ರಾಮ ಮಂದಿರದ ನಿರ್ಮಾಣ ಕೇವಲ ಬಾಯಿಮಾತಿನಲ್ಲೇ ಉಳಿದಿದೆ. ಸಂಘ ಪರಿವಾರವು ಗಂಭೀರವಾಗಿ ಪರಿಗಣಿಸಿ ದೇಶಾದ್ಯಂತ ಚಳುವಳಿಯ ರೂಪದಲ್ಲಿ ಹಮ್ಮಿಕೊಳ್ಳಲಿ ಚ್ಛಿಸಿದ್ದ ಗೋಹತ್ಯಾ ವಿರೋಧಿ ಆಂದೋಲನವೂ ಈಗ ನೆನೆಗುದಿಗೆ ಬಿದ್ದಿದೆ. ಸಮಾನ ನಾಗರಿಕ ಸಂಹಿತೆಯ ವಿವಾದವನ್ನು ದೇಶದ ಜನತೆ ಗಂಭೀರವಾಗಿ ಪರಿಗಣಿಸದ ಕಾರಣ, ಸಂಘ ಪರಿವಾರದ ಮೂರು ನೆಚ್ಚಿನ ಸೂತ್ರಗಳೂ ಪ್ರಸ್ತುತ ಸಂದರ್ಭದಲ್ಲಿ ಅಪ್ರಸ್ತುತವಾಗಿರುವುದು ಸಂಘ ಪರಿವಾರವನ್ನು ಪೇಚಿಗೆ ಸಿಲುಕಿಸಿದೆ.

ಹಲವು ವರ್ಷಗಳ ಕಾಲ ದೇಶದ ಮುಸಲ್ಮಾನರನ್ನು ದೂಷಿಸು ವುದರಲ್ಲೇ ಕಾಲ ಕಳೆದ ಪರಿವಾರಕ್ಕೆ, ಭಯೋತ್ಪಾದನೆ ಒಂದು ರಾಜ ಕೀಯ ಅಸ್ತ್ರವಾಗಿ ಪರಿಣಮಿಸಿತ್ತು. ಪ್ರತಿಯೊಂದು ಭಯೋತ್ಪಾದಕ ದಾಳಿಯಾದಾಗಲೂ, ಮುಸ್ಲಿಂ ಜನತೆಯನ್ನು ದೂಷಿಸುವ ಮೂಲಕ ಸಾಮಾನ್ಯ ಜನತೆಯಲ್ಲಿ ವಿಷದ ಬೀಜ ಬಿತ್ತಲೆತ್ನಿಸಿದ, ಸಂಘ ಪರವಾ ರಕ್ಕೆ, ವಾರಣಾಸಿ ಮತ್ತು ಮುಂಬೈ ಬಾಂಬ್ ಸ್ಫೋಟದ ನಂತರದ ಬೆಳವಣಿಗೆಗಳು, ಕೊಂಚ ಮಟ್ಟಿಗೆ ಹಿನ್ನಡೆ ಉಂಟುಮಾಡಿವೆ. ತನ್ನ ನಾಯಕರ ಉದ್ರೇಕಕಾರೀ ಭಾಷಣಗಳಿಂದ ಜನತೆ ಉತ್ತೇಜಿತರಾಗಿ, ತಮ್ಮ ತಾಳ್ಮೆ, ಸಹನೆ ಕಳೆದುಕೊಂಡು, ಸಾಮಾಜಿಕ ಕ್ಷೋಭೆ ಹರಡು

ತ್ತಾರೆಂಬ ಭ್ರಮೆ ಸಂಘ ಪರಿವಾರದಲ್ಲಿ ಈಗ ಕಾಣುವುದಿಲ್ಲ. ಇನ್ನೊಂದೆಡೆ ದೇಶದ ಮುಸ್ಲಿಂ ಜನತೆಯೂ ಸಹ ತಮ್ಮಲ್ಲೇ ಇರುವ ಕಿಡಿಗೇಡಿಗಳನ್ನು ನಿಯಂತ್ರಿಸುವುದರಲ್ಲಿ ಕೊಂಚ ಮಟ್ಟಿಗೆ ಯಶಸ್ವಿಯಾಗಿರುವುದರಿಂದ, ಮುಸ್ಲಿಂ ಜನಾಂಗವೂ ಮೊದಲಿ ನಂತೆ ಉದ್ರೇಕಕ್ಕೊಳಗಾಗುವುದಿಲ್ಲ. ಈ ವಿದ್ಯಮಾನವನ್ನು ಮುಂಬೈ, ವಾರಣಾಸಿಗಳಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ. ಹಾಗಾಗಿಯೇ ಹಿಂದುತ್ವವಾದಿಗಳ ಕಾಕದೃಷ್ಟಿ ಕೊಂಚ ಕಾಲ ಕ್ರೈಸ್ತ ಬಾಂಧವರ ಮೇಲೆ ಬಿದ್ದಿತ್ತು.

ಮತಾಂತರ ವಿರುದ್ಧ ಮೊದಲಿನಿಂದಲೂ ಹೋರಾಡುತ್ತಲೇ ಬಂದಿರುವ ಸಂಘ ಪರಿವಾರಕ್ಕೆ ಈಗ ಮುಸಲ್ಮಾನರಿಗಿಂತಲೂ, ಕ್ರೈಸ್ತರೇ ಹೆಚ್ಚು ಅಪಾಯಕಾರಿಯಾಗಿ ತೋರುತ್ತಿದ್ದಾರೆ. ಗ್ರಾಹಂ ಸ್ಟೈನ್ಸ್‌ರವರ ಅಮಾನವೀಯ ಕೊಲೆಯ ಪ್ರಕರಣದಿಂದ ಆರಂಭಗೊಂಡ ಮತಾಂತರ ವಿರೋಧಿ ಆಂದೋಲನ, ಪರಿವಾರದ ಏಕೈಕ ಕಾರ್ಯಕ್ರಮವಾಗಿರುವುದು ಸ್ಪಷ್ಟವಾಗಿತ್ತು. ತನ್ನ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳಲು ಸೂಕ್ಷ್ಮ ಮತೀಯ ವಿವಾದಗಳನ್ನೇ ಅವಲಂಬಿಸುವ ಪರಿವಾರಕ್ಕೆ ತಿರುಪತಿ–ತಿರುಮಲ ಕ್ಷೇತ್ರದಲ್ಲಿ ಕ್ರೈಸ್ತ ಮಿಷನರಿಗಳು ಅನೇಕ ಹಿಂದೂಗಳನ್ನು ಮತಾಂತರಗೊಳಿಸುತ್ತಿದ್ದಾರೆ ಎಂಬ ಸುದ್ದಿ, ತಿರುಪತಿ ತಿಮ್ಮಪ್ಪನ ಪ್ರಸಾದದಷ್ಟೇ ಸಿಹಿಯಾದ ಸುದ್ದಿಯಾಗಿತ್ತು.

ಪರಿವಾರದ ಅಧಿಕೃತ ಸ್ವಾಮೀಜಿಯಾಗಿರುವ ಪೇಜಾವರ ಶ್ರೀಗಳೂ ಸಹ ಈ ವಿಷಯದಲ್ಲಿ ಮೂಗು ತೂರಿಸಿದ್ದು ಸಂಘ ಪರಿವಾರಕ್ಕೆ ಇಂಬು ನೀಡಿತ್ತು. ತಿರುಪತಿ ದೇವಾಲಯದ ಆಡಳಿತ ಮಂಡಳಿಯನ್ನು ಕ್ರೈಸ್ತರು ಆಕ್ರಮಿಸಿಕೊಂಡಿದ್ದಾರೆ, ಪಾಲಾಗುತ್ತದೆ, ಹಿಂದೂ ಧರ್ಮ ನಾಶವಾಗುತ್ತದೆ ಎಂದೆಲ್ಲಾ ಹಗರಣ ಮಾಡಿದ ಪೇಜಾವರರು ಮತ್ತು ಸಂಘ ಪರಿವಾರದವರ ಕೆಂಗಣ್ಣಿಗೆ ಗುರಿಯಾದ ವ್ಯಕ್ತಿ ಆಂಧ್ರ ಪ್ರದೇಶದ ಮುಖ್ಯಮಂತ್ರಿ ರಾಜಶೇಖರ ರೆಡ್ಡಿ, ಅವರು ಕ್ರೈಸ್ತರೆಂಬ ಒಂದೇ ಕಾರಣಕ್ಕಾಗಿ. ಈ ನಿಟ್ಟಿನಲ್ಲಿ ತಿರುಪತಿಯನ್ನು ಉಳಿಸಲು ಕೇಂದ್ರ ಸರ್ಕಾರಕ್ಕೂ ನಿವೇದನೆ ಸಲ್ಲಿಸಿದ ಪರಿವಾರದ ನಾಯಕರು, ಈ ಹಿನ್ನೆಲೆಯಲ್ಲಿ ಜನಾಂದೋಲನವನ್ನೇ ನಡೆಸುವ ಯೋಜನೆ ಹೊಂದಿದ್ದರು. ಉತ್ತರ ಭಾರತದ ಹಲವು ಪ್ರಾಂತ್ಯಗಳಲ್ಲಿ ಆದಿವಾಸಿಗಳನ್ನು ವನವಾಸಿಗಳೆಂದು ಮರುನಾಮಕರಣ ಮಾಡಿ, ಕ್ರೈಸ್ತ ಮತಕ್ಕೆ ಮತಾಂತರ ಹೊಂದಿದ್ದವರನ್ನು, ಶುದ್ಧೀಕರಣದ ನಂತರ ಪುನಃ ಹಿಂದೂ ಧರ್ಮಕ್ಕೆ ಸೇರಿಸಿಕೊಂಡ ರೀತಿಯಲ್ಲೇ ತಿರುಪತಿಯಲ್ಲೂ ಮಾಡುವ ಆಲೋಚನೆ ಸಂಘಪರಿವಾರಕ್ಕಿತ್ತು.

ಆದರೆ ದುರದೃಷ್ಟವ ಶಾತ್ ತಿರುಪತಿ ತಿರುಮಲ ದೇವಾಲಯದ ಅರ್ಚಕರು ಮತ್ತು ಆಡಳಿತ ವರ್ಗ ಈ ಇಡೀ ಪ್ರಹಸನವನ್ನೇ ನಿರಾಕರಿಸಿ, ಅಲ್ಲಿ ಯಾವುದೇ ರೀತಿಯ ಕ್ರೈಸ್ತ ಪ್ರಚಾರ ಕಾರ್ಯವಾಗಲೀ, ಮತಾಂತರವಾಗಲೀ ನಡೆಯುತ್ತಿಲ್ಲ ಎಂಬ ಹೇಳಿಕೆ ನೀಡಿದ್ದು, ಸಂಘ ಪರಿವಾರಕ್ಕೆ ಮುಖ ಭಂಗವಾಯಿತಲ್ಲದೆ, ಈ ವಿಷಯದಲ್ಲಿ ದೇಶವ್ಯಾಪಿ ಆಂದೋಲನ ಮಾಡಲು ಹೊರಟ್ಟಿದ್ದ ಭಾ.ಜ.ಪ ನಾಯಕತ್ವ ಮತ್ತು ಸಂಘ ಪರಿವಾರದ ಅಧಿಕೃತ ಗುರು ಪೇಜಾವರ ಶ್ರೀಗಳು ಇಂಗುತಿಂದ ಮಂಗನಂತಾಗಿದ್ದರು.

ಕರ್ನಾಟಕದ ರಾಜಕಾರಣದಲ್ಲಿ ಭದ್ರವಾಗಿ ನೆಲೆಯೂರಲು ತಿರುಪತಿ ವಿವಾದ ಸಹಾಯಕವಾಗುತ್ತದೆಂದು ನಂಬಿಕೊಂಡಿದ್ದ ಭಾ.ಜ.ಪ ಮತ್ತು ಸಂಘಪರಿವಾರಕ್ಕೆ ನಿರಾಸೆ ಹೊಂದಲು ಕಾರಣಗಳಿರಲಿಲ್ಲ. ಏಕೆಂದರೆ, ತಮ್ಮ ಅಧಿಕಾರ ಲಾಲಸೆಗೆ ಬಲಿಯಾಗಿ, ಸೆಕ್ಯುಲರಿಸಂನ ಅರ್ಥವೇ ಗೊತ್ತಿಲ್ಲವೆಂದು ಹೇಳುವ ಮೂಲಕ, ಮಾನ್ಯ ಕುಮಾರಸ್ವಾಮಿ ಮತ್ತು ಅವರ ಜನತಾದಳ ಪಕ್ಷ, ಹಿಂದುತ್ವವಾದಿಗಳಿಗೆ ಸಂವಿಧಾನಿಕವಾಗಿಯೇ ವೇದಿಕೆ ಸಜ್ಜು ಮಾಡಿಕೊಟ್ಟಿದ್ದರು. ಬೆರಳು ತೋರಿದಲ್ಲಿ ಹಸ್ತ ನುಂಗುವ ಕಲೆಯನ್ನು ತನ್ನ ೮೦ ವರ್ಷಗಳ ಇತಿಹಾಸಲ್ಲಿ ಕರಗತ ಮಾಡಿಕೊಂಡಿರುವ ಸಂಘ ಪರಿವಾರಕ್ಕೆ, ದೇವೇ ಗೌಡರ ಕುಟುಂಬ ನೀಡಿದ ವರದಾನ, ಬಯಸದೇ ಬಂದ ಭಾಗ್ಯವಾಗಿತ್ತೆಂದೇ ಹೇಳಬಹುದು.

ಕೆಲವು ವರ್ಷ ಗಳ ಹಿಂದೆ ಉದಯ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ ಸಂಕ್ರಾಂತಿ ಧಾರವಾಹಿಯಲ್ಲಿ "ಜಾಣತನ ನೀಚತನದ ಇನ್ನೊಂದು ಮುಖ" ಎಂಬ ಸಂಭಾಷಣೆ ಬರುತ್ತದೆ. (ಕೋಟಿಗಾನಹಳ್ಳಿ ರಾಮಯ್ಯರವರ ರಚನೆ). ಭಾ.ಜ.ಪದ ರಾಜಕಾರಣ ಈ ಸಂಭಾಷಣೆಯನ್ನು ನೆನಪಿಸುತ್ತದೆ. ಪ್ರಜಾತಂತ್ರವನ್ನು ಉಳಿಸುವ ನೆಪದಲ್ಲಿ ಸಮ್ಮಿಶ್ರ ಸರ್ಕಾರ ರಚಿಸಿ, ಸಮಾಜದ ಸಾಂಸ್ಕೃತಿಕ ರಚನೆಯನ್ನು ಬದಲಿಸುವ ಎಲ್ಲಾ ಇಲಾಖೆ, ಮಂತ್ರಿಪದವಿಗಳನ್ನು ತನ್ನ ಬಳಿ ಇರಿಸಿಕೊಂಡು, ಇತಿಹಾಸವನ್ನು ರಕ್ಷಿಸುವ ನೆಪದಲ್ಲಿ, ಎಲ್ಲಾ ಸಮುದಾಯಗಳನ್ನೂ ಪಕ್ಷಪಾತವಿಲ್ಲದೆ ನೋಡುವ ನೆಪದಲ್ಲಿ, ತನ್ನ ಗುಪ್ತ, ಸುಪ್ತ ಫ್ಯಾಸಿಸ್ಟ್ ಕಾರ್ಯಸೂಚಿಯನ್ನು ಕ್ರಮೇಣ ವಾಗಿ ಅನುಷ್ಠನಗೊಸಲಾರಂಭಿಸುತ್ತದೆ. ಜೊತೆಯಲ್ಲಿಯೇ ಧಾರ್ಮಿಕ ವಿವಾದ ಗಳನ್ನೂ ಅಲ್ಲಲ್ಲಿ ಹುಟ್ಟುಹಾಕುತ್ತಿರುತ್ತದೆ. ಇವೆಲ್ಲದರ ಸೂತ್ರಧಾರರಾಗಿ ಒಬ್ಬ ಉದಾರವಾದಿ ಮುಖವಾಡದವರನ್ನು ನಾಯಕರನ್ನಾಗಿ ಬಿಂಬಿಸಲಾಗುತ್ತಿರುತ್ತದೆ. ವಾಜಪೇಯಿ ನೇತೃತ್ವದ ಎನ್.ಡಿ.ಎ ಸರ್ಕಾರ ಕೇಂದ್ರದಲ್ಲಿ ಈ ಪ್ರಯೋಗ ನಡೆಸಿದರೆ, ಕರ್ನಾಟಕದಲ್ಲಿ ಯಡಿಯೂರಪ್ಪನವರ ನೇತೃತ್ವದಲ್ಲಿ ಪ್ರಯೋಗ ನಡೆಯುತ್ತಿದೆ. ಅಲ್ಲಿ ತಮ್ಮ ಕಾಂಗ್ರೆಸ್ ವಿರೋಧಿ ನೀತಿಗೆ ಬದ್ಧರಾಗಿ ಭಾ.ಜ.ಪ.ವನ್ನು ಬೆಂಬಲಿಸಲು, ಜಾರ್ಜ್ ಫರ್ನಾಡಿಸ್ ಇದ್ದರೆ ಇಲ್ಲಿ ಎಂ.ಪಿ. ಪ್ರಕಾಶ್‌ರಂತಹ So called ಲೋಹಿಯಾವಾದಿಗಳಿದ್ದಾರೆ.

ದಕ್ಷಿಣ ಭಾರತದಲ್ಲಿ ಪ್ರಪ್ರಥಮ ಬಾರಿಗೆ ಅಧಿಕಾರದ ರುಚಿ ಕಾಣುವ ಅವಕಾಶ ಕರ್ನಾಟಕದಲ್ಲಿ ಒದಗಿಬಂದಾಗ, ಭಾ.ಜ.ಪ ತಮ್ಮ ಪಕ್ಷದಲ್ಲಿ ಹೆಚ್ಚು ಸದಸ್ಯರಿದ್ದರೂ, ಮುಖ್ಯಮಂತ್ರಿ ಸ್ಥಾನವನ್ನು ಜನತಾದಳಕ್ಕೆ ಬಿಟ್ಟು ಕೊಟ್ಟಿದ್ದರ ಉದ್ದೇಶ ಇಲ್ಲಿ ಸ್ಪಷ್ಟವಾಗುತ್ತದೆ. ತನ್ನ ಫ್ಯಾಸಿಸ್ಟ್ ತಂತ್ರಗಾರಿಕೆಯನ್ನು ಬಲಪಡಿ ಸಲು ಮತ್ತು ಸಂಘ ಪರಿವಾರವನ್ನು ಗಟ್ಟಿಗೊಳಿಸಲು ಭಾ.ಜ.ಪಕ್ಕೆ ಮುಖ್ಯಮಂತ್ರಿ ಪದವಿಯ ಅವಶ್ಯಕತೆ ಇರುವುದಿಲ್ಲ ಎಂಬ ಅಂಶ ಅನೇಕ ರಾಜ್ಯಗಳಲ್ಲಿ ನಿರೂಪಿತವಾಗಿದೆ. ಮಾಯವತಿಯಾಗಲೀ, ಕುಮಾರಸ್ವಾಮಿಯಾಗಲೀ, ನಿತೀಶ್ ಕುಮಾರ್ ಆಗಲೀ, ಮುಖ್ಯಮಂತ್ರಿಗಳಾದರೂ, ಸ್ಥಿರ ಸರ್ಕಾರ ಮತ್ತು ಕಾಂಗ್ರೆಸ್ ವಿರೋಧಿ ಧೋರಣೆಗಳನ್ನೇ ಮುಂದಿಟ್ಟುಕೊಂಡು ಭಾ.ಜ.ಪ ತನ್ನ ಕಾರ್ಯ ಸಾಧಿಸುತ್ತದೆ. ಮೇಲೆ ಹೇಳಿದ ಸಂಕ್ರಾಂತಿ ಧಾರಾವಾಹಿಯ ಸಂಭಾಷಣೆ ಇಲ್ಲಿ ಪ್ರಸ್ತುತವಾಗುತ್ತದೆ. ಹಾಗಾಗಿಯೇ ಕರ್ನಾಟಕ ರಾಜಕಾರಣದಲ್ಲಿ ಆರು ತಿಂಗಳ ಕಾಲ ಸರ್ಕಾರ ನಡೆಸಿ, ತನ್ನ ಬೇರುಗಳನ್ನು ಗಟ್ಟಿಗೊಳಿಸಿದ ನಂತರದಲ್ಲಿ ಭಾ.ಜ.ಪ ತನ್ನ ನೈಜ ಸ್ವರೂಪವನ್ನು ಅನಾವರಣಗೊಳಿಸುತ್ತಿದೆ.

ಇದರ ಪ್ರಥಮ ಹಂತವೇ ಶಿಕ್ಷಣ ಸಚಿವ ಶಂಕರಮೂರ್ತಿಯವರ ಟಿಪ್ಪು ವ್ಯಾಖ್ಯಾನ. "ಟಿಪ್ಪು ತನ್ನ ಆಡಳಿತಾವಧಿಯಲ್ಲಿ ಕನ್ನಡವನ್ನು ನಿರ್ಲಕ್ಷಿಸಿದ್ದ, ಪರ್ಸಿಯನ್ ಭಾಷೆಯನ್ನು ಉತ್ತೇಜಿಸುತ್ತಿದ್ದ, ಹಾಗಾಗಿ ರಾಜ್ಯದ ಪಠ್ಯ ಪುಸ್ತಕಗಳಲ್ಲಿ ಟಿಪ್ಪುವಿನ ಬಗ್ಗೆ ಉಲ್ಲೇಖಿಸುವುದಾಗಲೀ, ವಿದ್ಯಾರ್ಥಿಗಳು ಟಿಪ್ಪುವಿನ ಇತಿಹಾಸವನ್ನು ಓದುವುದಾಗಲಿ ಸಲ್ಲದು" ಎಂಬ ಶಂಕರಮೂರ್ತಿಯವರ ಆರೋಪ ಒಂದು ರೀತಿಯಲ್ಲಿ ಹಾಸ್ಯಾಸ್ಪದವಾಗಿತ್ತು. ಆದರೂ ಒಂದು ರಾಜ್ಯದ ಶಿಕ್ಷಣ ಮಂತ್ರಿಯಾಗಿ, ಇತಿಹಾಸದ ಪರಿವೆ ಇಲ್ಲದೆ ಮಾತನಾಡುವ ವ್ಯಕ್ತಿಯನ್ನು ಕರ್ನಾಟಕ ತನ್ನ ೫೦ ವರ್ಷಗಳ ಇತಿಹಾಸದಲ್ಲಿ ಕಂಡಿರಲಿಲ್ಲವೆಂದೇ ಹೇಳಬಹುದು.

ಭಾ.ಜ.ಪ. ಅಧಿಕಾರದಲ್ಲಿರುವ ರಾಜ್ಯಗಳಲ್ಲಿ, ಅಡ್ವಾಣಿಯವರ ಸೋಮನಾಥ ರಥಯಾತ್ರೆ ಮತ್ತು ಅಯೋಧ್ಯೆ ಘಟನೆಗಳನ್ನು ಪಠ್ಯ ಪುಸ್ತಕದಲ್ಲಿ ಸೇರಿಸಿದ್ದುದನ್ನು ದೇಶದ ಜನತೆ ಇನ್ನೂ ಮರೆತಿಲ್ಲ ಎಂಬ ಅಂಶವನ್ನು ಶಂಕರ ಮೂರ್ತಿಯವರು ಗಮನಿಸಬೇಕಾಗಿತ್ತು. ದೇಶದ ಐಕ್ಯತೆಯನ್ನು ಶಾಶ್ವತವಾಗಿ ನಾಶಮಾಡಿದ ಈ ಸಂಘಪರಿವಾರದ ಇತಿಹಾಸವನ್ನೇ ಪಠ್ಯದಲ್ಲಿ ಹೇಳುವುದಾದರೆ, ಮೈಸೂರಿನ ಅನೇಕ ರಾಜರುಗಳು ಬ್ರಿಟೀಷರೊಡನೆ ಸ್ನೇಹದಿಂದಿದ್ದ ಕಾಲದಲ್ಲಿ, ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಡಿ, ವೀರ ಮರಣ ಹೊಂದಿದ ಮೈಸೂರು ಹುಲಿ ಟಿಪ್ಪು ಸುಲ್ತಾನನ ಇತಿಹಾಸವನ್ನು ಪಠ್ಯದಲ್ಲಿ ಸೇರಿಸುವುದು ಅಪರಾಧವೇನೂ ಅಲ್ಲ.

ಇಷ್ಟಕ್ಕೂ ಟಿಪ್ಪು ಆಳಿದ ೧೮ನೆಯ ಶತಮಾನದಲ್ಲಿ ಮೈಸೂರು ಪ್ರಾಂತ್ಯ ಕನ್ನಡನಾಡು ಎಂದು ಗುರುತಿಸಲ್ಪಟ್ಟಿರಲಿಲ್ಲ. ಕನ್ನಡ ರಾಜ್ಯ ಭಾಷೆಯಾಗಲು ಅಂದಿನ ಕಾಲಘಟ್ಟದಲ್ಲಿ ಯಾವುದೂ ಬೇಡಿಕೆಗಳೂ ಇರಲಿಲ್ಲ. ತುಳು, ಕೊಡವ, ಕೊಂಕಣಿ, ಹೀಗೆ ಹಲವಾರು ಭಾಷೆಗಳ ರಾಜರುಗಳು ಮೈಸೂರು ಪ್ರಾಂತ್ಯವನ್ನಾಳುತ್ತಿದ್ದರು. ಅಂತಹ ಐತಿಹಾಸಿಕ ಕಾಲಘಟ್ಟದಲ್ಲಿ ಟಿಪ್ಪು ಪರ್ಶಿಯನ್ ಭಾಷೆ ಬಳಸಿದ್ದನ್ನೇ ದೇಶದ್ರೋಹ ಎನ್ನುವುದಾದರೆ, ಕರ್ನಾಟಕ ರಾಜ್ಯ ಸ್ಥಾಪನೆಯಾಗಿ ಐವತ್ತು ವರ್ಷಗಳಾದರೂ ಇಂದಿಗೂ ಕನ್ನಡವನ್ನು ಪೂರ್ಣ ಪ್ರಮಾಣ ಅಧಿಕೃತ ರಾಜ್ಯಭಾಷೆಯನ್ನಾಗಿ ಮಾಡಲು ವಿಫಲರಾಗಿರುವ ಶಂಕರ ಮೂರ್ತಿ ಮತ್ತು ಇತರ ರಾಜಕೀಯ ನಾಯಕರುಗಳನ್ನು ಏನೆನ್ನಬೇಕು?

ಪರ್ಶಿಯನ್ ಭಾಷೆಯನ್ನು ಬಳಸಿದ ಮಾತ್ರಕ್ಕೇ ಟಿಪ್ಪು ದೇಶದ್ರೋಹಿಯಾದರೆ, ತೆಲುಗು ಸಾಹಿತ್ಯ ರಚಿಸಿದ ಕೃಷ್ಣದೇವರಾಯ ಕನ್ನಡಿಗರ ಬಹು ನೆಚ್ಚಿನ ಸಾಮ್ರಾಟ ಹೇಗಾಗುತ್ತಾನೆ. ಈ ಪ್ರಶ್ನೆಗಳಿಗೆ ಶಂಕರ ಮೂರ್ತಿಯವರಾಗಲೀ, ಭಾ.ಜ.ಪ. ನಾಯಕರಾಗಲೀ ಉತ್ತರ ನೀಡುವ ಅಗತ್ಯವಿಲ್ಲ ಏಕೆಂದರೆ, ಅವರಿಗೆ ಟಿಪ್ಪು ವಿವಾದ ತಮ್ಮ ಕೋಮುವಾದಿ, ಫ್ಯಾಸಿಸ್ಟ್ ಕಾರ್ಯ ಸೂಚಿಯ ಪರಿಕರಗಳಷ್ಟೆ. ಆದರೆ ಈ ಇಡೀ ವಿವಾದದ ಬಗ್ಗೆ ದಿವ್ಯ ಮೌನ ವಹಿಸಿದ ಮುಖ್ಯಮಂತ್ರಿಗಳು ಮಾತ್ರ ತಮ್ಮ ಅಧಿಕಾರ ದಾಹದ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಟ್ಟಿದ್ದಾರೆ.

ಭಾ.ಜ.ಪದ ಕೋಮುವಾದಿ ರಾಜಕಾರಣದ ತಳಪಾಯಕ್ಕೆ ಎರಡನೆ ಹಂತವಾಗಿ ಪರಿಣಮಿಸಿದ್ದು ಬಾಬಾಬುಡನ್‌ಗಿರಿ ವಿವಾದ. ಕಳೆದ ೧೦ ವರ್ಷಗಳಿಂದ ಸಂಘ ಪರಿವಾರ ಈ ಕ್ಷೇತ್ರದಲ್ಲಿ ತನ್ನ ಕರಾಳ ಛಾಯೆಯನ್ನು ಹರಡಿಕೊಂಡೇ ಬಂದಿದೆ. ಈ ವಿವಾದವನ್ನೇ ಅವಲಂಬಿಸಿ ಚುನಾವಣೆಯಲ್ಲಿ ಗೆದ್ದು ಬಂದಿರುವ ಇಬ್ಬರು ಶಾಸಕರೂ ಭಾ.ಜ.ಪದಲ್ಲಿದ್ದಾರೆ. ೯೮ರ ಚಿಕ್ಕಮಗಳೂರಿನ ಕೋಮು ಗಲಭೆಗಳ ರೂವಾರಿಗಳಾಗಿದ್ದವರು ಇಂದು ರಾಜ್ಯ ಸಂಪುಟದಲ್ಲಿ ಮಂತ್ರಿಗಳಾಗಿರುವುದು ಭಾ.ಜ.ಪ ಕಾರ್ಯತಂತ್ರದ ಒಂದು ಸ್ವರೂಪವಷ್ಟೆ. ಈಗ ಅದೇ ಮಹನೀಯರು, ಹೈಕೋರ್ಟ್ ತೀರ್ಪಿಗೆ ವಿರುದ್ಧವಾಗಿ ದತ್ತ ಪೀಠದಲ್ಲಿ ಹೋಮ ಹವನ ಮಾಡಿಯೇ ತೀರುತ್ತೇವೆ ಎಂದು ಬೆದರಿಸುತ್ತಿದ್ದು, ಸರ್ಕಾರವನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ. ನೂರಾರು ವರ್ಷಗಳಿಂದ ಹಿಂದೂ ಮುಸ್ಲಿಂ ಸೌಹಾರ್ದತೆಯ ಸಂಕೇತವಾಗಿದ್ದ ಬಾಬಾಬುಡನ್‌ಗಿರಿಯ ದತ್ತ ಪೀಠ ಒಂದು ಪರಂಪರೆಗೆ ಸೇರಿದ್ದು, ಕರ್ನಾಟಕದಲ್ಲಿ ಕೆಲವೇ ಕುಟುಂಬಗಳು ದತ್ತ ಜಯಂತಿ ಆಚರಿಸುತ್ತಾರೆ. ಚಿಕ್ಕಮಗಳೂರಿನ ಕಾಫಿ ತೋಟಗಳ ಮಾಲೀಕರು, ತಮ್ಮ ಧಾರ್ಮಿಕ ಭಾವನೆಗಳನ್ನು ಬದಿಗಿಟ್ಟು, ಅಲ್ಲಿನ ದರ್ಗಾಕ್ಕೆ ಭೇಟಿ ನೀಡಿ ತಮ್ಮ ಗೌರವ ಸೂಚಿಸುತ್ತಾರೆ. ಸೂಫಿ ಪಂಥದ ಛಾಯೆಯಲ್ಲಿ ಬೆಳೆದು ಬಂದಿರುವ ಈ ಕ್ಷೇತ್ರಕ್ಕೆ ತನ್ನದೇ ಆದ, ಬಹುಮುಖೀ ಸಂಸ್ಕೃತಿಯ ಇತಿಹಾಸವಿದೆ. ದತ್ತಾತ್ರೇಯನನ್ನು ಪೂಜಿಸುವವರು, ಅಲ್ಲಿಯೇ ಇರುವ ದರ್ಗಾಕ್ಕೂ ಭೇಟಿ ನೀಡುವುದು ಇಲ್ಲಿ ಶತಮಾನಗಳಿಂದ ನಡೆದು ಬಂದಿದ್ದ ಸತ್ ಸಂಪ್ರದಾಯ. ಆದರೆ ೧೯೯೮ರಿಂದ ಇಲ್ಲಿನ ಭಾವೈಕ್ಯತೆಯನ್ನೇ ಹಾಳುಗೆಡಹುವ ಕೈಂಕರ್ಯದಲ್ಲಿ ತೊಡಗಿರುವ ಸಂಘ ಪರಿವಾರಕ್ಕೆ, ಕರ್ನಾಟಕದಲ್ಲಿ ಹಿಂದುತ್ವ ರಾಜಕಾರಣ ನೆಲೆಯೂರಲು, ಬಾಬಾ ಬುಡನ್‌ಗಿರಿ ವೇದಿಕೆಯಾಗಿದೆ.

ಹಿಂದೂ ಧಾರ್ಮಿಕ ಜನತೆಗೆ ಗೋವು ಪೂಜ್ಯನೀಯವಾದ್ದರಿಂದ ಗೋಹತ್ಯೆಯನ್ನು ತಡೆಗಟ್ಟುವುದು ಸಂವಿಧಾನಿಕ ಕರ್ತವ್ಯವೆಂದು ಭಾವಿಸುವ ಭಾರತ ಸರ್ಕಾರದ ನಿಲುವು, ಸಂಘ ಪರಿವಾರದ ಅಲ್ಪಸಂಖ್ಯಾತ ವಿರೋಧಿ, ದಲಿತ ವಿರೋಧಿ ಹೋರಾಟಕ್ಕೆ ಬುನಾದಿಯಾಗಿ ಪರಿಣಮಿಸಿರುವುದು ನಮ್ಮ ಸ್ವತಂತ್ರ ಭಾರತ ಸಂವಿಧಾನದ ದುರಂತವೆಂದು ಹೇಳಬಹುದು. ಗೋಹತ್ಯೆಯನ್ನು ತಡೆಗಟ್ಟುವಲ್ಲಿ ಸರ್ಕಾರಿ ಯಂತ್ರಗಳಿಗಿಂತಲೂ, ಭಜರಂಗದಳದ ಕಾರ್ಯಕರ್ತರೇ ಹೆಚ್ಚಾಗಿ ನಿರತರಾಗಿರುತ್ತಾರೆ. ಗೋವುಗಳನ್ನು ಸಾಗಿಸುವ ವಾಹನಗಳನ್ನು ತಡೆಗಟ್ಟುವುದು, ಅವರನ್ನು ಪೋಲೀಸರಿಗೆ ಒಪ್ಪಿಸುವುದು, ಹೀಗೆ ಸಂಘ ಪರಿವಾರದ ಕಾರ್ಯಕರ್ತರು ಅನಧಿಕೃತ ಪೋಲೀಸರೇ ಆಗಿಬಿಟ್ಟಿದ್ದಾರೆ.

ಹುಬ್ಬಳ್ಳಿಯ ಈದ್ಗಾ ಮೈದಾನ ವಿವಾದದಲ್ಲಿ ತಮ್ಮ ಕಾರ್ಯ ಸಾಧಿಸಲಾಗದ ಸಂಘ ಪರಿವಾರಕ್ಕೆ ಈ ಕ್ಷೇತ್ರ ವರದಾನವಾಯಿತೆಂದೇ ಹೇಳಬಹುದು. ೯೮ರಲ್ಲಿ ವ್ಯವಸ್ಥಿತವಾಗಿ ನಡೆದ ಕೋಮು ಗಲಭೆಗಳಿಂದ, ಚಿಕ್ಕಮಗಳೂರು ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಕೋಮು ವಿಷಬೀಜ ಬಿತ್ತಲಾರಂಭಿಸಿದ ಪರಿವಾರಕ್ಕೆ ಈಗ ಫಸಲು ಪಡೆಯುವ ಕಾಲ ಸನ್ನಿಹಿತವಾಗಿದೆ. ಏಕೆಂದರೆ ತಮ್ಮ ಪಕ್ಷ ರಾಜ್ಯದಲ್ಲಿ ಅಧಿಕಾರದಲ್ಲಿದೆ. ಹಿಂದೆ ಕೇವಲ ಕೆಲವೇ ಕುಟುಂಬಗಳ ನಾಲ್ಕು ಗೋಡೆಗಳಿಗೆ ಸೀಮಿತವಾಗಿದ್ದ ದತ್ತ ಜಯಂತಿ, ಬಾಬಾಬುಡನ್‌ಗಿರಿಯ ದತ್ತ ಪೀಠದಲ್ಲಿ ಪರ್ಯಾವಸಾನಗೊಳ್ಳುತ್ತಿತ್ತು. ಆದರೆ ಸಂಘ ಪರಿವಾರದ ಆಗಮನದ ನಂತರ ದತ್ತಮಾಲೆ (ಅಯ್ಯಪ್ಪ ಮಾಲೆಯ ರೀತಿಯಲ್ಲಿ), ಶೋಭಾಯಾತ್ರೆ ಮುಂತಾದ ಸಂಪ್ರದಾಯಗಳು ಆರಂಭಗೊಂಡಿವೆ. ಈ ಯಾತ್ರೆಗಳಲ್ಲಿ ದತ್ತ ಪಂಥದ ಅನುಯಾಯಿಗಳಿಗಿಂತಲೂ ಹೊರಗಿನವರೇ ಹೆಚ್ಚಾಗಿರುವುದು ಕಂಡು ಬರುತ್ತದೆ. ಇಲ್ಲಿನ ಇಡೀ ವಿವಾದದಲ್ಲಿಯೂ ಸಹ ಸ್ಥಳೀಯರ ಪಾತ್ರ ಕಡಿಮೆ ಎಂಬುದು ಗಮನೀಯ ಅಂಶ. ಉತ್ತರ ಭಾರತದಲ್ಲಿ ಅಯೋಧ್ಯೆ ರಾಮಮಂದಿರವನ್ನಾಧರಿಸಿ ಅಧಿಕಾರ ಗಳಿಸಿದ ಭಾ.ಜ.ಪಕ್ಕೆ ಕರ್ನಾಟಕದಲ್ಲಿ ಬಾಬಾಬುಡನ್‌ಗಿರಿ ಒಂದು ಉಡ್ಡಯನವೇದಿಕೆಯಾಗಿದೆ. ಇಲ್ಲಿಯೂ ಸಹ ಮುಖ್ಯಮಂತ್ರಿಗಳು ತಮ್ಮ ಅಧಿಕಾರ ದಾಹವನ್ನು ಸ್ಪಷ್ಟವಾಗಿ ಹೊರಗೆಡಹಿದ್ದಾರೆ.

ಈ ಎರಡೂ ಹಂತಗಳಲ್ಲಿ ರಾಜ್ಯದ ಅಧಿಕಾರ ಕೈಗೆ ಬರದಿದ್ದರೆ, ಸಂಘ ಪರಿವಾರ ಮತ್ತು ಭಾ.ಜ.ಪಕ್ಕೆ ಉಳಿದಿದ್ದ ಒಂದೇ ದಾರಿ ಎಂದರೆ, ವ್ಯವಸ್ಥಿತ ಕೋಮು ಗಲಭೆಗಳು. ಈ ಹಂತವನ್ನೇ ಮಂಗಳೂರಿನಲ್ಲಿ, ಇಡೀ ದಕ್ಷಿಣ ಕನ್ನಡದಲ್ಲಿ ಕಾಣಬಹುದಾಗಿದೆ. ಮಂಗಳೂರು, ಉಳ್ಳಾಲ್, ಸುಳ್ಯ ಮತ್ತಿತರ ಪ್ರದೇಶಗಳಲ್ಲಿ ನಡೆಯುತ್ತಿರುವ ಕೋಮು ಗಲಭೆಗಳು ಹಠಾತ್ತನೆ ಎರಗಿದ ಘಟನೆ ಎಂದು ತಿಳಿಯುವುದು ತಪ್ಪಾಗುತ್ತದೆ. ಈ ಹಿನ್ನೆಲೆಯಲ್ಲಿ, ಶ್ರೀರಾಮ ಸೇನೆ, ಭಜರಂಗದಳ ಮತ್ತು ಸಂಘ ಪರಿವಾರದ ಇತರ ಘಟಕಗಳು ಹಲವು ವರ್ಷಗಳಿಂದ ಪೂರ್ವಭಾವಿ ಸಿದ್ಧತೆ ಮಾಡಿಕೊಂಡುಬಂದಿವೆ. ಕ್ರೈಸ್ತ, ಮುಸ್ಲಿಂ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿದ್ದರೂ, ದಕ್ಷಿಣಕನ್ನಡ ಒಂದು ಸೌಹಾರ್ದಯುತ ಸಮಾಜವಾಗಿಯೇ ರೂಪುಗೊಂಡಿದೆ. ಏಕೆಂದರೆ ಅಲ್ಲಿ ಅನೇಕ ಭಾಷಿಕರು, ಅನೇಕ ವಿಭಿನ್ನ ಜಾತಿಗಳು, ಅನೇಕ ಪ್ರಾಂತಿಯ ಸಮುದಾಯಗಳು, ವಲಸೆ ಬಂದಿರುವ ಸಮುದಾಯಗಳು, ಶತಮಾನಗಳ ಕಾಲ ಸೌಹರ್ದತೆಯಿಂದ ಬಾಳಿದ್ದಾರೆ. ಅಲ್ಲಿ ನೆಲೆಸಿರುವ ಅಲ್ಪಸಂಖ್ಯಾತ ಸಮುದಾಯಗಳೂ ಸಮಾಜದ ಮುಖ್ಯವಾಹಿನಿಯಲ್ಲಿ ಸಮ್ಮಿಳಿತವಾಗಿದ್ದಾರೆ.

ಇಂತಹ ಒಂದು ಸೌಹಾರ್ದಯುತ ಸಮಾಜದಲ್ಲಿ ಕೋಮು ವಿಷಬೀಜ ಬಿತ್ತಲು, ಮಂದಿರ, ಮಸೀದಿ, ಚರ್ಚುಗಳು ಉಪಯುಕ್ತವಾಗುವುದಿಲ್ಲ ಎಂದು ಅರಿತ ಸಂಘ ಪರಿವಾರಕ್ಕೆ ದೊರೆತ ಆಸರೆ ಗೋಹತ್ಯಾ ವಿವಾದ. ಬಹುತೇಕ ಕ್ರೈಸ್ತರ ಮತ್ತು ಮುಸಲ್ಮಾನರ, ದಲಿತ ಸಮುದಾಯದ, ಪ್ರಮುಖ ಆಹಾರ ವಾದ ಗೋಮಾಂಸವು, ಸಂಘ ಪರಿವಾರದ ಮತ್ತು ಭಾ.ಜ.ಪ ನಾಯಕರ ಹೊಟ್ಟೆಗೆ ಆಹಾರವಾಗದಿದ್ದರೂ, ಅವರ ಹೊಲಸು ರಾಜಕೀಯಕ್ಕೆ ಉತ್ತಮ, ಪೌಷ್ಟಿಕ ಆಹಾರವಾಗಿ ಪರಿಣಮಿಸಿದ್ದು ಒಂದು ರೀತಿಯಲ್ಲಿ ಕಾಕತಾಳೀಯ.

ಮಂಗಳೂರು ಮತ್ತು ಸುತ್ತಲಿನ ಪ್ರದೇಶಗಳಲ್ಲಿ

ಆತ್ಮಹತ್ಯೆ



ಅನೇಕರು 'ಹೊನ್ನ ಶೂಲ'ಕ್ಕೆ
ತಮ್ಮನ್ನು ತಾವೆ.
ಏರಿಸಿಕೊಂಡು
ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.

ಡಾ॥ ಸಿ.ಪಿ.ಕೆ

ಗೋಮಾಂಸ ಮಾರುವುದನ್ನು, ಗೋಹತ್ಯೆ ಮಾಡುವುದನ್ನೂ ವಿರೋಧಿಸಿ ಭಜರಂಗದಳದ ಕಾರ್ಯಕರ್ತರು ಕಳೆದ ಹಲವು ವರ್ಷಗಳಿಂದ ಹೋರಾಟ ಮಾಡುತ್ತಲೇ ಬಂದಿದ್ದಾರೆ. ಸಕಲ ಜೀವರಾಶಿಗಳನ್ನೂ ಅಮೂಲ್ಯವೆಂದು, ಪವಿತ್ರವೆಂದೂ, ಪ್ರೀತಿಸಬೇಕೆಂದು ಭೋದಿಸುವ ಹಿಂದು ಧರ್ಮದ ಪ್ರತಿಪಾದಕರಿಗೆ ಅದೇಕೋ, ಗೋವಿನ ಬಗ್ಗೆ ಮಾತ್ರ ಎಲ್ಲಿಲ್ಲದ ವಾತ್ಸಲ್ಯ, ಗೌರವ. ಏಕೆಂದರೆ ಮಂಗಳೂರಿನಲ್ಲಿ ಕಸಾಯಿಖಾನೆಗಳನ್ನು ಎತ್ತಂಗಡಿ ಮಾಡಿಸುವ ನೆಪದಲ್ಲಿ ಕೇವಲ ಗೋ ಕಸಾಯಿಖಾನೆಗಳನ್ನು ಮಾತ್ರ ಗುರಿಯಾಗಿಸಿಕೊಂಡ ಭಜರಂಗದಳ, ಇತರ ಪ್ರಾಣಿಗಳ ಹತ್ಯೆಯ ಬಗ್ಗೆ ಅಷ್ಟಾಗಿ ವಿಚಲಿತರಾಗಲಿಲ್ಲ.

ಅರ್ಥಾತ್ ಸಂಘ ಪರಿವಾರದವರಿಗೆ ಪ್ರಾಣಿಗಳ ಬಗ್ಗೆಯಾಗಲೀ, ಜೀವ ಜಂತುಗಳ ಬಗ್ಗೆಯಾಗಲೀ ವ್ಯಾಮೋಹಗಳಿಲ್ಲ. ಮನುಜ ಜೀವಗಳ ಬಗ್ಗೆಯಂತೂ ಕಿಂಚಿತ್ತೂ ಕಾಳಜಿ ಯಿಲ್ಲ. ಗೋವುಗಳ ಬಗ್ಗೆ ಮಾತ್ರ ಅಪಾರ ಪೂಜ್ಯ ಭಾವನೆ ಇದೆ. ಏಕೆಂದರೆ ಗೋಮಾಂಸ ತಿನ್ನುವವರಲ್ಲಿ ಅಲ್ಪ ಸಂಖ್ಯಾತರೇ ಹೆಚ್ಚು ಮತ್ತು ದಲಿತ ಸಮುದಾಯ ಈ ಎರಡೂ ಸಮುದಾಯಗಳನ್ನು ತನ್ನ ನಿಯಂತ್ರಣದ ಲ್ಲಿರಿಸಿಕೊಂಡಲ್ಲಿ, ಭರತ ವರ್ಷ ತನ್ನ ತೆಕ್ಕೆಯೊಳಗೆ ಸೇರಿ ಬಿಡುತ್ತದೆ ಎಂಬ ಭ್ರಮೆ ಸಂಘ ಪರಿವಾರವನ್ನು ಗೋ ಆರಾಧಕರಾಗಿ ಮಾಡಿದೆಯಷ್ಟೆ. ಯಾವುದೇ ಒಂದು ಸಮುದಾಯದ ಆಹಾರ ಪದ್ಧತಿಯನ್ನೇ ನಿರ್ನಾಮ ಮಾಡುವ ಮೂಲಕ ಆ ಸಮುದಾಯದ ಅನನ್ಯತೆಯನ್ನು ನಾಶ ಮಾಡುವುದು ಫ್ಯಾಸಿಸ್ಟ್ ತಂತ್ರಗಳಲ್ಲೊಂದು. ಅದನ್ನೇ ಸಂಘ ಪರಿವಾರವೂ ಅನುಸರಿಸುತ್ತಿದೆ. ಹಾಗಾಗಿಯೇ ಹಿಂದುತ್ವವಾದಿಗಳಿಗೆ ಮನುಜ ಜೀವಕ್ಕಿಂತಲೂ, ಗೋವಿನ ಜೀವ ಪ್ರಮುಖವಾಗುತ್ತದೆ. ವಾಜಪೇಯಿಯಂತಹ ಉದಾರವಾದಿ ಹಣೆಪಟ್ಟಿಗಳಿಸಿರುವ ನಾಯಕರು, ಗೋವಿನ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿ, ಗುಜರಾತ್ ನರಮೇಧವನ್ನು aberration ಎಂದು ತಳ್ಳಿ ಹಾಕಿಬಿಡುತ್ತಾರೆ.

ಒಂದು ರೀತಿಯಲ್ಲಿ ಭಾರತ ಸರ್ಕಾರದ ಕಾನೂನುಗಳೂ ಸಹ ತನ್ನ ಗೋಹತ್ಯಾ ಕಾನೂನಿನ ಮೂಲಕ ಸಂಘ ಪರಿವಾರಕ್ಕೆ ಪರೋಕ್ಷವಾಗಿ ಬೆಂಬಲಿಸುತ್ತದೆ. ಹಿಂದೂ ಧಾರ್ಮಿಕ ಜನತೆಗೆ ಗೋವು ಪೂಜ್ಯನೀಯವಾದ್ದರಿಂದ ಗೋಹತ್ಯಾಯನ್ನು ತಡೆಗಟ್ಟುವುದು ಸಂವಿಧಾನಿಕ ಕರ್ತವ್ಯವೆಂದು ಭಾವಿಸುವ ಭಾರತ ಸರ್ಕಾರದ ನಿಲುವು, ಸಂಘ ಪರಿವಾರದ ಅಲ್ಪಸಂಖ್ಯಾತ ವಿರೋಧಿ, ದಲಿತ ವಿರೋಧಿ ಹೋರಾಟಕ್ಕೆ ಬುನಾದಿಯಾಗಿ ಪರಿಣಮಿಸಿರುವುದು ನಮ್ಮ ಸ್ವತಂತ್ರ ಭಾರತ ಸಂವಿಧಾನದ ದುರಂತವೆಂದು ಹೇಳಬಹುದು. ಇಲ್ಲಿ ಗಮನಿಸಬಹುದಾದ ಅಂಶವೆಂದರೆ, ಗೋಹತ್ಯೆಯನ್ನು ತಡೆಗಟ್ಟುವಲ್ಲಿ ಸರ್ಕಾರಿ ಯಂತ್ರಗಳಿಗಿಂತಲೂ, ಭಜರಂಗದಳದ ಕಾರ್ಯಕರ್ತರನ್ನೇ ಹೆಚ್ಚಾಗಿ ನಿರತರಾಗಿರುತ್ತಾರೆ.

ಗೋವುಗಳನ್ನು ಸಾಗಿಸುವ ವಾಹನಗಳನ್ನು ತಡೆಗಟ್ಟುವುದು, ಅವರನ್ನು ಪೊಲೀಸರಿಗೆ ಒಪ್ಪಿಸುವುದು, ಹೀಗೆ ಸಂಘ ಪರಿವಾರದ ಕಾರ್ಯಕರ್ತರು ಅನಧಿಕೃತ ಪೊಲೀಸರೇ ಆಗಿಬಿಟ್ಟಿದ್ದಾರೆ. ಸರ್ಕಾರಗಳೂ, ಕಾಂಗ್ರೆಸ್ ಇರಲಿ, ಭಾಜಪ ಇರಲಿ, ಇವೆಲ್ಲವನ್ನೂ ಸಹಿಸಿಕೊಳ್ಳುವುದರ ಮೂಲಕ, ಸಂಘ ಪರಿವಾರಕ್ಕೆ ಸಾಂಸ್ಕೃತಿಕ ರಕ್ಷಣೆಯ ಜವಾಬ್ದಾರಿಯನ್ನು ಪರೋಕ್ಷವಾಗಿ ನೀಡಿರುವಂತೇ ವರ್ತಿಸುತ್ತವೆ. ಪೊಲೀಸ್ ಇಲಾಖೆಯೂ ಸಹ ಅನೇಕ ಸಂದರ್ಭಗಳಲ್ಲಿ ಭಜರಂಗದಳವನ್ನೇ ಬೆಂಬಲಿಸುವಂತೆ ವರ್ತಿಸುತ್ತದೆ. ಮಂಗಳೂರಿನಲ್ಲಿ ಈ ಬೆಳವಣಿಗೆ ಗಳನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ.

ಪೋಲೀಸ್ ಇಲಾಖೆಯ ಅಭಿಪ್ರಾಯದಲ್ಲಿ, ಇತ್ತೀಚಿನ ಗಲಭೆಗಳಿಗೆ ಕಾರಣವಾದ ಬಂದ್ ನಡೆಸಲು ಮುಂದಾಳತ್ವ ವಹಿಸಿದ್ದು, ಸ್ಥಳೀಯರಲ್ಲದೆ ಇಬ್ಬರು ಭಜರಂಗದಳ ಕಾರ್ಯಕರ್ತರು. ಇಬ್ಬರೂ ಬೈಕಿನ ಮೇಲೆ ಓಡಾಡುತ್ತಲೇ ಅಂಗಡಿಗಳಿಗೆ ಕಲ್ಲು ತೂರಿ, ಹಿಂಸೆ ಪ್ರಚೋದಿಸಿ, ಇಡೀ ನಗರದ ವ್ಯಾಪಾರ ವಹಿವಾಟನ್ನು ಬಂದ್ ಮಾಡಿ, ಕೋಮು ಗಲಭೆ ಸೃಷ್ಟಿಸುವುದೆಂದರೆ, ಅದು ಪೊಲೀಸ್ ಇಲಾಖೆಯ ದೌರ್ಬಲ್ಯ, ವೈಫಲ್ಯ ಮತ್ತು ಜನಪರಕಾಳಜಿಯನ್ನು ತೋರಿಸುತ್ತದೆ. ಮಾನ್ಯ ಉಪಮುಖ್ಯಮಂತ್ರಿ ಯಡಿಯೂರಪ್ಪನವರು, ಗಲಭೆ ನಡೆದ ಸ್ಥಳಗಳಿಗೆಲ್ಲಾ ಭೇಟಿ ನೀಡಬೇ ಕೆಂಬ ನಿಯಮವೇನೂ ಇಲ್ಲ, ಅಲ್ಲಿನ ಅಧಿಕಾರಿಗಳೇ ವಿಷಯ ನಿಯಂತ್ರಿಸುತ್ತಾರೆ ಎಂದು ಹೇಳಿರುವುದನ್ನು ಈ ದೃಷ್ಟಿಯಿಂದ ನೋಡಿದಾಗ, ಸಂಘ ಪರಿವಾರದ, ಭಾ.ಜ.ಪದ ಕೋಮು ರಾಜಕೀಯದ ಚಾಣಕ್ಯ ತಂತ್ರವನ್ನು ಗ್ರಹಿಸಬಹುದು.

ಇಲ್ಲಿ ಉದ್ಭವಿಸುವ ಪ್ರಶ್ನೆಯೆಂದರೆ ಸಂಘಪರಿವಾರದವರಿಗೆ ಮತಾಂತರ, ರಾಮ ಮಂದಿರ, ಗೋಹತ್ಯಾ, ಈ ಭಾವನಾತ್ಮಕ ಅಂಶಗಳನ್ನು ಹೊರತು ಪಡಿಸಿ, ಹಿಂದೂಗಳನ್ನು ಕಾಡುತ್ತಿರುವ ಬೇರೆ ಸಮಸ್ಯೆಗಳೇ ಇಲ್ಲವೇ? ಅಥವಾ ಇತರ ಸಮಸ್ಯೆಗಳು ಸಂಘ ಪರಿವಾರದ ದೃಷ್ಟಿಯಲ್ಲಿ ಇವಕ್ಕಿಂತಲೂ ಗೌಣವೇ? ಗೋಹತ್ಯಾ ತಡೆಗಟ್ಟುವ ನೆಪದಲ್ಲಿ ಗೋವುಗಳನ್ನು ಸಾಗಿಸುವ ಲಾರಿಗಳನ್ನು ತಡೆಗಟ್ಟಿ ಆಕ್ರಮಣ ಮಾಡಲು, ಇವರಿಗೆ ಅಧಿಕಾರ ಕೊಟ್ಟವರಾರು? ದೇಶದ ಸಾಂಸ್ಕೃತಿಕ ಪರಂಪರೆಯ ರಕ್ಷಕರೆಂದು ಎದೆ ತಟ್ಟಿಕೊಳ್ಳುವ ಸಂಘ ಪರಿವಾರದವರಿಗೆ, ಜಾಗತೀಕರಣದ ಪರಿಣಾಮವಾಗಿ ನಡೆಯುತ್ತಿರುವ ಸಾಂಸ್ಕೃತಿಕ ಅಧಃಪತನ ಗೋಚರಿಸುತ್ತಿಲ್ಲವೇ. ತನ್ನ ರಾಜಕೀಯ ಪಕ್ಷ ಭಾ.ಜ.ಪ, ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ತೀವ್ರಗೊಳಿಸಿದ ಆರ್ಥಿಕ ನೀತಿಗಳ ಫಲವಾಗಿ ದೇಶದ ಅಸಂಖ್ಯಾತ ಜನತೆ ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಅಧೋಗತಿಗಿಳಿಯುತ್ತಿರುವುದು ಇವರಿಗೆ ಗೋಚರಿಸುತ್ತಿಲ್ಲವೇ? ನೂತನ ಕೃಷಿ ನೀತಿಯಿಂದ ದಿನನಿತ್ಯ ಆತ್ಮಹತ್ಯೆಗೆ ಶರಣಾಗುತ್ತಿರುವ ಸಾವಿರಾರು (ಹಿಂದೂ) ರೈತರು ಇವರ ಕಣ್ಣಿಗೆ ಕಾಣುತ್ತಿಲ್ಲವೇ? ಐಟಿ-ಬಿಟಿ ಯುಗದಲ್ಲಿ ಬೀದಿ ಪಾಲಾಗುತ್ತಿರುವ ಲಕ್ಷಾಂತರ ಯುವಕರು ಗೋಚರಿಸುತ್ತಿಲ್ಲವೇ? ಮತಾಂತರದಿಂದ ಹಿಂದೂ ಜನಸಂಖ್ಯೆ ಇಳಿಮುಖ ಕಾಣುತ್ತಿದೆ ಎಂದು ಪ್ರತಿಪಾದಿಸುವವರಿಗೆ, ಬಡತನದಿಂದ, ಹಸಿವಿನಿಂದ, ಸಾಲದ ಭಾದೆಯಿಂದ ಸಾಯುತ್ತಿರುವ ಹಿಂದೂಗಳು ಗೋಚರಿಸುತ್ತಿಲ್ಲವೇ? ಒಂದು ಧರ್ಮ ಉಳಿಯುವುದೆಂದರೆ, ಧರ್ಮೀಯರೂ ಉಳಿಯಬೇಕಲ್ಲವೇ?

ಕ್ರೈಸ್ತರು ಇದ್ದ ಕಡೆಯೆಲ್ಲಾ ಮತಾಂತರ ನಡೆಯುತ್ತಿದೆ, ಮುಸಲ್ಮಾನರಿದ್ದೆಡೆಯಲ್ಲಾ ಗೋಹತ್ಯಾ ನಡೆಯುತ್ತಿದೆ, ಮದರಸಾ ಇದ್ದೆಡೆಯೆಲ್ಲಾ ಭಯೋತ್ಪಾದನೆ ಇರುತ್ತದೆ ಎಂದು ಹುಯಿಲೆಬ್ಬಿಸುವುದು ಸಂಘಪರಿವಾರಕ್ಕೆ ಜಾಡ್ಯವಾಗಿಬಿಟ್ಟಿದೆ. ಮುಂದೊಂದು ದಿನ ಭಜರಂಗದಳದವರು ಯಾವ ಯಾವ ಪ್ರದೇಶಗಳಲ್ಲಿ ಯಾವ ಜಾತಿಯ, ಧರ್ಮದ ಜನ ವಾಸಿಸಬೇಕೆಂದು ನಿರ್ಧರಿಸುವ ಹಕ್ಕನ್ನು ಪ್ರತಿಪಾದಿಸಿದರೂ ಅಚ್ಚರಿಯೇನಿಲ್ಲ. ಕುಮಾರಸ್ವಾಮಿ, ಜಾರ್ಜ್ ಫರ್ನಾಂಡಿಸ್, ಶರದ್ ಯಾದವ್‌ರಂತಹ ಅವಕಾಶವಾದಿ ರಾಜಕಾರಣಿಗಳಿರುವವರೆಗೂ, ಸಂಘ ಪರಿವಾರದ ಫ್ಯಾಸಿಸ್ಟ್ ಆಕ್ರಮಣಗಳಿಗೆ ಸಂವಿಧಾನಿಕ ಮನ್ನಣೆ ದೊರೆಯುತ್ತಲೇ ಇರುತ್ತದೆ. ಮೈಸೂರು ವಿಶ್ವ ವಿದ್ಯಾಲಯ, ಮಾನಸ ಗಂಗೋತ್ರಿಯಲ್ಲಿ ಸಂಘ ಪರಿವಾರದ ಅಪ್ರತಿಮ ನಾಯಕ ಗೋಲ್ವಾಲ್‌ಕರ್‌ರವರ ಜನ್ಮ ಶತಾಬ್ದಿ ಆಚರಿಸಿರುವುದು ಈ ಬೆಳವಣಿಗೆಯ ಒಂದು ಹಂತವಷ್ಟೇ. ಈ ಸಮಾರಂಭದಲ್ಲಿ ಕುವೆಂಪುರವರ ಆರಾಧಕರಾದ ಅರವಿಂದ ಮಾಲಗಿತ್ತಿ, ಇಂದಿರಾ ಮುಂತಾದ ಪುರೋಗಾಮಿ ಬುದ್ಧಿಜೀವಿಗಳು ಭಾಗವಹಿಸಿದ್ದುದು ಒಂದು ದುರಂತ.

ಹೀಗೆ ಒಂದೆಡೆ ಭಾ.ಜ.ಪ ಪ್ರಜಾತಂತ್ರವಾದಿಗಳ ಸೋಗಿನಲ್ಲಿ, ಸಂವಿಧಾನದ ರಕ್ಷಣೆ ಮಾಡುವ ನಾಟಕವಾಡುತ್ತಿದ್ದರೆ, ಇನ್ನೊಂದೆಡೆ ಸಂಘ ಪರಿವಾರದ ಕಾರ್ಯಕರ್ತರು, ಜನಾಂಗೀಯ ದ್ವೇಷದ ಫ್ಯಾಸಿಸ್ಟ್ ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಬುನಾದಿಯನ್ನು ನಿರ್ಮಿಸುತ್ತಿರುತ್ತಾರೆ. ಬಾಬಾಬುಡನ್‌ಗಿರಿಯನ್ನು ಅಯೋಧ್ಯೆ ಮಾಡಲು ಕರ್ನಾಟಕವನ್ನು ಗುಜರಾತ್ ಮಾಡಲು, ಭಾರತವನ್ನು ಹಿಟ್ಲರನ ಜರ್ಮನಿ ಮಾಡಲು, ಮಂಗಳೂರಿನಂತಹ ಘಟನೆಗಳು ಮೆಟ್ಟಿಲುಗಳಷ್ಟೆ. ಸುವರ್ಣ ಕರ್ನಾಟಕದ ಈ ಸಂದರ್ಭದಲ್ಲಿ ನಮ್ಮ ವೀರ ಕನ್ನಡ ಪಡೆಗಳು ಈ ಸಂಗತಿಯನ್ನು ಗಂಭೀರವಾಗಿ ಪರಿಗಣಿಸಿ, ಕನ್ನಡಿಗರಲ್ಲಿ ಸ್ವಾಮರಸ್ಯದ ಚೇತನ ತುಂಬದಿದ್ದಲ್ಲಿ, ಚಿನ್ನದ ಬೀಡು ಎಂದು ಕರೆಯಲ್ಪಡುವ ಕರ್ನಾಟಕ, ಫ್ಯಾಸಿಸ್ಟ್ ರಾಜಕೀಯದ ಕೇಂದ್ರ ಸ್ಥಾನವಾಗುತ್ತದೆ. □

ಹಿಂದೂ ಧಾರ್ಮಿಕ ಜನತೆಗೆ ಗೋವು ಪೂಜ್ಯನೀಯವಾದ್ದರಿಂದ ಗೋಹತ್ಯಾಯನ್ನು ತಡೆಗಟ್ಟುವುದು ಸಂವಿಧಾನಿಕ ಕರ್ತವ್ಯವೆಂದು ಭಾವಿಸುವ ಭಾರತ ಸರ್ಕಾರದ ನಿಲುವು, ಸಂಘ ಪರಿವಾರದ ಅಲ್ಪಸಂಖ್ಯಾತ ವಿರೋಧಿ, ದಲಿತ ವಿರೋಧಿ ಹೋರಾಟಕ್ಕೆ ಬುನಾದಿಯಾಗಿ ಪರಿಣಮಿಸಿರುವುದು ನಮ್ಮ ಸ್ವತಂತ್ರ ಭಾರತ ಸಂವಿಧಾನದ ದುರಂತ ವೆಂದು ಹೇಳಬಹುದು. ಇಲ್ಲಿ ಗಮನಿಸಬಹುದಾದ ಅಂಶವೆಂದರೆ, ಗೋಹತ್ಯೆಯನ್ನು ತಡೆಗಟ್ಟುವಲ್ಲಿ ಸರ್ಕಾರಿ ಯಂತ್ರಗಳಿಗಿಂತಲೂ, ಭಜರಂಗದಳದ ಕಾರ್ಯಕರ್ತರನ್ನೇ ಹೆಚ್ಚಾಗಿ ನಿರತರಾಗಿರುತ್ತಾರೆ. ಗೋವುಗಳನ್ನು ಸಾಗಿಸುವ ವಾಹನಗಳನ್ನು ತಡೆಗಟ್ಟುವುದು, ಅವರನ್ನು ಪೊಲೀಸರಿಗೆ ಒಪ್ಪಿಸುವುದು, ಹೀಗೆ ಸಂಘ ಪರಿವಾರದ ಕಾರ್ಯಕರ್ತರು ಅನಧಿಕೃತ ಪೊಲೀಸರೇ ಆಗಿಬಿಟ್ಟಿದ್ದಾರೆ.

ನನ್ನ ಪ್ರೀತಿಯ ಕಡಲು

ಡಾ|| ಎಚ್. ನಾಗವೇಣಿ

ಕಳೆದ ತಿಂಗಳು ದಕ್ಷಿಣ ಕನ್ನಡ ಜಿಲ್ಲೆ ಕೋಮು ದಳ್ಳುರಿಯಲ್ಲಿ ಹೊತ್ತಿ ಉರಿಯಿತು. ಜನರ ಬದುಕಿನೊಂದಿಗೆ ಚೆಲ್ಲಾಟವಾಡುವ ಕೋಮುಶಕ್ತಿಗಳು ಕೇಕೆ ಹಾಕಿ ಕುಣಿದವು. ಅಲ್ಪ ಸಂಖ್ಯಾತರು ಜೀವ ಭಯದಿಂದ ತತ್ತರಿಸಿ ಹೋದರು. ಸಂಮೃದ್ಧ ಸಾಂಸ್ಕೃತಿಕ ನೆಲೆವೀಡಾಗಿರುವ ದಕ್ಷಿಣ ಕನ್ನಡ ಈಗ ಸಂಸ್ಕೃತಿ ಧ್ವಂಸಕರಿಂದ ತುಂಬಿ ಹೋಗಿದೆ. ಮಾನವೀಯತೆಯ ಕಡಲು ಬರಿದಾಗುತ್ತಿದೆ. ಇಂಥ ದುರಂಥ ಕಥನವೊಂದರ ಮನಮಿಡಿಯುವ ಚಿತ್ರಣ ಇಲ್ಲಿದೆ. ಲೇಖಕಿ ಹೇಳುತ್ತಾರೆ: 'ಅಂದು ಕಡಲದಂಡೆಯ ಮೇಲಿದ್ದ ಮನುಷ್ಯ ಸಂಬಂಧಗಳು, ಬರೀ ಮಾನವೀಯ ಮೌಲ್ಯದಿಂದಲೇ ಕಟ್ಟಲ್ಪಟ್ಟ ಸಾಮಾಜಿಕ ಪರಿಸರವೊಂದು ಇಂದು ಸಂಪೂರ್ಣವಾಗಿ ಮಲಿನಗೊಂಡಿದೆ.'

ನೈಲ್ ದಡದ ನಾಗರಿಕತೆ, ಸಂಸ್ಕೃತಿ ಬಗ್ಗೆ ಪಠ್ಯದಲ್ಲಿ ಓದುವಾಗ ನಾನಿನ್ನೂ ಸಣ್ಣವಳು. ಉರು ಹೊಡೆದು ಪಾಸಾಗುವ ವಯಸ್ಸದು. ಆ ದಡದ ನಾಗರಿಕತೆಯಷ್ಟೆ ಪ್ರಖರವಾದ ನಾಗರಿಕತೆ, ಬದುಕು ನಮ್ಮ ಹಿತ್ತಲ ಹಿಂದಿನ ಕಡಲ ದಡದಲ್ಲಿತ್ತು ಎಂದು ಅರಿವಾಗಿದ್ದೇ ನನಗೆ ಇತ್ತಿತ್ಲಾಗೆ. ನನ್ನ ಬುದ್ಧಿ ಬಲಿತ ಮೇಲೆ, ಅದೂ ಕಡಲ ತಡಿಯ ಬಧುಕಿಂದ ದೂರ ಸರಿದು ನಿಂತು ಬಾಲ್ಯದಲ್ಲಿ ನಮಗೆ ಆಡುವ ತೊಟ್ಟಿಲಾಗಿದ್ದ ಕಡಲ ದಂಡೆಯನ್ನು ನೆನಪಿನಂಗಳಕ್ಕೆ ಆವಾಹಿಸಿಕೊಂಡಾಗ...

ನಾನು ಆ ಕಡಲ ಸೆರಗಲ್ಲಿ ಕಂಡ ಬದುಕು ಎಂಥದ್ದು! ಅದು ಅಮ್ಮನ ಮಡಿಲಷ್ಟೇ ಪ್ರೀತಿ ಕೊಟ್ಟಂತಹದ್ದು! ಎದ್ದರೂ ಕಡಲ ತಡಿ, ಬಿದ್ದರೂ ಕಡಲ ತಡಿ. ಆ ಕಡಲ ಸೆರಗು ಅಮ್ಮನ ಸೆರಗಷ್ಟೇ ನಮಗೆ ಆಪ್ತ. ಅಮ್ಮನ ಮಡಿಲಲ್ಲಿ ಮಲಗಿ, ಆ ಕತ್ತಲ ನೀರವ ಮೌನದಲ್ಲಿ ಕಡಲ ಮೊರೆತವನ್ನು ಕಿವಿ ನಿಮಿರಿಸಿ ಆಲಿಸುತ್ತಿದ್ದಾಗ ಅಮ್ಮ ಹೇಳುವುದಿತ್ತು 'ಕಡಲಮ್ಮ ತನ್ನೊಡಲಲ್ಲಿರುವ ಮಕ್ಕಳನ್ನೆಲ್ಲ ಮಲಗಿಸುವುದಕ್ಕೆ ಜೋಗುಳ ಹಾಡುತ್ತಿದ್ದಾಳೆ' ಎಂದು.

ಆ ಕಡಲಮ್ಮನ ಜೋಗುಳ ಕೇಳುತ್ತಾ ಅಮ್ಮನನ್ನು ತಬ್ಬಿ ಹಿಡಿದು ನಿದ್ರಿಸಿ ಮುಂಜಾನೆದ್ದರೆ ಕೇಳಿಸುವುದೇನು! ಮತ್ತೆ ಕಡಲ ದಡದ ಕಲರವ! ರಂಪಣಿ ಇಳಿಸುವ, ಮಾರಿಬಲೆ ಬೀಸುವ ಬೆಸ್ತರ ದುಡಿಮೆಯ ಸಡಗರವದು. ಹಾಗೆಯೇ ಮುಂಜಾನೆ ಕಣ್ಬಿಟ್ಟೊಡನೆ ಕಡಲದಡಕ್ಕೆ ಓಡಿಬಂದರೆ ಅಲ್ಲೊಂದು ಬೇರೆಯೇ ಲೋಕವಿದೆ! ದಡದ ಮೇಲಿರುವ ಬಾಬು ಮೂಲ್ಯನ ಚಾದಂಗಡಿ ಎದುರು ತಿಂಡಿಗಳ ಮೇಲೆ ಕೂತ ನೊಣಗಳಂತೆ ಬೆಸ್ತರ ಸಂತೆಯೇ ನೆರೆದಿದೆ. ಆ ರಂಪಣಿ ಫಂಡಿನಲ್ಲಿರುವ ಬೆಸ್ತರೆಲ್ಲ ಪಡವ (ಬೃಹತ್ ದೋಣಿ)ನ್ನು ನೀರಿಗಿಳಿಸುವ ಮುನ್ನ ಚಾ ನೀರಿಗಾಗಿ ಬಾಬು ಮೂಲ್ಯನ ಜತೆ ಮಾತಿನ ರಂಪಾಟ ನಡೆಸುತ್ತಿದ್ದಾರೆ. ರಂಪಣಿ ತಂಡದಲ್ಲಿರುವವರು ಒಬ್ಬರೇ ಇಬ್ಬರೇ..., ನೂರಾರು ತಲೆಗಳಿವೆ. ಬಾಬು ಮೂಲ್ಯನೊಬ್ಬನಿಂದ ಅವರೆಲ್ಲರನ್ನು ಸುಧಾರಿಸಲಾದೀತೆ...? ಮಾಮೂಲಿನಂತೆ ಬೈಗಳ ಏಟನ್ನು ಬಾಬು ಮೂಲ್ಯ ನಸುನಗೆಯಿಂದಲೇ ಸ್ವೀಕರಿಸುತ್ತಿದ್ದಾನೆ.

ಅಷ್ಟಾದರೂ, ಚಾ ನೀರು ಸಿಗದವರು ಮುಖವುಬ್ಬಿಸಿಕೊಂಡು ಪಕ್ಕದಲ್ಲಿರುವ ಸೈಯದ್ದಿ ಬ್ಯಾರಿಯವರ ಗೂಡಂಗಡಿ ಹೊಕ್ಕಿದ್ದಾರೆ. 'ಕೊಡಿ ಸ್ಯಾಬ್ರೆ ಒಂದು ಚಪ್ಪೆಸೋಡ. ಮತ್ತೊಂದು ಜೆಂಜರ್ ಸೋಡಾ..., ಹಾಗೇ ಎರಡಾಣೆಯ ಅವಲಕ್ಕಿ... ಒಂದಾಣೆಯ ತೆಂಗಿನಕ್ಯಾ ಬೆಲ್ಲದ ತುಂಡು...'

'ಆ ಬಾಬು ಮೂಲ್ಯನ ಚಾ ನೀರಿಗೆ ಭೂತ ಹೊಡೀಲಿ...' ಎಂದು ಬೈಯುತ್ತಾ ಬೆಸ್ತರು ಕ್ಯಾ-ಅವಲಕ್ಕಿ-ಬೆಲ್ಲದ ರುಚಿ ಸವಿಯುತ್ತಿರುವಾಗ ರಂಪಣಿ ತಂಡೇಲ (ಮುಖ್ಯಸ್ಥ)ನ ಕೂಗು ಕೇಳಿಸುತ್ತದೆ.

'ಆರರೆ... ತಮ್ಮ ತಂಡೇಲರು ಎಲ್ಲರನ್ನು ಕೂಗುತ್ತಿದ್ದಾರೆ. ನೀವೆಲ್ಲ ಒಮ್ಮೆ ಬೇಗ ಓಡಿ ಮಾರಾಯ್ರೆ...? ರಂಪಣಿ ಇಳಿಯುವುದು ತಡವಾಗಬಾರದು..., ಎಂದು ಸೈಯದ್ದಿ ಬ್ಯಾರಿಯವರೇ ಎಲ್ಲರನ್ನೂ ಎಚ್ಚರಿಸುತ್ತಿದ್ದಾರೆ. ಸೈಯದ್ದಿಬ್ಯಾರಿಯವರು ತಮ್ಮ ಲೆಕ್ಕದ ಬೂಕಿನಲ್ಲಿ ಅವರೆಲ್ಲರ ಸಾಲದ ವಿವರ ಬರೆಯುತ್ತಿರುವಷ್ಟರಲ್ಲಿ ಬೆಸ್ತರೆಲ್ಲ ಕೈಯಲ್ಲಿ ದಂಡು (ಹುಟ್ಟು) ಹಿಡಿದು ಹೊರಟೇಬಿಟ್ಟರು. ರಂಪಣಿ ಇಳಿಸಲು ಕಡಲಿಗಿಳಿಯುವ ಬೆಸ್ತರ ಮಂದಿಯನ್ನು ನೋಡುವುದೇ ಒಂದು ಚಂದ. ಕಡಲಮ್ಮನ ಸೀರೆ ಎಳೆಯಲು ಯಾರೋ ಪುಂಡರು ಬಂದಿದ್ದಾರೆ. ಆ ಪುಂಡರನ್ನು ಸದೆಬಡಿಯಲು ದಂಡು ಹಿಡಿದು ಹೊರಟ ವೀರರಂತೆ ಕಾಣಿಸುತ್ತಿದ್ದಾರೆ ಈ ಮೊಗವೀರರು.

ಕಡಲಿಗೆ ರಂಪಣಿ ಬಲೆ ಇಳಿಸಿದರೆ ಸಾಕು. ಕಡಲ ಒಡಲಿಂದ ಬಾಚಿ ತರುವ ರಾಶಿ ರಾಶಿ ಮೀನುಗಳನ್ನು ಏಲಂನಲ್ಲಿ ಖರೀದಿಸುವುದಕ್ಕಾಗಿ ಕಾಯುವ ಮುಸ್ಲಿಂ ಸ್ಯಾಬರುಗಳ ಜತೆಗೆ ಕಾಗೆ, ಹದ್ದು, ನಾಯಿ, ಬೆಕ್ಕುಗಳು ಕೂಡಾ ತಮ್ಮ ತಮ್ಮ ಬೇಟೆಗಾಗಿ ಪಾಲಿಗಾಗಿ ಕಾಯುತ್ತಿರುತ್ತವೆ. ಇವರೆಲ್ಲರ ಜತೆಗೆ ತಟ್ಟಿ ಹೊಟೇಲಿನ ಬಾಬು ಮೂಲ್ಯ... ಗೂಡಂಗಡಿಯ ಸೈಯದ್ದಿಬ್ಯಾರಿ... ಗೆಡ್ಡೆ ಗೆಣಸು ಮಾರುವ ಬಾಯಮ್ಮಗಳೂ ಆ ಝುಳ ಝುಳ ಬಿಸಿಲಿಗೆ ಬಾಯ್ಕಳೆದು ಕೂತು ದಣಿದು ಬರುವ ತಮ್ಮ ಗಿರಾಕಿಗಳಿಗಾಗಿ ಕಾಯುವುದಿದೆ.

ನಡುಬಿಸಿಲ ಧಗೆಗೆ, ಕಡಲಲ್ಲಿ ಪಡವಿಗೆ ಹುಟ್ಟು ಹಾಕುತ್ತಾ ಮೈಲುದ್ದದ ರಂಪಣಿ ಬಲೆಯನ್ನು ಇಳಿಸುವುದೇ ಒಂದು ಸಾಹಸದ ಕೆಲಸ. ದೇವರು ನಡುನೆತ್ತಿಗೆ ಬರುವಷ್ಟರಲ್ಲಿ ಬಲೆ ಹರಡಿಸಿ ತಂಡದವರೆಲ್ಲ ಕಡಲಿಂದ ಮೇಲೇರಿ ಬಂದ ಬಲೆ ಎಳೆಯುತ್ತಿರುವುದನ್ನು ನೋಡುವುದೇ ಒಂದು ಚೆಂದ. ಕಟೀಲು ಮೇಳದ ಸಮುದ್ರ ಮಥನದ ದೃಶ್ಯವೇ ಕಣ್ಣೆದುರು ಕುಣಿದಂತಾಗುತ್ತದೆ.

ಕಡಲದಂಡೆಯಲ್ಲಿ ಮೈಲು ದೂರದ ಅಂತರದಲ್ಲಿ ತೆಂಕ್ಲಾಗೆ-ಬಡ್ಲಾಗೆ (ದಕ್ಷಿಣ-ಉತ್ತರ) ದಿಕ್ಕಲ್ಲಿ ನಿಂತು, ಬಲೆಯ ಒಂದು ತುದಿಯನ್ನು ಒಂದೈವತ್ತು ಮಂದಿ ಎಳೆದರೆ ಮತ್ತೊಂದು ತುದಿಯನ್ನು ಮತ್ತೊಂದೈವತ್ತು ಮಂದಿ ಎಳೆಯುತ್ತಾ ಕಡಲ ಮಧ್ಯದಿಂದ ರಾಶಿ ರಾಶಿ ಮೀನುಗಳನ್ನು ಬಾಚುವುದನ್ನು ನೋಡುವುದೇ ಒಂದು ಸೋಜಿಗದ ದೃಶ್ಯ! ಆದರೆ ಇಂದಿನ ಸಾಮಾಜಿಕ ಸಂದರ್ಭದಲ್ಲಿ ಅದಕ್ಕಿಂತಲೂ ಸೋಜಿಗದಲ್ಲಿ ಸೋಜಿಗವೆನಿಸುವುದು-ಕಡಲಮಕ್ಕಳೆಂದು ಕರೆಯಲ್ಪಡುವ ಆ ಬೆಸ್ತ ಜನಾಂಗದವರು, ಶ್ರಮಸಂಸ್ಕೃತಿಯನ್ನಷ್ಟೇ ಗೌರವಿಸಿಕೊಂಡು ಮೈ ಬಗ್ಗಿ ದುಡಿವ, ಸಮಾನ ಮನಸ್ಕರಾದ ಯಾವುದೇ ಜನಾಂಗ-ಮತದ ದುಡಿಮೆಗಾರರನ್ನು ಆಗ ತಮ್ಮ ರಂಪಣಿ ಫಂಡಿನಲ್ಲಿ ಸೇರಿಸಿಕೊಂಡು ದುಡಿಸಿಕೊಳ್ಳುತ್ತಿದ್ದುದ್ದು. ಶ್ರಮಸಂಸ್ಕೃತಿಯ ಮೂಲಕವೇ ತಮ್ಮ ಅನ್ನದ ದಾರಿ ಕಂಡುಕೊಂಡ ಬೆಸ್ತವರ್ಗ ಆ ಮೂಲಕವೇ ಕೋಮು ಸಾಮರಸ್ಯ, ವರ್ಗ ಸಾಮರಸ್ಯವನ್ನು ನಿರಂತರ ಕಾಪಾಡಿಕೊಳ್ಳುತ್ತಾ ಅಪ್ರಜ್ಞಾಪೂರ್ವಕವಾಗಿಯೇ ಜಾತ್ಯತೀತ ಸಿದ್ಧಾಂತದಡಿ ಬದುಕಿ ಬಾಳಿದವರು.

ಅರೆ...! ರಂಪಣಿ ಬಲೆಯನ್ನೆಳೆದು ಕಡಲದಂಡೆಯಲ್ಲಿ ಮೀನು ರಾಶಿಯನ್ನು ಸುರಿದಾಯಿತು! ಅದು ಮೀನು ರಾಶಿಯಲ್ಲ... ಅದೊಂದು ಬೆಳ್ಳಿ ಬೆಟ್ಟ! ನನ್ನ ಎಳೆ ಕಣ್ಣುಗಳಿಗೆ ಅದು ಕಂಡಿದ್ದೇ ಬೆಳ್ಳಿ ತುಂಡುಗಳಾಗಿ. ಅಯ್ಯಯ್ಯೋ... ಎಷ್ಟು ಜಾತಿಯ ಮೀನುಗಳು! ನಮ್ಮಲ್ಲಿರುವ ಜಾತಿ ವರ್ಗಗಳಂತೆ-ಲೆಕ್ಕವಿಲ್ಲದಷ್ಟು,

ಮೀನ ರಾಶಿಯನ್ನು ಕಡಲ ಕರೆಗೆ ಎಳೆದು ಹಾಕುವುದಷ್ಟೇ ಇವರ ಕೆಲಸ. ನಂತರ ಎಲ್ಲವೂ ಅವರದ್ದು. ಯಾರದ್ದು? ಬ್ಯಾರಿಗಳದ್ದು, ಮೀನುಸ್ಯಾಬರದ್ದು. ತಂಡೇಲ ಕರೆದ ಏಲಂನಲ್ಲಿ ಪಾಲ್ಗೊಂಡ ಸ್ಯಾಬರುಗಳು ಒಬ್ಬರೇ-ಇಬ್ಬರೆ! ಹಲವಾರು. ಇತ್ತ ಏಲಂ ಕರೆಯುವಾಗ ಅತ್ತ ಕಡೆಯಿಂದ ಸಕ್ರೆ ಅಚ್ಚಿಗೆ ಬರುವ ಇರುವೆಗಳಂತೆ ಸೊಂಟದಲ್ಲಿ ಬುಟ್ಟಿ ಹಿಡಿದ ಬೆಸ್ತರ ಹೆಂಗಸರು ಮೀನ ರಾಶಿಯತ್ತ ಮುಗಿಬೀಳುತ್ತಿದ್ದಾರೆ.

ಗಂಡಿನಾಸರೆ ಇಲ್ಲದೆ ಬಡಕುಟುಂಬಗಳಿಗೆ, ವಿಧವೆಯರಿಗೆ, ಗತಿಗೋತ್ರವಿಲ್ಲದ ಸ್ವಜಾತಿಯರಿಗಾಗಿ ಒಂದು ಪುಟ್ಟ ಮೀನ ರಾಶಿಯೇ ಅಲ್ಲಿದೆ. ರಂಪಣಿಯ ತಂಡೇಲನೇನು ದಯ-ದಾಕ್ಷಿಣ್ಯ-ಕರುಣೆ ಇಲ್ಲದವನೇನು? ಊರ ಜಾತಿಗುರಿಕಾರರು ಮಾಡಿರುವ ಕಾಯಿದೆಯಂತೆ ದುಡಿತದ ಒಂದಷ್ಟು ಪಾಲು ಜಾತಿಯ ಬಡವರಿಗೆ-ಕೈಲಾಗದವರಿಗೆ ಸಲ್ಲಲೇಬೇಕು. ಈ ಪಾಲು ಪಡೆಯಲು ಬಂದವರ

ಜತೆ, ಏಲಂ ನಿಂತ ಮೀನು ಸ್ಯಾಬರ ಕೈಯಿಂದ ಮೀನು ಖರೀದಿಸುವುದಕ್ಕಾಗಿ ಬೆಸ್ತರ ಹುಹಿಳೆಯರ ಒಂದುದಂಡೇ ಅಲ್ಲಿ ಸಿದ್ಧವಾಗಿ ನಿಂತಿದೆ. ಇಲ್ಲಿನ ವ್ಯವಹಾರವನ್ನು ಅಷ್ಟು ಸುಲಭಕ್ಕೆ ನನಗೆ ವರ್ಣಿಸಲಾಗುತ್ತಿಲ್ಲ. ಮೀನು ಹಿಡಿಯುವವರು ತಮ್ಮ ಗಂಡಸರು, ಆದರೆ ಅದನ್ನು ತಾವು ಮಾರಾಟಕ್ಕೆ ಪಡೆಯಬೇಕಾದುದು, ರಖಂ ಮಾರಾಟದ ಜವಾಬ್ದಾರಿ ಹೊತ್ತಿರುವ ಸ್ಯಾಬರುಗಳಿಂದ ಈ ಅನಿಸಿಕೆ ಬೆಸ್ತರ ಮಹಿಳೆಯರಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುವುದಿದೆ. ಆದರೆ ಇದೇನು ಹೊಸ ಒಪ್ಪಂದವಲ್ಲ. ತಲೆತಲಾಂತರದಿಂದ ಪಾಲಿಸಿಕೊಂಡು ಬಂದಿರುವ ಎರಡು ಜನಾಂಗಗಳ ಹೊಂದಾಣಿಕೆ ವ್ಯವಸ್ಥೆ. ಬೆಸ್ತರಿಗೂ-ಸ್ಯಾಬರಿಗೂ ಈ ರೀತಿಯ ವ್ಯವಹಾರಿಕ ಸಂಬಂಧ-ಸಾಮರಸ್ಯವನ್ನು ಹಿಂದಿನಿಂದಲೂ ಬೆಸೆದುಕೊಟ್ಟವಳು ಈ ಕಡಲ ತಾಯಿಯೇ. ಕಡಲನ್ನೇ ನಂಬಿ ಬದುಕು ನಡೆಸುತ್ತಿದ್ದ ಈ ಎರಡು ಕೋಮುಗಳು ಎಂದೂ ಕಡಲ ದುಡಿಮೆಯ ಹಕ್ಕಿಗಾಗಿ ಕೈಕೈ ಮಿಗಿಲಾಯಿಸಿಕೊಂಡವರಲ್ಲ. ತಮ್ಮ ಸುತ್ತಲ ಸಾಮಾಜಿಕ ಪರಿಸರವನ್ನು ಕುಲಗೆಡಿಸುವ ಯಾವ ಕೃತ್ಯಕ್ಕೂ ಮುಂದಾದವರಲ್ಲ. ಅಂದು ಈ ಎರಡು ಕೋಮಿನೊಳಗಿದ್ದ ಆರ್ಥಿಕ ಹೊಂದಾಣಿಕೆ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಾಮರಸ್ಯ ಹೊಂದಾಣಿಕೆಗಳು ಇಂದು ಈ ಕಡಲದಂಡೆಯ ಮೇಲೆ ಎಳ್ಳಿನಷ್ಟೂ ಕಾಣಿಸುತ್ತಿಲ್ಲ. ಯಾಕೆ ಎಂಬ ಕಾರಣವನ್ನು ವಿಶ್ಲೇಷಿಸುವ ಮುನ್ನ ನನಗೆ ಬಾಲ್ಯದ ಇನ್ನೊಂದು ಚಿತ್ರಣ ಕಣ್ಣೆದುರು ಹಾದುಬರುತ್ತಿದೆ.

...ಬೆಸ್ತರ ರಂಪಣಿ ಎಳೆವ ಸಂಭ್ರಮ-ಕೂಗು ಇಡೀ ಕಡಲ ಕೇರಿಗೆ ಮಾತ್ರವಲ್ಲ ಮೈಲುದೂರದ ರಾಜಬೀದಿವರೆಗೂ ಕೇಳಿಸುವುದುಂಟು. 'ಓ... ಮೇಲೆ ಐಸ್ಸ' ಎಂಬ ಕೂಗು ಎಲ್ಲೆಡೆಗೂ ಹರಡಿ... ದಡದ ಮೇಲಿರುವ ಶಾಲೆಯೊಳಕ್ಕೂ ನುಗ್ಗಿ... ರಂಪಣಿ ಧ್ಯಾನದಲ್ಲಿ ಮುಳುಗಿರುವ ಬೆಸ್ತರ ಮಕ್ಕಳ ಕಿವಿ ಬೀಳಿಗೆ ತಲುಪಿದೊಡನೆ ಆ ಮಕ್ಕಳೆಲ್ಲ ಮಾಸ್ತ್ರ ಎದುರೇ ಪದ್ರಾಡ್ (ಪರಾರಿ!)! ಎಲ್ಲಿಗೆ? ರಂಪಣಿಯ ಮೀನ ರಾಶಿಯತ್ತ. ಬಲೆಯಿಂದ ತಪ್ಪಿಕೊಂಡು ಪ್ರಾಣ ರಕ್ಷಣೆಯ ಯತ್ನದಲ್ಲಿರುವ ಮೀನುಗಳೆಲ್ಲ ಆ ಮಕ್ಕಳ ಪಾಲಿನದ್ದು. ಅಷ್ಟೇ ಸಾಲದೆಂಬಂತೆ ಮತ್ತೂ ಬಲೆಯೊಳಗೆ ಕೈ ತುರುಕಿಸಿ ಮೀನು ಕದಿಯುವುದಾದರೆ ಅದಕ್ಕೆ ದುಡಿದ ಬೆಸ್ತರಿಂದ ಏಟಿನ ಶಿಕ್ಷೆಯೂ ಕಾದಿರುತ್ತದೆ. ಮಕ್ಕಳು ಏಟು ಪಡೆದೂ ಅಥವಾ ಪಡೆಯದೆಯೋ ತಾವು ಹಾಗೆ ಸಂಪಾದಿಸಿದ ಮೀನುಗಳನ್ನು ಊರೊಳಗೆ ಮಾರಿ ಅಥವಾ ಅಮ್ಮಂದಿರಿಗೆ ತಲುಪಿಸಿ ಮತ್ತೆ ಶಾಲೆಯ ಕಡೆ ಮುಖ ಹಾಕಿದರೆ... ಅಲ್ಲಿಗೆ ಮುಗಿಯಿತು ಕತೆ! ಅಲ್ಲಿ ಮತ್ತೆ ಮೀಯುವ ಶಿಕ್ಷೆ ಶಿಕ್ಷಕ ಸುಬ್ಬಣ್ಣಶೆಟ್ಟಿನವರಿಂದ. ಮೈತುಂಬ ಮೀನಿನ ನಾತ

> **ಕಡಲತಡಿಯಲ್ಲಿ ಬದುಕುವವರು. ಬದುಕಬೇಕಾದವರು ನೀವು... ಬೆಸ್ತರು. ಕಡಲ ಮೇಲಿನ ಸಂಪೂರ್ಣ ಹಕ್ಕು ನಿಮ್ಮದೇ. ಬೇರೆ ಜನಾಂಗಕ್ಕೆ ಕಡಲ ಮೇಲಿನ ಹಕ್ಕಿಲ್ಲ...' ಎಂಬ ತಿರುಳಿಲ್ಲದ ವಾದವನ್ನು ಮತಾಂಧ ಜಾತಿವಾದಿಗಳು, ಕೊಳಕು ರಾಜಕೀಯವನ್ನೆಂದೂ ಮಾಡದ-ಮಾಡಲೂ ಬಯಸದ ದುಡಿಯುವ ವರ್ಗದ ಹುಂಬ ಮುಗ್ಧ ಬೆಸ್ತರ ಮನಸ್ಸುಗಳಿಗೆ ತುಂಬಿದ್ದೇ ತಡ, ಸಾಮರಸ್ಯದ ಬದುಕು ಕಡಲತಡಿಯಲ್ಲಿ ಮಲಿನಗೊಳ್ಳತೊಡಗಿತ್ತು.**

ಹೊತ್ತು ಬರುವ ಮಕ್ಕಳನ್ನು ಆ ಬ್ರಾಹ್ಮಣ ಮೇಷ್ಟ್ರು ಸುಧಾರಿಸಬೇಕಾದರೆ ಮೀಯುವ ಶಿಕ್ಷೆ ವಿಧಿಸುವುದು ಅವರಿಗೆ ಅನಿವಾರ್ಯವಾಗಿತ್ತು ನಿಜ. ತೊಟ್ಟಿ ತುಂಬಾ ನೀರು ತುಂಬಿಟ್ಟು ಕೈಯಲ್ಲಿ ತೆಂಗಿನ ನಾರು ಹಿಡಿದು ಸ್ವತಹ ಆ ಮಕ್ಕಳನ್ನು ತಾವೇ ಉಜ್ಜಿ ಮೀಯಿಸುವ ಕಾಯಕ ಆ ಮಾಸ್ತ್ರದ್ದು. ನಾನು ಬಾಲ್ಯದಲ್ಲಿ ಕಂಡಿದ್ದ ಆ ಚಿತ್ರಣ ಅಂದಿದ್ದ ಆರೋಗ್ಯಕರ ಸಾಮಾಜಿಕ ಪರಿಸರಕ್ಕೊಂದು ಪುಟ್ಟ ನಿದರ್ಶನವಷ್ಟೆ.

ಅಂದುಕಡಲದಂಡೆಯ ಮೇಲಿದ್ದ ಮನುಷ್ಯ ಸಂಬಂಧಗಳು, ಬರೀ ಮಾನವೀಯ ಮೌಲ್ಯದಿಂದಲೇ ಕಟ್ಟಲ್ಪಟ್ಟ ಸಾಮಾಜಿಕ ಪರಿಸರವೊಂದು ಇಂದು ಸಂಪೂರ್ಣವಾಗಿ ಮಲಿನಗೊಂಡಿದೆ. ನಮ್ಮಲ್ಲಿ 'ಪವಿತ್ರ ಇಟ್ಟಿಗೆ'ಯ ರಾಜಕೀಯ ಎಂದು ಮೂಗು ತೂರಿಸಿತೋ ಅಂದಿನಿಂದಲೇ ಕಡಲನೀರು ಇನ್ನಷ್ಟು ಕೋಮುದಳ್ಳುರಿಗೆ ಸಿಲುಕಿ ಕುದಿಯುತೊಡಗಿತ್ತು. ಜಾತಿ-ಮತ ಭೇದವೆಣಿಸದೆ ಅಸಂಖ್ಯ ಕುಟುಂಬಗಳಿಗೆ ನೆಮ್ಮದಿಯ ಬದುಕು ಕಲ್ಪಿಸಿಕೊಟ್ಟಿದ್ದ ಕಡಲನ್ನೇ ಪ್ರಮುಖ ಅಸ್ತ್ರವನ್ನಾಗಿ ಬಳಸಿ ಕೋಮು ಜ್ವಾಲೆಯನ್ನು ಕಡಲ ಸೆರಗಿಗೇ ಪಚ್ಚಲಾಯಿತು.

'ಕಡಲತಡಿಯಲ್ಲಿ ಬದುಕುವವರು. ಬದುಕಬೇಕಾದವರು ನೀವು... ಬೆಸ್ತರು. ಕಡಲ ಮೇಲಿನ ಸಂಪೂರ್ಣ ಹಕ್ಕು ನಿಮ್ಮದೇ. ಬೇರೆ ಜನಾಂಗಕ್ಕೆ ಕಡಲ ಮೇಲಿನ ಹಕ್ಕಿಲ್ಲ...' ಎಂಬ ತಿರುಳಿಲ್ಲದ ವಾದವನ್ನು ಮತಾಂಧ ಜಾತಿವಾದಿಗಳು, ಕೊಳಕು ರಾಜಕೀಯವನ್ನೆಂದೂ ಮಾಡದ-ಮಾಡಲೂ ಬಯಸದ ದುಡಿಯುವ ವರ್ಗದ ಹುಂಬ ಮುಗ್ಧ ಬೆಸ್ತರ ಮನಸ್ಸುಗಳಿಗೆ ತುಂಬಿದ್ದೇ ತಡ, ಸಾಮರಸ್ಯದ ಬದುಕು ಕಡಲತಡಿಯಲ್ಲಿ ಮಲಿನಗೊಳ್ಳತೊಡಗಿತ್ತು. ಅದರಲ್ಲೂ ದುರದೃಷ್ಟವೆಂಬಂತೆ ಕಡಲತಡಿಯಲ್ಲಿ ಮೀನವ್ಯಾಪಾರದಲ್ಲಿದ್ದ ಒಂದೆರಡು ಮುಸ್ಲಿಂ ಯುವಕರು ಮನಸ್ಸಿನ ವ್ಯಾಪಾರದಲ್ಲಿ ತೊಡಗಿ ಬೆಸ್ತರ ತರುಣಿಯರತ್ತ ವಯಸ್ಸು ಸಹಜವಾದ ಪ್ರೇಮದ ಬಲೆ ಬೀಸಿದ್ದೇ ತಡ. ಕೋಮುಕಿಚ್ಚು ಹಚ್ಚಲೆಂದೇ ಕಾದು ಕೂತಿದ್ದ ಜಾತಿವಾದಿಗಳಿಗೆ ಪರಿಸ್ಥಿತಿಯ ಲಾಭ ಪಡೆದುಕೊಳ್ಳಲು ಹೆಚ್ಚು ಕಷ್ಟವಾಗಲಿಲ್ಲ. ಪರಿಣಾಮ ಇಡೀ ತುಳುನಾಡೇ ಹೊತ್ತಿ ಉರಿಯಿತು.

ಅಪ್ಪ-ತಾತನ ಕಾಲದಿಂದಲೂ ಕಡಲಕರೆಯಲ್ಲಿ ಗೂಡಂಗಡಿ, ಕಿರಾಣಿ ಅಂಗಡಿಗಳನ್ನಿಟ್ಟು 'ಲೆಕ್ಕದ ಬೂಕ'ಲ್ಲೇ ದಿನದ ವ್ಯಾಪಾರ ನಡೆಸುತ್ತಿದ್ದ ಸೈಯದ್ದಿ ಬ್ಯಾರಿ, ಮೈಯದ್ದಿ ಬ್ಯಾರಿಯವರನ್ನು ಈ ಕೋಮುಜ್ವಾಲೆ ಆವರಿಸಿಬಿಟ್ಟಿತ್ತು. ಈ ಜ್ವಾಲೆಯೆದುರು ಯಾವುದೇ ಮನುಷ್ಯ ಸಂಬಂಧಗಳು ನಿಲ್ಲುವಂತಹದ್ದಲ್ಲ ಎಂದು ನಮ್ಮೂರಿಗರಿಗೆ ತಿಳಿದದ್ದೇ ಅವತ್ತು. ತಮ್ಮ ಕಣ್ಣೆದುರೇ, ತಾವು ಪ್ರೀತಿಸುತ್ತಿದ್ದ ಮಂದಿಯೇ ಅಂಗಡಿ-ಮನೆಗಳನ್ನು ಲೂಟಿ ಮಾಡಿ ಕೊಳ್ಳಿ ಇಡುತ್ತಿದ್ದಾಗ ಜೀವಭಯದಿಂದ ತಮ್ಮ ಕುಟುಂಬ ಸಮೇತ ಅವರಿಬ್ಬರೂ ಅದೆಲ್ಲಿಗೋ ಪರಾರಿಯಾದರು.

ಅಂದು ಹಚ್ಚಿದ್ದ 'ಕಿಚ್ಚು' ಇಂದಿಗೂ ನಿರಂತರವಾಗಿ ಉರಿಯುವಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಆ ವಿಕಾರ ಮನಸ್ಸಿನ ಕೋಮು ಶಕ್ತಿಗಳೇ ಹೊತ್ತುಕೊಂಡವು. ಮಾತ್ರ ವಲ್ಲ ಬೆಸ್ತಜನಾಂಗದಲ್ಲಿ ತಲೆತಲಾಂತರದಿಂದ ಹರಿದು ಬಂದಿರುವ ಜಾತ್ಯತೀತ ಸಿದ್ಧಾಂತವೊಂದನ್ನು ಮರೆಯುವಂತೆ, 'ದೇಶಪ್ರೇಮಿಯಾಗಲು ಪರ 'ಕೋಮು ದ್ವೇಷಿಗಳಾಗಬೇಕೆಂಬ' ಮಂತ್ರವನ್ನು ಪದೇ ಪದೇ ಬೋಧಿಸುತ್ತಾ ಭಾವನಾತ್ಮಕ ವಾಗಿ ಅವರನ್ನು ಬ್ಲಾಕ್‌ಮೇಲ್ ಮಾಡುವುದರಲ್ಲಿ ಯಶಸ್ವಿಯಾದುದು ನಮ್ಮ ಕಡಲದಂಡೆಯ ದುರಂತ. ಹಾಗೆಯೇ ಕಡಲ ಒಡಲನ್ನು ಮೊಗೆದು ಬದುಕುವ ಈ ಮೊಗವೀರರನ್ನು 'ಇಟ್ಟಿಗೆ ಸೇವೆ'ಗಾಗಿ ರಾಮ ಜನ್ಮ ಭೂಮಿಯತ್ತ ಕರೆದೊಯ್ಯುವಾಗಲೇ ಈ ಕಡಲ ದಂಡೆಯ ಮುಂದಿನ



ಭೀಕರ ಭವಿಷ್ಯವೆಂದು ಸ್ಪಷ್ಟಗೊಂಡಿತ್ತು. ಅಲ್ಲಿ ಇಟ್ಟಗ ಹೊತ್ತು ಬಂದವರ ಮನಸ್ಸು ಕಲ್ಲಿಗಿಂತಲೂ ಗಟ್ಟಿಯಾಗಿತ್ತು; ಕೋಮುಧಗೆ ಅಂಗಾಂಗಳಿಂದಲೂ ಸಿಡಿಯುತ್ತಿತ್ತು ಎಂಬುದಂತೂ ಸತ್ಯ.

ಬಾಲ್ಯದಲ್ಲಿ ನಾನು ಕಂಡಿದ್ದ ಕಡಲ ಸೆರಗ ಮೇಲಿನ ಸಾಮರಸ್ಯದ ಬದುಕು, ಸಾಮಾಜಿಕ ಬದುಕು ಮಾತ್ರವೇ ಮಲಿನಗೊಂಡಿತ್ತು ಎಂದು ಹೇಳಿದರೆ ಬಹಳ ತಪ್ಪಾದೀತು. ಇಡೀ ನನ್ನ ಪ್ರೀತಿಯ ಕಡಲೇ ಮಲಿನಗೊಳ್ಳತೊಡಗಿದ್ದನ್ನು ನಾನು ಹೇಳಬೇಕಾಗಿದೆ.

ಹೌದು ನಾನು ಎಳೆಯದರಲ್ಲಿ ಕಂಡ ಕಡಲು ಈಗಿಲ್ಲ. ಅಂದು ರಂಪಣಿಯಂತಹ ಮೈಲುಗಟ್ಟಲೇ ಉದ್ದದ ಬಲೆಗಳನ್ನು ಬಾಚಿ ಬಾಚಿ ಎಳೆದು ತಂದಂತೆ ಇಂದೇನಾದರೂ ನಮ್ಮೂರಲ್ಲಿ (ಇಂದು ರಂಪಣಿ ವ್ಯವಸ್ಥೆಯೇ ಅಸ್ತಿತ್ವದಲ್ಲಿಲ್ಲ) ರಂಪಣಿ ಇಳಿಸಿ ಮೀನು ಬಾಚ ಹೋದರೆ ಬರೀ ಬಲೆಯನ್ನಷ್ಟೆ ಹಿಂದಕ್ಕೆ ಎಳೆದುಕೊಳ್ಳ ಬೇಕಾದ ಪರಿಸ್ಥಿತಿ ಎದುರಾಗಿದೆ. ಸಣ್ಣಪುಟ್ಟ ಪಟ್ಟೆಬಲೆ, ಬೀಸುಬಲೆಗೇ ಮೀನು ದಕ್ಕುತ್ತಿಲ್ಲವೆಂದರೆ ಕಡಲಮ್ಮನ ಬಂಜೆತನದ ಪ್ರಮಾಣ ಎಷ್ಟೆಂಬುದನ್ನು ಊಹಿಸಬಹುದು. ಅಂದಿನ ಸಾಂಪ್ರದಾಯಿಕ ಮೀನುಗಾರಿಕೆಯಲ್ಲಿ ಮೀನುಗಳ ಯೋಗಕ್ಷೇಮ, ಅವುಗಳ ಹುಟ್ಟು ಬೆಳವಣಿಗೆಯ ಬಗ್ಗೆ ಸ್ವತಹ ಬೆಸ್ತರಿಗೇ ತಿಳುವಳಿಕೆ ಕಾಳಜಿಯಿತ್ತು. ಮೀನುಗಳ ಉಳಿಯುವಿಕೆಯಲ್ಲಿ ತಮ್ಮ ಬದುಕಿನ ಉಳಿಯುವಿಕೆಯ ಸತ್ವವಡಗಿದೆ ಎಂಬ ತತ್ವಕ್ಕೆ ಅಂದಿನ ಬೆಸ್ತರು ತಲೆಬಾಗಿದ್ದರು. ಯಾವ ಮೀನು ಯಾವ ಕಾಲಕ್ಕೆ ಸಂತಾನಾಭಿವೃದ್ಧಿ ಮಾಡಿಕೊಳ್ಳುತ್ತದೆ. ಯಾವ ಕಾಲದಲ್ಲಿ ಯಾವ ಋತುವಿಗೆ ಯಾವ ರೀತಿಯ ಬಲೆ ಬೀಸಬೇಕು... ಎಷ್ಟು ಆಳದಲ್ಲಿ... ಎಷ್ಟು ದೂರದಲ್ಲಿ ಮೀನುಗಾರಿಕೆ ಮಾಡಬಹುದು... ಎಂಬ ಜ್ಞಾನ ಆ ಹಳೆಯ ತಲೆಗಳಲ್ಲಿ ತುಂಬಿತ್ತು. ಆದರೆ ಈಗ ಕಾಲ ಬದಲಾಗಿದೆ. ಚಿನ್ನದ ಮೊಟ್ಟೆ ಇಡುವ ಕೋಳಿಯ ಕತೆ... ಈಗ ಈ ಕಡಲಿನದ್ದಾಗಿದೆ. ಸಾಂಪ್ರದಾಯಿಕ ದೋಣಿ ಬಲೆಗಳನ್ನು ಮೂಲೆಗಟ್ಟಿ ಆಧುನೀಕೃತ ಯಾಂತ್ರಿಕ ದೋಣಿಗಳನ್ನು ಬಳಸಿ ಕಡಲ ಒಡಲನ್ನು ಕ್ಷಣ ಮಾತ್ರದಲ್ಲಿ ಸೂರೆ ಮಾಡಬೇಕೆನ್ನುವ ಹುಚ್ಚು ಸಾಹಸ... ದುರಾಸೆಯ ಮನಸ್ಸುಗಳೇ ಹೆಚ್ಚುತ್ತಿರುವುದರಿಂದ ಕಡಲಿನ ಮತ್ಸ್ಯಸಂಪತ್ತು ಲೂಟಿಯಾಗುತ್ತಿರುವುದು ಮಾತ್ರವಲ್ಲ ಸಂಪೂರ್ಣ ನಾಶವಾಗುವ ಹಂತದಲ್ಲಿದೆ. ಬಾಲ್ಯದಲ್ಲಿ ನಾವು ಕಂಡಿರುವ ಹಲವು ಜಾತಿಯ ಮೀನುಗಳು ಈಗ ಕಾಣಿಸುತ್ತಲೇ ಇಲ್ಲ. ಅವುಗಳ ಚಿತ್ರ ನೋಡಿ ಸಂತೃಪ್ತಿ ಪಡುತ್ತಾ ನಮ್ಮ ಮಕ್ಕಳಿಗೂ ಅದನ್ನೇ ತೋರಿಸುವ ಅನಿವಾರ್ಯತೆ ಈಗ ಒದಗಿಬಂದಿದೆ.

ಬಾಲ್ಯದಲ್ಲಿ ನಾನು ಕಂಡಿದ್ದ ಕಡಲ ಸೆರಗ ಮೇಲಿನ ಸಾಮರಸ್ಯದ ಬದುಕು, ಸಾಮಾಜಿಕ ಬದುಕು ಮಾತ್ರವೇ ಮಲಿನಗೊಂಡಿತ್ತು ಎಂದು ಹೇಳಿದರೆ ಬಹಳ ತಪ್ಪಾದೀತು. ಇಡೀ ನನ್ನ ಪ್ರೀತಿಯ ಕಡಲೇ ಮಲಿನಗೊಳ್ಳತೊಡಗಿದ್ದನ್ನು ನಾನು ಹೇಳಬೇಕಾಗಿದೆ. ಹೌದು ನಾನು ಎಳೆಯದರಲ್ಲಿ ಕಂಡ ಕಡಲು ಈಗಿಲ್ಲ. ಅಂದು ರಂಪಣಿಯಂತಹ ಮೈಲುಗಟ್ಟಲೇ ಉದ್ದದ ಬಲೆಗಳನ್ನು ಬಾಚಿ ಬಾಚಿ ಎಳೆದು ತಂದಂತೆ ಇಂದೇನಾದರೂ ನಮ್ಮೂರಲ್ಲಿ (ಇಂದು ರಂಪಣಿ ವ್ಯವಸ್ಥೆಯೇ ಅಸ್ತಿತ್ವದಲ್ಲಿಲ್ಲ) ರಂಪಣಿ ಇಳಿಸಿ ಮೀನು ಬಾಚ ಹೋದರೆ ಬರೀ ಬಲೆಯನ್ನಷ್ಟೆ ಹಿಂದಕ್ಕೆ ಎಳೆದುಕೊಳ್ಳ ಬೇಕಾದ ಪರಿಸ್ಥಿತಿ ಎದುರಾಗಿದೆ. ಸಣ್ಣಪುಟ್ಟ ಪಟ್ಟೆ ಬಲೆ, ಬೀಸುಬಲೆಗೇ ಮೀನು ದಕ್ಕುತ್ತಿಲ್ಲವೆಂದರೆ ಕಡಲಮ್ಮನ ಬಂಜೆತನದ ಪ್ರಮಾಣ ಎಷ್ಟೆಂಬುದನ್ನು ಊಹಿಸಬಹುದು. ಅಂದಿನ ಸಾಂಪ್ರದಾಯಿಕ ಮೀನುಗಾರಿಕೆಯಲ್ಲಿ ಮೀನುಗಳ ಯೋಗಕ್ಷೇಮ, ಅವುಗಳ ಹುಟ್ಟು ಬೆಳವಣಿಗೆಯ ಬಗ್ಗೆ ಸ್ವತಹ ಬೆಸ್ತರಿಗೇ ತಿಳುವಳಿಕೆ ಕಾಳಜಿಯಿತ್ತು.

ಕಡಲ ಒಡಲು ಬರಿದಾಗುತ್ತಿದೆ ಎಂಬ ನೋವು ಒಂದೆಡೆಯಾದರೆ ಇನ್ನೊಂದೆಡೆ ಹತ್ತಿಕೊಂಡಿರುವ ದಿಗಿಲೆಂದರೆ ಕಡಲ ಪರಿಸರವೂ ಮಾಲಿನ್ಯಗೊಳ್ಳುತ್ತಿದೆ ಎಂಬುದು. ಕಡಲಿನ ಲವಣಯುಕ್ತ ನೀರು ಚರ್ಮ ರೋಗವನ್ನು ಗುಣಪಡಿಸಲಬಲ್ಲದ್ದು ಎಂದು ಸ್ವತಹ ಅನುಭವದಿಂದ ಬಲ್ಲವರು ನಾವು. ಅಮ್ಮನ ಸೆರಗು ಹಿಡಿದು ಓಡಾಡುತ್ತಿದ್ದ ವಯಸ್ಸಿನಲ್ಲಿ ನಮಗೇನಾದರೂ ದಡಾರ–ಕೋರ–ಕೋಶಲೆ, ಅಮ್ಮ ಇತ್ಯಾದಿ ಸೋಂಕು ರೋಗಗಳೇನಾರೂ ತಗಲಿಕೊಂಡರೆ ಯಾವ ವೈದ್ಯಕೀಯ ಶುಶ್ರೂಷೆಯೂ ಆಗ ಬೇಕಾಗಿರಲಿಲ್ಲ. ಸೋಂಕು ತಗಲಿದ ಒಂಬತ್ತು ದಿನದವರೆಗೂ ಹೆಸರು ಬೇಳೆ ಗಂಜಿಯ ಪಥ್ಯ, ಒಂಭತ್ತನೇ ದಿನ ಅಮ್ಮನೊಂದಿಗೆ ಕಡಲದಂಡೆಗೆ ಪಯಣ. ಅಲ್ಲಿ ಅಮ್ಮ ನಮ್ಮನ್ನು ಕಡಲು ಮೀಯಿಸಿ, ಬಾಬು ಮ್ಯೊಲಿಯ ತಟ್ಟಿ ಹೋಟ್ಲಲ್ಲಿ, ನಮ್ಮ ಮೈಯಲ್ಲಿರುವ 'ಮಾರಿಯಮ್ಮ' ಬಿಟ್ಟು ಹೋಗುವವರೆಗೆ ಎಷ್ಟು ಬೇಕೋ ಅಷ್ಟು ತಿಂಡಿ ತಿನ್ನಿಸಿ 'ಮಾರಿಯಮ್ಮ'ನನ್ನು ಕಳುಹಿಸಿಕೊಡುವುದಿತ್ತು. ಹೀಗೆ ಮುಂದೇ ಮೂರು ದಿನ ಗಡದ್ದಾಗಿ ಕಡಲಸ್ನಾನ ಮತ್ತು ಬಾಬು ಮ್ಯೊಲಿಯ ಹೊಟ್ಲಲ್ಲಿ ತಿಂಡಿಗಳ ತಿನಿಸಾಟ, ಮಾರಿಯಮ್ಮನನ್ನು ಓಡಿಸುವ ಕ್ರಿಯೆ ಮುಂದುವರಿಯುತ್ತಿತ್ತು.

ಕಡಲಸ್ನಾನದ ಜತೆ ಬಾಬು ಮ್ಯೊಲಿಯ ರುಚಿ ಗಟ್ಟಾದ ತಿಂಡಿಗಳು ಯಾರಿಗೆ ಬೇಡ. ವರ್ಷದಲ್ಲಿ ನಾಕೈದು ಬಾರಿಯಾದರೂ ಅಮ್ಮ–ಕೋರ–ಕೋಶಲೆಗಳು ಬರುವಂತಾಗಲಿ ಎಂದು ನಾವು ಆಗಿಂದಾಗ್ಗೆ ದೇವರಲ್ಲಿ ನಮ್ಮ ಮನೆದೈವಗಳಲ್ಲಿ ಬೇಡಿಕೊಳ್ಳುತ್ತಲೇ ಬಾಲ್ಯವನ್ನು ಕಳೆದೆವು.

ಅಂದು ಎಳ್ಳಮಾಸೆ, ಆಟಿ ಅಮಾಸೆ, ದಡಾರ–ಕೋರ ಎಂದು ಅನೇಕ ನೆಪ ಹೂಡಿ ನಾವು ಕಡಲ ಮೀಯುತ್ತಿದ್ದವರು ಒಬ್ಬರೇ... ಇಬ್ಬರೇ! ಸಾವಿರಾರು ಮಂದಿ. ಆಟಿ ಅಮಾಸೆ, ಎಳ್ಳಮಾಸ್ಯೆಗೆ ಕಡಲು ಮೀಯುವುದಕ್ಕೆಂದು ಇಡೀ ಮನೆಗೆ ಮನೆಯೇ ಖಾಲಿ. ಮನೆಯವರು ಮಿಂದರೆ ಸಾಕೆ? ಮನೆ ಕಾಯುವ ನಾಯಿಗಳೂ ಕಡಲು ಮೀಯುವ ಚಂದವೇನು! ಕಡಲ ನೀರು ವರ್ಷದ ವ್ಯಾಧಿಗಳನ್ನು ತಡೆಯಬಲ್ಲುದಂತೆ... ಮಾಡಿದ ಪಾಪಗಳನ್ನು ತೊಳೆದು ಏಳು ಕಡಲಾಚೆಗೆ ಎಸೆಯಬಲ್ಲುದಂತೆ ಎಂಬ ನಂಬಿಕೆ ಆ ಮಂದಿಗಲ್ಲ. ಆದರೆ ಹಾಗೆ ಮೈಮನಗಳ ವ್ಯಾಧಿಗಳನ್ನು ತೊಳೆದುಕೊಂಡ ಆ ಮಂದಿ, ಇಂದು ಕಡಲ ಕರೆಗೆ ಕಾಲಿಡಲೂ ಅಸಹ್ಯ ಪಡುವಂತಹ ಪರಿಸ್ಥಿತಿ ಇದೀಗ ನಿರ್ಮಾಣವಾಗಿದೆ.

ಬೃಹತ್ ಉದ್ಯಮಗಳು ಪರಿಸರವಾದಿಗಳಿಗೆ, ಸರಕಾರಕ್ಕೆ ಚಳ್ಳೆ ಹಣ್ಣು ತಿನಿಸಿ, ಅಥವಾ ಹಲವು ಆಮಿಷ, ಮಾರ್ಗೋಪಾಯಗಳಿಂದ ರಮಿಸಿ, ಮನವೊಲಿಸಿ ತಮ್ಮ ಉದ್ಯಮದ ರಾಸಾಯನಿಕ ತ್ಯಾಜ್ಯ ವಸ್ತುಗಳನ್ನು ನೇರ ಕಡಲ ಒಡಲಿಗೆ ಸೇರಿಸುತ್ತಿರುವ ವಿಷಯವೇನು ಈಗ ಗುಟ್ಟಾಗಿ ಉಳಿದಿಲ್ಲ. ಪರಿಸರ ನಿಯಂತ್ರಣ ಮಂಡಳಿಯ ಗಮನಕ್ಕೆ ಬರದಂತೆ ಹಲವು ರೀತಿಯಲ್ಲಿ ಕಡಲ ಮಾಲಿನ್ಯಕ್ಕೆ ಕಾರಣವಾದ ಉದ್ದಿಮೆಗಳು ಈಗಲೂ ನಮ್ಮಲ್ಲಿವೆ. ಮತ್ಸ್ಯ ಸಂಹಾರದ ಜತೆಗೆ ಕಡಲೊಳಗಿನ ಅಸಂಖ್ಯ ಜೀವ ಸಂಕುಲ ನಿರ್ನಾಮಗೊಳ್ಳುತ್ತಿರುವುದು ನಮ್ಮನ್ನು ಪೊರೆದ ಕಡಲಮಾತೆಗೆ ಮಾಡುತ್ತಿರುವ ಅಪಚಾರವೆ ಸರಿ.

ಹಿಂದೆ ಸುಗ್ಗಿಕಾಲಕ್ಕೆ ಹುಣ್ಣಿಮೆ ಬೆಳಕಲ್ಲಿ ಕಡಲಾಮೆಗಳು ಕಡಲದಂಡೆಗೆ ಮೊಟ್ಟೆ ಇಡಲು ಬರುವುದನ್ನು ಕಾಣಲು ನಮ್ಮನ್ನೆಲ್ಲ ಹಿರಿಯರು ಕರೆದೊಯ್ಯುವ ಪರಿಪಾಠವಿತ್ತು. ಕಡಲ ಮಧ್ಯದಿಂದ ಈಜುತ್ತ ದಡಕ್ಕೆ ಬರುವ ಮಣ ಭಾರದ ದೊಡ್ಡ ಗುಡಾಣದ ಗಾತ್ರ ಕಡಲಾಮೆಗಳು ಅತ್ತಿತ್ತ ನೋಡಿ ಕಡಲಿನದಡದಲ್ಲಿ ಗುಳಿತೋಡಿ, ನೂರಾರು ಮೊಟ್ಟೆ ಉದುರಿಸಿ ಮತ್ತೆ ಮೊಟ್ಟೆಗಳಿಗೆ ಮರಳು ಮುಚ್ಚಿ ಹಿಂದಿರುಗುವ ವಿಸ್ಮಯ ಕ್ರಿಯೆಗಳಿಗೆ ನಾವು ಪ್ರತ್ಯಕ್ಷದರ್ಶಿಗಳಾಗಿದ್ದೆವು. ಇಂದು ನಮ್ಮ ಮಕ್ಕಳಿಗೆ ಪ್ರಕೃತಿಯ ಆ ವೈಚಿತ್ರ್ಯವನ್ನು ತೋರುವ ಸೌಭಾಗ್ಯ ನಮಗಿಲ್ಲ.

ಹಾಗೆಯೇ ಪ್ರತಿ ಜೇಷ್ಠ ವೈಶಾಖ ಮಾಸದಲ್ಲಿ ಮನೆ ಮನೆಯ ಅಬ್ರಾಹ್ಮಣ ಹೆಂಗಸರು ಮಕ್ಕಳಾದಿಯಾಗಿ ಕಡಲ ದಂಡೆಗೆ ಕೊಡಗಳನ್ನು ಹಿಡಿದು ಹೊರಡುವ ಅಭ್ಯಾಸವಿತ್ತು. ಆ ಕಾಲದಲ್ಲಿ ಮಾತ್ರವೇ ಮೊರೆದು ಬರುವ ಕಡಲ ತೆರೆಗಳು ಹೊತ್ತು ತರುವ 'ಉರಿ' ಎಂಬ ಸಣ್ಣ ಚಿಪ್ಪಿನ (ಮೃದ್ವಂಗಿ) ಜೀವಿಗಳನ್ನು ಬಾಚಿ ತರುವುದಕ್ಕಾಗಿ ಆ ಕೊಡಗಳು. ಮರಳದಂಡೆಗೆ ಬಂದು ರಾಶಿ ಬೀಳುವ ಆ ಜೀವಿಗಳ ರಾಶಿ ನೋಡುವುದಕ್ಕೆ ಹೊಂಗೆ ಹೂಗಳ ರಾಶಿಯಂತೆಯ ಗಾತ್ರದಲ್ಲೂ ಬಣ್ಣದಲ್ಲೂ ಅದೇ ಹೋಲಿಕೆ. ಕೊಡ ಹೊತ್ತು ತಂದ ಹೆಂಗಸರೆಲ್ಲ, ಉಕ್ಕಿ ಬರುವ ಕಡಲ ತೆರೆಗಳ ಬಾಯಿಗೆ ತಮ್ಮ ಕೊಡಗಳನ್ನಿಟ್ಟು ಅದರ ತುಂಬಾ 'ಉರಿ' ತುಂಬಿಸಿಕೊಳ್ಳುತ್ತಿದ್ದರು. ಎರಡು ಮೂರು ಕೊಡಗಳು ತುಂಬಿದ ನಂತರ ಅದನ್ನು ಹೊತ್ತು ತಂದು ಸಿಹಿ ನೀರ ಪಾತ್ರೆಗೆ ಹಾಕಿದ್ದರೆ, ಆ ಪ್ರಾಣಿಗಳು ನಿಧಾನಕ್ಕೆ ತಾವು ನುಂಗಿರುವ ಮರಳ ಕಣಗಳನ್ನೆಲ್ಲ ಕಾರಿ ಬಿಡುತ್ತವೆ. ನಂತರ ಸಿಹಿನೀರಿನಿಂದ ತೆಗೆದು ಬಿಸಿನೀರಿಗೆ ಹಾಕುವುದಷ್ಟೇ ಕೆಲಸ. ಬಿಸಿನೀರಿನಲ್ಲಿ ಚಿಪ್ಪಿನೊಳಗಿನ ಮಾಂಸ ಬೇರ್ಪಡುತ್ತದೆ. ಬೇರ್ಪಟ್ಟ ಮಾಂಸವನ್ನು ಆ ಹೊತ್ತಿಗೆ ಎಷ್ಟು ಬೇಕೋ ಅಷ್ಟನ್ನು ಬಳಸಿ ಉಳಿದುದನ್ನು ಒಣಗಿಸಿಡುವುದೂ ಇದೆ. ಬಾಲ್ಯದಲ್ಲಿ ವೈಶಾಖ ಮಾಸದಲ್ಲಿ ನಾವು ಬಳಸುತ್ತಿದ್ದ 'ಉರಿ' ಈಗ ಇಲ್ಲವೇ ಇಲ್ಲ. ಯಾಕಿಂತಹ ವೈಪರೀತ್ಯ ಎಂಬುದಕ್ಕೆ ಯಾರಿಂದಲೂ ಉತ್ತರವಿಲ್ಲ. ಇಂದಿಗೂ ಅದನ್ನೆ ನಂಬಿ ಬದುಕುತ್ತಿರುವ ಬೆಸ್ತ ಜನಾಂಗಕ್ಕೂ ಉತ್ತರ ಹುಡುಕುವ ವ್ಯವಧಾನವಿಲ್ಲ.

ಯಾಕೆಂದರೆ ಕಡಲ ಒಡಲಿಗೆ ಪರ್ಯಾಯವಾಗಿ ಬದುಕುವ ದಾರಿಯೊಂದನ್ನು ಕಲ್ಪಿಸಿಕೊಡುವವೆಂಬ ಭ್ರಮಾಲೋಕವೊಂದನ್ನು ಈಗಾಗಲೆ ಕಡಲದಂಡೆಯ ಮೇಲಿರುವ ಉದ್ಯಮಗಳು ಹುಟ್ಟಿಸಿಬಿಟ್ಟಿವೆ.

ಕಡಲ ಪರಿಸರ ಮಲಿನಗೊಂಡಿದೆ ಅಂದರೆ ಒಂದು ನಾಗರಿಕತೆಯೇ ಮಲಿನಗೊಂಡಿದೆ... ಅಥವಾ ಒಂದು ಸಂಸ್ಕೃತಿಯೇ ಮಲಿನಗೊಂಡಿದೆ ಎಂದರ್ಥ. ಈ ಸತ್ಯದರಿವು ಅದರ ದಂಡೆಯ ಮೇಲೆ ಬದುಕುತ್ತಿರುವ ಎಲ್ಲರೊಳಗೂ ಬರುವವಷ್ಟರಲ್ಲಿ ಕಡಲಮ್ಮ ಮತ್ತೊಂದು ಹಿಂದಿನ 'ಅಮ್ಮ' ಆಗಲಾರದಷ್ಟು ಬದಲಾಗಿರುತ್ತಾಳೆ.

'ಇಲ್ಲ ಆಕೆ ಈಗಲೇ ಬದಲಾಗಿದ್ದಾಳೆ. ಕಡಲಮ್ಮ ಹಿಂದಿನಂತಿಲ್ಲ' ಎಂದು ಹಳೆಯ ತಲೆಗಳು ಪರಿತಪಿಸುತ್ತಿರುವುದನ್ನು ನಾನು ಹಲವು ಬಾರಿ ಕೇಳಿಸಿಕೊಂಡಿದ್ದೇನೆ. ಆಕೆ ತನ್ನ ದಡದಲ್ಲಿ ತಲೆತಲಾಂತರದಿಂದ ಬದುಕುತ್ತಿರುವ ಕುಟುಂಬಗಳನ್ನೇ ಕಬಳಿಸಲು ಮಳೆಗಾಲದಲ್ಲಿ ಕಾದು ಹಾತೊರೆದು ಬರುತ್ತಾಳೆ; ತೋಟ-ಮನೆಗಳನ್ನು ಕಬಳಿಸಿಯೇ ಬಿಟ್ಟಳು ಎಂಬ ದುಃಖ ಅಳಲು, ಆಕ್ರೋಶ ಎಲ್ಲೆಲ್ಲಿಯೂ ಕೇಳಿಬರುತ್ತಿದೆ. 'ಕಡಲ ತೀರದ ಪ್ರವಾಸೋದ್ಯಮ' ಎಂಬ ಉದ್ಯಮದ ಹುಚ್ಚು ಎಂದು ಆರಂಭವಾಯಿತೋ ಅಂದಿನಿಂದ ತನ್ನ ಸೆರಗಲ್ಲಿ ಬದುಕು ಸಾಗಿಸಲು ಅನುವು ಮಾಡಿಕೊಟ್ಟ ಕಡಲಮ್ಮನನ್ನೇ ಕಬಳಿಸಲು ಹೊಂಚು ಹಾಕುತ್ತಿರುವ ದುರಾಸೆಯ ಸಿರಿವಂತರು, ಇಷ್ಟಿಷ್ಟೇ ಆಕೆಯ ಜಾಗವನ್ನು ನುಂಗುತ್ತಾ ಆಕೆಯನ್ನು ಬಲವಂತಕ್ಕೆ ಹಿಂದಕ್ಕೆ ತಳ್ಳುತ್ತಾ, ಅಲ್ಲಿ ತಮ್ಮ ಸ್ವಾಮ್ಯ ಸ್ಥಾಪಿಸುವುದನ್ನು ಆಕೆ ಎಲ್ಲಾದರೂ ಸಹಿಸುವುದುಂಟೇ?

ಮರಳ ದಂಡೆಯ ಮೇಲಿನ ಮರಳನ್ನು ಗಾಜಿನ ಕೈಗಾರಿಕೆಗಳಿಗಾಗಿ ಅವ್ಯಾಹತವಾಗಿ ಸಾಗಿಸುವ ದಂಧೆ ಆರಂಭವಾದಂದಿನಿಂದ ಮನುಷ್ಯನಿಗೂ ಕದನ ಸತತವಾಗಿ ನಡೆಯುತ್ತಲೇ ಇದೆ. ಕಣ್ಮನ ತಣಿಸುವ ಕಡಲ ಸೆರಗಲ್ಲೇ ಆಕೆ ಉಕ್ಕಿ ಬರದಂತೆ ಏನೇನೋ ತಡೆವೊಡ್ಡಿ ಆಕೆಯನ್ನು ಹಿಂದಕ್ಕಟ್ಟುವ ಪ್ರಯತ್ನ ನಡೆಯುತ್ತಿದ್ದರೆ, ರಾತ್ರಿಯಾಗುತ್ತಲೇ ಆಕೆ ಆ ಮನುಷ್ಯ ಪ್ರಯತ್ನವನ್ನು ನಿರರ್ಥಕಗೊಳಿಸುತ್ತಲೇ ಬಂದಿದ್ದಾಳೆ. ನಾವು ಮೂಕರಾಗಿ ಆ ಕದನವನ್ನು ಆಗಾಗ್ಗೆ ಅಲ್ಲಲ್ಲಿ ನೋಡುತ್ತಲೇ ಬಂದಿದ್ದೇವೆ.

ಬಲವಂತದಿಂದ ಕೆಲವೆಡೆ ಹೆಬ್ಬಂಡೆಗಳ ರಾಶಿ ತಂದು ಹಾಕಿ ಆಕೆಯ ಸೆರಗನ್ನು ವಶಮಾಡಿಕೊಳ್ಳುವ ಪ್ರಯತ್ನ ನಡೆಯುತ್ತಿದ್ದಂತೆ ಆಕೆ ರೋಷತಪ್ತಳಾಗಿ ಇನ್ನೊಂದೆಡೆ ತಾನು ಬದುಕು ಸಾಗಿಸಲು ಅನುವು ಮಾಡಿಕೊಟ್ಟ ಕುಟುಂಬಗಳತ್ತಲೇ ನುಗ್ಗಿ ಆ ಕುಟುಂಬಗಳ ಇಡೀಯ ಆಸ್ತಿ-ಪಾಸ್ತಿಯನ್ನು ಕಬಳಿಸಿದ್ದಿದೆ. ಕಡಲ್ಕೊರೆತ ಎಂಬ ಆಪಾದನೆಯನ್ನು ಹಾಕಿ ಆಕೆಯನ್ನು ಮಾತ್ರವೇ ಜರೆಯುವ ಅಭ್ಯಾಸ ನಮ್ಮಲ್ಲಿದೆ. ಕಡಲ್ಕೊರೆತಕ್ಕೆ ಕಾರಣವೇನು ಎಂಬ ಅಧ್ಯಯನ ನಡೆಸಲು ಅದಕ್ಕೆ ಸಂಬಂಧಿಸಿದ ವಿಜ್ಞಾನಿಗಳೇ ಬರಬೇಕೆಂದಿಲ್ಲ. ಈಗಲೂ ಕಡಲಿಗೆ ಗಾಳವೂ... ಬಲೆಯೋ ಎಸೆದು ಬದುಕುತ್ತಿರುವ ವೃದ್ಧ ತೋಮ ಮರಕಾಲನನ್ನು ಕೇಳಿದರೆ ಆತ ತಟ್ಟನೆ ಉತ್ತರಿಸಿಯಾನು. ಸಮಸ್ಯೆಗೆ ಪರಿಹಾರವನ್ನೂ ಆತನೇ ಸೂಚಿಸಬಲ್ಲ.

'ಕಡಲಿನ ಒಂದಿಂಚೂ ಜಾಗಕ್ಕೆ ನೀವು ಹೊಂಚು ಹಾಕಬೇಡಿ. ಆಕೆಯ ಪಾಡಿಗೆ ಆಕೆ ಸ್ವೇಚ್ಛೆಯಿಂದಿರಲಿ. ನಾವು ಈಗ ತೋಟ-ಮನೆ-ಮಠ ಮಾಡಿ ಬದುಕುತ್ತಿರುವುದು ಹಿಂದೆ ಆಕೆ ಬದುಕಿದ್ದ ತಾಣದಲ್ಲೇ. ನಮಗಾಗಿ ಆಕೆ ಈಗಾಗಲೇ ಹಿಂದೆ ಸರಿದಿದ್ದಾಳೆ. ಕಡಲ ನೀರಿನ ಪ್ರಕೃತಿ ನಿಯಮವೇ ಅಷ್ಟು, ಅಲ್ಲಿ ಆಕೆಗೆ ಮೊರೆಯಲು... ಹರಿಯಲು ಬಿಡದೆ ತಡಹಿಡಿದಿರಾ...! ಅಲ್ಲಿ ಬಲವಂತವಾಗಿ ಕಬಳಿಸಿ ಹರಿದು ಬಿಡುವುದು ಆಕೆಯ ಜಾಯಮಾನ..., ಇಲ್ಲಿ ಆಕೆ ಎರಡೂ ಮೊಳ ಜಾಗ ಪಡೆದುಕೊಳ್ಳುತ್ತಾಳೆ...'

ಹೇಗಿದೆ ತೋಮ ಮರಕಾಲನ ವಿವರಣೆ! ಕಡಲ ದಂಡೆಗೆ ಕಲ್ಲಿನ ತಡೆಗೋಡೆ ಕಡಲ್ಕೊರೆತಕ್ಕೆ ಮದ್ದಲ್ಲ. ಕರಾವಳಿಯುದ್ದಕ್ಕೆ ದಂಡೆಯ ಮೇಲಿರುವ ಕಲ್ಲಿನ ತಡೆಗೋಡೆ, ಇನ್ನಿತರ ತಡೆ ನಿರ್ಮಾಣಗಳನ್ನು ಕಿತ್ತೆಸೆದರೆ ತನ್ನಿಂತಾನೆ ಆಕೆ ಶಾಂತಳಾಗುತ್ತಾಳೆ. ದಂಡೆಯ ಸಮತೋಲನ ಕಾಪಾಡಿದರೆ ಕಡಲು ಪ್ರಕೃತಿ ನಿಯಮದಂತೆಯೇ ಮೊರೆಯುತ್ತದೆ... ಉಕ್ಕುತ್ತದೆ; ಅನ್ಯಥಾ ಕಬಳಿಸುವುದಿಲ್ಲ. ಅಷ್ಟಕ್ಕೂ ಆಕೆಗೆ ಇಷ್ಟೇ ದೂರಕ್ಕೆ ನೀನು ಉಕ್ಕಿ ಬಾ ಎಂದು ನಿರ್ದೇಶಿಸಲು, ಗೆರೆ ಹಾಕಿ ಆದೇಶಿಸಲು ನಾವ್ಯಾರು? ಅಂದು ಆಕೆ ದನುಷ್ಕೋಟಿಯನ್ನು ನುಂಗಿಬಿಟ್ಟಂತೆ ಈ ಮನುಷ್ಯ ಪ್ರಾಣಿಯ ಸ್ವಾರ್ಥದಿಂದ ತಲೆಕೆಟ್ಟು ಹುಚ್ಚು ಹಿಡಿದಂತಾದರೆ ಕಡಲ ದಂಡೆಯ ಮೇಲಿನ ಪ್ರಾಂತ್ಯವೊಂದನ್ನೇ ಆಕೆ ನುಂಗಿಬಿಡಬಹುದು. ತನ್ನ ಒಡಲನ್ನೆ ಬಗೆದು ದೈತ್ಯ ಸುನಾಮಿ ಅಲೆಗಳನ್ನು ಕಡಲ ಸೆರಗತ್ತ ... ಮೈಲುಗಟ್ಟಲೆ ದೂರಕ್ಕೆ ಅಟ್ಟಿ ಇಡೀ ಊರಿಗೆ ಊರನ್ನೇ ಲಯ ಮಾಡಬಹುದು. ಈ ಅಪಾಯ ನಮಗೆ ಬಹಳ ದೂರವೇನಿಲ್ಲ. ಹೌದು ಕಡಲು ನೆಲದ ಮೇಲಿನ ಸ್ವಾರ್ಥದ ಮನಗಳಿಂದಾಗಿ ಯಾವ ಕ್ಷಣದಲ್ಲಾದರೂ ಬಿದ್ದು ಹೋಗಬಹುದು. ಆ ಷರತ್ತುಗಳನ್ನು ನಿಯಂತ್ರಿಸುವ ಶಕ್ತಿ ಇರುವುದು ತನಗೆ, ಅತೀವ ಆಲೋಚನಾಶಕ್ತಿ ಇದೆ ಎಂದು ಬೀಗುವ ಮನುಷ್ಯನಲ್ಲಿ ಅಲ್ಲ..., ನಿಸರ್ಗದಲ್ಲಿ ಮಾತ್ರ, ನಿಸರ್ಗಮಾತೆಯ ಹಿರಿಮಗಳಲ್ಲವೇ ಈ ಕಡಲತಾಯಿ. ತಾಯಿ ಹೇಳಿದಂತೆ ನಡೆವ ಮಗಳೀಕೆ.

ತನ್ನೊಡಲು-ಸೆರಗನ್ನು ಹೀಗೆ ರಾಜಕೀಯಕ್ಕಾಗಿ, ಆರ್ಥಿಕ ಲಾಭಕ್ಕಾಗಿ, ಸ್ವಾರ್ಥಕ್ಕಾಗಿ ದಮಾಯಕರ ದಮನಕ್ಕಾಗಿ ಬಳಸಿದರೆ ಆಕೆಯೇನು ಸಹಿಸಿಕೊಂಡು ಕೂರುವವಳೇ? ಈಗಲೇ ಆಕೆಯಿಂದ ಸಾಕಷ್ಟು ವಿರೋಧ ಪ್ರತಿಭಟನೆ ವ್ಯಕ್ತವಾಗಿದೆ. ಎಲ್ಲೂ ಕಡಲಲ್ಲಿ ಮತ್ಸ್ಯಸಂಪತ್ತಿಲ್ಲ ಎಂಬ ಹಾಹಾಕಾರವೆದ್ದಿದೆ. ಕಾಲ ಕಾಲಕ್ಕೆ ಆಕೆ ಆಯಕಟ್ಟಿನ ಜಾಗದಲ್ಲಿ ಚಂಡಮಾರುತವನ್ನೆಬ್ಬಿಸಿ ಇನ್ನಿಲ್ಲದ ಕಾಟ ನೀಡುತ್ತಿದ್ದಾಳೆ. ವರ್ಷವರ್ಷವೂ ಸರಕಾರ ತನ್ನ ಬೊಕ್ಕಸದ ಒಂದಷ್ಟು ಭಾಗವನ್ನು ಕಡಲ್ಕೊರೆತ ತಡೆಯುವ ತಡೆಗೋಡೆ ನಿರ್ಮಾಣಕ್ಕಾಗಿ ಸುರಿಯುವಂತೆ ವ್ಯವಸ್ಥಿತವಾಗಿ ನೋಡಿಕೊಂಡಿದ್ದಾಳೆ. ಇಷ್ಟೇ ಸಾಕೇ-ಆಕೆ ತೋರುವ ಪ್ರತಿಭಟನೆ!

ಯಾರಿಗೇನಾದರೂ ಈ ಕಡಲಮ್ಮ ಕತ್ತಿ ಮಸೆಯಲಿ; ನಮಗೆ ಮಾತ್ರ ಆಕೆ ಪ್ರೀತಿಯ 'ತಾಯಿಯೆ'. ನಾನು ತವರೂರಿಗೆ ಹೋದಾಗ ಆಕೆಯ ಕರೆಗೆ ಕಾಲಿಟ್ಟಾಗಲೆಲ್ಲ ನಾನು ಪೂರ್ತಿ ತೋಯ್ದು ಹೋಗುವಂತೆ ಆಕೆ ಹಾಗೆಯೇ ಪ್ರೀತಿಯಿಂದ ಒಮ್ಮೆ ಅಬ್ಬರಿಸಿ ಬಂದು ಪ್ರೀತಿಯ ಹನಿ ಸಿಂಚನ ಹರಿಸುತ್ತಾಳೆ! ಒಂದರ್ಧ ಗಂಟೆ ನನ್ನನ್ನಲ್ಲೇ ಕೂರಿಸಿ, ಆಟವಾಡಿಸಿ, ಬಾಲ್ಯದ ನೆನಪನ್ನು ಮರುಕಳಿಸುವಂತೆ ಮಾಡಿ ಕಳುಹಿಸಿಕೊಡುತ್ತಾಳೆ-ಈ ಅಮ್ಮ; ನನ್ನಮ್ಮ.

('ವಸುಂಧರೆಯ ಗ್ಯಾನ' ಕೃತಿಯಿಂದ) □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೦೮೦ ೨೮೪೫೩/೯೪೪೮೦೪೮೫೦೬

ವಂದೇ ಮಾತರಮ್ ಬಗ್ಗೆ ಮಾತ್ರವೇ ಆಕ್ಷೇಪವೇಕೆ?

ವಂದೇ ಮಾತರಮ್ ಬಗ್ಗೆ ಮತ್ತೆ ಸಂಘ ಪರಿವಾರ ಮತ್ತೆ ತನ್ನ ಕೋಮು ವರಸೆ ಆರಂಭಿಸಿದೆ. ೧೮೭೦ ರ ದಶಕದಲ್ಲಿ ಬಂಕಿಮ್ ಚಂದ್ರ ಚಟರ್ಜಿ ಎಂಬ ಮುಸ್ಲಿಮ್ ವಿರೋಧಿ ಬಂಗಾಳಿ ಕವಿ ವಂದೇ ಮಾತರಮ್ ಹಾಡಿನ ಮೊದಲ ಎರಡು ಕವನಗಳನ್ನು ಎಂದರೆ ಎಂಟು ಸಾಲುಗಳನ್ನು ರಚಿಸಿದರು. ಇದರಲ್ಲಿ ಭಾರತ ಭೂಭಾಗದ ಸುಂದರ ವರ್ಣನೆ ಇದೆ. ೧೮೮೨ರಲ್ಲಿ ಪ್ರಕಟವಾದ 'ಆನಂದ ಮಠ' ಎಂಬ ತಮ್ಮ ಕಾದಂಬರಿಯಲ್ಲಿ ಈ ಮೊದಲೇ ರಚಿಸಿದ್ದ ವಂದೇ ಮಾತರಮ್ ಹಾಡನ್ನು ಅವರು ಬಳಸಿಕೊಂಡರು. ಅಲ್ಲದೆ ಕಾದಂಬರಿಗಾಗಿ ಆ ಹಾಡಿಗೆ ಹೊಸದಾಗಿ ರಚಿಸಿದ ಸಾಲುಗಳನ್ನು ಸೇರಿಸಿದರು. ಮುಸ್ಲಿಮ್ ವಿರೋಧಿ ಸಂಘರ್ಷದಲ್ಲಿ ಯಶಸ್ಸು ಸಿಗಲಿ ಎಂದು ದುರ್ಗೆಯನ್ನು ಬೇಡುವ ಪ್ರಾರ್ಥನೆಯ ರೂಪದಲ್ಲಿ ಈ ಕವನಗಳ ಸಾಲುಗಳಿವೆ. ಇದನ್ನು ಅರ್ಥ ಮಾಡಿಕೊಳ್ಳಲು ಆನಂದ ಮಠ ಕಾದಂಬರಿ ಏನೆಂದು ತಿಳಿಯಬೇಕಾಗುತ್ತದೆ.

ಪಿ.ಎಸ್. ಶ್ರೀಧರ ಮೂರ್ತಿ



ಈಗ್ಗೆ ೧೩೫ ವರ್ಷಗಳ ಹಿಂದೆ, ಎಂದರೆ ೧೮೭೦ ರ ದಶಕದಲ್ಲಿ ಬಂಕಿಮ್ ಚಂದ್ರ ಚಟರ್ಜಿ ಎಂಬ ಮುಸ್ಲಿಮ್ ವಿರೋಧಿ ಬಂಗಾಳಿ ಕವಿ ವಂದೇ ಮಾತರಮ್ ಹಾಡಿನ ಮೊದಲ ಎರಡು ಕವನಗಳನ್ನು ಎಂದರೆ ಎಂಟು ಸಾಲುಗಳನ್ನು ರಚಿಸಿದರು. ಇದರಲ್ಲಿ ಭಾರತ ಭೂಭಾಗದ ಸುಂದರ ವರ್ಣನೆ ಇದೆ. ಕವಿ ಡಾ॥ ಇಕ್ಬಾಲ್ ರಚಿಸಿದ 'ಸಾರೇ ಜಹಾನ್ ಸೆ ಅಚ್ಛಾ' ಹಾಡು ಸಹ ಭಾರತ ಭೂಭಾಗದ ಸೊಗಸನ್ನು ಕುರಿತದ್ದೇ. ಕವಿ ರವೀಂದ್ರನಾಥ ಟಾಗೂರರು ರಚಿಸಿದ ದೇಪಭುವನ ಮನಮೋಹಿನಿ, ಸಹ ಇಂಥದ್ದೇ ಗೀತೆ. ತಮಿಳ್ನಾಡಿನ ಕವಿ ಸುಬ್ರಹ್ಮಣ್ಯ ಭಾರತಿ ಸಹ ಇದೇ ರೀತಿಯ ಹಲವು ಹಾಡುಗಳನ್ನು ರಚಿಸಿದ್ದಾರೆ.

ವಂದೇ ಮಾತರಮ್ ಬಗ್ಗೆ ಮಾತ್ರವೇ ಆಕ್ಷೇಪವೇಕೆ? ಬಂಕಿಮ್ ಚಂದ್ರ ಚಟರ್ಜಿ ೧೮೮೨ರಲ್ಲಿ ಪ್ರಕಟವಾದ 'ಆನಂದ ಮಠ' ಎಂಬ ಕಾದಂಬರಿಯಲ್ಲಿ ಈ ಮೊದಲೇ ರಚಿಸಿದ್ದ ವಂದೇ ಮಾತರಮ್ ಹಾಡನ್ನು ಬಳಸಿಕೊಂಡರು. ಅಲ್ಲದೆ ಕಾದಂಬರಿಗಾಗಿ ಆ ಹಾಡಿಗೆ ಹೊಸದಾಗಿ ರಚಿಸಿದ ಕವನಗಳನ್ನು ಸೇರಿಸಿದರು. ಮುಸ್ಲಿಮ್ ವಿರೋಧಿ ಸಂಘರ್ಷದಲ್ಲಿ ಯಶಸ್ಸು ಸಿಗಲಿ ಎಂದು ದುರ್ಗೆ(ಕಾಳಿಯ ಇನ್ನೊಂದು ಹೆಸರು)ಯನ್ನು ಬೇಡುವ ಪ್ರಾರ್ಥನೆಯ ರೂಪದಲ್ಲಿ ಈ ಕವನಗಳ ಸಾಲುಗಳಿವೆ. ಇದನ್ನು ಅರ್ಥ ಮಾಡಿಕೊಳ್ಳಲು ಆನಂದ ಮಠ ಕಾದಂಬರಿ ಏನೆಂದು ತಿಳಿಯಬೇಕಾಗುತ್ತದೆ.

ಆನಂದ ಮಠದ ಸೀಮಿತ ಆಕರ್ಷಣೆ

ಆ ಬಗ್ಗೆ ತಿಳಿಯುವ ಮುನ್ನ ಕೆಲವು ಪ್ರಶ್ನೆಗಳತ್ತ ಗಮನ ಹರಿಸಬೇಕಿದೆ. ಆನಂದ ಮಠ ಕಾದಂಬರಿಯ ಕಥೆ ಯೋಗ್ಯವಾಗಿದ್ದಲ್ಲಿ, ಆದರ್ಶಗಳು ಉದಾತ್ತವಾಗಿದ್ದಲ್ಲಿ, ಕಥೆ ಸಮರ್ಥನೀಯವಾಗಿದ್ದಲ್ಲಿ, ಕಥೆಯೂ ವಂದೇ ಮಾತರಮ್ ಗೀತೆಯಂತೆ, ಆಲಿಬಾಬಾನ ಕಥೆಯಂತೆ ಜನಪ್ರಿಯವೂ ಜನಜನಿತವೂ ಆಗಿರಬೇಕಿತ್ತಲ್ಲವೇ? ಕಾದಂಬರಿ ದೇಶದ ಎಲ್ಲಾ ಭಾಷೆಗಳಿಗೂ ಅನುವಾದಗೊಳ್ಳಬೇಕಿತ್ತಲ್ಲವೇ? ಪಠ್ಯಪುಸ್ತಕವಾಗಬೇಕಿತ್ತಲ್ಲವೇ? ನಿಜ ಸಂಗತಿ ಏನೆಂದರೆ ಕಾದಂಬರಿಯ ಬಂಗಾಳಿ ಪ್ರತಿಗಳು ಸಹ ಸಿಗುವುದು ಕಷ್ಟ.

ಆನಂದ ಮಠದ ಕಥೆ ಸ್ಥೂಲವಾಗಿ ಹೀಗಿದೆ: ೧೮ನೇ ಶತಮಾನದ ಆರಂಭ ಕಾಲದಲ್ಲಿ ಎಂದರೆ ೧೭೧೪-೧೫ರ ವೇಳೆಗೆ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿ ಕಲ್ಕತ್ತೆ, ಮದ್ರಾಸು ಬೊಂಬಾಯಿಗಳಲ್ಲಿ ಚೆನ್ನಾಗಿ ತಳವೂರಿತ್ತು. ಔರಂಗಜ಼ೇಬನ ಮೊಮ್ಮಗ ಮುಘಲ ಚಕ್ರವರ್ತಿ ಫಾರುಖ್‌ಸಿಯಾರ್‌ನೊಡನೆ ಒಪ್ಪಂದಗಳನ್ನು ಮಾಡಿಕೊಂಡಿತ್ತು. ಈ ಹಿನ್ನೆಲೆಯಲ್ಲಿ ಕೆಲವು ಘಟನೆಗಳನ್ನು ಊಹಿಸಿಕೊಂಡು ಬಂಕಿಮ್ ಕಥೆ ಹೆಣೆದರು. ಹಿಂದೂ-ಬ್ರಿಟಿಷ್ ಮೈತ್ರಿ ಕೂಟವನ್ನು ರಚಿಸಿಕೊಂಡು ಮುಘಲ್ ಆಳ್ವಿಕೆಯನ್ನೂ ಮುಸ್ಲಿಮರನ್ನೂ ಮಟ್ಟ ಹಾಕಿ ಹೊಸ ಹಿಂದೂ ರಾಜ್ಯವನ್ನು ಸ್ಥಾಪಿಸುವ ಆದರ್ಶವನ್ನು ತಲೆಗೇರಿಸಿಕೊಂಡ ಹಿಂದು ವೈಷ್ಣವ ಯುವಕ ಸಮೂಹವನ್ನು ಸಂಘಟಿಸಲು ಆನಂದ ಮಠದ ಪ್ರಮುಖ ಸಂತ-ಪುರೋಹಿತ ಸ್ವಾಮಿ ಸತ್ಯಾನಂದ ನಿರತನಾಗುತ್ತಾನೆ. ಇವನ ಬೆಂಬಲಕ್ಕೆ ಕ್ಷಾತ್ರ ತೇಜಸ್ವಿನ ಆದರ್ಶವಾಗಿ ಯುವಕ ಭಾವಾನಂದ ನಿಲ್ಲುತ್ತಾನೆ. ಇವನು ಕರೆದು ತಂದ ಯುವಕರನ್ನುದ್ದೇಶಿಸಿ ಸ್ವಾಮಿ ಸತ್ಯಾನಂದ ಉಪದೇಶಗಳ ಮೂಲಕ ಸ್ಫೂರ್ತಿ ನೀಡುತ್ತಾನೆ.

ಉಪದೇಶಗಳ ಸಾರಾಂಶ ಹೀಗಿದೆ: ತಾಯ್ನಾಡಿನ ಬಂಧನ ಬಿಡಿಸುವುದೇ ನಮ್ಮ ಗುರಿಯಾಗಬೇಕು, ನಮ್ಮ ಧರ್ಮ, ನಮ್ಮ ಪರಂಪರೆ, ನಮ್ಮ ಜಾತಿಗಳು, ಅವುಗಳಲ್ಲಿ ನಮಗಿರುವ ಅಭಿಮಾನ ಇವೆಲ್ಲವೂ ಮುಸ್ಲಿಮರ ಆಳ್ವಿಕೆಯಲ್ಲಿ ಅಪಾಯಕ್ಕೀಡಾಗಿದೆ. ಮುಸ್ಲಿಮರನ್ನು ಮಟ್ಟ ಹಾಕದಿದ್ದರೆ ನಮ್ಮ ಧರ್ಮಕ್ಕೆ ಉಳಿಗಾಲವಿಲ್ಲ.

ಇದರಿಂದ ಸ್ಫೂರ್ತಿಗೊಂಡ ಯುವಕರನ್ನು ಆರಿಸಿಕೊಂಡು ಮುಂದೇನು ಮಾಡಬೇಕೆಂದು ಭಾವಾನಂದ ವಿವರಿಸುತ್ತಾನೆ: ನಮ್ಮ ಹಿಂದೂಗಳ ಪೈಕಿ ಏಳು ಕೋಟಿ ಜನ ಗಟ್ಟಿ ಮನಸ್ಸು ಮಾಡಿ ಖಡ್ಗಗಳನ್ನು ಝಳಪಿಸುತ್ತ ಒಗ್ಗಟ್ಟಿನಿಂದ ಕಾಳಗಕ್ಕಿಳಿದಲ್ಲಿ ನಮ್ಮ ಆದರ್ಶ ಸಿದ್ಧಿಸುತ್ತದೆ. ಈ ಮಾತುಗಳಿಂದ ಸಂಪೂರ್ಣ ಪ್ರಭಾವಿತನಾದ

ಮಹೇಂದ್ರನೆಂಬ ಯುವಕ ಈ ಆದರ್ಶ ಸಾಧನೆಗೆ ಕಾರ್ಯಕ್ರಮವೇನಾದರೂ ಇದೆಯೇ? ಎಂದು ಕೇಳುತ್ತಾನೆ.

ಹಾಡಿನ ವಿಸ್ತೃತ ರೂಪ

ಆಗ ಬಂಕಿಮರಿಂದಲೇ ವಿಸ್ತಾರಗೊಳಿಸಲ್ಪಟ್ಟ ವಂದೇ ಮಾತರಮ್ ಹಾಡನ್ನು ಭಾವಾನಂದ ಹಾಡಿ ಅದರ ಅರ್ಥವನ್ನು ಮಹೇಂದ್ರನಿಗೆ ವಿವರಿಸುತ್ತಾನೆ. ಬೌದ್ಧಿಕವಾಗಿಯೂ, ಶಾರೀರಿಕವಾಗಿಯೂ ತರಬೇತು ಪಡೆದ ಹಿಂದೂ ವೈಷ್ಣವ ಯುವಕರ ತಂಡಗಳು ಆಯ್ಕೆ ಮಾಡಿದ ಗ್ರಾಮಾಂತರ ಪ್ರದೇಶಗಳಲ್ಲಿ ನೆಲೆಸಿದ್ದು, ಕರೆ ಬಂದೊಡನೆ ಶಸ್ತ್ರ ಸಜ್ಜಿತರಾಗಿ, ಮ್ಲೇಚ್ಛ ಮುಸ್ಲಿಮರ ಮೇಲೆ ದಾಳಿ ನಡೆಸಿ, ಕೊಳ್ಳೆಹೊಡೆದು ಅವರನ್ನು ಸುಲಿದು ಕೊಲ್ಲಬೇಕೆನ್ನುತ್ತಾನೆ. ಈ ಮಾತಿಗೆ ಮನಸೋತ ಮಹೇಂದ್ರ ಅಂಥ ಹೋರಾಟದಲ್ಲಿ ಪಾಲ್ಗೊಳ್ಳಲು ಸಿದ್ಧ ಎನ್ನುತ್ತಾನೆ. ಅದಕ್ಕಾಗಿ ಪ್ರತಿಜ್ಞೆ ಮಾಡಲು ಒಪ್ಪಿಗೆ ಕೊಡುತ್ತಾನೆ.

ಈಗ ಭಾವಾನಂದ ಹಾಡಿದ ಗೀತೆಯಲ್ಲಿ ಬಂಕಿಮರು ೧೮೭೦ರಲ್ಲಿ ರಚಿಸಿದ ಮೊದಲ ಎರಡು ವಿವಾದಕ್ಕೆ ಆಸ್ಪದವಿಲ್ಲದ ಕವನಗಳ ಜತೆಗೆ, ಭಾವಾನಂದ ವಿವರಿಸಿದ ವಿವಾದಾತ್ಮಕ ಕಾರ್ಯಸೂಚಿಯನ್ನು ವೈಭವೀಕರಿಸುವ ಮತ್ತು ಹೊಸದಾಗಿ ಬಂಕಿಮರು ರಚಿಸಿದ ಕವನಗಳೂ ಸೇರಿತ್ತು.

ಆನಂದ ಮಠದ ಕಾಲ್ಪನಿಕ ಕಥೆಯಲ್ಲಿ ಭಾವಾನಂದ ವಿವರಿಸಿದ ಮುಸ್ಲಿಮರ ಮಾರಣ ಹೋಮ ನಡೆಯುತ್ತದೆ. ಈ ದಾಂಧಲೆಗೆ ತೊಡಗುವ ಮುನ್ನ ಹಿಂದೂ ವೈಷ್ಣವ ಯುವಕರು ಮಠದ ಪ್ರತ್ಯೇಕ ಕೋಣೆಯಲ್ಲಿದ್ದ ಕಾಳಿ ಮಾತೆಯ ವಿಗ್ರಹದ ಮುಂದೆ ಪ್ರತಿಜ್ಞೆ ಮಾಡಿರುತ್ತಾರೆ. ಧ್ವಂಸ ಕಾರ್ಯ ಯಶಸ್ವಿಯಾದ ನಂತರ ಇದೇ ಕಾಳಿ ಮಾತೆಯ ಮುಂದೆ ನರ್ತಿಸುತ್ತಾರೆ. ತಮಗೆ ಸ್ಫೂರ್ತಿ ಬೇಕಾದಾಗಲೆಲ್ಲ ಈ 'ದೇಶಭಕ್ತ' ಯುವಕರು ಕಾಳಿ ಮಾತೆಯ ಬಳಿ ಹೋಗಿ ವಂದೇ ಮಾತರಮ್ ಗೀತೆ ಹಾಡುವ ಪರಿಪಾಠ ಇಟ್ಟುಕೊಂಡಿರುತ್ತಾರೆ.

ಕಾದಂಬರಿಯ ಅಂತ್ಯದಲ್ಲಿ ಸ್ವಾಮಿ ಸತ್ಯಾನಂದ ಯುವಕರನ್ನು ಹೊಗಳಿ ಅಭಿನಂದಿಸಿ ಭಾಷಣ ಮಾಡುತ್ತಾನೆ. ಆಗ, "ನಾವು ಮುಸ್ಲಿಮರನ್ನೇನೋ ಸದೆ ಬಡಿದ್ದಾಯಿತು; ಆದರೆ ಫಲಿತಾಂಶ ಹಿಂದೂ ರಾಜ್ಯ ಸ್ಥಾಪನೆ ಆಗದೆ ಬ್ರಿಟಿಷ್ ಆಳ್ವಿಕೆ ಬೇರು ಬಿಡುತ್ತಿದೆಯಲ್ಲವೇ?" "ಹಾಗೇನೂ ಆತಂಕ ಪಡಬೇಕಿಲ್ಲ; ಈಗ ನಮಗೆ ಶತ್ರುಗಳಿಲ್ಲ. ಬ್ರಿಟಿಷರು ನಮ್ಮ ಹಿತೈಸಿಗಳು. ಅವರು ಸ್ವಯಂ ಪ್ರೇರಣೆಯಿಂದ ತಮ್ಮೆಲ್ಲ ಅಧಿಕಾರವನ್ನೂ ವಿಷ್ಣುವಿಗೆ ಒಪ್ಪಿಸಿದ್ದಾರೆ" ಎಂದು ಸಮಾಧಾನ ಹೇಳುತ್ತಾನೆ. ಬಂಕಿಮರ ಖ್ಯಾತ(?) ಕಾದಂಬರಿ ಈ ಮಾತುಗಳೊಡನೆ ಕೊನೆಗೊಳ್ಳುತ್ತದೆ.

ಗೀತೆಯ ದುಷ್ಪರಿಣಾಮಗಳು

ಬಂಕಿಮರ ಮತ್ತು ಅವರ ಅಭಿಮಾನಿಗಳ ಪ್ರಕಾರ, ಹಿಂದೂ ಧರ್ಮವೆಂದರೆ ವೈದಿಕ ಧರ್ಮ, ಈ ಧರ್ಮಕ್ಕೆ ಮುಘಲ್ ಆಳ್ವಿಕೆಯಿಂದ ಧಕ್ಕೆ ಇದೆ ಎಂಬ ವಾದ ನಿರಾಧಾರ ಮತ್ತು ನಿರರ್ಥಕ ಸಂದೇಶವನ್ನು ನೀಡುವ ಮತ್ತು ಬ್ರಿಟಿಷರ ಉನ್ನತಿಯನ್ನು ಸ್ವಾಗತಿಸುವ ಆನಂದ ಮಠ ಕಾದಂಬರಿಯನ್ನು ಬರೆಯುವ ಔಚಿತ್ಯವೇನಿತ್ತು? ಆ ಹೊತ್ತಿಗಾಗಲೇ ಅಷ್ಟಿಷ್ಟು ಜನಪ್ರಿಯತೆ ಗಳಿಸಿದ್ದ ವಂದೇ ಮಾತರಮ್‌ಗೆ ವಿವಾದಾತ್ಮಕ ಚಿಂತನೆ-ವಿಚಾರಗಳಿಗೆ ಇಂಬು ಕೊಡುವ ಸಾಲುಗಳನ್ನು ಸೇರಿಸಿ ಅದನ್ನು ಈ ವಿಕೃತ ಕಥೆಯಲ್ಲಿ ಅಳವಡಿಸುವ ಅಗತ್ಯವಿತ್ತೆ? ಮುಸ್ಲಿಮರನ್ನುದ್ದೇಶಿಸಿ ಅವಹೇಳನ ಮಾಡುವುದನ್ನೇ ದೇಶಭಕ್ತಿ ಎನ್ನುವವರೊಡನೆ ಮುಸ್ಲಿಮರು ಹೊಂದಿಕೊಂಡು ಬಾಳಬೇಕು ಎಂಬುದರಲ್ಲಿ ಅರ್ಥವಿದೆಯೇ? ಆದ್ದರಿಂದಲೇ ಮುಸ್ಲಿಮರ ಸಂಖ್ಯೆ ಹೆಚ್ಚು ಇದ್ದ ಬಂಗಾಳದ ಪೂರ್ವಭಾಗವನ್ನು ೧೯೦೫ ರಲ್ಲಿ ಬ್ರಿಟಿಷ್ ಸರ್ಕಾರ ಬೇರ್ಪಡಿಸಿತ್ತು. ಇದಕ್ಕೆ ೨೩ ವರ್ಷ ಮುಂಚೆ ಆನಂದ ಮಠ ಪ್ರಕಟವಾಗಿತ್ತು.

ಬಂಗಾಳದ ವಿಭಜನೆಯನ್ನು ಭಾರೀ ರೋಷಾವೇಶ'ದಿಂದ ಆಗ್ಗೆ ದೇಶಭಕ್ತರೆನಿಸಿಕೊಂಡವರು ವಿರೋಧಿಸಿದರು. ಮುಸ್ಲಿಮರ ವಿರೋಧವಿದ್ದಾಗ್ಯೂ ಆ ಸಮಯದಲ್ಲಿ ಹಿಂದೂ ದೇಶಭಕ್ತರು(?) ವಿವಾದಾತ್ಮಕ ಸಾಲುಗಳ ಸೇರ್ಪಡೆಯಾಗಿದ್ದ ವಂದೇ ಮಾತರಮ್ ಗೀತೆಯನ್ನು ಹಾಡುತ್ತಿದ್ದರು. ಯಾರ ಆಳ್ವಿಕೆಯನ್ನು ಆನಂದ ಮಠ ಸ್ವಾಗತಿಸಿತ್ತೋ ಅದೇ ಬ್ರಿಟಿಷರ ಗುಂಡುಗಳಿಗೆ ವಂದೇ ಮಾತರಮ್ ಹಾಡುತ್ತಲೇ ಬಲಿಯಾದರು. ಸದೆ ಬಡಿದು ಚಳುವಳಿಯನ್ನು ಬ್ರಿಟಿಷರು ಮಟ್ಟ ಹಾಕಿದರು. ಮುಸ್ಲಿಮ್ ಭಾವನೆಗಳನ್ನು ಕಡೆಗಣಿಸಿ ಈ ಗೀತೆಯನ್ನು ಹಾಡುವ ಪರಿಪಾಠವನ್ನು ಕೆಲವು ಕಾಂಗ್ರೆಸ್ ನಾಯಕರು ಮುಂದುವರೆಸಿದರು! ಮುಸ್ಲಿಮ್ ಲೀಗ್ ಬಲಗೊಳ್ಳುತ್ತ ಹೋದುದರಲ್ಲಿ ಆಶ್ಚರ್ಯವೇನಿದೆ? ಬ್ರಿಟಿಷರ ಒಡೆದು ಆಳುವ ನೀತಿಯ ಬಗ್ಗೆ ಕೇಳದವರಿಲ್ಲ. ಆದರೆ ಇಲ್ಲಿ ಒಡಕನ್ನುಂಟು ಮಾಡುವ ಕೆಲಸ ಮಾಡಿದ್ದು ಬ್ರಿಟಿಷರಲ್ಲ.



ನೆಹರೂರಿಗೆ ರವೀಂದ್ರರ ಸೂಚನೆ

೧೯೩೭ರಲ್ಲಿ ಹಿಂದು-ಮುಸ್ಲಿಮ್ ಒಡಕಿಗೆ ಈ ಗೀತೆ ನಾಂದಿ ಎಂದು ಮುಸ್ಲಿಮ್ ವರಿಷ್ಠರು ಎಚ್ಚರಿಸಿದಾಗ ಜವಾಹರಲಾಲ್ ನೆಹರೂ, ರವೀಂದ್ರನಾಥ ಠಾಗೂರರಿಂದ ಸ್ಪಷ್ಟೀಕರಣ ಕೇಳಿದರು. ೧೮೭೦ರಲ್ಲಿ ಎಂದರೆ ಆನಂದ ಮಠ ಕಾದಂಬರಿಯ ಪ್ರಕಟನೆಗೆ ೧೨ ವರ್ಷ ಮೊದಲು ಬಂಕಿಮರು ರಚಿಸಿದ್ದ ವಂದೇ ಮಾತರಮ್ ಗೀತೆ ಎಂದರೆ ಆ ಹಾಡಿನ ಪೂರ್ಣ ಪಾಠದ ಮೊದಲ ಎರಡು ಕವನಗಳಲ್ಲಿ ಆಕ್ಷೇಪಾರ್ಹವಾದುದೇನೂ ಇಲ್ಲವೆಂದೂ ಈ ಎರಡು ಕವನಗಳು ದೇಶದ ಸೊಗಸನ್ನು ಹೊಗಳುವ ಸಾಲುಗಳನ್ನಷ್ಟೇ ಹೊಂದಿದೆಯಾದ್ದರಿಂದ ಆ ಎರಡು ಕವನಗಳನ್ನಷ್ಟೇ ಸಾರ್ವಜನಿಕವಾಗಿ ಹಾಡುವುದು ಸೂಕ್ತ ಎಂದು ಟಾಗೂರರು ನೆಹರೂರಿಗೆ ತಿಳಿಸಿದರು.

ಆದರೆ ಆನಂದ ಮಠದ ಕಥೆಗಾಗಿ ವಿಸ್ತರಿಸಿದ ಗೀತೆಯ ಪೂರ್ಣ ಪಾಠದ ಪಠಣವೇ ಸರಿ ಎನ್ನುವವರಿದ್ದಾರೆ. ಇಂಥ ಹಠವಾದಿ ಹಿಂದುಗಳಿರುವವರೆಗೆ ಈ ಗೀತೆಯನ್ನು ವಿರೋಧಿಸುವ ಮುಸ್ಲಿಮರೂ ಇದ್ದೇ ಇರುತ್ತಾರೆ. ಇರುವುದು ಸಹಜ. ಅರ್ಥ, ಭಾವನೆ, ಸಂದೇಶ, ಜನಪ್ರಿಯತೆ ಇವೆಲ್ಲವನ್ನೂ ದೃಷ್ಟಿಯಲ್ಲಿರಿಸಿಕೊಂಡು ನೋಡಿದಾಗ ಡಾ॥ ಇಕ್ಬಾಲ್ ರಚಿಸಿದ 'ಸಾರೇ ಜಹಾನ್ ಸೆ ಅಚ್ಛಾ ಹಿಂದೂಸ್ತಾನ್ ಹಮಾರಾ' ಗೀತೆ ವಂದೇ ಮಾತರಮ್ ಗೀತೆಗಿಂತ ಶ್ರೇಷ್ಠವೆನಿಸುತ್ತದೆ. ಆ ಹಾಡನ್ನು ಉತ್ಸಾಹದಿಂದ ಹಾಡುವ ಮುಸ್ಲಿಮರು ವಂದೇಮಾತರಮ್ ಬಗ್ಗೆ ಆತಂಕ ವ್ಯಕ್ತ ಪಡಿಸುತ್ತಿರುವುದರಲ್ಲಿ ನ್ಯಾಯವಿದೆ ಎಂಬುದನ್ನು ಈ ಲೇಖನದಲ್ಲಿ ಸಾದರ ಪಡಿಸಿರುವ ಮಾಹಿತಿಗಳನ್ನು ವಿಶ್ಲೇಷಿಸಿದ ಯಾರಾದರೂ ಒಪ್ಪುತ್ತಾರೆ.

(ಸೌಜನ್ಯ: ಸನ್ಮಾರ್ಗ)

ರವೀಂದ್ರನಾಥ್ ಠಾಗೋರ್ ಮತ್ತು ವಂದೇ ಮಾತರಮ್

ರಾಷ್ಟ್ರಗೀತೆಯಾಗಿ ಮನ್ನಣೆ ಪಡೆದ 'ಜನಗಣಮನ' ಬರೆದ ಶ್ರೀ ರವೀಂದ್ರನಾಥ ಠಾಗೋರರು ೧೯೩೭ರಲ್ಲಿ ಸುಭಾಸ್ ಚಂದ್ರ ಬೋಸ್‌ರಿಗೆ ಬರೆದ ಪತ್ರದಲ್ಲಿ 'ವಂದೇ ಮಾತರಮ್' ಗೀತೆಯ ಕುರಿತು ಹೀಗೆ ಅಭಿಪ್ರಾಯ ಪಟ್ಟಿದ್ದರು,

"ದುರ್ಗಾ ದೇವಿಯ ಸ್ತುತಿಯು ವಂದೇ ಮಾತರಮ್ ಗೀತೆಯ ಸಾರಾಂಶವಾಗಿದೆ ಎಂಬುದು ನಿರ್ವಿವಾದ. ಅದರಲ್ಲಿ ಬಂಕಿಮ್ ಚಂದ್ರ ಚಟರ್ಜಿಯವರು ದುರ್ಗೆ ಮತ್ತು ಬಂಗಾಳವನ್ನು ಪರಸ್ಪರ ಅವಿಭಾಜ್ಯವೆಂದು ಹೇಳಿದ್ದಾರೆ. ಹಾಗಿ ದ್ದರೂ ಓರ್ವ ಮುಸ್ಲಿಮನು ಹತ್ತು ಕೈಗಳಿರುವ ದೇವಿಯನ್ನು ಸ್ವದೇಶ ಅಥವಾ ರಾಷ್ಟ್ರದ ರೂಪದಲ್ಲಿ ಅಂಗೀ ಕರಿಸ ಬಹುದೆಂದು ನಿರೀಕ್ಷಿಸಲು ಸಾಧ್ಯವಿಲ್ಲ. ಈ ಬಾರಿ ಹೆಚ್ಚಿನ ಪತ್ರಿಕೆಗಳು ತಮ್ಮ ದುರ್ಗಾ ಪೂಜೆಯ ವಿಶೇ ಷಾಂಕಗಳಲ್ಲಿ 'ವಂದೇ ಮಾತರಮ್' ಗೀತೆಯನ್ನು ಪ್ರಕಟಿಸಿದ್ದಾರೆ.

ಆ ಎಲ್ಲ ಪತ್ರಿಕೆಗಳ ಸಂಪಾದಕರು ಈ ಗೀತೆಯನ್ನು ದುರ್ಗೆಯ ಭಕ್ತಿ ಗೀತೆಯೆಂದೇ ಪರಿಗಣಿಸಿದ್ದಾರೆನ್ನಬಹುದು. ಸಾಹಿತ್ಯ ಕೃತಿಯಾಗಿರುವ 'ಆನಂದ ಮಠ' ಕಾದಂಬರಿಗೆ ಈ ಹಾಡು ಸರಿಹೊಂದುತ್ತದೆ. ಆದರೆ ಶಾಸನ ಸಭೆಯಲ್ಲಿ ಸರ್ವ ಧರ್ಮಿಯರೂ ಸೇರುವುದರಿಂದ ಅಂಥ ಕಡೆಗಳಲ್ಲಿ ಈ ಹಾಡು ಸರಿ ಹೊಂದುವುದಿಲ್ಲ. ಬಂಗಾಳಿ ಮುಸ್ಲಿಮರು ಮತಾಂಧತೆಯಿಂದ ವರ್ತಿಸಿದಾಗಲೆಲ್ಲಾ ನಾವು ತಾಳ್ಮೆಗೆಡುತ್ತೇವೆ. ಹಾಗಿರುತ್ತಾ ನಾವು ಕೂಡಾ ಅಂಥ ಮಂದಿಯಂತೆ ತರ್ಕಹೀನ ಬೇಡಿಕೆಗಳನ್ನು ಮಂಡಿಸುವುದು ಆತ್ಮಘಾತುಕವಾದೀತು.

ವಂದೇ ಮಾತರಂನ ರಾಷ್ಟ್ರೀಯತೆ?

ಏ.ಕೆ. ಕುಕ್ಕಿಲ

ಸ್ವಾತಂತ್ರ್ಯದ ಸಮಯದಲ್ಲಿ ವಂದೇ ಮಾತರಮ್ ಹೋರಾಟಕ್ಕೆ ಸ್ಫೂರ್ತಿಯನ್ನು ಕೊಟ್ಟಿದೆ ಎಂಬ ಕಾರಣಕ್ಕಾಗಿ ಇವತ್ತು ಅದನ್ನು ಹಾಡಬೇಕೆಂದು ಒತ್ತಾಯಿಸುವುದಾದರೆ, ಭಗತ್ ಸಿಂಗ್‌ನ ಇಂಕ್ವಿಲಾಬ್ ಜಿಂದಾಬಾದ್ ಬಗ್ಗೆಯೂ ಇಂಥ ಒತ್ತಾಯವನ್ನು ಹೇರಬೇಕಾಗುತ್ತದೆ. ಖಿಲಾಫತ್ ಚಳುವಳಿಯ ಸ್ಫೂರ್ತಿಯ ಘೋಷಣೆಯೇ, 'ಬೋಲೋ ತಕ್‌ಬೀರ್ ಅಲ್ಲಾ ಹನು ಅಕ್ಬರ್' ಎಂಬುದಾಗಿತ್ತು. ಹಾಗಾದರೆ ಇದನ್ನೂ ಹಾಡಬೇಕಲ್ಲವೇ? ಒಂದು ವೇಳೆ ಹಳ್ಳಿಹಳ್ಳಿಗಳಲ್ಲಿ ಎದ್ದ ಸ್ವಾತಂತ್ರ್ಯ ಪ್ರಜ್ಞೆಯ ಚಲುವಳಿಯನ್ನು ಒಂದೊಮ್ಮೆ ದಾಖಲಿಸಿಡಲು ಸಾಧ್ಯವಾಗಿದ್ದರೆ, ಸ್ಥಳೀಯ ಭಾಷೆಯ ಬೇರೆ ಬೇರೆ ಹಾಡುಗಳು ಅಲ್ಲಿ ಸ್ಫೂರ್ತಿಯ ಚಿಲುಮೆಯಾದದ್ದು ಗೋಚರವಾಗುತ್ತಿತ್ತು. ಕೇರಳದ ಮಾಪಿಳ್ಳೆಗಳು ಯಾವ ಘೋಷಣೆಯನ್ನು ಕೂಗಿರಬಹುದು? ತುಳುವ ಅಬ್ಬಕ್ಕಳ ಘೋಷಣೆ ಯಾವುದಾಗಿರಬಹುದು?

'ರಾಷ್ಟ್ರೀಯತೆ' ಎಂಬುದಕ್ಕೆ ನಿಘಂಟಿನಲ್ಲಿರುವ ಅರ್ಥ: 'ಜನರಿಗೆ ತಮ್ಮ ದೇಶದ 'ಒಟ್ಟು ಸತ್ವವನ್ನು ಕುರಿತು ಇರುವ ಅಭಿಮಾನ. ಒಟ್ಟು ದೇಶದ ಐಕ್ಯದ ಪರಿಭಾವನೆ,' 'ಜನಾಂಗವಾಗಿರುವುದು' ಇತ್ಯಾದಿ. 'ವಂದನೆ' ಎಂಬುದಕ್ಕೆ 'ಬಾಗುವಿಕೆ,' 'ನಮನ' ಇತ್ಯಾದಿ ಅರ್ಥಗಳಿವೆ. ಕಳೆದ ಒಂದು ವಾರದ ಪತ್ರಿಕೆಗಳನ್ನು ತಿರುವಿ ಹಾಕಿದರೆ, ಈ ಎರಡು ಪದಗಳು ಮಾತ್ರವಲ್ಲ, ಇದಕ್ಕೆ ಸಮಾನ ರೂಪದ ಇಲ್ಲವೇ ವಿಪರೀತಾರ್ಥದ ಪದಗಳು ಶೇ. ೫೦ ರಷ್ಟಾದರೂ ಕಾಣಿಸಿವೆ. ವಂದೇ ಮಾತರಮನ್ನು ಈ ಎಲ್ಲ ಪದಗಳೊಂದಿಗೆ ಜೋಡಿಸಿ, ಇದನ್ನು ಹಾಡಲು ಒಪ್ಪದ ಮುಸ್ಲಿಮರ ದೇಶನಿಷ್ಠೆಯು ಅನುಮಾನಾಸ್ಪದ ಮಾತ್ರವಲ್ಲ, ಅಪಾಯಕಾರಿಯಾದದ್ದು ಎಂಬುದು ತೀರ್ಪು ನೀಡಲಾಗಿದೆ. ಮುಜಫ್ಫರ್ ಹುಸೇನ್ ಎಂಬ ಪದ್ಮಶ್ರೀ ಪುರಸ್ಕೃತ ಸಂಘ ಪರಿವಾರದ ಬರಹಗಾರ, "ವಂದೇ ಮಾತರಮ್ ಹಾಡದೇ ಇರುವುದು ಭಯೋತ್ಪಾದನೆಯನ್ನು ಹೆಚ್ಚಿಸುವಂಥದ್ದು" (ವಿ.ಕ. ೬-೯-೦೬) ಎಂದು ಘೋಷಿಸಿದ್ದಾರೆ. ಇರಲಿ ಇಂಥ ಘೋಷಣೆಗಳು ಮತ್ತು ಮುಸ್ಲಿಮ್ ರಾಷ್ಟ್ರೀಯತೆಯ ಕುರಿತಂತೆ ಅನುಮಾನಗಳು ಆಗಾಗ ವ್ಯಕ್ತವಾಗುತ್ತಲ್ಲೇ ಇರುತ್ತವೆ.

ನಿಜವಾಗಿ ರಾಷ್ಟ್ರೀಯತೆ ಎಂಬುದೇ ಅತ್ಯಂತ ಸಂಕುಚಿತಾರ್ಥ ಉಳ್ಳದ್ದು. ತನ್ನ ರಾಷ್ಟ್ರವನ್ನು ಪ್ರೀತಿಸುವ ಭರದಲ್ಲಿ ಇತರ ರಾಷ್ಟ್ರಗಳನ್ನು ದ್ವೇಷಿಸುವ ಆಂತರಿಕ ಸ್ಫೂರ್ತಿಯನ್ನು ಕೊಡುವಂಥದ್ದು. ಉಗ್ರ ರಾಷ್ಟ್ರೀಯತೆ ಇದರ ಮುಂದುವರಿದ ರೂಪವಾಗಿದೆ. ತನ್ನ ದೇಶ ತಪ್ಪು ಮಾಡಿದರೂ ಅದನ್ನು ಬೆಂಬಲಿಸಿ ಮಾತಾಡುವ ಮತ್ತು ಅದಕ್ಕಾಗಿ ನೆರೆಯ ರಾಷ್ಟ್ರದ 'ಸರಿ'ಯನ್ನೂ 'ತಪ್ಪೆಂದು' ವಾದಿಸುವ ಮನೋಭಾವ. ಈ ಮನೋಭಾವವು ಮುಂದುವರಿದು ದೇಶವನ್ನು ಪೂಜನೀಯ ಮಟ್ಟಕ್ಕೆ ಕೊಂಡೊಯ್ಯುತ್ತದೆ. ಹೀಗೆ ಮಾಡುವಾಗ ಚರಿತ್ರೆಯಲ್ಲಿ ಕೆಲವು ಅನಿವಾರ್ಯ ಮಾರ್ಪಾಡುಗಳನ್ನೂ ಮಾಡಬೇಕಾಗುತ್ತದೆ. ಈ ದೇಶದಲ್ಲಿ ಇಂತಿಂಥ ಮಹಾನುಭಾವರು, ದೇವರುಗಳು ಹುಟ್ಟಿದ್ದಾರೆಂದೂ ಆದ್ದರಿಂದ ಇಲ್ಲಿಯ ಅನೇಕರು ವಸ್ತುಗಳು ಇಲ್ಲವೇ ಎಲ್ಲವೂ ಪವಿತ್ರವೆಂದೂ ಹೇಳಬೇಕಾಗುತ್ತದೆ. ಇದಕ್ಕಾಗಿ ಇತಿಹಾಸವನ್ನು ತಿರುಚಿ ತಮ್ಮ ವಾದಕ್ಕಾಗಿ ಸಾಕ್ಷ್ಯಗಳನ್ನು ತಯಾರಿಸಬೇಕಾಗುತ್ತದೆ.

ಐನ್‌ಸ್ಟೀನ್ ಇದಕ್ಕೆ ಅತ್ಯುತ್ತಮ ಉದಾಹರಣೆ. ಆತ ಯಹೂದಿ ಎಂಬ ಕಾರಣಕ್ಕಾಗಿ ಆತನ ದೇಶನಿಷ್ಠೆಯನ್ನು ಪ್ರಶ್ನಿಸಲಾಯಿತು. ಆತನ ಅಪಾರ ಪ್ರತಿಭೆಯನ್ನು ಮಾನ್ಯ ಮಾಡಲು ಕೂಡ, ಹಿಟ್ಲರ್‌ನ ಉಗ್ರ ರಾಷ್ಟ್ರೀಯತೆ ಅಡ್ಡ ಬಂತು. ನಮ್ಮ ದೇಶದಲ್ಲೂ ಇವತ್ತು ನಡೆಯುತ್ತಿರುವುದು ಇದೇ ಸ್ವರೂಪದ ರಾಷ್ಟ್ರೀಯತೆಯಾಗಿದೆ. ಈ ರಾಷ್ಟ್ರೀಯತೆಗೆ 'ಬಹು ಸಂಖ್ಯಾತರು' ಎಂಬ ಅರ್ಥವಿದೆ ಮತ್ತು ಬಹುಸಂಖ್ಯಾತರು ಏನೆಲ್ಲಾ ಆಜ್ಞೆ ಮಾಡುತ್ತಾರೋ ಅಥವಾ ಬಹುಸಂಖ್ಯಾತರ ಇಷ್ಟ ಏನಿದೆಯೋ, ಅದು ಎಲ್ಲರ ಇಷ್ಟ ಆಗಿ ಮಾರ್ಪಡುವುದೇ ರಾಷ್ಟ್ರೀಯತೆಯಾಗಿದೆ. ಅವರು 'ವಂದನೆ' ಎಂಬ ಪದಕ್ಕೆ ಕೊಡವ ಅರ್ಥ ಸಂಕುಚಿತವಾದರೂ ಅದನ್ನು ವಿಶಾಲ ವ್ಯಾಪ್ತಿಯದ್ದೆಂದು ಇತರರು ಅಂಗೀಕರಿಸಬೇಕು. ದನದ ಮಾಂಸಕ್ಕೂ ರಾಷ್ಟ್ರನಿಷ್ಠೆಗೂ ಸಂಬಂಧವಿದೆ. ದನದ ಮಾಂಸ ತಿನ್ನದಿರುವುದೇ ರಾಷ್ಟ್ರನಿಷ್ಠೆ. ವಂದೇ ಮಾತರಮನ್ನು ಮುಸ್ಲಿಮ್ ಮಕ್ಕಳ ಬಾಯಲ್ಲಿ ಬಲವಂತದಿಂದ ಹಾಡಿಸುವುದೇ ದೇಶಪ್ರೇಮ. ಕೊನೆಗೆ ಇಂಥ ರಾಷ್ಟ್ರೀಯತೆಯ ಕಲ್ಪನೆಯು ಹೋಲೋಕಾಸ್ಟ್‌ನಂಥ ನರಮೇಧ ಕ್ಯಾಂಪ್‌ಗಳನ್ನು ತಯಾರಿಸಿ, ತಮ್ಮನ್ನು ಒಪ್ಪದವರನ್ನು ಸಾಮೂಹಿಕವಾಗಿ ಸುಡುವ ಅತಿರೇಕದವರೆಗೆ ತಲುಪುತ್ತದೆ.

ವಂದೇ ಮಾತರಮ್ ಒಂದು ಗೀತೆ ಮಾತ್ರ, ಅದನ್ನು ಬರೆದ



ಬಂಕಿಮಚಂದ್ರ ಚಟರ್ಜಿ ಷೇಕ್ಸ್‌ಪಿಯರ್ ಏನೂ ಅಲ್ಲ ಅಥವಾ ನೋಬೆಲ್ ಸಿಕ್ಕಿದ ಟಾಗೂರ್ ಕೂಡಾ ಅಲ್ಲ. 'ಆನಂದ ಮಠ'ವನ್ನು ಬಿಟ್ಟರೆ, ಉಳಿದಂತೆ ಅವರು ಸಾಹಿತ್ಯಕವಾಗಿ ಮಹತ್ತರವದದ್ದೇನನ್ನೂ ಬರೆದಿಲ್ಲ. ಸ್ವಾತಂತ್ರ್ಯದ ಸಮಯದಲ್ಲಿ ವಂದೇ ಮಾತರಮ್ ಹೋರಾಟಕ್ಕೆ ಸ್ಫೂರ್ತಿಯನ್ನು ಕೊಟ್ಟಿದೆ ಎಂಬ ಕಾರಣಕ್ಕಾಗಿ ಇವತ್ತು ಅದನ್ನು ಹಾಡಬೇಕೆಂದು ಒತ್ತಾಯಿಸುವುದಾದರೆ, ಭಗತ್ ಸಿಂಗ್‌ನ ಇಂಕ್ವಿಲಾಬ್ ಜಿಂದಾಬಾದ್ ಬಗ್ಗೆಯೂ ಇಂಥ ಒತ್ತಾಯವನ್ನು ಹೇರಬೇಕಾಗುತ್ತದೆ. ಖಿಲಾಫತ್ ಚಳುವಳಿಯ ಸ್ಫೂರ್ತಿಯ ಘೋಷಣೆಯೇ, 'ಬೋಲೋ ತಕ್‌ಬೀರ್ ಅಲ್ಲಾ ಹು ಅಕ್ಬರ್' ಎಂಬುದಾಗಿತ್ತು. ಹಾಗಾದರೆ ಇದನ್ನೂ ಹಾಡಬೇಕಲ್ಲವೇ? ಒಂದು ವೇಳೆ ಹಳ್ಳಿಹಳ್ಳಿಗಳಲ್ಲಿ ಎದ್ದ ಸ್ವಾತಂತ್ರ್ಯ ಪ್ರಜ್ಞೆಯ ಚಳುವಳಿಯನ್ನು ಒಂದೊಮ್ಮೆ ದಾಖಲಿಸಿಡಲು ಸಾಧ್ಯವಾಗಿದ್ದರೆ, ಸ್ಥಳೀಯ ಭಾಷೆಯ ಬೇರೆ ಬೇರೆ ಹಾಡುಗಳು ಅಲ್ಲಿ ಸ್ಫೂರ್ತಿಯ ಚಿಲುಮೆಯಾದದ್ದು ಗೋಚರವಾಗುತ್ತಿತ್ತು. ಕೇರಳದ ಮಾಪಿಳ್ಳೆಗಳು ಯಾವ ಘೋಷಣೆಯನ್ನು ಕೂಗಿರಬಹುದು? ತುಳುವ ಅಬ್ಬಕ್ಕಳ ಘೋಷಣೆಯಾವುದಾಗಿರಬಹುದು? ಖಂಡಿತ ಪಾಡ್ದನಗಳು, ಕವ್ವಾಲಿಗಳು ಎಲ್ಲವೂ ಸ್ವಾತಂತ್ರ್ಯ ಹೋರಾಟದಲ್ಲಿ ಸ್ಫೂರ್ತಿಯನ್ನು ತುಂಬಿದ್ದುವು. ಆದರೆ ಇವತ್ತು ವಂದೇ ಮಾತರಮ್‌ಗೆ ಮಾತ್ರ ಭಯಂಕರ ಸ್ವರೂಪ ಬಂದಿದೆಯೆಂದರೆ, ಅದರ ಹಿಂದೆ 'ರಾಷ್ಟ್ರೀಯತೆ' ಎಂಬ ಅಸಂತುಲಿತ ಕಲ್ಪನೆಯ ಉಗ್ರ ತೊಗಲು ಇದೆ ಎಂದೆ ಹೇಳಬೇಕಾಗುತ್ತದೆ.

ರಾಷ್ಟ್ರೀಯತೆಗೆ ಸಾಮಾನ್ಯ ನಿಘಂಟಿನಲ್ಲಿರುವ ಅರ್ಥ ಅದನ್ನು ಪ್ರತಿಪಾದಿಸುವವರ ನಿಘಂಟಿನಲ್ಲಿಲ್ಲ. ಅಲ್ಲಿರುವುದು ಅವರದೇ ಸಂಸ್ಕೃತಿ, ಅವರದೇ ಕಾನೂನು, ಅವರದೇ ಆಚಾರ, ಅವರದೇ ಆಹಾರ. ಇದನ್ನು ಒಪ್ಪದಿರುವುದು ರಾಷ್ಟ್ರ ದ್ರೋಹವಾಗುತ್ತದೆ. ಇದಕ್ಕೆ ಉತ್ತಮ ಉದಾಹರಣೆ ಜಜ್ಜಾರ್ ಪ್ರಕರಣ. ದನದ ಮಾಂಸ ತಿನ್ನುವುದು ದಲಿತರ ಮಟ್ಟಿಗೆ ಸಮ್ಮತವಾಗಿರಬಹುದು. ಆದರೆ ರಾಷ್ಟ್ರೀಯತೆ ಎಂಬ ಸಂಕುಚಿತ ಕಲ್ಪನೆಯ ಗುತ್ತಿಗೆ ಹಿಡಿದವರ ಮಟ್ಟಿಗೆ ಅದು ಆಹಾರವಾಗಲು ಸಾಧ್ಯವಿಲ್ಲ. ಆದ್ದರಿಂದ ಅದರ ಚರ್ಮವನ್ನು ಮಾರಲು ಹೊರಟ ದಲಿತರ ರಾಷ್ಟ್ರೀಯತೆ (ದೇಶನಿಷ್ಠೆ) ಪ್ರಶ್ನಾರ್ಹವಾಗುತ್ತದೆ. ಅಂತಹವರನ್ನು ಕೊಲ್ಲುವುದು ರಾಷ್ಟ್ರಪ್ರೇಮವಾಗುತ್ತದೆ. ಇವತ್ತಿನ ವಂದೇ ಮಾತರಮ್‌ಗೂ ಕೂಡ ಇಂಥದ್ದೇ ರಾಷ್ಟ್ರೀಯನ್ನು ಜೋಡಿಸಲಾಗಿದೆ. ಇದನ್ನು ಹಾಡದವರು ದೇಶದ್ರೋಹಿಗಳಾಗುವುದು ಮತ್ತು ಹಾಡಿದವರು ೨೪ ಕ್ಯಾರೆಟ್ ದೇಶಪ್ರೇಮಿಗಳಾಗುವುದು ಇದೇ ಕಾರಣದಿಂದಾಗಿದೆ.

ವಂದೇ ಮಾತರಮ್‌ನ ಬಗ್ಗೆ ಅದ್ಭುತವಾದಗಳನ್ನು ಮಂಡಿಸುತ್ತಿರುವ ಪತ್ರಿಕೆಗಳನ್ನೊಮ್ಮೆ ಪರಿಶೀಲಿಸಿ. ತಪ್ಪಿಯೂ ಅವುಗಳು ಆನಂದ ಮಠ ಕಾದಂಬರಿಯಲ್ಲಿ ಏನಿದೆ ಎಂಬುದನ್ನು ಉಲ್ಲೇಖಿಸುವುದಿಲ್ಲ. ಕಾದಂಬರಿಯ ಕನಿಷ್ಠ ಕೆಲವು ಪುಟಗಳನ್ನಾದರೂ ಹಾಗೆಯೇ ತಂತಮ್ಮ ಪತ್ರಿಕೆಗಳಲ್ಲಿ ಮುದ್ರಿಸುವ ಉದಾರತೆ ತೋರಿದ್ದರೆ, ಸತ್ಯ ಬಯಲಾಗುತ್ತಿತ್ತು. ಇದರ ಬದಲು, "ಇಸ್ಲಾಮಿನಲ್ಲಿ ತಾಯಿಯನ್ನು ಪೂಜ್ಯ ಎಂದಿಲ್ಲವೇ? ಪೈಗಂಬರ್ ಮಹಮ್ಮದ್ ಸಾಹೇಬರ ನುಡಿಯಲ್ಲಿ ತಾಯಿಯ ಕಾಲಿನಡಿ ಸ್ವರ್ಗವಿದೆ ಎಂಬ ಮಾತಿದೆ. ಇಸ್ಲಾಮ್ ಮೂರ್ತಿ ಪೂಜೆಗೆ ವಿರುದ್ಧ ಎಂದಾದರೆ, ತಾಯಿ ಮತ್ತು ಅವರ ಕಾಲಿನ ಕಲ್ಪನೆಯ ಚಿತ್ರವೊಂದನ್ನು ನಮ್ಮ ಕಣ್ಣಿನ ಮುಂದೆ ತರುವುದಿಲ್ಲವೇ?" ಎಂದು ಮುಜಫ್ಫರ್ ಹುಸೇನ್ ಪ್ರಶ್ನಿಸಿದ್ದಾರೆ. (ವಿ.ಕ. ೦೬-೦೯-೦೬)

ತಾಯಿಯನ್ನು ಪೂಜ್ಯಳು ಎಂದು ಇಸ್ಲಾಮ್ ಕಲಿಸಿಲ್ಲ. ಅದು ಹಿಂದೂ ಧರ್ಮದ ಕಲ್ಪನೆ. ಬಹುಶಃ ಆರೆಸ್ಸೆಸ್ ಕ್ಯಾಂಪ್‌ನಲ್ಲಿ ಪಡೆದ ಹಿಂದೂ ಧರ್ಮದ ತರಬೇತಿಯನ್ನು ಹುಸೇನರು ಇಸ್ಲಾಮ್ ಧರ್ಮದ ತರಬೇತಿಯೆಂದು ತಪ್ಪಾಗಿ ಭಾವಿಸಿರಬೇಕು. ಬರೆಯುವಾಗ ಇಂಥ ತಪ್ಪುಗಳು ಆಗಾಗ ಅವರಿಂದ ಸಂಭವಿಸಿರುತ್ತದೆ. ಯಾಕೆಂದರೆ ಉಗ್ರ ರಾಷ್ಟ್ರೀಯತೆಯ ವಕ್ತಾರರನ್ನು ಮೆಚ್ಚಿಸಬೇಕಾದರೆ ಕೆಲವು ಸುಳ್ಳುಗಳನ್ನು ಹೇಳಲೇಬೇಕಲ್ಲವೇ?

ಇನ್ನು, ತಾಯಿಯ ಕಾಲಿನಡಿ ಸ್ವರ್ಗವಿದೆ ಎಂಬ ಪ್ರವಾದಿಯ ನುಡಿ, ತಾಯಿಯ ಮಹತ್ವವನ್ನು ಸಾರುವಂಥದ್ದಾಗಿದೆ. ಅಲ್ಲಿ ಯಾವುದೇ ವಂದನೆ (ಬಾಗುವಿಕೆ)ಯಿಲ್ಲ. ತಾಯಿಯನ್ನು ಗೌರವದಿಂದ ನೋಡಿಕೊಂಡರೆ ನಿಮಗೆ ಸ್ವರ್ಗ ಸಿಗುತ್ತದೆ ಎನ್ನುವುದೇ ಆ ನುಡಿಯ ಅರ್ಥ. ಅದು ಬಾಗುವಿಕೆಯಲ್ಲ. ಯಾವ ರೀತಿಯ ಪೂಜನೀಯ ಭಾವವೂ ಆ ನುಡಿಯಲ್ಲಿಲ್ಲ. ಒಂದು ವೇಳೆ ಹುಸೇನರು ಹೇಳಿದಂತೆ, ತಾಯಿ ಮತ್ತು ಅವರ ಕಾಲಿನ ಕಲ್ಪನೆಯ ಚಿತ್ರವೊಂದು ಈ ನುಡಿಯಿಂದ ಒಡ ಮೂಡುತ್ತದೆ ಎಂದಾದರೆ, ಮುಸ್ಲಿಮರು ತಾಯಿಯ ಪಾದಕ್ಕೆ ಎರಗುವುದನ್ನು ಜಾಗತಿಕವಾಗಿ ಕಾಣಬೇಕಿತ್ತು. ಸ್ವಯಂ ಹುಸೇನರೇ, ತಾಯಿಯ ಪಾದಕ್ಕೆ ನಮಿಸಿರಬೇಕಿತ್ತು. ಆದರೆ ವಂದೇ ಮಾತರಮನ್ನು ಸಮರ್ಥಿಸುವುದಕ್ಕಾಗಿ ಸಿಕ್ಕ ಸಿಕ್ಕ ಪುರಾವೆಗಳನ್ನು ಮುಂದೊಡ್ಡುವ ಅವರಿಗೆ 'ತಾನು ತಾಯಿಯ ಪಾದಕ್ಕೆ ಎರಗಿದ್ದೇನೆ' ಎಂದು ಕನಿಷ್ಠ ಸಮರ್ಥಿಸುವುದಕ್ಕಾದರೂ ಸುಳ್ಳು ಹೇಳಲಾಗಲಿಲ್ಲ. ಯಾಕೆಂದರೆ ಅಂಥ ಒಂದು ಕಲ್ಪನೆಯೇ ಅವರೊಳಗೆ ಹೊಳೆದಿಲ್ಲ. ಹೀಗಿರುವಾಗ, ಪ್ರವಾದಿ ನುಡಿಯಲ್ಲಿ ತಾಯಿ ಮತ್ತು ಕಾಲಿನ ಕಲ್ಪನೆ ಬರುವುದಾದರೂ ಹೇಗೆ?

ಉಗ್ರ ರಾಷ್ಟ್ರೀಯತೆಯ ಅಮಲಿನಲ್ಲಿ ತೇಲುವ ಮಂದಿಗೆ ವಂದೇ ಮಾತರಮ್ ಯಾಕೆ ಅನರ್ಹ ಎಂಬುದು ಗೊತ್ತಿದೆ. ಅದನ್ನು ಕೇವಲ ಭೂಮಿಯ ವಂದನೆಯ ಕಾರಣಕ್ಕಾಗಿ ಮಾತ್ರ ವಿರೋಧಿಸುವುದಲ್ಲ ಬದಲು, ಆ ಕಾದಂಬರಿಯೇ ಕೋಮು ಭ್ರಾಂತಿಯದ್ದು ಎಂಬುದನ್ನು ಚೆನ್ನಾಗಿ ತಿಳಿದುಕೊಂಡಿರುವುದರಿಂದಲೇ ಅವರು ತಪ್ಪಿಯೂ ಆ ಕಾದಂಬರಿಯ ವಿಷಯಗಳನ್ನು ಉಲ್ಲೇಖಿಸುವುದಿಲ್ಲ. ಒಂದು ವೇಳೆ ಆನಂದ ಮಠವನ್ನು ಓದಿದ ಯಾವುದೇ ಪ್ರಾಮಾಣಿಕ ದೇಶಪ್ರೇಮಿ ವಂದೇ ಮಾತರಮನ್ನು ಎಂದೂ ಹಾಡಲಾರ. ಮುಸ್ಲಿಮರ ರಕ್ತ ಹರಿಸುವಾಗ ಸ್ಫೂರ್ತಿಗಾಗಿ ಹಾಡಲಾದ ಹಾಡೊಂದು ಇವತ್ತು ದೇಶಪ್ರೇಮದ ಸಂಕೇತ ಎಂದು ವಾದಿಸುವುದಾದರೆ ಮುಸ್ಲಿಮರನ್ನು ಕೊಲೆ ಗೈಯುವುದು ದೇಶಪ್ರೇಮ ಎಂದಾಗುತ್ತದೆ.

ರಾಷ್ಟ್ರೀಯತೆ ಎಂಬುದು ಇವತ್ತು ದೇಶದಲ್ಲಿ ಅತ್ಯಂತ ತಪ್ಪಾದ ರೀತಿಯಲ್ಲಿ ವ್ಯಾಖ್ಯಾನಿಸಲ್ಪಡುತ್ತಿದೆ. 'ತನ್ನ ದೇಶವನ್ನು ಪ್ರೀತಿಸುವುದು' ಎಂಬುದಕ್ಕೆ 'ಈ ದೇಶದ ಸರ್ವರನ್ನೂ ಪ್ರೀತಿಸುವುದು' ಎಂಬ ಅರ್ಥ ತಪ್ಪಿ ಹೋಗಿ ತನ್ನಂತೆಯೇ ಇರುವ, ತನ್ನ ಆಹಾರವನ್ನು ಒಪ್ಪುವ, ತನ್ನ ನಂಬಿಕೆಯಂತೆ ನಡೆಯುವವರನ್ನು ಮಾತ್ರ ಪ್ರೀತಿಸುವುದು ಎಂಬ ಅರ್ಥ ಬಂದಿದೆ. ಇದು ಅಪಾಯಕಾರಿ. ಈ ಮಟ್ಟದ ರಾಷ್ಟ್ರೀಯತೆ ಅಂತಿಮವಾಗಿ ಹಲವು ರಾಷ್ಟ್ರಗಳ ಉಗಮಕ್ಕಷ್ಟೇ ಸಹಾಯಕವಾಗಬಹುದು.

ರಾಷ್ಟ್ರೀಯತೆ ಎಂಬುದಕ್ಕೆ 'ಜನಾಂಗವಾಗಿರುವುದು' ಎಂಬ ಅರ್ಥ ಕೂಡ ನಿಘಂಟಿನಲ್ಲಿದೆ. ಜನಾಂಗಕ್ಕೆ 'ಒಂದೇ ಪಂಗಡಕ್ಕೆ ಸೇರಿದ' ಎಂಬ ಅರ್ಥವಿದೆ. ವಂದೇ ಮಾತರಮನ್ನು ಮುಸ್ಲಿಮರ ಬಾಯಿಯಿಂದ ಹಾಡಿಸಲೇಬೇಕೆಂದು ಹೊರಟವರು ಎಲ್ಲರನ್ನೂ 'ಒಂದೇ ಪಂಗಡಕ್ಕೆ' (ಸಂಸ್ಕೃತಿಗೆ) ಸೇರಿಸಲು ಪಣ ತೊಟ್ಟವರಾಗಿದ್ದಾರೆ. ಇದು ಅಪಾಯಕಾರಿ. (ಸೌಜನ್ಯ: ಸನ್ಮಾರ್ಗ) □

ರಾಷ್ಟ್ರೀಯತೆಗೆ ಸಾಮಾನ್ಯ ನಿಘಂಟಿನಲ್ಲಿರುವ ಅರ್ಥ ಅದನ್ನು ಪ್ರತಿಪಾದಿಸುವವರ ನಿಘಂಟಿನಲ್ಲಿಲ್ಲ. ಅಲ್ಲಿರುವುದು ಅವರದೇ ಸಂಸ್ಕೃತಿ, ಅವರದೇ ಆದ ಕಾನೂನು, ಆಚಾರ, ಆಹಾರ. ಇದನ್ನು ಒಪ್ಪದಿರುವುದು ರಾಷ್ಟ್ರದ್ರೋಹವಾಗುತ್ತದೆ. ಇದಕ್ಕೆ ಉತ್ತಮ ಉದಾಹರಣೆ ಜಜ್ಜಾರ್ ಪ್ರಕರಣ. ದನದ ಮಾಂಸ ತಿನ್ನುವುದು ದಲಿತರ ಮಟ್ಟಿಗೆ ಸಮ್ಮತವಾಗಿರಬಹುದು. ಆದರೆ ರಾಷ್ಟ್ರೀಯತೆ ಎಂಬ ಸಂಕುಚಿತ ಕಲ್ಪನೆಯ ಗುತ್ತಿಗೆ ಹಿಡಿದವರ ಮಟ್ಟಿಗೆ ಅದು ಆಹಾರವಾಗಲು ಸಾಧ್ಯವಿಲ್ಲ. ಆದ್ದರಿಂದ ಚರ್ಮವನ್ನು ಮಾರಲು ಹೊರಟ ದಲಿತರ ರಾಷ್ಟ್ರೀಯತೆ (ದೇಶನಿಷ್ಠೆ) ಪ್ರಶ್ನಾರ್ಹವಾಗುತ್ತದೆ. ಅಂತಹವರನ್ನು ಕೊಲ್ಲುವುದು ರಾಷ್ಟ್ರ ಪ್ರೇಮವಾಗುತ್ತದೆ. ಇವತ್ತಿನ ವಂದೇ ಮಾತರಮ್‌ಗೂ ಕೂಡ ಇಂಥದ್ದೇ ರಾಷ್ಟ್ರೀಯನ್ನು ಜೋಡಿಸಲಾಗಿದೆ. ಇದನ್ನು ಹಾಡದವರು ದೇಶದ್ರೋಹಿಗಳಾಗುವುದು ಮತ್ತು ಹಾಡಿದವರು ೨೪ ಕ್ಯಾರೆಟ್ ದೇಶಪ್ರೇಮಿಗಳಾಗುವುದು ಇದೇ ಕಾರಣದಿಂದಾಗಿದೆ. ವಂದೇ ಮಾತರಮ್‌ನ ಬಗ್ಗೆ ಅದ್ಭುತವಾದಗಳನ್ನು ಮಂಡಿಸುತ್ತಿರುವ ಪತ್ರಿಕೆಗಳನ್ನೊಮ್ಮೆ ಪರಿಶೀಲಿಸಿ. ತಪ್ಪಿಯೂ ಅವುಗಳು ಆನಂದ ಮಠ ಕಾದಂಬರಿಯಲ್ಲಿ ಏನಿದೆ ಎಂಬುದನ್ನು ಉಲ್ಲೇಖಿಸುವುದಿಲ್ಲ. ಕಾದಂಬರಿಯ ಕನಿಷ್ಠ ಕೆಲವು ಪುಟಗಳನ್ನಾದರೂ ಹಾಗೆಯೇ ತಂತಮ್ಮ ಪತ್ರಿಕೆಗಳಲ್ಲಿ ಮುದ್ರಿಸುವ ಉದಾರತೆ ತೋರಿದ್ದರೆ, ಸತ್ಯ ಬಯಲಾಗುತ್ತಿತ್ತು.

ಝೆನ್ ಗಜಲುಗಳು

○ ಜಂಬಣ್ಣ ಅಮರಚಿಂತ

೧

ಬಿಂದುವಿನಲಿ ಸಿಂಧುವನು ಹಿಡಿದಿಡುವ ಯತ್ನ
ಬೀಜದಲಿ ಬೋಧಿ ವೃಕ್ಷ ಹುಡುಕುವ ಪ್ರಯತ್ನ
ಹಾಯಕ್, ಟಂಕಾ ನಾನಿಗಳ ಮಾದರಿಯಲಿ
ಕನ್ನಡದಲ್ಲಿ ಝೆನ್ ಗಜಲಿನ ಮೊದಲ ಪ್ರಯತ್ನ

೩

ಅರಿತುಕೊ ಬದುಕನು, ಕಲಿತುಕೊ ಜೀವಿಸುವುದನು
ಹೇರದಿರು ಬದುಕಿಗೆ ಯಾವ ವಿಧದ ವಿಧಿನಿಷೇಧ
ಝೆನ್ ಅಸೀಮ ಚೇತನ, ಅದು ಅನಿಕೇತನ
ಅದರಗುರಿ ಜ್ಞಾನೋದಯ ಅಂತರಾತ್ಮದ ಶೋಧ



೨

ಇದು ವಾಚ್ಯವಲ್ಲ, ಅನಿರ್ವಾಚ್ಯ
ಮಾತಿನೊಳಗಿನ ಮೌನವದು ಸಾಚಾ
ಮುಗಿಲಿನಿಂದ ಬಿದ್ದು ಮಣ್ಣನು ತಾಕದ
ಝೆನ್ ಹನಿಹನಿ ಸ್ವಚ್ಛಂದ ಸ್ವಚ್ಛ



೪

ಮೋಡದಲ್ಲಿ ತಾನಾಗಿ ಮಿಂಚು ಮಿಂಚಿದಂತೆ
'ಸತೋರಿ' ಮೊಳಕೆವೊಡೆದಾಗ ಜ್ಞಾನೋದಯ
ಕತ್ತಲೆ ತುಂಬಿದ ಸುತ್ತಲ ಪ್ರಪಂಚದ
ಜ್ಞಾನದ ಹೊಸ ಬೆಳಕು–ತುಂಬಿದ ಸಹೃದಯ
ಮುಚ್ಚಿಡಲೂ ಆಗದ, ಬಿಚ್ಚಿಡಲೂ ಆಗದ
ಅದುವೇ ಸುಗಂಧ ಅರಳಲು ಜ್ಞಾನದ
ಕುವಲಯ

೫
ಸೂರ್ಯನಿಲ್ಲದ ಬೆಳಕು, ತಿಂಗಳಿಲ್ಲದ
ಬೆಳದಿಂಗಳು
ಮದವಿಲ್ಲದ ಹಸಿರು, ಮೋಡವಿಲ್ಲದ ಮಳೆ
ಹನಿಗಳು
ಬೆಣ್ಣೆ ಇಲ್ಲದ ತುಪ್ಪ, ಶಬ್ಧದ ನಿಶಬ್ಧ ದನಿಗಳು
ಬುದ್ಧನೆಂದರೇನು? ಉರಿವ ಶೂನ್ಯದೆರಡು
ಕಂಗಳು



೬
ಒಂದು ಕೈಯಿಂದ ಚಪ್ಪಾಳೆ
ತಟ್ಟುವುದೆಂದರೇನು?
ಪಂಜರವನು ಅದೃಶ್ಯ ಮಾಡುವುದೆಂದರೇನು?
ಉಟ್ಟಿದ್ದು ಬಿಚ್ಚಿ ನಗ್ನಗೊಳ್ಳುವುದೆಂದರೇನು?
ಅದುವೇ ಝೆನ್, ಸ್ವಪ್ರಜ್ಞೆ ಯಜ್ಞಾನದ ಜೇನು



೭
ಕಣ್ಣೆಂದು ಕೊಂಡ ಈ ಕಣ್ಣಿಗೆ ಮಣ್ಣೆರಚು
ತೆರೆದು ಕೊಳ್ಳುವುದು ಆಗ ಒಳಗಿನ ಚಕ್ಷು

ಒಳತಿರುಳುಬೇಕೆಂದರೆ ಮೊದಲು ನೀನು
ತೆಂಗಿನ ಹೊರ ಸಿಪ್ಪೆಯನುಗಟ್ಟಿಯಾಗಿ ಚಚ್ಚು
ಹೂವಿನಿಂದ ಮುಕ್ತಗೊಂಡ ಪರಿಮಳವದು
ಹೊರಬರುವುದು, ಅದು ಬುದ್ಧನಿಗೆ ಅಚ್ಚು ಮೆಚ್ಚು

೮
ಇಷ್ಟೆಲ್ಲಾ ರಾಡಿ, ರೊಜ್ಜು ಎಲ್ಲೆಡೆ ತುಂಬಿರಲು
ಪಂಕಜಕ್ಕೆ ಗೊತ್ತಿದೆ ಹೇಗೆ ಅರಳಬೇಕೆಂದು
ಉಪ್ಪು ಸಮುದ್ರದ ನೀರು ಎಲ್ಲೆಡೆ ಹರಡಿರಲು
ಸ್ವಾತಿಗೆ ಗೊತ್ತಿದೆ ಹೇಗೆ ಮುತ್ತಾಗಬೇಕೆಂದು
ಇರುಳು ದಾರಿಯ ತುಂಬಾ ಅಂಧತಮ ತುಂಬಿರಲು
'ಸತೋರಿ'ಗೆ ಗೊತ್ತಿದೆ ಹೇಗೆ ಬೆಳಕು ಚೆಲ್ಲಬೇಕೆಂದು



ಮಹಾನ್ ರಾಷ್ಟ್ರ ನಾಯಕ ಕಾನ್ಶಿರಾಂ

ದೇಶದ ಎರಡನೇ ಅಂಬೇಡ್ಕರ್ ಎಂದೇ ಕೋಟ್ಯಂತರ ಜನರ ಮನದಲ್ಲಿ ನೆಲೆಸಿರುವ ಕಾನ್ಶಿರಾಂರವರನ್ನು ದೇಶಾದ್ಯಂತ ಬಹುಜನರು ಒಕ್ಕೊರಲಿನಿಂದ 'ಬಾಬಾ ತೇರಾ ದೂಸ್ರ ನಾಮ್ ಕಾನ್ಶಿರಾಂ'ಎಂದು ಒಕ್ಕೊರಲಿನಿಂದ ಕರೆಯುತ್ತಿದದ್ದು ಅವರ ಜನ ಪ್ರಿಯತೆಗೆ ಸಾಕ್ಷಿಯಾಗಿದೆ. ಅಂಬೇಡ್ಕರ್‌ರವರ 'ತಮ್ಮದೆ ಪಕ್ಷದ ಸರ್ಕಾರವನ್ನು ರಚಿಸುವ ಕನಸನ್ನು' ಕಾನ್ಶಿರಾಂರವರು ಉತ್ತರಪ್ರದೇಶದಲ್ಲಿ ಸರ್ಕಾರವನ್ನು ರಚಿಸಿ ದಲಿತ ಮಹಿಳೆ ಮಾಯಾವತಿಯವರನ್ನು ಮುಖ್ಯಮಂತ್ರಿ ಮಾಡುವ ಮೂಲಕ ನನಸುಗೊಳಿಸಿದರು. ದೇಶದಲ್ಲಿ ಅಂಬೇಡ್ಕರ್ ಸಿದ್ಧಾಂತಗಳನ್ನು ಇಟ್ಟುಕೊಂಡು ಜನರಿಂದ ಹಣವನ್ನು ಸಂಗ್ರಹಿಸಿ ಪಕ್ಷವನ್ನು ಕಟ್ಟಿ ಬಹುಜನರ ಸರ್ಕಾರವನ್ನು ರಚಿಸುವುದು ಅಸಾಧ್ಯವೆಂಬ ನಂಬಿಕೆಯನ್ನು ಹುಸಿಗೊಳಿಸಿದ ಕೀರ್ತಿ ಕಾನ್ಶಿರಾಂಜೀರವರಿಗೆ ಸಲ್ಲುತ್ತದೆ.

ಶ್ರೀಧರ ಕಲಿವೀರ

ಜಗತ್ತಿನ ಮಹಾನ್ ಚೇತನಗಳು ಮಾನವ ಸಮಾಜದಲ್ಲಿರುವ ಶೋಷಣೆ, ಅಸಮಾನತೆ, ಕ್ರೌರ್ಯ, ಮುಂತಾದ ಅಮಾನವೀತೆಯನ್ನು ಬದಲಾಯಿಸಿ ಅದರ ಬದಲು ಪ್ರೀತಿ, ಕರುಣೆ, ಸಮಾನತೆ, ಸ್ವಾತಂತ್ರ್ಯ ಬ್ರಾತೃತ್ವ ತುಂಬಿದ ಮಾನವೀಯ ಸಮಾಜವನ್ನು ಕಟ್ಟಲು ಹೋರಾಡಿದ್ದಾರೆ. ಭಾರತದಲ್ಲಿ ಅಂತಹ ಚೇತನಗಳ ಪೈಕಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಪ್ರಮುಖರು.

ಅವರು ಬ್ರಾಹ್ಮಣಶಾಹಿ ಸಾಮಾಜಿಕ ವ್ಯವಸ್ಥೆ, ವರ್ಣಾಶ್ರಮ, ಜಾತಿ ಪದ್ಧತಿಗಳಿಂದ ಶೋಷಣೆಗೆ ಗುರಿಯಾಗಿರುವ. ಪರಿಶಿಷ್ಟಜಾತಿಗಳು, ಪರಿಶಿಷ್ಟಪಂಗಡಗಳು, ಹಿಂದುಳಿದ ವರ್ಗಗಳು, ಧಾರ್ಮಿಕ ಅಲ್ಪ ಸಂಖ್ಯಾತರು, ಮಹಿಳೆಯರು ಎಲ್ಲಾ ಜಾತಿಯ ಬಡವರ ಸಾಮಾಜಿಕ ಪರಿವರ್ತನೆ ಮತ್ತು ಆರ್ಥಿಕ ವಿಮೋಚನೆಗಾಗಿ ರಾಜಕೀಯ ಹೋರಾಟವನ್ನು ಮಾಡಿದರು. ಭಾರತದಲ್ಲಿರುವ ಈ ಶೋಷಿತ ಜಾತಿವರ್ಗಗಳಿಗೆ ಅವರವರ ಜನಸಂಖ್ಯೆಗನುಗುಣವಾಗಿ ರಾಜಕೀಯ ಅಧಿಕಾರ, ಸಂಪತ್ತು, ಮತ್ತಿತರ ಎಲ್ಲಾ ಬದುಕುವ ಅವಕಾಶಗಳನ್ನು ಹಂಚಿಕೆ ಮಾಡುವ ಮೂಲಕ ನಿಜವಾದ ಸಮಾಜವಾದವನ್ನು ಪ್ರಜಾಸತಾತ್ಮಕ ಮತ್ತು ಶಾಂತಿಯುತ ಸಂಸತ್ ರಾಜಕಾರಣ ಮಾರ್ಗದಲ್ಲಿ ಸ್ಥಾಪಿಸಲು ಅಂಬೇಡ್ಕರ್‌ರವರು ಹೋರಾಡಿದರು. ಅದಕ್ಕಾಗಿ ಅವರು ಆ ಶೋಷಿತ ವರ್ಗಗಳಿಗೆ 'ಓಟಿನ ಹಕ್ಕು ಮತ್ತು ಸರ್ಕಾರ ರಚಿಸಲು ಬೇಕಾಗುವ ರಾಜಕೀಯ ಪಕ್ಷವನ್ನು ಕಟ್ಟುವ ಹಕ್ಕನ್ನು ಸಂವಿಧಾನ ಬದ್ದಗೊಳಿಸಿದರು.

ಅವರ ಜೀವಮಾನದಲ್ಲಿ ಅಂಬೇಡ್ಕರರು ಎರಡು ರಾಜಕೀಯ ಪಕ್ಷಗಳನ್ನು ಕಟ್ಟಿ ಮನುವಾದಿ, ಬಂಡವಾಳಶಾಹಿ ಕಾಂಗ್ರೆಸ್ ಪಕ್ಷವನ್ನು ಚುನಾವಣೆಗಳಲ್ಲಿ ಎದುರಿಸಿದರು. ಆದರೆ ೧೯೫೨ರಲ್ಲಿ ಅವರ ಪಕ್ಷವು ಕೆಲವೇ ಸೀಟುಗಳನ್ನು ಗೆದ್ದರೂ ಸಹ ಸ್ವತ: ಅಂಬೇಡ್ಕರವರವರನ್ನು ಸೋಲಿಸಿದ ಪರಿಣಾಮವಾಗಿ ಸರ್ಕಾರವನ್ನು ರಚಿಸಿ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸಬೇಕೆಂಬ ಅವರ ಕನಸು ನನಸಾಗಲಿಲ್ಲ. ಅಂಬೇಡ್ಕರ್‌ರವರು ಈ ದೇಶವನ್ನು ಬಹು ಜನರು ಆಳುವುದನ್ನು ತಮ್ಮ ಕಣ್ಣುಗಳಿಂದ ನೋಡಬೇಕೆಂದು ಆಸೆ ಪಟ್ಟಿದ್ದರು. ಆ ಕನಸನ್ನು ನನಸು ಮಾಡಲು ಶೋಷಿತರಿಗೆ ತಮ್ಮದೆ ಆದ ವಿಮೋಚನೆಯ ಸಿದ್ಧಾಂತ ಮತ್ತು ಗುರಿಯನ್ನು ಹೊಂದಿರುವ ರಾಷ್ಟ್ರೀಯ ಪಕ್ಷ ಹಾಗೂ ವಿಮೋಚನಾ ಚಳುವಳಿಯನ್ನು ರಾಷ್ಟ್ರೀಯ ಮಟ್ಟದಲ್ಲಿ ನಿಭಾಯಿಸಲು ರಾಷ್ಟ್ರೀಯ ನಿಧಿ ಮತ್ತು ಆ ಸಿದ್ಧಾಂತಕ್ಕೆ ಬದ್ಧತೆ [illegible] ಸಮರ್ಥ, ಪ್ರಾಮಾಣಿಕ ರಾಷ್ಟ್ರೀಯ ನಾಯಕತ್ವ ಇರಬೇಕೆಂದು ಬಯಸಿದ್ದರು.



ಆದರೆ ಆ ಪ್ರಯತ್ನಗಳನ್ನು ಅವರು ಅರಂಭಿಸಿದರಾದರೂ ಅವರ ಜೀವಮಾನದಲ್ಲಿ ಆ ಆಶಯಗಳನ್ನು ಸಂಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ಅಂಬೇಡ್ಕರರು ೧೯೫೬ರಲ್ಲಿ ಪರಿನಿಬ್ಬಾಣರಾದ ಬಳಿಕ ಅವರ ಅನುಯಾಯಿಗಳು ೧೯೫೭ರಲ್ಲಿ ರಿಪಬ್ಲಿಕ್ ಪಾರ್ಟಿಯನ್ನು ಆರಂಭಿಸಿದರು. ಆದರೆ ಅನುಯಾಯಿಗಳು ಬಹಳ ಬೇಗನೆ ಕಾಂಗ್ರೆಸ್ ಮತ್ತಿತರ ಮನುವಾದಿ ಪಕ್ಷಗಳಿಗೆ ಶರಣಾಗತರಾದರು ಚಮಚ ರಾಜಕಾರಣ ಮತ್ತು ಗುಂಪುಗಾರಿಕೆಯಿಂದ ಆರ್.ಪಿ.ಐ. ಪಕ್ಷವು ಅಂಬೇಡ್ಕರ್‌ವಾದದಿಂದ ದೂರ ಸರಿಯಿತು. ಆಗ ದೇಶಾದ್ಯಂತ ಶೇ. ೯೯ ರಷ್ಟು ಪ.ಜಾ/ಪ.ಪಂ, ಹಿಂದುಳಿದವರು, ಅಂಬೇಡ್ಕರ್‌ರವರು ಇಲ್ಲದಿರುವುದರಿಂದ ಕಾಂಗ್ರೆಸ್ ವಿರೋಧಿ ರಾಜಕಾರಣವನ್ನು ಕೈ ಬಿಟ್ಟು ಕಾಂಗ್ರೆಸ್ ಪಕ್ಷಕ್ಕೆ ಶರಣಾದರು. ಅಂಬೇಡ್ಕರ್‌ರವರು ಆರಂಭಿಸಿದ ಬ್ರಾಹ್ಮಣಶಾಹಿ ಸಾಮಾಜಿಕ ವ್ಯವಸ್ಥೆಯನ್ನು ನಾಶಪಡಿಸಿ ಸಮ ಸಮಾಜವನ್ನು ನಿರ್ಮಿಸುವ ಬಹುಜನ ಸಮಾಜ ಚಳುವಳಿಯನ್ನು ಮುಂದೊಯ್ಯುವ ಪಕ್ಷ ಮತ್ತು ಸಮರ್ಥ ನಾಯಕರಿಲ್ಲದೆ ಚಳುವಳಿಯು ಸ್ಥಗಿತಗೊಂಡಿತ್ತು. ಆಗ ಭಾರತ ದೇಶದ ಭೂಪಟದಲ್ಲಿ ಒಂದು ಮಿನುಗುವ ಬಹುಜನ ತಾರೆ ಉದಯಿಸಿತು. ಆ ತಾರೆಯೇ ಕಾನ್ಶಿರಾಂರವರು.

ಬಾಬಾ ಸಾಹೇಬರ ಅಪೂರ್ಣಗೊಂಡಿದ್ದ ಆಶಯಗಳನ್ನು ಬಿ.ಎಸ್.ಪಿ. ಎಂಬ ಮೂರನೇ ಅತಿ ದೊಡ್ಡ ರಾಷ್ಟ್ರೀಯ ಪಕ್ಷ, ಬಹುಜನ ಸಮಾಜ ಚಳುವಳಿ ಎಂಬ ರಾಷ್ಟ್ರೀಯ ಚಳುವಳಿಯನ್ನು ಕಟ್ಟಲು ಬೇಕಾದ ರಾಷ್ಟ್ರೀಯ ನಿಧಿ ಮತ್ತು ರಾಷ್ಟ್ರೀಯ ನಾಯಕತ್ವವನ್ನು ಸಾಧಿಸುವ ಮೂಲಕ ಬಾಬಾ ಸಾಹೇಬರ ಎಲ್ಲಾ ಅಪೂರ್ಣ ಆಶಯಗಳನ್ನು ಸಾಕಾರಗೊಳಿಸಿದ ಮಹಾನ್ ರಾಷ್ಟ್ರನಾಯಕರು ಕಾನ್ಶಿರಾಂಜೀರವರು.

ವೈಯಕ್ತಿಕವಾಗಿ ನಾನು ಕಾನ್ಶಿರಾಂಜೀಯವರನ್ನು ಪ್ರೊ॥ ಬಿ.ಕೃಷ್ಣಪ್ಪನವರೊಂದಿಗೆ ನವದೆಹಲಿ ಮತ್ತು ಬೆಂಗಳೂರಿನಲ್ಲಿ ೧೯೯೪ರಲ್ಲಿ ಭೇಟಿಯಾಗಿ ಕರ್ನಾಟಕದಲ್ಲಿ ದಲಿತ ಚಳುವಳಿಯನ್ನು ಬಿ.ಎಸ್.ಪಿ.ಗೆ ಸೇರಿಸುವ ಮೂಲಕ ಪಕ್ಷವನ್ನು ಕಟ್ಟುವ ಕುರಿತು ಚರ್ಚಿಸುವ ಸಂದರ್ಭದಲ್ಲಿ ನನಗೆ ಕಾನ್ಶಿರಾಮ್‌ರವರ ವ್ಯಕ್ತಿತ್ವ ಮತ್ತು ಅಂಬೇಡ್ಕರ್‌ವಾದದಲ್ಲಿ ಅವರು ಇಟ್ಟಿದ್ದ ನಂಬಿಕೆ ಮತ್ತು ಬದ್ದತೆಗಳು ಮನನವಾಗಿದ್ದವು.

ಹೀಗಾಗಿ ನಮ್ಮ ರಾಜಕೀಯ ವ್ಯವಹಾರ ಸಮಿತಿಯು ದಲಿತ ಚಳುವಳಿಗೆ ಬಹುಜನ ಸಮಾಜ ಪಕ್ಷ ಒಂದೇ ಸೂಕ್ತವಾದ ಪಕ್ಷ ಎಂಬ ಶಿಫಾರಸ್ಸು ವರದಿಯನ್ನು ನೀಡಿತ್ತು ಮತ್ತು ಬಿ.ಎಸ್.ಪಿ. ಯನ್ನು ಆ ವರ್ಷ ಸೇರಿದೆವು.

ದೇಶದ ಎರಡನೇ ಅಂಬೇಡ್ಕರ್ ಎಂದೇ ಕೋಟ್ಯಂತರ ಜನರ ಮನದಲ್ಲಿ ನೆಲೆಸಿರುವ ಕಾನ್ಷಿರಾಂರವರನ್ನು ದೇಶಾದ್ಯಂತ ಬಹುಜನರು ಒಕ್ಕೊರಲಿನಿಂದ "ಬಾಬಾ ತೇರಾ ದೂಸ್ರ ನಾಮ್ ಕಾನ್ಷಿರಾಂ, ಕಾನ್ಷಿರಾಂ, ಕಾನ್ಷಿರಾಂ" ಮತ್ತು "ಬಾಬಾ ತೇರಾ ಮಿಷನ್ ಅದೂರ, ಕಾನ್ಷಿರಾಂ ಕರೇಗಾ ಪೂರಾ" ಎಂದು ಒಕ್ಕೊರಲಿನಿಂದ ಕರೆಯುತ್ತಿದದ್ದು ಅವರ ಜನ ಪ್ರಿಯತೆಗೆ ಸಾಕ್ಷಿಯಾಗಿದೆ. ಅಂಬೇಡ್ಕರ್‌ರವರ 'ತಮ್ಮದೆ 'ಪಕ್ಷದ ಸರ್ಕಾರವನ್ನು ರಚಿಸುವ ಕನಸನ್ನು' ಕಾನ್ಷಿರಾಂರವರು ಉತ್ತರಪ್ರದೇಶದಲ್ಲಿ ಬಿ.ಎಸ್.ಪಿ. ಸಮ್ಮಿಶ್ರ ಸರ್ಕಾರವನ್ನು ರಚಿಸಿ ದಲಿತ ಮಹಿಳೆ ಮಾಯಾವತಿರವರನ್ನು ಮೂರು ಭಾರಿ ಮುಖ್ಯಮಂತ್ರಿ ಮಾಡುವ ಮೂಲಕ ನನಸುಗೊಳಿಸಿದರು. ದೇಶದಲ್ಲಿ ಅಂಬೇಡ್ಕರ್ ಸಿದ್ಧಾಂತಗಳನ್ನು ಇಟ್ಟುಕೊಂಡು ಜನರಿಂದ ಹಣವನ್ನು ಸಂಗ್ರಹಿಸಿ ಪಕ್ಷವನ್ನು ಕಟ್ಟಿ ಬಹುಜನರ ಸರ್ಕಾರವನ್ನು ರಚಿಸುವುದು ಅಸಾಧ್ಯವೆಂಬ ನಂಬಿಕೆಯನ್ನು ಹುಸಿಗೊಳಿಸಿ ಆ ರೀತಿ ಬಹುಜನರ ಸರ್ಕಾರವನ್ನುರಚಿಸುವುದು ಸಾಧ್ಯವೆಂದು ನಿರೂಪಿಸಿದ ಕೀರ್ತಿ ಕಾನ್ಷಿರಾಂಜೀರವರಿಗೆ ಸಲ್ಲುತ್ತದೆ.

ಪಂಜಾಬ್‌ನ ೯ ರೋಪಾಲ್ ಜಿಲ್ಲೆ ಖಾವಾಸಪೂರ ಗ್ರಾಮದಲ್ಲಿ ರಾಮದಾಸಿಯಾ ಎಂಬ ಪರಿಶಿಷ್ಟಜಾತಿಗೆ ಸೇರಿದ್ದು ಸಿಖ್ ಧರ್ಮಕ್ಕೆ ಮತಾಂತರಗೊಂಡ ತಂದೆ ಹರಿಸಿಂಗ್ ಮತ್ತು ತಾಯಿ ಬಿಷನ್ ಕೌರ್ ಎಂಬ ಬಡ ಕೃಷಿ ಕೂಲಿಕಾರರ ಕುಟುಂಬದಲ್ಲಿ ಕಾನ್ಷಿರಾಂರವರು ೧೫-೦೩-೧೯೩೪ರಲ್ಲಿ ಜನಿಸಿದರು. ಅಸ್ಪೃಶ್ಯತೆ, ಜಾತೀಯತೆ ಬಡತನಗಳನ್ನು ಸ್ವತ: ಅನುಭವಿಸಿ ವ್ಯವಸ್ಥೆ ವಿರುದ್ಧ ಸಿಡಿದೇದರು. ರಾಪಾರ ಜಿಲ್ಲೆಯಲ್ಲಿ ಶಿಕ್ಷಣವನ್ನು ಕೈಗೊಂಡು ೧೯೫೬ರಲ್ಲಿ ಬಿ.ಎಸ್ಸಿ. ಪದವೀಧರರಾದರು. ವಿದ್ಯಾರ್ಥಿ ಜೀವನದಲ್ಲಿ ಮೆಕೋವಾಲ್ ಗ್ರಾಮದಲ್ಲಿ ಭೂಮಿಗಾಗಿ ಹೋರಾಟ ಕೈಗೊಂಡ ನಾಲ್ಕು ಜನ ಬಡ ಚಮ್ಮಾರರನ್ನು ಭೂಮಾಲೀಕ ಮೇಲ್ಜಾತಿಯವರು ಕೊಲೆ ಮಾಡಿ ಅವರ ಬಗ್ಗೆ ಅವಮಾನಕರವಾಗಿ ಮಾತನಾಡುವುದನ್ನು ಕೇಳಿಸಿಕೊಂಡು ಕಾನ್ಷಿರಾಂರವರು ಸಿಟ್ಟಾಗಿ ಭೂಮಾಲೀಕರನ್ನು ಥಳಿಸಿ ಪ್ರತಿಭಟಿಸಿದರು.

೧೯೫೮ರಲ್ಲಿ ಮಹಾರಾಷ್ಟ್ರದ ಪೂನಾ ನಗರದಲ್ಲಿ ಕೇಂದ್ರ ಸರ್ಕಾರಿ ಸ್ವಾಮ್ಯದ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಮಿಲಿಟರಿ ಎಕ್ಸ್‌ಪ್ಲೋಸಿನಲ್ಲಿ ಸಂಶೋಧನಾ ಅಧಿಕಾರಿಯಾಗಿ ಉದ್ಯೋಗಕ್ಕೆ ಸೇರುತ್ತಾರೆ. ಅಲ್ಲಿನ ಬ್ರಾಹ್ಮಣ ಮೇಲಾಧಿಕಾರಿಗಳು ೧೯೬೪ರಲ್ಲಿ ಬುದ್ಧ ಜಯಂತಿ ಮತ್ತು ಅಂಬೇಡ್ಕರರ ಜಯಂತಿ ರಜಾ ದಿನಗಳನ್ನು ವಜಾ ಮಾಡಿ ಅದರ ಬದಲು ಬಾಲಗಂಗಾಧರ ತಿಲಕ್ ಮತ್ತು ದೀಪಾವಳಿ ರಜೆ ಗಳನ್ನು ಘೋಷಿಸುತ್ತಾರೆ. ಆಗ ದಲಿತ ಭಂಗಿ ಜಾತಿಗೆ ಸೇರಿದ ದಿನಾಬಾವ್ಯ ಎಂಬ ನಾಲ್ಕನೆ ದರ್ಜೆ ನೌಕರನು ಸಿಟ್ಟಿಗೆದ್ದು ಪ್ರತಿಭಟಿಸುತ್ತಾನೆ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸುತ್ತಾನೆ. ಆ ಬ್ರಾಹ್ಮಣ ಅಧಿಕಾರಿಗಳು ದಿನಾಬಾರನ್ನು ಸೇವೆಯಿಂದ ಅಮಾನತುಗೊಳಿಸುತ್ತಾರೆ. ದಿನಾಬಾನ ಕೋರ್ಟ್ ಮೆಟ್ಟಿಲೇರಿ ಹೋರಾಡಲು ಕಾನ್ಷಿರಾಂರ ವರು ಆರ್ಥಿಕ ಮತ್ತು ನೈತಿಕ ಬೆಂಬಲ ನೀಡುತ್ತಾರೆ. ನ್ಯಾಯಾಲಯದಲ್ಲಿ ಗೆದ್ದ ಬಳಿಕ ದಿನಾಬಾನನ ಅಮಾನತ್ತು ರದ್ದಾಗಿ ಬುದ್ಧ ಮತ್ತು ಅಂಬೇಡ್ಕರ ಜಯಂತಿ ರಜೆ ದಿನಗಳಾಗಿ ಮಂಜೂರಾದವು. ಇದರಿಂದ ಅಪಮಾನಿತನಾದ ಬ್ರಾಹ್ಮಣ ಮೇಲಾಧಿಕಾರಿ ವರದಾಬಾರಿ ದಿನಾಬಾನನ್ನು ಬೆಂಬಲಿಸಿದ ಕಾನ್ಷಿರಾಂರನ್ನು ವಿಚಾರಿಸಿದಾಗ ಕಾನ್ಷಿರಾಂರವರು "ಡಾ|| ಅಂಬೇಡ್ಕರ್ ಸಂವಿಧಾನ ಬರೆದ ರಾಷ್ಟ್ರನಾಯಕರಲ್ಲವೆ? ಅವರ ಜನ್ಮ ದಿನಾಚರಣೆಯನ್ನು ನಾವು ಆಚರಿಸಬಾರದೇಕೆ?" ಎಂದು ಕೇಳುತ್ತಾರೆ. ತಕ್ಷಣ ವರದಬಾರಿ ಸಿಟ್ಟಾಗಿ "ಆ ಮಹರ್ ಅಂಬೇಡ್ಕರ್ ರಾಷ್ಟ್ರನಾಯಕನೇ? ಆ ಲೋಫರ್‌ನಿಂದಾಗಿ ಈ ದಲಿತರಿಗೆ ಕೊಬ್ಬು ಹೆಚ್ಚಾಗಿ ದೇಶ ಹಾಳಾಗುತ್ತಿದೆ" ಎಂದಾಗ ಸಿಟ್ಟಿಗೆದ್ದ ಕಾನ್ಷಿರಾಂರವರು ಆ ಅಧಿಕಾರಿಯನ್ನು ಥಳಿಸುತ್ತಾರೆ. ಆಗ ಕಾನ್ಷಿರಾಂರವರನ್ನು ಸೇವೆಯಿಂದ ಬ್ರಾಹ್ಮಣ ಅಧಿಕಾರಿಗಳು ಅಮಾನತ್ತುಗೊಳಿಸುತ್ತಾರೆ.

ಕಾನ್ಷಿರಾಂ ಅವರು ಕೈಗೊಂಡ ಕೆಲವು ಪ್ರತಿಜ್ಞೆಗಳು

೧. ಮದುವೆಯಾಗುವುದಿಲ್ಲ.

೨. ರಕ್ತ ಸಂಬಂಧಿಗಳೊಂದಿಗೆ ಯಾವುದೇ ಸಂಬಂಧ ಹೊಂದುವುದಿಲ್ಲ.

೩. ತಮ್ಮ ಹೆಸರಿನಲ್ಲಿ ಯಾವುದೇ ಖಾಸಗಿ ಆಸ್ತಿಯನ್ನಾಗಲಿ ಹಣ ಸಂಗ್ರಹಿಸುವುದನ್ನಾಗಲಿ ಮಾಡುವುದಿಲ್ಲ.

೪. ಬಹುಜನ ಸಮಾಜವೇ ತಮ್ಮ ಕುಟುಂಬ ಮತ್ತು ಅದರ ವಿಮೋಚನೆಗಾಗಿ ಹೋರಾಡುವುದೇ ತಮ್ಮ ಬದುಕಿನ ಗುರಿ.

೫. ಸರ್ಕಾರಿ ನೌಕರಿಗೆ ರಾಜೀನಾಮೆ.

ಇದರಿಂದ ಅಪಮಾನಕ್ಕೆ ಒಳಗಾದ ಕಾನ್ಷಿರಾಂರವರು ಅದಕ್ಕೆ ಕಾರಣರಾದ ಐವರು ಬ್ರಾಹ್ಮಣ ಮೇಲಾಧಿಕಾರಿಯನ್ನು ಕೊಲೆ ಮಾಡಲು ಪಿಸ್ತೂಲು ಇಟ್ಟುಕೊಂಡು ಸೂಕ್ತ ಸಮಯಕ್ಕಾಗಿ ಕಾಯುತ್ತಾರೆ. ಆಗ ಅವರ ಸಹೋದ್ಯೋಗಿ ಡಿ.ಕೆ. ಕಪಾರ್ಡೆಯವರು ಅಂಬೇಡ್ಕರವರು ಬರೆದ 'ಜಾತಿ ವಿನಾಶ' ಎಂಬ ಪುಸ್ತಕವನ್ನು ಕಾನ್ಷಿರಾಂರವರಿಗೆ ಕೊಡುತ್ತಾರೆ. ರಾತ್ರಿಯಿಡಿ ಹಲವಾರು ಬಾರಿ ಆ ಪುಸ್ತಕವನ್ನು ಓದಿದ ಕಾನ್ಷಿರಾಂ ಅವರಲ್ಲಿ ವೈಚಾರಿಕ ಪರಿವರ್ತನೆ ಮೂಡುತ್ತದೆ. ಭಾರತದಲ್ಲಿರುವ ಜಾತಿ, ವರ್ಗ, ಲಿಂಗ, ಆಧಾರಿತ ಶೋಷಣೆಗಳೆಲ್ಲವುಕ್ಕೂ ಜಾತಿ ಪದ್ಧತಿ ಆಧರಿಸಿದ ಬ್ರಾಹ್ಮಣಶಾಹಿ ಸಾಮಾಜಿಕ ವ್ಯವಸ್ಥೆ ಕಾರಣ, ಈ ವ್ಯವಸ್ಥೆಯನ್ನು ನಾಶಪಡಿಸುವುದರಿಂದ ಮಾತ್ರ ಭಾರತದ ಸಾಮಾಜಿಕ, ಆರ್ಥಿಕ, ರಾಜಕೀಯ ಶೋಷಣೆಯ ಬಲಿಪಶುಗಳಾದ ಬಹುಜನರ ವಿಮೋಚನೆ ಸಾಧ್ಯವೆಂದು, ಕೆಲವರ ಕೊಲೆಯಿಂದ ಸಾಧ್ಯವಿಲ್ಲವೆಂದು, ಈ ಗುರಿ ಸಾಧಿಸಲು ಅಂಬೇಡ್ಕರ್ ವಾದದ ಜಾರಿಗಾಗಿ ಸ್ವತಂತ್ರ ರಾಜಕೀಯ ಅಧಿಕಾರ ಸ್ಥಾಪಿಸುವ ಹೋರಾಟ ಒಂದೇ ಮಾರ್ಗವೆಂದು ತೀರ್ಮಾನಿಸಿದರು. ಹೀಗೆ ಕಾನ್ಷಿರಾಂರವರು ಸಾಮಾಜಿಕ ಪರಿವರ್ತನೆ ಚಳುವಳಿ ಅಥವಾ ಬಹುಜನ ಸಮಾಜ ಚಳುವಳಿಯ ಯಶಸ್ವಿಗೆ ತಮ್ಮ ಬದುಕನ್ನೆ ಮೂಡಿಪಾಗಿಡಲು ನಿರ್ಧರಿಸಿದರು.

ಈ ಹಿನ್ನೆಲೆಯಲ್ಲಿ ಅವರು ಕೆಲವು ಪ್ರತಿಜ್ಞೆ ಕೈಗೊಂಡು ಅದನ್ನು ಪಾಲಿಸುತ್ತಾರೆ. ೧. ಮದುವೆಯಾಗುವುದಿಲ್ಲ. ೨. ರಕ್ತ ಸಂಬಂಧಿಗಳೊಂದಿಗೆ ಯಾವುದೇ ಸಂಬಂಧ ಹೊಂದುವುದಿಲ್ಲ. ೩. ತಮ್ಮ ಹೆಸರಿನಲ್ಲಿ ಯಾವುದೇ ಖಾಸಗಿ ಆಸ್ತಿಯನ್ನಾಗಲಿ ಹಣ ಸಂಗ್ರಹಿಸುವುದನ್ನಾಗಲಿ ಮಾಡುವುದಿಲ್ಲ. ೪. ಬಹುಜನ ಸಮಾಜವೆ ತಮ್ಮ ಕುಟುಂಬ ಮತ್ತು ಅದರ ವಿಮೋಚನೆಗಾಗಿ ಹೋರಾಡುವುದೇ ತಮ್ಮ ಬದುಕಿನ ಗುರಿ. ೫. ಸರ್ಕಾರಿ ನೌಕರಿಗೆ ರಾಜೀನಾಮೆ.

ಈ ಕುರಿತು ತಮ್ಮ ಸಂಕಲ್ಪವನ್ನು ವಿವರಿಸಿ ಅವರು ತಮ್ಮ ತಾಯಿಗೆ ೨೪ ಪುಟಗಳ ಪತ್ರ ಬರೆದು ತಿಳಿಸಿದರು. ಕಡೆಗೆ ೧೯೮೩ರಲ್ಲಿ ತಂದೆ ಹರಿಸಿಂಗ್ ನಿಧನರಾದಾಗಲು ಕಾನ್ಷಿರಾಂರವರು ಅಲ್ಲಿಗೆ ಹೋಗುವುದಿಲ್ಲ. ೧೯೬೫ರಲ್ಲಿ ನೌಕರಿಗೆ ರಾಜೀನಾಮೆ ನೀಡಿ ಸುಮಾರು ೭ ವರ್ಷ ಮಹಾರಾಷ್ಟ್ರದಲ್ಲಿ ಆರ್.ಪಿ.ಐ. ಪಕ್ಷದಲ್ಲಿ ದುಡಿಯುತ್ತಾರೆ. ೧೯೭೧ರ ತನಕ ಅವರು ಬುದ್ಧ, ಪುಲೆ, ಶಾಹು, ಅಂಬೇಡ್ಕರ್‌ರವರನ್ನು ಅಧ್ಯಯನ ಮಾಡುತ್ತಾರೆ. ಡಾ|| ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಅನುಯಾಯಿಗಳು ಆರಂಭಿಸಿದ ಆರ್.ಪಿ.ಐ. ಒಡೆದು ಹೋಳಾಗಿದ್ದು, ಆ ವಿವಿದ ಬಣಗಳನ್ನು ಒಂದೂಗುಡಿಸಲು ಶ್ರಮಿಸುತ್ತಾರೆ. ೧೯೭೧ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಆರ್.ಪಿ.ಐ. ಕೇವಲ ಒಂದು ಸ್ಥಾನಕ್ಕಾಗಿ ಕಾಂಗ್ರೆಸ್ ಪಾರ್ಟಿ ಜೊತೆಗೆ ಹೊಂದಾವಣಿಕೆ ಮಾಡಿಕೊಳ್ಳುತ್ತದೆ. ಆರ್.ಪಿ.ಐ. ಮತ್ತು ಕಾಂಗ್ರೆಸ್ ನಾಯಕರು ಕೈ ಕೈ ಹಿಡಿದುಕೊಂಡು ಗಾಂಧಿ ಮತ್ತು ಅಂಬೇಡ್ಕರ್‌ರವರು ಈಗ ಒಂದಾದರು ಎಂದು ಕುಣಿದಾಡುತ್ತಾರೆ.

ಯಾವ ಕಾಂಗ್ರೆಸ್ಸ್‌ಅನ್ನು ಬಾಬಾ ಸಾಹೇಬರು, ಅದು ಒಂದು ಉರಿಯುವ ಮನೆ ಅದರೊಳಗೆ ಬಹುಜನರು ಪ್ರವೇಶಿಸಿದರೆ ಸುಟ್ಟು ಹೋಗುತ್ತಾರೆ ಎಂದು ಎಚ್ಚರಿಸಿದ್ದರೋ ಅದೇ ಕಾಂಗ್ರೆಸ್‌ಗೆ ಆರ್.ಪಿ.ಐ ಶರಣಾಗುವಂತೆ ಮಾಡುವ ಬದಲು ಬಾಬಾ ಸಾಹೇಬರವರ ಅನುಯಾಯಿಗಳೇ ಕಾಂಗ್ರೆಸ್‌ಗೆ ಶರಣಾಗಿರುವುದನ್ನು ಕಂಡ ಕಾನ್ಷಿರಾಂರಿಗೆ ಶೋಷಿತ ಸಮಾಜದಲ್ಲಿರುವ ವಿದ್ಯಾವಂತ ನೌಕರರು, ಅಂಬೇಡ್ಕರ್‌ರವರ ಹೋರಾಟದ ಫಲವಾಗಿ ಗಳಿಸಿದ ಮೀಸಲಾತಿಯ ಹಕ್ಕಿನಿಂದ ನೌಕರಿ ಪಡೆದರೂ ಆ ಚಳುವಳಿಯನ್ನು ಮತ್ತಷ್ಟು ಪ್ರಬಲಗೊಳಿಸುವ ಬದಲು ಕೇವಲ ಸ್ವಾರ್ಥಿಗಳಾಗಿ ಸಾಮಾಜಿಕ ಪರಿವರ್ತನಾ ಚಳುವಳಿಯಿಂದ ದೂರವಿರುವುದೇ ಈ ದುರಂತಕ್ಕೆ ಕಾರಣ ಎನ್ನುವುದು ಅವರ ಅರಿವಿಗೆ ಬರುತ್ತದೆ.

ತಮ್ಮ ದುಸ್ಥಿತಿಗೆ ಕಾರಣವಾದ ಬ್ರಾಹ್ಮಣ ಶಾಹಿ ಸಾಮಾಜಿಕ ವ್ಯವಸ್ಥೆಯ ಸರ್ಕಾರಗಳನ್ನು ಬದಲಾಯಿಸುವ ಓಟಿನ ಅಧಿಕಾರವು ತಮ್ಮಲ್ಲಿದ್ದರೂ ಆ ಓಟನ್ನು ಮಾರಿಕೊಳ್ಳುತ್ತಿರುವುದರಿಂದ ಬಹುಜನ ಸಮಾಜವು ಕತ್ತಲೆಯಲ್ಲಿ ಒದ್ದಾಡುತ್ತಿದೆ ಮತ್ತು ಬಡತನ, ಜಾತಿಯತೆಗಳಿಂದ ಬೇಯುತ್ತಿದೆ. ಬಹುಜನ ಸಮಾಜಕ್ಕೆ ಅರಿವಿನ ಬೆಳಕು ನೀಡುವ ಸಾಮರ್ಥ್ಯವುಳ್ಳ ವಿದ್ಯಾವಂತ ಬಹುಜನ ನೌಕರರು ತಮ್ಮ ಸಾಮಾಜಿಕ ಹೊಣೆಗಾರಿಕೆಯನ್ನು ಮರೆತ್ತಿದ್ದಾರೆ. ಈ ನೌಕರರು ತಮ್ಮ ಸಮಾಜದ ವಿಮೋಚನೆಗಾಗಿ ತಮ್ಮ ಕೊಂಚ ಸಮಯ, ಅರಿವು, ಹಣವನ್ನು ಬಹುಜನ

ಸಮಾಜ ಚಳುವಳಿಗೆ ನೀಡುವಂತೆ ನೌಕರರನ್ನು ಪರಿವರ್ತಿಸಿದರೆ ಅಂಬೇಡ್ಕರ್ ವಾದದ ರಾಜಕಾರಣವು ದೇಶವನ್ನಾಳುವ ಶಕ್ತಿಯನ್ನು ಗಳಿಸುತ್ತದೆ ಎಂದು ಕಾನ್ಷಿರಾಂರವರು ಕಂಡುಕೊಂಡರು. ಅಂದಿನಿಂದ ಅವರು ಪರಿಶಿಷ್ಟಜಾತಿ, ಪರಿಶಿಷ್ಟಪಂಗಡ, ಹಿಂದುಳಿದ ವರ್ಗಗಳು ಧಾರ್ಮಿಕ ಅಲ್ಪಸಂಖ್ಯಾತ ನೌಕರರನ್ನು ಸಂಘಟಿಸಿ ೬-೧೨-೧೯೭೮ರಲ್ಲಿ ಬಾಂಸೆಫ್ (BAMCEF) ಬ್ಯಾಕ್‌ವರ್ಡ್ ಅಂಡ್ ಮೈನಾರಿಟಿ ಕಮ್ಯೂನಿಟಿ ಎಂಪ್ಲಾಯಿಸ್ ಫೆಡರೇಷನ್ ಎಂಬ ಸಂಘಟನೆಯನ್ನು ಕಟ್ಟಿದರು.

ಸುಮಾರು ೨ ಲಕ್ಷ ಸರ್ಕಾರಿ ಬಹುಜನ ನೌಕರರು ಈ ಸಂಘಟನೆಯಲ್ಲಿ ತೊಡಗಿ 'ಸಮಾಜಕ್ಕೆ ಮರಳಿಕೊಡು' ಎಂಬ ನೀತಿಯಂತೆ ಪ್ರತಿ ತಿಂಗಳು ತಮ್ಮ ಸಂಬಳದಲ್ಲಿ ಸ್ವಲ್ಪ ಭಾಗವನ್ನು ಕಾನ್ಷಿರಾಂರವರಿಗೆ ನೀಡುತ್ತಾರೆ. ಇದರಿಂದ ಕಾನ್ಷಿರಾಂರವರು ದೇಶಾದ್ಯಂತ ಪ್ರವಾಸ ಮಾಡಿ ಬಹುಜರನ್ನು ಸಂಘಟಿಸಲು ಸಾಧ್ಯವಾಗುತ್ತದೆ. ನಿರಂತರ ವಿಚಾರ ಸಂಕಿರಣಗಳು ಅಧ್ಯಯನ ಶಿಬಿರಗಳಿಂದ ಬದ್ಧತೆ, ಪ್ರಜ್ಞಾವಂತಿಕೆ ಬೆಳೆಸಿಕೊಂಡ ಬಹುಜನ ಸರ್ಕಾರಿ ನೌಕರರು ೧೯೭೮ರಲ್ಲಿ ಬಾಂಸೆಫ್ ಆಶ್ರಯದಲ್ಲಿ ದೇಶಾದ್ಯಂತ "ಅಂಬೇಡ್ಕರ್ ವಾದವು ಪುನಶ್ಚೇತನಗೊಳ್ಳಬಲ್ಲದೆ ಮತ್ತು ಅದು ಉಳಿದು ಬೆಳೆಯಬಲ್ಲದೆ?" ಎಂಬ ಎಂಬ ಕುರಿತು ವಿಚಾರ ಸಂಕಿರಣಗಳಾದವು. ಬಾಂಸೆಫ್ ಮೂಲಕ ಬಹುಜನ ಸಮಾಜದ ರಾಜಕೀಯೇತರ ಬೇರುಗಳನ್ನು ಬಲಪಡಿಸಲಾಯಿತು. ೧೯೮೦ರಲ್ಲಿ ಸೈಕಲ್ ಪ್ರವಾಸದ ಮೂಲಕ 'ಅಂಬೇಡ್ಕರ್ ಮೇಳ' ಪ್ರಚಾರವನ್ನು ದೇಶಾದ್ಯಂತ ಕೈಗೊಳ್ಳಲಾಗಿತ್ತು. ಕರ್ನಾಟಕದಲ್ಲೂ ಬಾಂಸೆಫ್ ಆರಂಭವಾಗಿತ್ತು. ನಂತರದಲ್ಲಿ ಬಾಂಸೆಫ್‌ನಿಂದ ಹುಟ್ಟಿದ ಅರಿವಿನಿಂದ ಹೋರಾಟದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಕಾನ್ಷಿರಾಂರವರು ಬಯಸಿದರು.

ಡಿಸೆಂಬರ್ ೬, ೧೯೮೯ ರಂದು ಅವರು ಡಿಎಸ್.-೪ (ದಲಿತ ಶೋಷಿತ ಸಮಾಜ ಸಂಘರ್ಷ ಸಮಿತಿ) ಎಂಬ ಸಂಘಟನೆಯನ್ನು ಸ್ಥಾಪಿಸಿದರು. ಜಾಗೃತ ಸಮಾಜದಲ್ಲಿ ಬೆಳೆಯುತ್ತಿರುವ ನಾಯಕತ್ವವನ್ನು ಮುಂದೆ ರಾಜಕೀಯ ಹೋರಾಟಕ್ಕೆ ಸಜ್ಜುಗೊಳಿಸುವುದು ಅವರ ಉದ್ದೇಶವಾಗಿತ್ತು. ಈ ಉದ್ದೇಶ ಈಡೇರಿಕೆಗೆ ಅವರು ಎರಡು ಹಂತದ ಕಾರ್ಯಾಚರಣೆಯನ್ನು ಹಮ್ಮಿಕೊಂಡರು. ಸಾಮಾಜಿಕ ಕಾರ್ಯಾಚರಣೆ ಮತ್ತು ಸೀಮಿತ ರಾಜಕೀಯ ಕಾರ್ಯಾಚರಣೆ ಹಮ್ಮಿಕೊಳ್ಳಲಾಗಿತ್ತು. ೧೯೮೨ರಲ್ಲಿ ನಡೆದ ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಡಿ.ಎಸ್-೪ ವತಿಯಿಂದ ೪೬ ಸ್ಥಾನಗಳಿಗೆ ಸ್ಪರ್ಧಿಸಲಾಗಿತ್ತು. ೨೪-೯-೮೨ ರಂದು ಪೂನ ಒಡಂಬಡಿಕೆಗೆ ಧಿಕ್ಕಾರ ಎಂಬ ೬೦ ದಿನಗಳ ಜಾಗೃತಿ ಆಂದೋಲನವನ್ನು ದೇಶದ್ಯಂತ ಹಮ್ಮಿಕೊಳ್ಳಲಾಗಿತ್ತು. ಪೂನ ಒಡಂಬಡಿಕೆಯಿಂದಾಗಿ ತಮ್ಮ ಹಕ್ಕುಗಳನ್ನು ಕಳೆದುಕೊಂಡಿದ್ದ ಅಸ್ಪೃಶ್ಯರ ದನಿಯಾಗಿದ್ದ ನಾಯಕರೇ ಕಾಂಗ್ರೆಸ್‌ನೊಂದಿಗೆ ಕೂಡಿಕೊಂಡು ಪೂನ ಒಡಂಬಡಿಕೆಯ ಸುವರ್ಣ ಮಹೋತ್ಸವನ್ನು ಆಚರಿಸುವ ತಯಾರಿಯಲ್ಲಿದ್ದರು. ಗಾಂಧಿ ಮತ್ತು ಅಂಬೇಡ್ಕರ್‌ರವರ ಪುಥ್ಥಳಿಯನ್ನು ಜೋಡಿಯಾಗಿ ಸ್ಥಾಪಿಸುವ ಯೋಜನೆಯು ಆ ಚಮಚಾ ನಾಯಕರಲ್ಲಿ ಇತ್ತು ಡಿಎಸ್-೪ ಪ್ರತಿಭಟನಾ ಕಾರ್ಯಕ್ರಮದ ಫಲವಾಗಿ ಆ ಚಮಚಾಗಳ ಯೋಜನೆಯು ವಿಫಲವಾಗಿತ್ತು. ಆ ಸಂದರ್ಭದಲ್ಲಿ ಕಾನ್ಷಿರಾಂರವರು 'ಚಮಚಾ ಯುಗ' ಎಂಬ ಪುಸ್ತಕವನ್ನು ಬರೆದು ಸಮಾಜಕ್ಕೆ ಅರ್ಪಿಸಿದರು. ಆ ಸಂದರ್ಭದಲ್ಲಿ ಅವರಿಗೆ ಒಂದು ಐತಿಹಾಸಿಕ ಸತ್ಯ ಹೊಳೆಯಿತು. ೧೯೩೨ರಲ್ಲಿ ಪೂನಾ ಒಪ್ಪಂದದ ತರುವಾಯ ಆರಂಭವಾದ ಚಮಚಾ ಯುಗವನ್ನು ಅಂತ್ಯಗೊಳಿಸದೆ ಬಹುಜನ ಸಮಾಜವನ್ನು ಆಳುವ ಸಮಾಜವನ್ನಾಗಿ ಮಾಡುವುದು ಅಸಾಧ್ಯ. ಈ ನಿಟ್ಟಿನಲ್ಲಿ ಅವರು ೪ ಹಂತಗಳ ಕಾರ್ಯಾಚರಣೆ ರೂಪಿಸಿದರು.

ಪುನರುತ್ಥಾನ

ಅನೇಕರದು
'ನಿತ್ಯ ಮರಣ'!
ಸತ್ತ ದಿನ
ಪುನರುತ್ಥಾನ!

ಡಾ॥ ಸಿ.ಪಿ.ಕೆ

೧. ತಕ್ಷಣ-ಸಾಮಾಜಿಕ ಕಾರ್ಯಾಚರಣೆ ೨. ಅಲ್ಪಕಾಲಿಕ-ಸೀಮಿತ ರಾಜಕೀಯ ಕಾರ್ಯಾಚರಣೆ ೩. ದೀರ್ಘ ಕಾಲಿಕ-ಪೂರ್ಣಕಾಲಿಕ ಕಾರ್ಯಾಚರಣೆ ೪. ಶಾಶ್ವತ-ಸಾಂಸ್ಕೃತಿಕ ಬದಲಾವಣೆ ಮತ್ತು ಸಾಂಸ್ಕೃತಿಕ ನಿಯಂತ್ರಣ.

ಡಿಎಸ್-೪ರ ವತಿಯಿಂದ ಹಮ್ಮಿಕೊಂಡ ಇತರ ಕಾರ್ಯಕ್ರಮಗಳೆಂದರೆ ೧. ಜನತಾ ಸಂಸತ್, ೨. ಓಟಿನ ಮಹತ್ವ ತಿಳಿಸಲು ರ್‍ಯಾಲಿ, ೩. ಸಮಾನತೆ ಮತ್ತು ಆತ್ಮಗೌರವಕ್ಕಾಗಿ. ಆಂದೋಲನ. ೧೯೮೨-೮೩ರಲ್ಲಿ ಡಿಎಸ್-೪ರ ವತಿಯಿಂದ ದೆಹಲಿ ಮಹಾನಗರ ಪಾಲಿಕೆ, ಹರಯಾಣ, ಜಮ್ಮು-ಕಾಶ್ಮೀರ ಅಸೆಂಬ್ಲಿ ಚುನಾವಣೆಗಳಲ್ಲಿ ಸ್ಪರ್ಧಿಸಲಾಗಿತ್ತು. ೧೯೮೩-೮೪ರಲ್ಲಿ ಸಮಾನತೆ ಸಂದೇಶ ಸಾರುವ ರಾಷ್ಟ್ರಮಟ್ಟದ ಸೈಕಲ್ ಜಾಥಾ ಏರ್ಪಡಿಸಲಾಗಿತ್ತು. ಉತ್ತರ ಪ್ರದೇಶದಲ್ಲಿ ಹೆಂಡ ಬೇಡ ಬದಲು ವಸತಿ ಶಾಲೆ, ಆಸ್ಪತ್ರೆ, ಮನೆ ಬೇಕು ಎಂಬ ಆಂದೋಲನ ಹಮ್ಮಿಕೊಳ್ಳಲಾಗಿತ್ತು. ಸಾವಿರಾರು ಜನ ಕಾರ್ಯಕರ್ತರು ಬಂಧನಕ್ಕೆ ಒಳಗಾದರು, ಕಾನ್ಷಿರಾಂರವರು ಲಕ್ಷಾಂತರ ಕಿಲೋಮೀಟರ್ ಪಾದ ಯಾತ್ರೆ, ಸೈಕಲ್ ರ್‍ಯಾಲಿ, ಬಸ್ ಪ್ರಯಾಣ, ರೈಲು ಪ್ರಯಾಣ, ಕಡೆಯಲ್ಲಿ ವಿಮಾನ ಪ್ರಯಾಣದ ಮೂಲಕ ದೇಶದಲ್ಲೆ ಅತ್ಯಂತ ಹೆಚ್ಚು ದೂರವನ್ನು ದೇಶದ ಎಲ್ಲಾ ಪ್ರದೇಶಗಳನ್ನು ಸುತ್ತಾಡಿದ ರಾಜಕಾರಣಿ ಎಂಬ ಸಾಧನೆಗೆ ಭಾಜನರಾದರು.

೧೪-೪-೮೪ ರಂದು ಭೋಟ್‌ಕ್ಲಬ್ ಮೈದಾನದಲ್ಲಿ ಕಾನ್ಷಿರಾಂರವರು ಬಹುಜನ ಸಮಾಜ ಪಕ್ಷವನ್ನು ಆರಂಭಿಸಿದರು. ಬಹುಜನರು ದೇಶದ ಆಳುವ ವರ್ಗವಾಗಿ ಸ್ವತಂತ್ರ ರಾಜಕೀಯ ಅಧಿಕಾರವನ್ನು ಹಿಡಿಯುವ ಮೂಲಕ ಸಮಾನತೆಯನ್ನು ಸ್ಥಾಪಿಸಲು ಬಹುಜನರ ನಾಯಕತ್ವದಲ್ಲಿರುವ ಬಹುಜನ ಸಮಾಜದ ವಿಮೋಚನೆಯ ಗುರಿ ಹೊಂದಿರುವ ರಾಜಕೀಯ ಪಕ್ಷವನ್ನು ಕಟ್ಟಿ ಬಹುಜನರ ಸರ್ಕಾರವನ್ನು ರಚಿಸಬೇಕೆಂಬ ಅಂಬೇಡ್ಕರರ ಕನಸನ್ನು ನನಸು ಮಾಡುವುದೇ ಕಾನ್ಷಿರಾಂರವರ ಉದ್ದೇಶವಾಗಿತ್ತು.

೧೪-೪-೮೪ ರಂದು ಭೋಟ್‌ಕ್ಲಬ್ ಮೈದಾನದಲ್ಲಿ ಕಾನ್ಷಿರಾಂರವರು ಬಹುಜನ ಸಮಾಜ ಪಕ್ಷವನ್ನು ಆರಂಭಿಸಿದರು. ಬಹುಜನರು ದೇಶದ ಆಳುವ ವರ್ಗವಾಗಿ ಸ್ವತಂತ್ರ ರಾಜಕೀಯ ಅಧಿಕಾರವನ್ನು ಹಿಡಿಯುವ ಮೂಲಕ ಸಮಾನತೆಯನ್ನು ಸ್ಥಾಪಿಸಲು ಬಹುಜನರ ನಾಯಕತ್ವದಲ್ಲಿರುವ ಬಹುಜನ ಸಮಾಜದ ವಿಮೋಚನೆಯ ಗುರಿ ಹೊಂದಿರುವ ರಾಜಕೀಯ ಪಕ್ಷವನ್ನು ಕಟ್ಟಿ ಬಹುಜನರ ಸರ್ಕಾರವನ್ನು ರಚಿಸಬೇಕೆಂಬ ಅಂಬೇಡ್ಕರರ ಕನಸನ್ನು ನನಸು ಮಾಡುವ ಉದ್ದೇಶದಿಂದ ಕಾನ್ಷಿರಾಂರವರು ಬಿಎಸ್‌ಪಿ ಆರಂಭಿಸಿದರು.

ಆಗ ದೇಶದಲ್ಲಿ ಅಸ್ತಿತ್ವದಲ್ಲಿದ್ದ ಸುಮಾರು ೭೫ ರಾಜಕೀಯ ಪಕ್ಷಗಳ ಪೈಕಿ ಬಿ.ಎಸ್.ಪಿ. ಕಟ್ಟಕಡೆಯ ಸ್ಥಾನ ಹೊಂದಿತ್ತು. ೧೯೮೪ ರಲ್ಲಿ "ದೇಶಕ್ಕೆ ಸ್ವಾತಂತ್ರ್ಯ ಬಂದು ೩೭ ವರ್ಷಗಳು ಕಳೆದರೂ ಸಹ ಶೋಷಿತ ವರ್ಗಗಳು ಇನ್ನು ಗುಲಾಮಗಿರಿಯಲ್ಲಿವೆ ಏಕೆ?... ಕುರಿತು ರಾಷ್ಟ್ರಾದ್ಯಾಂತ ಆಂದೋಲನ ಹಮ್ಮಿಕೊಳ್ಳಲಾಗಿತ್ತು. ಅದೇ ವರ್ಷ ಕಾನ್ಷಿರಾಂರವರು ಸಂಸತ್ ಮುಂದೆ ಧರಣಿ ಕೈಗೊಂಡು 'ಮಂಡಲ್ ವರದಿ ಜಾರಿ ಮಾಡಿ ಇಲ್ಲವೆ ಅಧಿಕಾರದ ಕುರ್ಚಿ ಖಾಲಿ ಮಾಡಿ' ಎಂದು ಅಂದಿನ ಕಾಂಗ್ರೆಸ್ ಪಕ್ಷದ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು. ಮುಂದೆ ಈ ಚಳುವಳಿ ಬೆಳೆದು ಕಾನ್ಷಿರಾಂರವರ ಆಂದೋಲನಕ್ಕೆ ಹೆದರಿ ವಿ.ಪಿ.ಸಿಂಗ್‌ರವರ ಜನತಾ ದಳ ಸರ್ಕಾರವು ಮಂಡಲ್ ವರದಿ ಜಾರಿಗೊಳಿಸಬೇಕಾಯಿತು. ಡಿಸೆಂಬರ್ ೧೯೮೪ ಲೋಕಸಭಾ ಚುನಾವಣೆಯಲ್ಲಿ ೯ ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸ್ಪರ್ಧಿಸಿ ಪಕ್ಷವು ೧೦ ಲಕ್ಷ ಮತಗಳನ್ನು ಪಡೆಯಿತು. ಮೂರು ರಾಜ್ಯಗಳಲ್ಲಿ ಪಕ್ಷವನ್ನು ನೋಂದಾಯಿಸುವ ಅರ್ಹತೆ ಗಳಿಸಲಾಯಿತು. ಬಿಜ್ನೋರೆ ಲೋಕಸಬಾ ಕ್ಷೇತ್ರದಿಂದ ಮಾಯಾವತಿಯವರು ಸ್ಪರ್ಧಿಸಿ ೬೫೦೦ ಮತ ಪಡೆದರು.

೧೯೮೫ರಲ್ಲಿ ಗುಜಾರಾತಿನ ಪರಿಶಿಷ್ಟಜಾತಿಗಳ ಮೀಸಲಾತಿ ವಿರೋಧಿ ಆಂದೋಲನವನ್ನು ಖಂಡಿಸಿ ಮೀಸಲಾತಿ ಮುಂದುವರಿಸುವಂತೆ ಆಗ್ರಹಿಸಿ ಕಾನ್ಷಿರಾಂರವರ ನೇತೃತ್ವದಲ್ಲಿ ದೆಹಲಿಯಲ್ಲಿ ಪಕ್ಷದ ವತಿಯಿಂದ ಮೂರು ದಿನಗಳ ಪ್ರತಿಭಟನಾ ಧರಣಿ, ಅದೇ ವರ್ಷ ಉತ್ತರಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ೨೦೭ ಅಭ್ಯರ್ಥಿಗಳು ಸ್ಪರ್ಧಿಸಿ ೭.೦೦ ಲಕ್ಷ ಮತಗಳನ್ನು ಪಡೆದರು. ಎಲ್ಲಾ ಅಭ್ಯರ್ಥಿಗಳು ಸೋತರು. ಕೆಲವು ಕಡೆ ಬಿ.ಎಸ್.ಪಿ. ಅಭ್ಯರ್ಥಿಗಳು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ

ಗಳನ್ನು ಸೋಲಿಸಿದರು. ಅದೇ ವರ್ಷ ಪಂಜಾಬಿನ ವಿಧಾನ ಸಭಾ ಚುನಾವಣೆಯಲ್ಲಿ ಪಕ್ಷವು ಸುಮಾರು ೨.೬೪ ಲಕ್ಷ ಮತಗಳನ್ನು ಗಳಿಸಿ ಹಲವಾರು ಕಡೆ ಕಾಂಗ್ರೆಸ್ ಪಕ್ಷವನ್ನು ಸೋಲಿಸಿತು. ಅದೇ ವರ್ಷ ಲೋಕಸಭಾ ಚುನಾವಣೆಯಲ್ಲಿ ಪಕ್ಷವು ೨.೧೫ ಲಕ್ಷ ಮತಗಳನ್ನು ಗಳಿಸಿತು. ಬಿಜ್ನೋರೇ ಲೋಕಸಭಾ ಚುನಾವಣೆಯಲ್ಲಿ ಮಾಯಾವತಿಯವರು ಜಗಜೀವರಾಂ ಅವರು ಪುತ್ರಿ ಕಾಂಗ್ರೆಸ್ ಅಭ್ಯರ್ಥಿ ಮೀರಾ ಕುಮಾರ್ ವಿರುದ್ಧ ಸ್ಪರ್ಧಿಸಿ ೬೧,೫೦೦ ಮತಗಳನ್ನು ಗಳಿಸಿ ಭಾರಿ ಅಂತರದಲ್ಲಿ ಗೆಲ್ಲುತ್ತಿದ್ದ ಕಾಂಗ್ರೆಸ್ ಪಕ್ಷವು ಕೇವಲ ೬೦೦೦ ಮತಗಳ ಅಂತರದಲ್ಲಿ ಗೆಲ್ಲುವ ಪರಿಸ್ಥಿತಿಗೆ ತಂದರು ೧೯೮೭ ಲೋಕಸಭಾ ಉಪ ಚುನಾವಣೆಯಲ್ಲಿ ಮಾಯಾವತಿಯವರು ಸುಮಾರು ೧.೫೦ ಲಕ್ಷ ಮತಗಳನ್ನು ಗಳಿಸಿ ಹರಿದ್ವಾರ ಕ್ಷೇತ್ರದಲ್ಲಿ ೨ನೇ ಸ್ಥಾನ ಗಳಿಸಿದರು.

೧೫-೮-೧೯೮೭ ರಿಂದ ೧೫-೮-೮೮ ಈ ಅವಧಿಯಲ್ಲಿ ಸಾಮಾಜಿಕ ಆರ್ಥಿಕ ರಾಜಕೀಯ, ಪರಿವರ್ತನಾ ಚಳುವಳಿಯು ಕಾನ್ಷಿರಾಂರವರ ಧರಣಿಯ ಮೂಲಕ ದೆಹಲಿಯಲ್ಲಿ ಆರಂಬವಾಯಿತು. ೬-೬-೯೮ ಅಲಹಾಬಾದ್ ಲೋಕಸಭಾ ಉಪ ಚುನಾವಣೆಯಲ್ಲಿ ಕಾನ್ಷಿರಾಂರವರು ಸ್ಪರ್ಧಿಸಿ ೭೨.೦೦೦ ಮತಗಳನ್ನು ಪಡೆದು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯ ಸೋಲಿಗೆ ಕಾರಣರಾದರು. ಆಗ ೨೩ ಪಕ್ಷಗಳ ಜನತಾದಳದ ಅಭ್ಯರ್ಥಿ ವಿ.ಪಿ. ಸಿಂಗ್‌ಗೆದ್ದರು. ಕಾನ್ಷಿರಾಂರವರು ಮತದಾರರಲ್ಲಿ ವಿನಂತಿಸಿ "ಬಿ.ಎಸ್.ಪಿಗೆ ಒಂದು ಓಟುಕೊಡಿ-ಒಂದು ನೋಟು ಕೊಡಿ"ಎಂಬ ಆಂದೋಲನವನ್ನು ಜನಪ್ರಿಯಗೊಳಿಸಿದರು.

ಇದರಿಂದಾಗಿ ಭಾರತದ ರಾಜಕಾರಣದಲ್ಲಿ ಮಹತ್ವದ ಬದಲಾವಣೆಯನ್ನು ತಂದ ಕಾನ್ಷಿರಾಂರವರನ್ನು ಸುಮಾರು ೧೦೮ ಪತ್ರಿಕೆಗಳು ಸಂದರ್ಶನ ಮಾಡಿದವು. ಇಂಡಿಯಾ ಟುಡೇ ಪತ್ರಿಕೆಯಲ್ಲಿ "ಭಾರತದ ಬಾನಿನಲ್ಲಿ ಮೂಡುತ್ತಿರು ನಕ್ಷತ್ರ ಬಿಎಸ್‌ಪಿ" ಎಂದು ಪ್ರಕಟಿಸಲಾಗಿತ್ತು.

೧೯೮೮ ಉತ್ತರಪ್ರದೇಶದ ಮುನ್ಸಿಪಲ್ ಚುನಾವಣೆಗಳಲ್ಲಿ ಬಿ.ಎಸ್.ಪಿ. ಗಳಿಸಿದ ಮುನ್ಸಿಪಲ್ ಸ್ಥಾನಗಳು: ೧೮೮, ಬಿ.ಜೆ.ಪಿ.ಗೆ ೫೪ ಕಾಂಗ್ರೆಸ್‌ಗೆ ೪೫, ಜನತಾದಳ ೧೪ ಕಮ್ಯೂನಿಸ್ಟ್ ೩೦, ಸ್ಥಾನಗಳು ದೂರಕಿದವು. ಅದೇ ರೀತಿ ಗ್ರಾಮಪಂಚಾಯಿತಿ ಚುನಾವಣೆಗಳಲ್ಲಿ ಬಿ.ಎಸ್.ಪಿ.ಗೆ ೨೪,೦೦೦ ಮತ್ತು ಕಾಂಗ್ರೆಸ್‌ಗೆ ಕೇವಲ ೨೪, ೭೦೦ ಸ್ಥಾನಗಳನ್ನು ಲಭಿಸಿದವು. ಕೇವಲ ೪ ವರ್ಷ ವಯಸ್ಸಿನ ಬಿ.ಎಸ್.ಪಿ.ಯು ೯೩ ವರ್ಷ ಕಾಂಗ್ರೆಸ್‌ನ್ನು ಉತ್ತರಪ್ರದೇಶದಲ್ಲಿ ನಾಶಪಡಿಸಿ ನಂತರ ಉತ್ತರಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷವು ಎಂದೆಂದಿಗೂ ಸರ್ಕಾರ ರಚಿಸುವ ಅವಕಾಶವನ್ನು ಪಡೆಯಲೇ ಇಲ್ಲ.

ಪ್ರಾದೇಶಿಕ ಪಕ್ಷದ ಮಾನ್ಯತೆ

೧೯೮೯ ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ [illegible] ಪ್ರದೇಶದಲ್ಲಿ ಎರಡು ಲೋಕ ಸಭಾ ಸ್ಥಾನಗಳಲ್ಲಿ [illegible] ಎಸ್.ಪಿ. ಗೆದ್ದಿತು. ಪ್ರಥಮ ಭಾರಿಗೆ ಮಾಯಾವತಿಯವರು ಲೋಕಸಭಾ ಸದಸ್ಯರಾಗಿ ಆಯ್ಕೆಯಾದರು. ಅದೇ ವರ್ಷ ವಿಧಾನಸಭಾ ಚುನಾವಣೆಗಳಲ್ಲಿ ಉತ್ತರಪ್ರದೇಶದಲ್ಲಿ ೧೩ ಮತ್ತು ಮಧ್ಯಪ್ರದೇಶದಲ್ಲಿ ೨ ಸ್ಥಾನಗಳನ್ನು ಗೆಲ್ಲಲಾಯಿತು. ಅದೇ ವರ್ಷ ಪಂಜಾಬಿನಲ್ಲಿ ಲೋಕಸಭಾ ಚುನಾವಣೆಗಳಲ್ಲಿ ಶೇ. ೯ ಮತ ಪಡೆದು ಒಬ್ಬರು ಸಂಸದರ ಗೆಲವು ಮಧ್ಯಪ್ರದೇಶದಲ್ಲಿ ಎರಡು

ಕಾನ್ಷಿರಾಂರವರ ಉತ್ತರಾಧಿಕಾರಿ ಮಾಯಾವತಿ

ಶಾಸಕರ ಗೆಲವು. ಇದರಿಂದಾಗಿ ಪ್ರಥಮ ಭಾರಿಗೆ ಪಕ್ಷವು ಉತ್ತರಪ್ರದೇಶ ಮತ್ತು ಪಂಜಾಬ್ ರಾಜ್ಯಗಳಲ್ಲಿ ಚುನಾವಣಾ ಆಯೋಗದಿಂದ ಪ್ರಾದೇಶಿಕ ಪಕ್ಷದ ಮಾನ್ಯತೆಯನ್ನು ಪಡೆಯಿತು.ದೇಶಾದ್ಯಂತ ಪಕ್ಷದ ವತಿಯಿಂದ ೬ ಸಮ್ಮೇಳನ ಗಳು: ಅಂಗವಾಗಿ ಬೆಂಗಳೂರಿನಲ್ಲಿ "ಕ್ರೈಸ್ತರು ಬಿ.ಎಸ್.ಪಿ.ಯಲ್ಲಿ ಸುರಕ್ಷಿತರು" ಸಮ್ಮೇಳನ ಹಮ್ಮಿಕೊಳ್ಳಲಾಗಿತ್ತು.

೧೯೯೧ ಲೋಕಸಭೆಗೆ ಮಧ್ಯಂತರ ಚುನಾವಣೆ.

೧೯೯೧ ರಲ್ಲಿ ಲೋಕಸಭೆ ಮತ್ತು ವಿಧಾನಸಭೆಗೆ ನಡೆದ ಮಧ್ಯಂತರ ಚುನಾವಣೆಯಲ್ಲಿ ಬಿ.ಎಸ್.ಪಿಗೆ ಒಂದು ಲೋಕಸಭೆ ಮತ್ತು ಉತ್ತರಪ್ರದೇಶದ ೧೨ ಹಾಗೂ ಹರಿಯಾಣದಲ್ಲಿ ಒಂದು ವಿಧಾನಸಭಾ ಸ್ಥಾನಗಳು ದೊರೆತವು. ೧೯೯೨ರಲ್ಲಿ ಉತ್ತರಪ್ರದೇಶ ಇಟಾವಾ ಉಪಚುನಾವಣೆಯಲ್ಲಿ ಕಾನ್ಷಿರಾಂರವರು ಕಾಂಗ್ರೆಸ್ ಪಕ್ಷವನ್ನು ೯೦೦ ಮತಗಳ ಅಂತರದಲ್ಲಿ ಸೋಲಿಸಿ ಪ್ರಥಮಬಾರಿಗೆ ಲೋಕಸಭಾ ಸದಸ್ಯರಾಗಿ ಆಯ್ಕೆದರು. ಅದೇ ವರ್ಷ ಪಂಜಾಬಿನಲ್ಲಿ ಇಬ್ಬರು ಸಂಸದರು ಆಯ್ಕೆ. ೧೯೯೩ರಲ್ಲಿ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಮುಲಾಯಂ ಸಿಂಗ್‌ರ ಎಸ್.ಪಿ. ಮತ್ತು ಕಾನ್ಷಿರಾಂರವರ ಬಿ.ಎಸ್.ಪಿ. ನಡುವೆ ಚುನಾವಣಾ ಪೂರ್ವ ಹೊಂದಾಣಿಕೆ. ಎಸ್.ಪಿ. ೧೦೯ ಶಾಸಕರು ಹಾಗೂ ಬಿ.ಎಸ್.ಪಿ.ಗೆ ೬೭ ಶಾಸಕರು ಜಯ. ಎಸ್.ಪಿ. ಮತ್ತು ಬಿ.ಎಸ್.ಪಿ ಸಮ್ಮಿಶ್ರ ಸರ್ಕಾರ ಮೂಲಾಯಂ ಸಿಂಗ್ ಮುಖ್ಯಮಂತ್ರಿ ನೇತೃತ್ವದಲ್ಲಿ ಸಮ್ಮಿಶ್ರ ಸರ್ಕಾರ ರಚನೆ. ಆ ಸಂಪುಟದಲ್ಲಿ ಮಾಯಾವತಿ ಹೊರತುಪಡಿಸಿ ೧೧ BSP ಸಚಿವರು.

ದಲಿತರ ಮೇಲೆ ದೌರ್ಜನ್ಯಗಳು ನಡೆಯದಂತೆ ಆಡಳಿತ ನಡೆಸಬೇಕೆಂದು ಮೂಲಾಯಂಸಿಂಗ್‌ರವರಿಗೆ ಕಾನ್ಷಿರಾಂರವರ ಷರತ್ತು. ಆದರೆ ಮೂಲಾಯಾಂಸಿಂಗ್ ದಲಿತರ ಮೇಲೆ ದೌರ್ಜನ್ಯ ತಡೆಯಲು ವಿಫಲವಾದ ಹಿನ್ನೆಲೆಯಲ್ಲಿ ಬಿ.ಎಸ್.ಪಿ.ಯಿಂದ ೧೯೯೫ ಮೇ.ನಲ್ಲಿ ಬೆಂಬಲ ವಾಪಸ್ಸು ಪಡೆದಾಗ ಸರ್ಕಾರವು ಬಿದ್ದು ಹೋಯಿತು. ಮುಲಾಯಂರಿಂದ ಮಾಯಾವತಿಯವರ ಮೇಲೆ ಹಲ್ಲೆ. ಎಸ್.ಪಿ. ಬಿ.ಎಸ್.ಪಿ. ನಡುವೆ ತಾತ್ವಿಕ ಭಿನ್ನಾಭಿಪ್ರಾಯ ಭುಗಿಲು.

ಕರ್ನಾಟಕದಲ್ಲಿ ಬಿ.ಎಸ್.ಪಿ.

ಬಾಂಸೇಫ್ ಕಾಲದಿಂದಲೂ ಕರ್ನಾಟಕಕ್ಕೆ ಬರುತ್ತಿದ್ದ ಕಾನ್ಷಿರಾಂರವರು ರಾಜ್ಯದಲ್ಲೆಡೆ ತಿರುಗಿ ಬಿ.ಎಸ್.ಪಿ.ಯನ್ನು ಕಟ್ಟಿದರು. ೧೯೯೪ರಲ್ಲಿ ಕರ್ನಾಟಕದಲ್ಲಿ ಪಕ್ಷವು ಒಂದು ವಿಧಾನಸಭಾ ಸ್ಥಾನವನ್ನುಗಳಿಸಿತ್ತು. ೨೦೦೪ರ ವಿಧಾನಸಭಾ ಚುನಾವಣೆಯಲ್ಲಿ ಮಿಂಚಿ ಸುಮಾರು ೪೦ ಕಡೆಗಳಲ್ಲಿ ಕಾಂಗ್ರೆಸ್, ಜನತಾದಳ ಬಿ.ಜೆ.ಪಿ.ಗಳನ್ನು ಪರಾಭಾವಗೊಳಿಸಿ ಸಮ್ಮಿಶ್ರ ಸರ್ಕಾರದ ಪ್ರಾರಂಭಕ್ಕೆ ಬಿ.ಎಸ್.ಪಿ. ನಾಂದಿ ಹಾಡಿತು. ಇದರಲ್ಲಿ ಕಾನ್ಷಿರಾಂರವರು ತಮ್ಮ ಅಧ್ಯಯನ ಶಿಬಿರಗಳಲ್ಲಿ ಮತ್ತು ರಾಜಕೀಯ ಹೋರಾಟಗಳಲ್ಲಿ ನೀಡಿದ ಮಾರ್ಗದರ್ಶನ ಕಾರಣ.

ಮೊದಲ ಬಾರಿಗೆ ಮುಖ್ಯಮಂತ್ರಿಗಳಾದ ಮಾಯಾವತಿ ಜೂನ್ ೯೫ರಲ್ಲಿ ಬಿ.ಜೆ.ಪಿ. ಮತ್ತು ಕಾಂಗ್ರೆಸ್ ಪಕ್ಷಗಳು ಬೇಷರತ್ತಾಗಿ ಬಿ.ಎಸ್.ಪಿ ಪಕ್ಷವು ಸರ್ಕಾರವನ್ನು ರಚಿಸಲು ಹೊರಗಿನಿಂದ ಬೆಂಬಲಿಸಿದವು. ಮೊಟ್ಟಮೊದಲ ಬಾರಿಗೆ ೩-೬-೯೫ ರಿಂದ ದಲಿತ ಮಹಿಳೆ ಅಕ್ಕ ಮಾಯಾವತಿಯವರು ಉತ್ತರಪ್ರದೇಶದಂತ-ಅತಿದೊಡ್ಡ ರಾಜ್ಯದಲ್ಲಿ ಮುಖ್ಯಮಂತ್ರಿಗಳಾದರು.

ಮೊದಲ ಬಾರಿಗೆ ರಾಷ್ಟ್ರೀಯ ಪಕ್ಷದ ಮಾನ್ಯತೆ.

೧೯೯೬ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಒಟ್ಟು ೧೮ ಸಂಸದರ ಗೆಲುವು ಕಂಡು (ಉತ್ತರ ಪ್ರದೇಶ ೬, ಮಧ್ಯಪ್ರದೇಶ ೩, ಹರಿಯಾಣ ೧, ಪಂಜಾಬು ೧, ಕಾಶ್ಮೀರದ ವಿಧಾನಸಭಾ ಚುನಾವಣೆಯಲ್ಲಿ ೪ ಶಾಸಕರ ಗೆಲುವು ಮತ್ತು ಆ ರಾಜ್ಯದಲ್ಲಿ ಪ್ರದೇಶಿಕ ಪಕ್ಷದ ಮಾನ್ಯತೆ. ಕೇಂದ್ರ ಚುನಾವಣಾ ಆಯೋಗದ ನಿಯಮಾನುಸಾರ ನಾಲ್ಕು ರಾಜ್ಯಗಳಲ್ಲಿ ಪ್ರದೇಶಿಕ ಪಕ್ಷದ ಮಾನ್ಯತೆ ಪಡೆದ ಬಿ.ಎಸ್.ಪಿ.ಗೆ ಮೊದಲ ಬಾರಿಗೆ ರಾಷ್ಟ್ರೀಯ ಪಕ್ಷದ ಮಾನ್ಯತೆ ಬಿ.ಎಸ್.ಪಿ.ಯು ಪಡೆಯಿತು. ಈಗ ದೇಶದ ೪ನೇ ಅತೀ ದೊಡ್ಡ ರಾಷ್ಟ್ರೀಯ ಪಕ್ಷವಾಗಿದೆ. ಇದರಿಂದ ಬಹುಜನರು ರಾಷ್ಟ್ರೀಯ ಪಕ್ಷವನ್ನು ಕಟ್ಟಿ ತಮ್ಮ ಕನಸನ್ನು ನನಸು ಮಾಡಬೇಕೆಂದು ಬಯಸಿದ್ದ ಅಂಬೇಡ್ಕರ್‌ರವರ ಕನಸು ನನಸಾದಂತಾಯಿತು.

ಕಾನ್ಷಿರಾಂರವರಿಗೆ ಪಾರ್ಶ್ವವಾಯು:

೨೦೦೩ ರಲ್ಲಿ ಕಾನ್ಷಿರಾಂರವರಿಗೆ ಪಾರ್ಶ್ವವಾಯು ಹೃದಯದ ಕಾಯಿಲೆ ಸಕ್ಕರೆ ಕಾಯಿಲೆ, ರಕ್ತದ ಒತ್ತಡ ಕಾಯಿಲೆಗಳಿಂದ ಆರೋಗ್ಯ ಹಾಳಾಯಿತು. ನೆನಪಿನ ಶಕ್ತಿ ನಶಿಸಿ ಹೋಯಿತು. ಬಹುಜನರು ಈ ದೇಶವನ್ನು ಆಳಬೇಕು ಎಂಬ ಕನಸು ನನಸು ಮಾಡುವ ಹೊಣೆಗಾರಿಕೆ ಅವರ ಕೋಟ್ಯಾಂತರ ಅನುಯಾಯಿಗಳ ಮೇಲೆ ಈಗ ಇದೆ.

ಕಾನ್ಷಿರಾಂರವರ ಪರಿನಿಬ್ಬಾಣ.

೯-೧೦-೨೦೦೬ ರಂದು ನವದೆಹಲಿಯಲ್ಲಿ ಕಾನ್ಷಿರಾಂರವರು ಪರಿನಿಬ್ಬಾಣ ಹೊಂದಿದರು. ನಿರಂತರ ಹೋರಾಟಗಳಿಂದ ಮಾತ್ರ ಸ್ವತಂತ್ರ ರಾಜಕೀಯ ಅಧಿಕಾರವನ್ನು ಗಳಿಸುವ ಮೂಲಕ ಕೇಂದ್ರ ಮತ್ತು ರಾಜ್ಯಗಳಲ್ಲಿ ಬಿ.ಎಸ್.ಪಿ. ಸರ್ಕಾರವನ್ನು ರಚಿಸಿ ಸಾಮ್ರಾಟ್ ಅಶೋಕನ ಭಾರತವನ್ನು ಪುನರ್ ಸ್ಥಾಪಿಸುವುದು, ಬಾಬಾ ಸಾಹೇಬರವರ ಪ್ರಬುದ್ಧ ಭಾರತವನ್ನು ಕಟ್ಟುವುದೇ ನನ್ನ ಗುರಿ ಎಂದ ಕಾನ್ಷಿರಾಂರವರು ಇಂದು ಬಹುಜನರ ಪಾಲಿಗೆ ಸ್ಫೂರ್ತಿ ತುಂಬುವ ನಾಯಕರಾಗಿ ಜನಮದಲ್ಲಿ ಉಳಿದಿದ್ದಾರೆ. □

ಬ್ರಾಹ್ಮಿನ್ ಫೋಬಿಯಾ

ಬ್ರಾಹ್ಮಿನ್ ಫೋಬಿಯಾ ಎಂದರೆ ಬ್ರಾಹ್ಮಣರನ್ನು ಕುರಿತು ಬ್ರಾಹ್ಮಣೇತರ ಜಾತಿಗಳಲ್ಲಿರುವ ಅಗಾಧ ಭಯ, ಅಳುಕು ಅಂಜಿಕೆ, ಕೀಳರಿಮೆ, ಬಲಿಪಶು ತನದ ಕಲ್ಪನೆ ಮತ್ತು ಅನುಭವಿಸುವಿಕೆ. ಮುಂದೆ ಎಂದಾದರೂ ಬ್ರಾಹ್ಮಣ ರಿಂದ ತೊಂದರೆಗೋ, ಕುತಂತ್ರಕ್ಕೊ ಒಳಗಾಗ ಬಹುದೆಂಬ ಅನುಮಾನಿತ ಸತ್ಯ ಇತ್ಯಾದಿ ಮೇಲಿನ ಅರ್ಥಗಳಿಗೆ ಸಮೀಪ ವಿರುವ ನಿಮಗೆ ಹೊಳೆವ ಯಾವ ಅರ್ಥವನ್ನಾದರೂ ಕೊಟ್ಟುಕೊಳ್ಳಬಹುದು. ಬ್ರಾಹ್ಮಣರನ್ನು ಕಂಡರೆ ಕಾರ್ಪೊರೇಟ್ ವಲಯ ದಲ್ಲಿ ಕೆಲಸ ಮಾಡುವವ ನಿಂದ ಹಿಡಿದು ಗ್ರಾಮೀಣ ಪ್ರದೇಶದಲ್ಲಿರುವ ರೈತನೂ ಹೆದರುತ್ತಾನೆ. ಈ ಫೋಬಿಯಾಕ್ಕೆ ಹೆಚ್ಚಾಗಿ ತುತ್ತಾಗಿರುವವರು ಬಾಹ್ಮಣೇತರ ಬುದ್ಧಿ ಜೀವಿಗಳು. ಒಟ್ಟಾರೆಯಾಗಿ ಶೇಕಡ ೩% ರಷ್ಟಿರುವ ಬ್ರಾಹ್ಮಣರು ಇಡೀ ಬ್ರಾಹ್ಮಣೇತರ ಜನಸಮುದಾಯ ವನ್ನೇ ಒಂದು ಬಗೆಯ ಭಯಕ್ಕೆ ದೂಡಿದ್ದಾರೆ. ಕಟುವಾಗಿ ಹೇಳಬೇಕೆಂದರೆ ಭಯೋತ್ಪಾದಕರಾಗಿದ್ದಾರೆ.

ಡಾ|| ಸಿ.ಜಿ. ಲಕ್ಷ್ಮಿಪತಿ

ಭಾಗ-೧

ಈ ಲೇಖನದ ಶೀರ್ಷಿಕೆಯನ್ನು ಖ್ಯಾತ ದಲಿತ ಚಿಂತಕ ಚಂದ್ರಭಾನ್ ಪ್ರಸಾದ್‌ರ 'ದಲಿತ ಫೋಬಿಯಾ' ಎಂಬ ಪರಿಕಲ್ಪನೆ ಯಿಂದ ಸ್ಫೂರ್ತಿ ಪಡೆದಿದೆ. ಚಂದ್ರಭಾನ್ ಪ್ರಸಾದ್‌ರವರು ಭಾರತದ ದಲಿತೇತರ ಸಮುದಾಯಗಳು 'ದಲಿತ್ ಫೋಬಿಯಾ'ದಿಂದ ನರಳುತ್ತಿರುವ ಬಗೆಯನ್ನು ಚಾರಿತ್ರಿಕವಾಗಿ ವಿವರಿಸುತ್ತಾರೆ. ಅದರ ಚರ್ಚೆಗೆ ನಾನು ಹೋಗುವುದಿಲ್ಲ. ಈ ಶೀರ್ಷಿಕೆ ಹೇಗೆ ಬಂತೆಂಬುದನ್ನು ತಿಳಿಸುವ ಸಲುವಾಗಿ ಇಷ್ಟೆಲ್ಲಾ ಹೇಳಬೇಕಾಯಿತು. ಫೋಬಿಯಾ ಎಂದರೆ ಭಯ ಎಂದರ್ಥ. ವೈದ್ಯ ವಿಜ್ಞಾನ ಗುರುತಿಸಿರುವ ಪ್ರಕಾರ ೫೩೦ ಬಗೆಯ ಫೋಬಿಯಾಗಳಿವೆಯಂತೆ. ಜನರಲ್ಲಿರುವ ಫೋಬಿಯಾಗಳ ಪಟ್ಟಿಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಚಂದ್ರಭಾನ್ ಪ್ರಸಾದ್ ಅಂತಹ ಕೆಲವು ಫೋಬಿಯಾಗಳ ಪಟ್ಟಿಯನ್ನು ತಮ್ಮ ಪುಸ್ತಕದಲ್ಲಿ ನೀಡಿದ್ದಾರೆ ಅವು ಹೀಗಿವೆ.

* ದಲಿತ್ ಫೋಬಿಯಾ:- ದಲಿತರನ್ನು ಕಂಡರೆ ಇರುವ ಭಯ (ಚಂದ್ರಭಾನ್ ಪ್ರಸಾದ್ ಅವರ ಪರಿಕಲ್ಪನೆ)
* ಆಂಗ್ಲೋ ಫೋಬಿಯಾ:- ಅಂದರೆ ಇಂಗ್ಲೆಂಡನ್ನು ಇಂಗ್ಲಿಷ್ ಸಂಸ್ಕೃತಿಯನ್ನು ಕಂಡರೆ ಇರುವ ಭಯ.
* ಜ್ಯೂಡಿಯೋ ಫೋಬಿಯಾ:- ಜೂಗಳು ಅಥವಾ ಯಹೂದಿಗಳನ್ನು ಕಂಡರೆ ಇರುವ ಭಯ.
* ಇಲಿತ್ಯಿರೋ ಫೋಬಿಯಾ:- ಸ್ವಾತಂತ್ರ್ಯ ಕುರಿತ ಭಯ.
* ಒಫ್ಫಿಡಿಯೋ ಫೋಬಿಯಾ:- ಹಾವುಗಳ ಕುರಿತ ಭಯ
* ಥಾತೋ ಫೋಬಿಯಾ:- ಸಾವನ್ನು ಕುರಿತ ಭಯ.
* ಐಡಿಯಾ ಫೋಬಿಯಾ:- ಹೊಸ ಪರಿಕಲ್ಪನೆ, ವಿಚಾರ ಅಥವಾ ಐಡಿಯಾಗಳನ್ನು ಕಂಡರೆ ಅಂಜಿಕೆ.
* ಬ್ರಾಹ್ಮಿನ್ ಫೋಬಿಯಾ:- ಬ್ರಾಹ್ಮಣರನ್ನು ಕಂಡರೆ ಇರುವ ಅಂಜಿಕೆ. (ಲೇಖಕನ ಪರಿಕಲ್ಪನೆ)

ಮೇಲಿನ ಫೋಬಿಯಾಗಳಲ್ಲಿ ಕೆಲವು ಸಾಂಸ್ಕೃತಿಕ ಜೈವಿಕವಾಗಿವೆ. ಬಹುತೇಕ ಸಾಂಸ್ಕೃತಿಕ ಹಾಗೂ ಸಾಮಾಜಿಕವಾಗಿವೆ. ಸಾಂಸ್ಕೃತಿಕ ಮತ್ತು ಸಾಮಾಜಿಕ ಭಯಗಳು ವ್ಯಕ್ತಿಯೊಬ್ಬನ/ಳ ಮೇಲೆ ಅಗಾಧ ಪ್ರಭಾವ ಬೀರಿ ಅವು ಜೈವಿಕವಾಗಿಬಿಡುತ್ತವೆ. ಎಂದು ಚಂದ್ರಭಾನ್ ಪ್ರಸಾದ್ ವಿವರಿಸುತ್ತಾರೆ. ಇದೇ ಪ್ರಮೇಯದ ಆಧಾರದ ಮೇಲೆ ಈ ಲೇಖನದಲ್ಲಿ ಭಾರತೀಯ ಸಾಮಾಜದ ಬಹುತೇಕ ಬ್ರಾಹ್ಮಣೇತರರನ್ನು ಕಾಡುತ್ತಿರುವ "ಬ್ರಾಹ್ಮಿನ್ ಫೋಬಿಯಾ" ಕುರಿತು ಚರ್ಚಿಸಲಾಗುತ್ತಿದೆ.

ಬ್ರಾಹ್ಮಿನ್ ಫೋಬಿಯಾ ಎಂದರೆ ಬ್ರಾಹ್ಮಣರನ್ನು ಕುರಿತು ಬ್ರಾಹ್ಮಣೇತರ ಜಾತಿಗಳಲ್ಲಿರುವ ಅಗಾಧ ಭಯ, ಅಳುಕು ಅಂಜಿಕೆ, ಕೀಳರಿಮೆ, ಬಲಿಪಶುತನದ ಕಲ್ಪನೆ ಮತ್ತು ಅನುಭವಿಸುವಿಕೆ ಮುಂದೆ ಎಂದಾದರೂ ಬ್ರಾಹ್ಮಣರಿಂದ ತೊಂದರೆಗೋ, ಕುತಂತ್ರಕ್ಕೊ ಒಳಗಾಗಬಹುದೆಂಬ ಅನುಮಾನಿತ ಸತ್ಯ (HYPOTHESIS) ಇತ್ಯಾದಿ ಮೇಲಿನ ಅರ್ಥಗಳಿಗೆ ಸಮೀಪವಿರುವ ನಿಮಗೆ ಹೊಳೆವ ಯಾವ ಅರ್ಥವನ್ನಾದರೂ ಕೊಟ್ಟುಕೊಳ್ಳಬಹುದು. ಬ್ರಾಹ್ಮಣರನ್ನು ಕಂಡರೆ ಕಾರ್ಪೊರೇಟ್ ವಲಯದಲ್ಲಿ ಕೆಲಸ ಮಾಡುವವನಿಂದ ಹಿಡಿದು ಗ್ರಾಮೀಣ ಪ್ರದೇಶದಲ್ಲಿರುವ ರೈತನೂ ಹೆದರುತ್ತಾನೆ. ಈ ಫೋಬಿಯಾಕ್ಕೆ ಹೆಚ್ಚಾಗಿ ತುತ್ತಾಗಿರುವವರು ಲೇಖಕನ ತಿಳಿವಳಿಕೆಯ ಮಿತಿಯಲ್ಲಿ ಗುರುತಿಸುವುದಾದರೆ, ಬಾಹ್ಮಣೇತರ ಬುದ್ಧಿ ಜೀವಿಗಳು, ಭಾರತದಾದ್ಯಂತ ತಿರುಪತಿಯ ಬ್ರಾಹ್ಮಣ ಪೂಜಾರಿಯ ಹೊಟ್ಟೆಯಂತೆ ಬೆಳೆದು ನಿಂತಿರುವ ಮಧ್ಯಮವರ್ಗ. ಉದಾರೀಕರಣ, ನಾಗರೀಕರಣ, ರಿಯಲ್ ಎಸ್ಟೇಟ್ ಉದ್ದಿಮೆಯ ಲಾಭದಿಂದ ಕೊಬ್ಬುತ್ತಿರುವ ನವ ಶ್ರೀಮಂತವರ್ಗ. ಭಾರತದ ಉದ್ದಗಲಕ್ಕೂ ಇರುವ ಶೂದ್ರ ಜನಸಾಮಾನ್ಯರು ಇತ್ಯಾದಿ. ಒಟ್ಟಾರೆಯಾಗಿ ಶೇಕಡ ೩% ರಷ್ಟಿರುವ ಬ್ರಾಹ್ಮಣರು ಇಡೀ ಬ್ರಾಹ್ಮಣೇತರ ಜನಸಮುದಾಯವನ್ನೇ ಒಂದು ಬಗೆಯ ಭಯಕ್ಕೆ ದೂಡಿದ್ದಾರೆ. ಕಟುವಾಗಿ ಹೇಳಬೇಕೆಂದರೆ ಭಯೋತ್ಪಾದಕರಾಗಿದ್ದಾರೆ. ಯಾರಾದರು ಒಪ್ಪಲಿ ಬಿಡಲಿ ಪ್ರತಿಯೊಬ್ಬ ಬ್ರಾಹ್ಮಣೇತರನ್ನು ಈ ಭಯೋತ್ಪಾದನೆಗೆ ತುತ್ತಾಗಿರುವುದು ಎಲ್ಲರಿಗೂ ಗೊತ್ತಿರುವ ಗುಟ್ಟು, ಆದರೆ ಅದನ್ನು ಸ್ಪಷ್ಟವಾಗಿ ಗುರುತಿಸಿ ಪರಿಕಲ್ಪನೆಯಾಗಿ ರೂಪಿಸಿಕೊಳ್ಳಲು ಈ ಲೇಖನ ಪ್ರಯತ್ನಿಸುತ್ತದೆ. ಬ್ರಾಹ್ಮಣೇತರರಲ್ಲಿ 'ಬ್ರಾಹ್ಮಿನ್ ಫೋಬಿಯಾ' ಲಕ್ಷಣಗಳು ಯಾವ ರೀತಿಯಲ್ಲಿ ಅಭಿವ್ಯಕ್ತಿಗೊಳ್ಳುತ್ತವೆ ಅಥವಾ ಪ್ರಕಟವಾಗುತ್ತವೆ ಎಂಬುದನ್ನು ಉದಾಹರಣೆ ಸಮೇತ ಪರಿಶೀಲಿಸುವ. ಗ್ರಾಮೀಣ ಪ್ರದೇಶದ ಭೂಮಾಲೀಕರು, ರೈತರು ಮತ್ತು ಜನಸಾಮಾನ್ಯರಲ್ಲಿ ಬ್ರಾಹ್ಮಿನ್ ಫೋಬಿಯಾ ಧಾರ್ಮಿಕ ಮತ್ತು ಸಾಂಸ್ಕೃತಿಕ ರೂಪದಲ್ಲಿ ವ್ಯಕ್ತವಾಗುತ್ತದೆ. ಹಬ್ಬ ಹರಿದಿನ, ಜಾತ್ರೆ, ವಿವಾಹ, ಗೃಹಪ್ರವೇಶ ಸುಗ್ಗಿ ಪೂಜೆ ಮೊದಲಾದುವುಗಳಿಗೆ ಬ್ರಾಹ್ಮಣರಿಂದ ಸಲಹೆ ಪಡೆಯಲಾಗುತ್ತದೆ. ಅವರ ಪಂಚಾಂಗ, ಜೋತಿಷ್ಯ ಶಾಸ್ತ್ರಗಳು ಇದು ಮೇಲಿನ ಗುಂಪುಗಳ ಸಾಂಸ್ಕೃತಿಕ ಸಾಮಾಜಿಕ ಬದುಕನ್ನು ನಿರ್ಧರಿಸುತ್ತವೆ. ಬ್ರಾಹ್ಮಣರ ಶಾಪಕ್ಕೆ ತುತ್ತಾಗುವ ಭಯದಿಂದ ನರಳುತ್ತಾರೆ.

ಬ್ರಾಹ್ಮಿನ್ ಫೋಬಿಯಾಕ್ಕೆ ತುತ್ತಾಗಿರುವ ಮತ್ತೊಂದು ಗುಂಪೆಂದರೆ ಬ್ರಾಹ್ಮಣೇತರ ಬುದ್ಧಿ ಜೀವಿಗಳು, ಸಾಹಿತಿಗಳು. ಅವರಲ್ಲಿರುವ ಬ್ರಾಹ್ಮಿನ್ ಫೋಬಿಯಾದ ಲಕ್ಷಣಗಳನ್ನು ಕೆಳಕಂಡಂತೆ ಗುರುತಿಸಬಹುದು. ಬ್ರಾಹ್ಮಣರು ಯಾರು ಇಲ್ಲವೆಂದು ಖಚಿತಪಡಿಸಿಕೊಂಡು ಗೆಳೆಯರ ಗುಂಪುಗಳಲ್ಲಿ, ಗುಂಡು ಪಾರ್ಟಿಗಳಲ್ಲಿ ಬ್ರಾಹ್ಮಣರ ವಿರುದ್ಧ ಕೆಂಡಕಾರುವುದು. ನಾವೂ ಕೂಡ ಬ್ರಾಹ್ಮಣರಿಗಿಂತ ಪ್ರತಿಭಾವಂತರೆಂದು ಸಾಧಿಸಿ ತೋರಿಸಬೇಕೆಂದು ಶಪಥ ತೊಡುವುದು. ಆದರೆ ತಾವು ಯಾವುದಾದರೂ ಒಂದು ಪುಸ್ತಕ ಬರೆದರೆ ಅದಕ್ಕೆ ಮುನ್ನುಡಿಯನ್ನೊ, ಬೆನ್ನುಡಿಯನ್ನೊ ಬ್ರಾಹ್ಮಣರಿಂದ ಬರೆಸಿಕೊಳ್ಳುತ್ತಾರೆ. ಅಥವಾ ಬ್ರಾಹ್ಮಣ ವಿಮರ್ಶಕರು ತಮ್ಮ ಪುಸ್ತಕ ವಿಚಾರಗಳಿಗೆ ಮಾನ್ಯತೆ ನೀಡಿದರೆ ಸಂಭ್ರಮಿಸುತ್ತಾರೆ. ಇವರು ಪುಸ್ತಕಗಳನ್ನು ಬರೆದಾಗ ಕಡ್ಡಾಯವಾಗಿ ಬ್ರಾಹ್ಮಣ ಬುದ್ಧಿಜೀವಿಯನ್ನೆ ಕರೆಸಿ ಬಿಡುಗಡೆ ಮಾಡಿಸಿ ಅವರು ಇವರ ಪುಸ್ತಕದ ಬಗೆಗೆ ಆಡುವ ನಾಲ್ಕಾರು ಮಾತುಗಳನ್ನು ಕೇಳಿ ಸಂತೋಷ ಪಡುತ್ತಾರೆ. ಉದಾಹರಣೆಗೆ ಕಳೆದ ಆರು ತಿಂಗಳು ಅಥವಾ ವರ್ಷದಲ್ಲಿ ಪ್ರಕಟವಾದ ಬಹುತೇಕ ಕನ್ನಡ ಪುಸ್ತಕಗಳನ್ನು ಬೆಂಗಳೂರಿನಲ್ಲಿ ಅನಂತಮೂರ್ತಿ ಕಿರಂ ನಾಗರಾಜ ಅಥವಾ ಅದೇ ಬಗೆಯ ಸ್ಟಾರ್ ವಾಲ್ಯೂ ಇರುವ ಬ್ರಾಹ್ಮಣರು ಬಿಡುಗಡೆ ಮಾಡಿದ್ದಾರೆ. ಬ್ರಾಹ್ಮಣರಿಲ್ಲದ ಖಾಸಾಗುಂಪುಗಳಲ್ಲಿ ಏಕೆ ಅಷ್ಟೆ ಪ್ರತಿಭಾವಂತನಿರುವ ಶೂದ್ರನೊಬ್ಬನನ್ನು ಪುಸ್ತಕ ಬಿಡುಗಡೆಗೆ ಕರೆಯಬಹುದಾಗಿತ್ತಲ್ಲವೆ ಎಂಬ ಪ್ರಶ್ನೆ ಬಂದರೆ ಮೀಡಿಯಾ ಕವರೇಜ್ ಸಿಗಲ್ಲ ಎಂಬ ಕಾರಣಕ್ಕೆ ಬ್ರಾಹ್ಮಣರನ್ನೇ ಕರೆಯಬೇಕಾಯಿತು ಎಂದು ಹಳಹಳಿಸುತ್ತಾರೆ.

ಸಾಮಾನ್ಯವಾಗಿ ಬ್ರಾಹ್ಮಣೇತರರು 'ಬ್ರಾಹ್ಮಣ ವಿರೋಧಿ' ಬ್ರಾಹ್ಮಣ ಮೌಲ್ಯ ವಿರೋಧಿ ಸಂಘಟನೆಯನ್ನು ಕಟ್ಟಿದರೂ ಕೂಡ ಅದಕ್ಕೆ ಗೌರವಾಧ್ಯಕ್ಷರಾಗಿಯೋ, ಕಾರ್ಯದರ್ಶಿಯನ್ನಾಗಿಯೋ

ಕ್ಯಾಸ್ಟ್ ಕೆಮಿಸ್ಟ್ರಿ

೨

ಬ್ರಾಹ್ಮಣರನ್ನೇ ನೇಮಿಸಿಕೊಳ್ಳುತ್ತಾರೆ. ವಿಚಾರ ಸಂಕಿರಣಗಳನ್ನು ಏರ್ಪಡಿಸಿದರೂ ಕೂಡ ಬ್ರಾಹ್ಮಣರನ್ನೇ ಮುಖ್ಯ ಮಾತುಗಾರರಾಗಿರುವಂತೆ ನೋಡಿಕೊಳ್ಳುತ್ತಾರೆ. ಬ್ರಾಹ್ಮಣ 'ಸ್ಪಾರ್' ಅಕೆಡಿಮೀಷಿಯನ್‌ಗಳು ಬಾರದೆ, ತಮ್ಮ ವಿಚಾರ, ಪುಸ್ತಕ ಅಥವಾ ಸಂಘಟನೆಗಳಿಗೆ "ಮಾಧ್ಯಮಗಳಲ್ಲಿ ಪಬ್ಲಿಸಿಟಿ ದೊರೆಯುವುದಿಲ್ಲವೆಂಬ ಕಾರಣವನ್ನು ನೀಡುತ್ತಾರೆ. ಯಾಕೆಂದರೆ ಬೌದ್ಧಿಕ ಮತ್ತು ಮಾಧ್ಯಮಗಳ ವಲಯದಲ್ಲಿರುವ ಬ್ರಾಹ್ಮಿನ್ ಜಾಲ ನಿಜವಾಗಿಯೂ ಈ ಬಹು ಸಂಖ್ಯಾತ ಶೂದ್ರರಲ್ಲಿ ಆಳದ ಆತಂಕ ಮತ್ತು ಭಯ ಹುಟ್ಟಿಸಿರುತ್ತದೆ. ಜೊತೆಗೆ ಆಳದಲ್ಲಿ ಬ್ರಾಹ್ಮಣರು ಶೂದ್ರರಿಗಿಂತ ಬುದ್ಧಿವಂತರು ಎಂಬ ಕೀಳರಿಮೆಯೂ ಅವರನ್ನು ಎದರು ಹಾಕಿಕೊಂಡರೆ ಮುಂದಿನ ಅಕೆಡೆಮಿಕ್ ಕೆರಿಯರ್‌ನಲ್ಲಿ ಎಲ್ಲಿ ಏನಾದರೂ ಎಡವಟ್ಟಾಗಬಹುದೆಂಬ ಭಯವೂ ಇರುತ್ತದೆ. ಯುನಿವರ್ಸಿಟಿಗಳಲ್ಲಿ, ಮಾಧ್ಯಮಗಳಲ್ಲಿ ಸಾಹಿತ್ಯವಲಯದಲ್ಲಿ ಇದೊಂದು ಬಗೆಯ ಟಾಮ್ ಅಂಡ್ ಚೆರ್ರಿ ಆಟದಂತಿರುತ್ತದೆ. ಇಲಿಯಾದ ಚೆರ್ರಿಯು ಟಾಮ್ ಬೆಕ್ಕನ್ನು ಆಗಾಗ ಬೇಸ್ತು ಬೀಳಿಸಿದರೂ ಕೂಡ ಅಂತಿಮವಾಗಿ ಟಾಮ್‌ನ ಭಯದಿಂದ ಮುಕ್ತಿಗೊಳ್ಳುವುದೇ ಇಲ್ಲ. ಹಾಗೆಯೇ ಬ್ರಾಹ್ಮಣ ಟಾಮ್‌ನಿಂದ ಶೂದ್ರ ಚೆರ್ರಿ ಇಲಿಯು ನಿರಂತರ ಭಯಕ್ಕೆ ಒಳಗಾಗುತ್ತಿರುತ್ತದೆ. ಬ್ರಾಹ್ಮಿನ್ ಫೋಬಿಯಾ' ಪ್ರಮೇಯವನ್ನು ಸಮರ್ಥಿಸಲು ಮತ್ತೊಂದು ವಿಷಯವನ್ನು ಇಲ್ಲಿ ಪ್ರಸ್ತಾಪಿಸಬೇಕು. ಬ್ರಾಹ್ಮಣರು ತಾವು ಬರೆದ ಪುಸ್ತಕ ಬಿಡುಗಡೆ ಮಾಡಲು, ತಮ್ಮ ನಾಯಕತ್ವದಲ್ಲಿ ಸಂಘಟಿಸಲ್ಪಟ್ಟ ಸಂಸ್ಥೆಗಳಲ್ಲಿ ಕೆಲಸ ಮಾಡಲು ಸಭೆ ಸಮಾರಂಭಗಳಲ್ಲಿ ಭಾಗವಹಿಸಲು ಬ್ರಾಹ್ಮಣೇತರರು ಬರಬೇಕೆಂಬ ಕಟ್ಟಾಯವೇನಿಲ್ಲ. ಅದನ್ನು ಪ್ರಮುಖ ವಿಷಯವನ್ನಾಗಿ ಪರಿಗಣಿಸುವುದೂ ಇಲ್ಲ.

ಮಾಧ್ಯಮ ವರ್ಗ/ಅಧಿಕಾರ ಶಾಹಿಯಲ್ಲಿರುವ ಬ್ರಾಹ್ಮಣೇತರರು ಅತಿಯಾದ ಬ್ರಾಹ್ಮಿನ್ ಫೋಬಿಯಾದಿಂದ ನರಳುತ್ತಿರುವ ಗುಂಪಿನಲ್ಲಿ ಇದು ಪ್ರಥಮ ಸ್ಥಾನದಲ್ಲಿ ನಿಲ್ಲುತ್ತದೆ ಎಂದರೂ ತಪ್ಪಾಗಲಾರದು. ಅಧಿಕಾರ ಶಾಹಿಯ ಉನ್ನತಸ್ಥಾನದಲ್ಲಿ ಬ್ರಾಹ್ಮಣರು ಇರುವುದರಿಂದಲೂ, ಪರಂಪರಾನುಗತವಾಗಿ ಸರ್ಕಾರಿ ಕಾನೂನುಗಳನ್ನು ಬಲ್ಲ ಬ್ರಾಹ್ಮಣ ಜಾತಿಯವರನ್ನು ಜ್ಞಾನಿಗಳೆಂದು ಭಾವಿಸುವ ಬ್ರಾಹ್ಮಣೇತರರು ಕಾನೂನಿನಲ್ಲಿ ಅವರನ್ನು ಮೀರಿಸುವವರೇ ಇಲ್ಲವೆಂದು ಭಾವಿಸಿ ಅವರು ಹೇಳಿದ್ದನ್ನು ಸರಿಯಿರಲಿ, ತಪ್ಪಿರಲಿ, ಸತ್ಯವೆಂದೇ ಗ್ರಹಿಸುತ್ತಾರೆ. ಬ್ರಾಹ್ಮಣರು ತಮ್ಮ ಕುಟುಂಬದ ಖಾಸಗಿ ಸಮಾರಂಭಗಳಿಗೆ ಹಾಜರಾದರಂತೂ ಇವರ ಸಂತೋಷ ಹೇಳತೀರದು. ಈ ವರ್ಗದ ಬ್ರಾಹ್ಮಣೇತರರು ತಮಗೆ ಬ್ರಾಹ್ಮಣರು ಸ್ನೇಹಿತರಾದರೆ ಹೆಮ್ಮೆಯಿಂದ ಬೀಗುತ್ತಾರೆ. ಬ್ರಾಹ್ಮಣ ವ್ಯಕ್ತಿಗಳು ತಮಗೆ ಸ್ನೇಹಿತರಾಗಿರುವುದನ್ನು ಹೆಚ್ಚು ಹೆಚ್ಚು ಪ್ರಚಾರಗೊಳಿಸುತ್ತಾರೆ. ತಮ್ಮ ಕುಟುಂಬದಲ್ಲಿನ ಪೂಜೆ ಪುರಸ್ಕಾರಗಳು ಬ್ರಾಹ್ಮಣರ ಕುಟುಂಬದಂತಿರಬೇಕೆಂದು ಅವರೇ ಮಾದರಿ ವ್ಯಕ್ತಿಗಳೆಂದು ಬಿಂಬಿಸುತ್ತಾರೆ.

ಕಾಲ್ ಸೆಂಟರ್‌ಗಳೆಂಬ ಆಧುನಿಕ ನರಕಗಳು

ಮಾಧ್ಯಮ ವರ್ಗ/ಅಧಿಕಾರ ಶಾಹಿಯಲ್ಲಿರುವ ಬ್ರಾಹ್ಮಣೇತರರು ಅತಿಯಾದ ಬ್ರಾಹ್ಮಿನ್ ಫೋಬಿಯಾ ದಿಂದ ನರಳುತ್ತಿರುವ ಗುಂಪಿನಲ್ಲಿ ಇದು ಪ್ರಥಮ ಸ್ಥಾನದಲ್ಲಿ ನಿಲ್ಲುತ್ತದೆ ಎಂದರೂ ತಪ್ಪಾಗಲಾರದು. ಅಧಿಕಾರ ಶಾಹಿಯ ಉನ್ನತಸ್ಥಾನದಲ್ಲಿ ಬ್ರಾಹ್ಮಣರು ಇರುವುದ ರಿಂದಲೂ, ಪರಂಪರಾನುಗತವಾಗಿ ಸರ್ಕಾರಿ ಕಾನೂನುಗಳನ್ನು ಬಲ್ಲ ಬ್ರಾಹ್ಮಣ ಜಾತಿಯವರನ್ನು ಜ್ಞಾನಿಗಳೆಂದು ಭಾವಿಸುವ ಬ್ರಾಹ್ಮಣೇತರರು ಕಾನೂನಿನಲ್ಲಿ ಅವರನ್ನು ಮೀರಿಸುವವರೇ ಇಲ್ಲವೆಂದು ಭಾವಿಸಿ ಅವರು ಹೇಳಿದ್ದನ್ನು ಸರಿಯಿರಲಿ, ತಪ್ಪಿರಲಿ, ಸತ್ಯವೆಂದೇ ಗ್ರಹಿಸುತ್ತಾರೆ.

ಸಾಧ್ಯವಾದಷ್ಟು ಮಟ್ಟಿಗೆ ತಮ್ಮ ಜಾತಿಗಳಲ್ಲಿ ಇದುವರೆಗೂ ಬ್ರಾಹ್ಮಣ ಹಬ್ಬಗಳನ್ನು ಆಚರಿಸಿವುದು., ಬ್ರಾಹ್ಮಣ ದೇವತೆಗಳನ್ನು ಪೂಜಿಸುವುದನ್ನು ಮಾಡುತ್ತಾರೆ. ಈ ಕ್ರಿಯೆಯನ್ನು ಸಮಾಜಶಾಸ್ತ್ರಜ್ಞ ಎಂ.ಎಸ್. ಶ್ರೀನಿವಾಸ್ ಸಂಸ್ಕೃತಾನುಕರಣವೆಂದು ಬಹಳ ಹಿಂದೆಯೇ ಗುರುತಿಸಿದ್ದಾರೆ. ಬ್ರಾಹ್ಮಣೇತರರು ತಮ್ಮ ಸಾಮಾಜಿಕ ಸ್ಥಾನ ಮಾನಗಳನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಹೀಗೆಲ್ಲಾ ಮಾಡುತ್ತಾರೆಂಬುದು ಶ್ರೀನಿವಾಸರ ಅಭಿಮತ.

ಆದರೆ ಈ ಬಗೆಯ ಅನುಕರಣೆಯು ಸಂಸ್ಕೃತಾನುಕರಣವಲ್ಲ, ಬದಲಾಗಿ ಸ್ಪಾರ್ ಹೋಮ್ ಸಿಂಡ್ರೋಮ್ ಎಂಬುದು ನನ್ನ ಅಭಿಪ್ರಾಯ. ನನ್ನ ಪ್ರಕಾರ ಈ ಕಾಲ ಘಟ್ಟದಲ್ಲಿ ಜಾತಿಯು ಒಂದು ಅಭಿವ್ಯಕ್ತಿಯ ಕ್ರಮವಾಗಿ ರೂಪುಗೊಂಡಿದೆ. ನಿರಂತರವಾಗಿ ಬ್ರಹ್ಮಣರ ಸಾಂಸ್ಕೃತಿಕ ಮತ್ತು ಬೌದ್ಧಿಕ ಒತ್ತೆಯಾಳುಗಳಂತೆ ಬದುಕಿರುವ ಬ್ರಾಹ್ಮಣೇತರರು ತಮ್ಮನ್ನು ಒತ್ತೆಯಾಳನ್ನಾಗಿರಿಸಿಕೊಂಡಿರುವ, ಬ್ರಾಹ್ಮಣರನ್ನೇ ಅನುಸರಿಸುತ್ತಾರೆ. ಒತ್ತೆಯಾಳಾದ ವ್ಯಕ್ತಿ ಅಪಹರಣಕಾರನನ್ನೇ ಪ್ರೀತಿಸುವಂತೆ.

ಇದರಲ್ಲಿಯೂ ಮಧ್ಯಮ ಜಾತಿಗಳಾದ ಒಕ್ಕಲಿಗರೂ, ಲಿಂಗಾಯತರು ಧರ್ಮದ ಮೂಲ ದ್ರವ್ಯ ಅಥವಾ ಮೌಲ್ಯವಾದ, ಮಡಿ, ಮೈಲಿಗೆ, ಏಣಿಶ್ರೇಣಿಯನ್ನು ಬ್ರಾಹ್ಮಣರಿಗಿಂತಲೂ ಒಂದು ಕೈ ಹೆಚ್ಚಾಗಿಯೇ ಅನುಸರಿಸುತ್ತಾರೆ. ಇದಕ್ಕೆ ಮುಖ್ಯ ಕಾರಣ ತಮ್ಮನ್ನು ಸಾಂಸ್ಕೃತಿಕವಾಗಿ, ಬೌದ್ಧಿ ಕವಾಗಿ ಅಪಹರಿಸುವ ಅಪಹರಣಕಾರ ನಮಗೆ ಯಾವ ಬಗೆಯ ದೈವಿ ಮೂಲದ ಶಿಕ್ಷೆ ಯನ್ನು ನೀಡಿಬಿಟ್ಟಾನೆಂಬ ಭಯ!

ಬ್ರಾಹ್ಮಣೇತರ ಶ್ರೀಮಂತ ವರ್ಗ/ನವ ಶ್ರೀಮಂತವರ್ಗವೂ ಕೂಡ ಬ್ರಾಹ್ಮಿನ್ ಫೋಬಿಯಾಕ್ಕೆ ತುತ್ತಾಗಿರುವ ಮಧ್ಯಮ ವರ್ಗಕ್ಕೆ ಸರಿಸಾಟಿ ಸ್ಪರ್ಧೆಯನ್ನು ನೀಡುತ್ತದೆ. ಇದರಲ್ಲಿ ದಲಿತರು, ಪ್ರಬಲ ಜಾತಿಗಳ ಬಹುತೇಕ ಮಠದ ಸ್ವಾಮೀಜಿಗಳು, ಚಲನ ಚಿತ್ರನಟ-ನಟಿಯರು, ಕಾರ್ಪೋರೇಟ್ ವಲಯದಲ್ಲಿ ಕೆಲಸ ಮಾಡುವವರು, ಅತ್ಯುನ್ನತ ಹುದ್ದೆಗಳಲ್ಲಿ ಕೆಲಸ ಮಾಡುವ ಅಧಿಕಾರಿಗಳು, ಮಂತ್ರಿಗಳು ಸೇರುತ್ತಾರೆ. ಎಲ್ಲೋ ಕೆಲ ಬೆರಳಣಿಕೆಯಷ್ಟು ಜನರನ್ನು ಹೊರತುಪಡಿಸಿ ಉಳಿದವರೆಲ್ಲರೂ ಬ್ರಾಹ್ಮಣರನ್ನೇ ತಮ್ಮ ಆಪ್ತ ಸಹಾಯಕರನ್ನಾಗಿಯೋ, ಸಲಹೆಗಾರರನ್ನಾಗಿಯೋ ನೇಮಿಸಿಕೊಂಡಿರುತ್ತಾರೆ. ಅವರ ಸಲಹೆಗಳು, ಕಾರ್ಯಯೋಜನಾಶೈಲಿ. ಬ್ರಾಹ್ಮಣೇತರರಿಗಿಂತ ಉತ್ತಮವಾಗಿರುತ್ತದೆ ಎಂಬ ಭಾವನೆಯಾಗಿರುತ್ತದೆ. ಅದಕ್ಕಿಂತಲೂ ಆಳವಾದ ಭಯವೆಂದರೆ, ಸರ್ಕಾರದ ಉನ್ನತ ಸ್ಥಾನಗಳಲೆಲ್ಲಾ ಬ್ರಾಹ್ಮಣ ಅಧಿಕಾರಿಗಳೇ ಇರುವುದರಿಂದ ಬ್ರಾಹ್ಮಣೇತರರು ರೂಪಿಸುವ ಕಾರ್ಯಕ್ರಮಗಳಿಗೆ ಯಾವುದಾದರೂ ತೊಡಕನ್ನು ಉಂಟು ಮಾಡಿಯಾರೆಂಬ ಭಯ ಕಾಡುತೊಡಗುತ್ತದೆ. ಜೊತೆಗೆ ಬ್ರಾಹ್ಮಣರೆಂದರೆ ನೈತಿಕತೆ ಮತ್ತು ಸಂವಿಧಾನ ಬದ್ಧ ಕಾರ್ಯಕ್ರಮಗಳಿಗೆ ಪ್ರತಿನಿಧಿಗಳೆಂದು ಭಾವಿಸುತ್ತಾರೆ. ಈ ಎಲ್ಲದಕ್ಕೂ ಮೇಲೆ ಪ್ರಸ್ತಾಪಿಸಿರುವ ಸ್ಟಾಕ್ ಹೋಮ್ ಸಿಂಡ್ರೋಮ್ ಕಾರಣವಾಗಿರುತ್ತದೆ. ಸ್ವಾಮೀಜಿಗಳಾದರೆ ಬ್ರಾಹ್ಮಣರ ಮೌಲ್ಯಗಳನ್ನು ತಮ್ಮ ಜಾತಿಯ ಮಠಗಳಲ್ಲಿ ಆಚರಿಸುತ್ತಾರೆ. ಉದಾ: ಆದಿಚುಂಚನಗಿರಿ ಸ್ವಾಮೀಜಿಗಳ ಮಠದಲ್ಲಿ ಒಕ್ಕಲಿಗರ ಯಾವ ಧಾರ್ಮಿಕ ಸಾಂಸ್ಕೃತಿಕ ಆಚರಣೆಗಳೂ ಜಾರಿಯಲ್ಲಿರದೇ ಬ್ರಾಹ್ಮಣ ಧರ್ಮದ ಆಚರಣೆಗಳೇ ಕಂಡು ಬರುತ್ತವೆ. ಚಲನ ಚಿತ್ರ ಮತ್ತು ಕಿರುತೆರೆಯ ನಿರ್ಮಾಪಕರು ಬಹುತೇಕ ಶೂದ್ರರೇ

(೩೩ನೇ ಪುಟಕ್ಕೆ)

ಪುಸ್ತಕ ಅವಲೋಕನ

'ಕಾಡು ಪ್ರತಿಭೆ ಮಾರಪ್ಪ' ಕುರಿತು

ವಿ. ಚಂದ್ರಶೇಖರ ನಂಗಲಿ

> **ಮಹಾತ್ಮಗಾಂಧಿ, ಹೆನ್ರಿ ಭಾರೇರೆ ಬರೆದ ಕಾಲಕ್ಕೆ ಆತ್ಮ ಚರಿತ್ರೆಯ ಸುಗ್ಗಿ ಇರಲಿಲ್ಲ. ಇವರು ಬರೆದ 'ಸತ್ಯಾನ್ವೇಷಣೆ' ಮತ್ತು 'ಪ್ಯಾಪಿಲಾನ್'ಗಳು ಆತ್ಮಚರಿತ್ರೆಯನ್ನು ಮೀರಿದ ಕಥನಗಳಾಗಿದ್ದು ಹೃದಯಬವೆಂಬ ಕನ್ನಡಿಯ ಮಹಾನ್ ಆವಿಷ್ಕಾರಗಳೂ ಆಗಿವೆ. ಆತ್ಮಚರಿತ್ರೆಗಳು ನಿಲುವು ಗನ್ನಡಿ ಪ್ರಜ್ಞೆಯ ಪರಿಣಾಮ ಫಲ. ಜೀವನ ಚರಿತ್ರೆಯು ಸೈಡ್ ಮಿರರ್ ಪ್ರಜ್ಞೆಯ ಪರಿಣಾಮ ಫಲ. ಪಾರ್ಶ್ವ ಗನ್ನಡಿಯಲ್ಲಿ ನಮ್ಮನ್ನು ನಾವು ನೋಡಿಕೊಳ್ಳು ವುದಿಲ್ಲ. ಸ್ಥಳೀಯ ಭೂಗೋಳದ ಹಸಿರು ಕಾರ್ಯಾಚರಣೆಯಲ್ಲೆ ತನ್ನ ಬದುಕು ಸವೆಸಿದ ಹಿರಿಯ ತಲೆ ಮಾರಿನ ಪ್ರತೀಕದಂತಿರುವ ಅರಣ್ಯಧಿಕಾರಿಯೊಬ್ಬ ರನ್ನು ಆಯ್ಕೆ ಮಾಡಿ 'ಜೀವನಚರಿತ್ರೆ'ಯನ್ನು ಅಲಕ್ಷಿತವಾಗಿದ್ದ 'ವ್ಯಕ್ತಿಚಿತ್ರ'ವನ್ನು ರೂಪಿಸಿರುವ ಪುರುಷೋತ್ತಮರಾವ್ ಸಾಹಿತ್ಯಕ್ಷೇತ್ರದ ವಿಶಿಷ್ಟ ಮಾರ್ಗದರ್ಶಿಯೂ ಆಗಿದ್ದಾರೆ.**

ಕುವೆಂಪುರವರ ಕಾನೂರು ಹೆಗ್ಗಡಿತಿ, ಕಾರಂತರ ಮರಳಿ ಮಣ್ಣಿಗೆ ಕಾಲದ ಸಹ್ಯಾದ್ರಿಯ ಕಾಡುಗಳಿಗೂ ಇವತ್ತಿನ ಪರಿಸ್ಥಿತಿಗೂ ಇರುವ ಅಜಗಜಾಂತರ ವ್ಯತ್ಯಾಸವನ್ನು ಕುರಿತು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು 'ಜುಗಾರಿ ಕ್ರಾಸ್' ಕಾದಂಬರಿಯ ಮುನ್ನುಡಿಯಲ್ಲಿ ಪ್ರಸ್ತಾಪಿಸಿದ್ದಾರೆ. ಕಾಡುಪ್ರತಿಭೆಯಿಂದ ಎದೆಹೊಲದಲ್ಲಿ ಹಸಿರು ನೆನಪಾಗುಳಿದಿರುವ ಬಿ. ಮಾರಪ್ಪನವರು ಕುವೆಂಪು-ಕಾರಂತ ಕಾಲದ ಅರಣ್ಯ ಸಂರಕ್ಷಣಾಧಿಕಾರಿಗಳಾಗಿ (ಸೇವೆಗೆ ಸೇರಿದ ದಿನಾಂಕ:೧೫-೪-೧೯೪೩) ಹಗಲಿರುಳು ದುಡಿದ ಮಹಾನ್ ಚೇತನ. ಕುವೆಂಪು ಅವರ ಸಾವಿರಾರು ಶಿಷ್ಯರಲ್ಲಿ ಒಬ್ಬನಾಗಿದ್ದ ಮಾರಪ್ಪನವರು, ಕುವೆಂಪು ಅವರ ಸೋದರ ಸಂಬಂಧಿ ರತ್ನಾಕರ ಗೌಡರ ಆತ್ಮೀಯ ಗೆಳೆಯರೂ ಆಗಿದ್ದು ಬೇಸಿಗೆ ರಜೆಯಲ್ಲಿ ಕಾಡು ನೋಡಲು ಬರುತ್ತಿದ್ದ ಕುವೆಂಪು ಬಳಗದೊಂದಿಗೆ ಬೆರೆತು ಹುಲಿ ಶಿಕಾರಿಯಲ್ಲೂ ಪಾಲ್ಗೊಂಡವರು. ಅರಣ್ಯ ಇಲಾಖೆಯ ಸಿಬ್ಬಂದಿ ಮಾರಪ್ಪನವರನ್ನು ಪ್ರೀತಿಯಿಂದ ಸ್ಮರಿಸಿಕೊಳ್ಳತ್ತಾ ಹೇಳುವ ಮಾತುಗಳಿವು: "ಮಾರಪ್ಪನವರು ಕಾಡುಗಳ ಒಳಗಿದ್ದುಕೊಂಡೇ ಸೇವೆ ಸಲ್ಲಿಸಿದ್ದರೆ, ಇಂದಿನ ಅಧಿಕಾರಿಗಳು ಕಾಡುಗಳ ಹೊರಗಿದ್ದುಕೊಂಡು ಸೇವೆ ಸಲ್ಲಿಸುತ್ತಿದ್ದಾರೆ..." ಈ ಮಾತುಗಳ ಹಿಂದೆ ಮಾರಪ್ಪನವರಿಗಿದ್ದ ಕಾಡು ಪ್ರೀತಿ ಮತ್ತು ಕಾಳಜಿಗಳು ಬಹು ಚೆನ್ನಾಗಿ ವ್ಯಕ್ತವಾಗಿದೆ. ಕರ್ನಾಟಕದಾದ್ಯಂತ ಸೇವೆ ಸಲ್ಲಿಸಿದ ಮಾರಪ್ಪನವರು ತಮ್ಮ ಸೇವಾವಧಿಯಲ್ಲಿ ಆಯಾ ಸ್ಥಳೀಯ ಭೂಗೋಳಕ್ಕೆ ಹೊಂದಿಕೊಳ್ಳುವ ಸಸಿಗಳನ್ನು ನೆಟ್ಟು ಬೆಳೆಸುವ ಸಲುವಾಗಿಯೇ ನರ್ಸರಿಗಳು ಮತ್ತು ಅರಣ್ಯ ಸಂಶೋಧನಾ ಕೇಂದ್ರಗಳ ಬಳಿ ಬಹು ಸುಂದರವಾದ ಬಾವಿಗಳನ್ನು ಕಟ್ಟಿಸಿದ್ದಾರೆ.

ಬಹುತೇಕ ಇವೆಲ್ಲವೂ ಇಂದು ನೀರಿಲ್ಲದ ಬಾವಿಗಳಾಗಿದ್ದರೂ, ಹಿಂದೊಮ್ಮೆ ಹಸಿರ ದಾಹ ತಣಿಸಿದ ಜಲದ ಕಣ್ಣುಗಳಾಗಿದ್ದರೂ, ಇದೇ ಬಾವಿಗಳು ಈಗ ಮಾರಪ್ಪನವರ ಬೆಲೆ ಕಟ್ಟಲಾಗದ ಸಾಧನೆಯ ಶೂನ್ಯ ಸ್ಮಾರಕಗಳಾಗಿ ಗೋಚರಿಸುತ್ತಿವೆ. ಮಾರಪ್ಪನವರು ಸೇವೆಯಿಂದ ನಿವೃತ್ತರಾದದ್ದು ದಿನಾಂಕ ೩೦-೪-೧೯೭೫ ರಂದು. ಅಂದರೆ, ಮಾರಪ್ಪನವರು ನಿವೃತ್ತರಾದ ಮುವತ್ತೊಂದು ವರ್ಷಗಳ ನಂತರ (ನಿಧನ:೧೫-೮-೧೯೮೭) ಅರಣ್ಯ ಇಲಾಖೆಯಲ್ಲಿ ಮಾತ್ರವಲ್ಲದೆ, ಜನಮನದಲ್ಲಿ ಹಸಿರಾಗಿರುವ ಮಾರಪ್ಪನವರನ್ನು ಕುರಿತು ಎಚ್.ಎ. ಪುರುಷೋತ್ತಮರಾವ್ ಬಿಡುವು ಮಾಡಿಕೊಂಡು ಓಡಾಡುತ್ತಾ ಅವರಿವರನ್ನು ಸಂಪರ್ಕಿಸುತ್ತಾ ಮೌಖಿಕ ಪರಂಪರೆಯ ಆಧಾರಗಳನ್ನು ಹಿಡಿದು 'ಕಾಡು ಪ್ರತಿಭೆ ಮಾರಪ್ಪ' ಎಂಬ ಪುಸ್ತಕವನ್ನು ಹೊರ ತಂದಿದ್ದಾರೆ. ಮಾರಪ್ಪನವರ ಶೂನ್ಯ ಸ್ಮಾರಕದಂತಿರುವ ನೀರಿಲ್ಲದ ಬಾವಿಗಳಿಗೆ ನೆನಪಿನ ಜಲ ತುಂಬಿಸಿರುವ ಪುರುಷೋತ್ತಮರಾವ್ ಅವರಿಗೆ ಈ ಕಾರಣಕ್ಕಾಗಿಯೇ ಅಭಿನಂದನೆಗಳನ್ನು ಸಲ್ಲಿಸಬೇಕು.

ಕಳಬೇಡ, ಕೊಲಬೇಡ... ಎಂಬ ಬಸವಣ್ಣನ ವಚನದಲ್ಲಿ 'ತನ್ನ ಬಣ್ಣಿಸಬೇಡ' ಎಂಬ ನುಡಿಯಿದೆ. 'ನಾನು ಹೋದರೆ ಹೋಗಬಹುದು'-ಎಂಬ ಕನಕವಾಣಿಯ ಸಂವಾದಿ ಯಂತಿರುವ 'ತನ್ನ ಬಣ್ಣಿಸಬೇಡ' ಎಂಬುದಕ್ಕೆ ೧. ತನ್ನನ್ನು ತಾನೆ ವರ್ಣಿಸಿಕೊಳ್ಳುವುದು ೨. ತನ್ನನ್ನು ತಾನೆ ವರ್ಣರಂಜಿತಗೊಳಿಸುವುದು ಎಂಬ ಎರಡೂ ಅರ್ಥಗಳನ್ನು ಹೇಳಬಹುದು. ಹೀಗೆ ಮಾಡದಿರುವುದೇ ಅಂತರಂಗ ಶುದ್ಧಿ ಮತ್ತು ಬಹಿರಂಗ ಶುದ್ಧಿ. ಇದೇ ನಮ್ಮ ಕೂಡಲಸಂಗಮ ದೇವರನೊಲಿಸುವ ಪರಿ. ಈ ಹಿನ್ನೆಲೆಯಲ್ಲಿ ಆತ್ಮ ಚರಿತ್ರೆ ಮತ್ತು ಜೀವನ ಚರಿತ್ರೆಗಳನ್ನು ಹೀಗೆ ವಿವರಿಸಬಹುದು. ೧. ನನ್ನನ್ನು ನಾನೆ ವರ್ಣಿಸಿಕೊಳ್ಳುವುದು ಆತ್ಮಚರಿತ್ರೆ ೨. ಅವನನ್ನು ನಾನು ವರ್ಣಿಸುವುದು ಜೀವನಚರಿತ್ರೆ

ದಲಿತ-ಬಂಡಾಯ ಸಾಹಿತ್ಯಕ್ಕೆ ಸೇರಿದ ಎಷ್ಟೊ ಮಂದಿ 'ಆತ್ಮ ಚರಿತ್ರೆ' ಬರೆಯುವ ರಾಜಮಾರ್ಗ ನಿರ್ಮಿಸಿದ್ದಾರೆ. ಆತ್ಮಚರಿತ್ರೆಗಳ ಬಾಹುಳ್ಯವನ್ನಿಲ್ಲಿ ವಿಶೇಷವಾಗಿ ಗಮನಿಸಬಹುದು. ಮಹಾತ್ಮಗಾಂಧಿ, ಹೆನ್ರಿ ಭಾರೇರೆ ಬರೆದ ಕಾಲಕ್ಕೆ ಆತ್ಮ ಚರಿತ್ರೆಯ ಈ ಸುಗ್ಗಿ ಕಂಡು ಬರುವುದಿಲ್ಲ. ಇವರು ಬರೆದ 'ಸತ್ಯಾನ್ವೇಷಣೆ' ಮತ್ತು 'ಪ್ಯಾಪಿಲಾನ್'ಗಳು ಆತ್ಮಚರಿತ್ರೆಯನ್ನು ಮೀರಿದ ಕಥನಗಳಾಗಿದ್ದು ಹೃದಯಬವೆಂಬ ಕನ್ನಡಿಯ ಮಹಾನ್ ಆವಿಷ್ಕಾರಗಳೂ ಆಗಿವೆ. ಆತ್ಮಚರಿತ್ರೆಯ ನಿಲುವುಗನ್ನಡಿ ಪ್ರಜ್ಞೆಯ ಪರಿಣಾಮ ಫಲ. ನಿಲುವುಗನ್ನಡಿಯಲ್ಲಿ ನಮ್ಮನ್ನು ನಾವು ಬಹುಚೆನ್ನಾಗಿ ನೋಡಿಕೊಳ್ಳುತ್ತೇವೆ. ಜೀವನಚರಿತ್ರೆಯು ಸೈಡ್ ಮಿರರ್ ಪ್ರಜ್ಞೆಯ ಪರಿಣಾಮ ಫಲ. ಪಾರ್ಶ್ವಗನ್ನಡಿಯಲ್ಲಿ ನಮ್ಮನ್ನು ನಾವು ನೋಡಿಕೊಳ್ಳುವುದಿಲ್ಲ; ನಮ್ಮ ಗಮನ ವಿಶೇಷವಾಗಿ ಬೇರೆಯವರ ಕಡೆ ಇರುತ್ತದೆ. ಸ್ಥಳೀಯ ಭೂಗೋಳದ ಹಸಿರು ಕಾರ್ಯಾಚರಣೆಯಲ್ಲೆ ತನ್ನ ಬದುಕು ಸವೆಸಿದ ಹಿರಿಯ ತಲೆಮಾರಿನ ಪ್ರತೀಕದಂತಿರುವ ಅರಣ್ಯಧಿಕಾರಿಯೊಬ್ಬರನ್ನು ಆಯ್ಕೆ ಮಾಡಿಕೊಂಡು ಸೈಡ್ ಮಿರರ್ ಪ್ರಜ್ಞೆಯ ಮೂಲಕ 'ಜೀವನಚರಿತ್ರೆ'ಯನ್ನು ಬರೆದು ಕಾಲಚಕ್ರದಲ್ಲಿ ನಶಿಸಿದ ಮತ್ತು ಅಲಕ್ಷಿತ ವಾಗಿದ್ದ 'ವ್ಯಕ್ತಿಚಿತ್ರ'ವನ್ನು ರೂಪಿಸಿರುವ ಪುರುಷೋತ್ತಮರಾವ್ ಸಾಹಿತ್ಯಕ್ಷೇತ್ರದ ವಿಶಿಷ್ಟ ಮಾರ್ಗದರ್ಶಿಯೂ ಆಗಿದ್ದಾರೆ. ಈ ಪುಸ್ತಕ ತಾಯಿ-ಮಗು ಸಂಬಂಧದಿಂದ ಆರಂಭಗೊಂಡಿರುವುದು ಅರ್ಥಪೂರ್ಣವಾಗಿದೆ. ತಾಯಿಯನ್ನು ಉಳಿಸಿಕೊಳ್ಳಲು ಹೋರಾಡುವ ಬಾಲಕ ಮಾರಪ್ಪನೇ ಮುಂದೆ ಕಾಡಿನ ಶಕ್ತಿ ಮತ್ತು ಸತ್ವಗಳನ್ನು ಉಳಿಸಿಕೊಳ್ಳಲು ಹೋರಾಡುವ ಅರಣ್ಯಾಧಿಕಾರಿ ಮಾರಪ್ಪನಾಗಿ ಕಾಣಿಸುತ್ತಾರೆ.

ಕಾಡು-ಮನುಷ್ಯ ಸಂಬಂಧವನ್ನು ನಾನು ತಾಯಿ-ಮಗು ಸಂಬಂಧವೆಂದೆ ತಿಳಿದಿದ್ದೇನೆ. ಅರಣ್ಯಗಳು ನಿರ್ಜೀವ ಮ್ಯೂಸಿಯಂ ಶಾಲೆಯಲ್ಲ! ಕ್ರಿಮಿ-ಕೀಟ-ಪಕ್ಷಿ-ಪ್ರಾಣಿ-ಮನುಷ್ಯ ಮುಂತಾದ ಸಕಲ ಜೀವಿ ಸಂಕುಲಗಳು ಹೊಕ್ಕಾಡುವ ನಿಸರ್ಗಶಾಲೆ. ಕಾಡು-ಕಡಲು-ಬಾನು-ಬೆಟ್ಟ ಮುಂತಾದ ನಿಸರ್ಗದ ಶಕ್ತಿ ಮತ್ತು ಸತ್ವಗಳು ನನ್ನಿಂದ ಹೊರಗೆ ಮಾತ್ರವಲ್ಲ; ನನ್ನೊಳಗೂ ಇರುತ್ತವೆ. ನಿಸರ್ಗ ಸಂರಕ್ಷಣೆ ಎಂಬುದೊಂದು ಮನೋ ಭ್ರಾಂತಿ. ನಿಸರ್ಗವು

ಕಾಡು ಪ್ರತಿಭೆ ಮಾರಪ್ಪ
ಲೇ: ಹೆಚ್.ಎ. ಪುರುಷೋತ್ತಮರಾವ್
ಬೆಲೆ: ರೂ.೧೦೦/-
ಪ್ರಕಾಶಕರು: ಸಿವಿಜಿ ಪಬ್ಲಿಕೇಷನ್
ಜಾಬ್ಬಾರ್ ಬ್ಲಾಕ್, ವೈಯಲಿಕಾವಲ್
ಬೆಂಗಳೂರು-೫೬೦೦೦೩

ಅನಾದಿ ಮತ್ತು ಅನಂತ. ಅದು ತನ್ನನ್ನು ತಾನು ರಕ್ಷಿಸಿ ಕೊಳ್ಳಬಲ್ಲುದು. ಅಂದಮಾತ್ರಕ್ಕೆ ಪರಿ ಸರ ನಾಶ–ಪರಿಸರ ಸಂರಕ್ಷಣೆ ಎಂಬಂಥ ಮಾತುಗಳಲ್ಲಿ ಹುರುಳಿಲ್ಲವೆ ಎಂಬ ಪ್ರಶ್ನೆ ಹುಟ್ಟುತ್ತದೆ. ಇಂಥ ಎಲ್ಲ ಕೂಗುಗಳ ಹಿಂದೆ ನಮ್ಮೆಲ್ಲರ ಹಿತಾಸಕ್ತಿಗಳೇ ಮುಖ್ಯವಾಗಿರುತ್ತವೆ ಯೆಂಬುದನ್ನು ಮರೆಯಬಾರದು.

'ವಸ್ತು' ನಿರ್ವಹಣೆಯಲ್ಲಿ ಎರಡು ವಿಧ ೧.ಬಳಸು–ಬಿಸಾಡು ಧೋರಣೆ ೨. ಉಳಿಸು–ಬೆಳೆಸು ಧೋರಣೆ. ಇಂದು ಅರಣ್ಯ ಇಲಾಖೆಗೆ ಲಕ್ಷಾಂತರ ರೂಗಳ ಆದಾಯ ಬರಲು ಬಹುವಾಗಿ ಶ್ರಮಿಸಿದ ಮಾರಪ್ಪನವರು 'ಹುಣಸೆ ಮಾರಪ್ಪ' ಎಂದೇ ಮನೆ ಮಾತಾಗಿ ದ್ದಾರೆ. ಆಯಾ ಪ್ರದೇಶಕ್ಕೆ ಹೊಂದಿಕೊಳ್ಳುವ ಹಸಿರು ಹೊದಿಕೆಯ ನಿರ್ಮಾಣಕ್ಕಾಗಿ ಶ್ರಮಿಸಿದ ಮಾರಪ್ಪನವರು ಪರಿ ಣಾಮ ಫಲವನ್ನು ಸಂಪೂರ್ಣ ವೀಕ್ಷಿಸುವ ಮೊದಲೇ ಕಣ್ಮುಚ್ಚಿದವರು. ಉಳಿಸು–ಬೆಳೆಸು ಧೋರಣೆಯಿಂದ ಹಸಿರು ಮತ್ತು ಜಲ ಸಂವರ್ಧನೆಗಾಗಿ ದುಡಿದ ಮಾರಪ್ಪನವರು ಪ್ರಾತಃಸ್ಮರಣೀಯರು ನೈಸರ್ಗಿಕ ನಿರ್ವಹಣೆ ಮತ್ತು ಮಾನವಿಕ ನಿರ್ವಹಣೆಗಳೂ ಸಮಾನಾಂತರ ಚಲನೆಗಳಲ್ಲ. ಅರಣ್ಯಗಳನ್ನು ನಿಸರ್ಗವೇ ನಿರ್ವಹಣೆ ಮಾಡುವುದಕ್ಕೂ ಮನುಷ್ಯರು ನಿರ್ವಹಣೆ ಮಾಡುವುದಕ್ಕೂ ವ್ಯತ್ಯಾಸವಿದೆ. ಈ ದೃಷ್ಟಿಯಿಂದ ಈ ಪುಸ್ತಕದ 'ಅರಣ್ಯಸೇವೆಯ ಮೊದಲ ಮೆಟ್ಟಿಲು' ಎಂಬ ಅಧ್ಯಾಯವನ್ನು ನೋಡಬಹುದು. ಇಲ್ಲಿ ಮಾರಪ್ಪನವರಿಗಾಗಿವ ಉತ್ಸಾಹಭಂಗ ಮತ್ತು ವ್ಯವಸ್ಥೆಯ ಜಡತ್ವಗಳ ದರ್ಶನವಾಗುತ್ತದೆ. ಕಾಡುಗಳಲ್ಲಿ ಮರ ಕಡಿಯುವುದರ ಉಸ್ತುವರಿಯನ್ನು ಮಾರಪ್ಪನವರು ನಿರ್ವಹಣೆ ಮಾಡವ ಸಂದರ್ಭದಲ್ಲಿ ಸ್ವತಃ ಅವರಿಗೆ ಮಾನವಿಕ ನಿರ್ವಹಣೆಯ ವಾಮಮಾರ್ಗಗಳ ಅರಿವಾಗುತ್ತದೆ. ಕಾಡು ಮರಗಳ ಜೊತೆಯಲ್ಲೆ ಗಂಧದ ಮರಗಳನ್ನು ಕಾಡು ಗುಳುಂ ಮಾಡುವ ಅಪರಾಧಿಗಳನ್ನು ಸಾಕ್ಷ್ಯಾಧಾರಗಳ ಸಹಿತ ಹಿಡಿದು ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ವಜಾ ಮಾಡಲಾಗುತ್ತದೆ. ಅಧಿಕಾರಿ ಚಾಪೆ ಕೆಳಗೆ ನುಸುಳಿದರೆ ತಪ್ಪಿತಸ್ಥರು ರಂಗೋಲಿ ಕೆಳಗೆ ನುಸುಳುವುದನ್ನಿಲ್ಲಿ ಮನಗಾಣಬಹುದು.

'ಕಾಡು ಪ್ರತಿಭೆ ಮಾರಪ್ಪ' ಕೃತಿಯ ಕೆಲವೊಂದು ಅಧ್ಯಯಗಳಿಗೆ ಪ್ರಬಂಧ ಸಾಹಿತ್ಯದ ಸ್ವರೂಪ ಪ್ರಾಪ್ತಿಯಾಗಿದೆ. ಈ ಪುಸ್ತಕದ ಒಟ್ಟು ತಾತ್ವಿಕತೆ ಮತ್ತು ತಂತ್ರಜ್ಞಾನವನ್ನು ಆಗಲೇ ಹೇಳಿದಂತೆ ಸೈಡ್ ಮಿರರ್ ಪ್ರಜ್ಞೆ ಎನ್ನಬಹುದು. ಸೈಡ್ ಮಿರರ್ ಇರುವುದು ನಮಗಾಗಿ ಅಲ್ಲ; ರಸ್ತೆ ಪ್ರಯಾಣವಾಗಲಿ ಅಥವಾ ಜೀವನ ಪ್ರಯಾಣವಾಗಲಿ ನಮಗೆ ಸೈಡ್ ಮಿರರ್ ಪ್ರಜ್ಞೆ ಅವಶ್ಯ. ಜಟಕಾ ಕುದುರೆಯಂತೆ ಚಲಿಸದೆ, ಇಕ್ಕೆಲಗಳನ್ನು ಗಮನಿಸುತ್ತಾ ಬಾಳ ಪಯಣದಲ್ಲಿ ಪಾಲ್ಗೊಳ್ಳುವ ಎಚ್ಚರವನ್ನೆ ಸೈಡ್ ಮಿರರ್ ಪ್ರಜ್ಞೆ ಎಂದು ಕರೆದಿದ್ದೇನೆ. ಇಲ್ಲಿನ ಅಧ್ಯಯಗಳು ಒಂದೊಂದು ಪ್ರಬಂಧದಂತೆ ಕಂಡುಬರುವುದು ಕೂಡ ಸೈಡ್ ಮಿರರ್ ಪ್ರಜ್ಞೆಯ ಪರಿಣಾಮವಾಗಿದೆ. ಐದನೆ ಅಧ್ಯಯವು ಬೆಡ್ಡಾ ಕಾರ್ಯಾಚರಣೆಯನ್ನು ಕುರಿತ ಪ್ರಬಂಧವಾಗಿದ್ದು ಈ ಕುರಿತ ಚಾರಿತ್ರಿಕ ದೃಷ್ಟಿಯ ಹಿನ್ನೋಟ–ಮುನ್ನೋಟಗಳನ್ನೊಳಗೊಂಡಿದೆ. ಆನೆಯನ್ನು ಕುರಿತು ನೀಡಿರುವ ವೈಜ್ಞಾನಿಕ ಮಾಹಿತಿಯಲ್ಲಿ ನಿಸರ್ಗದ ಅದ್ಭುತಗಳ ನಿರೂಪಣೆಯಿದೆ. 'ನಿಸರ್ಗನಿರ್ಮಿತ ಬೋನ್ಸಾಯ್' ಎಂಬ ಆರನೇ ಅಧ್ಯಯವು ಮೆಕ್ಸಿಕನ್ ಬರ್ಸೆರಾ ಕುರಿತ ಪ್ರಬಂಧವಾಗಿದೆ. ಇದರಲ್ಲಿ ರೋರಿಚ್ ದಂಪತಿಗಳು ಮತ್ತು ಅಮ್ಮೂಲ ಸಸ್ಯ ಸಂಪತ್ತಿನ ರೋರಿಚ್ ಎಸ್ಟೇಟ್ ಕೂಡ ಬಂದು ಹೋಗುತ್ತದೆ.

ಸುಗಂಧದ್ರವ್ಯಗಳ ತಯಾರಿಕೆಯಲ್ಲಿ ಜೈವಿಕ ಸಂಪನ್ಮೂಲವಾಗಿ ಬಳಕೆಯಾಗುತ್ತಿದ್ದ ಬರ್ಸೆರಾ ಕ್ರಮೇಣ ಚಾಲ್ತಿಗೆ ಬಂದ ರಾಸಾಯನಿಕ ವಸ್ತುಗಳ ಆಗಮನದಿಂದ ಹೇಗೆ ನಿರ್ಗಮಿಸಬೇಕಾಯಿತೆಂಬುದನ್ನು ವಿವರಿಸಿದ್ದಾರೆ. ಗೊಬ್ಬರಗಳು ಮತ್ತು ಪಾನೀಯಗಳಲ್ಲಿ ಕೂಡ 'ಜೈವಿಕ'ದ ಸ್ಥಾನವನ್ನು ಕ್ರಮೇಣ 'ರಾಸಾಯನಿಕ'ಗಳು ಹೇಗೆ ಆಕ್ರಮಿಸಿಕೊಂಡುವೆಂಬುದನ್ನು ಆಲೋಚಿಸಿದರೆ, ಲೇಖಕರು ಬರ್ಸೆರಾ ಕುರಿತು ಹೇಳುತ್ತಿರುವ ಮಾತುಗಳ ಹಿಂದಿನ ಕಳಕಳಿ ಅರ್ಥವಾಗುತ್ತದೆ. ಏಳನೆ ಅಧ್ಯಯನದಲ್ಲಿ ನೀಲಗಿರಿ ನೆಡುತೋಪು ಕುರಿತ ಪ್ರಬಂಧವಿದೆ. ನೀಲಗಿರಿ ಎಂದೊಡನೆ ಮೂಗು ಮುರಿಯುವವರು ಕೂಡ ಒಮ್ಮೆ ಮೂಗರಳಿಸಿ ನೋಡುವಂತೆ 'ವರ್ಸಟೈಲ್ ಯೂಕಲಿಪ್ಟಸ್' ಎಂಬ ಸಂಶೋಧನಾತ್ಮಕ ಗ್ರಂಥದ ಮುಖ್ಯಾಂಶಗಳನ್ನು ತಿಳಿಸುತ್ತಾರೆ. ಹದಿಮೂರನೆ ಅಧ್ಯಯವು ಶ್ರೀಗಂಧದ ಮರವನ್ನು ಕುರಿತ ಪ್ರಬಂಧವಾಗಿದೆ.

ಸುಗಂಧದ್ರವ್ಯಗಳ ತಯಾರಿಕೆಯಲ್ಲಿ ಜೈವಿಕ ಸಂಪನ್ಮೂಲವಾಗಿ ಬಳಕೆಯಾಗುತ್ತಿದ್ದ ಬರ್ಸೆರಾ ಕ್ರಮೇಣ ಚಾಲ್ತಿಗೆ ಬಂದ ರಾಸಾಯನಿಕ ವಸ್ತುಗಳ ಆಗಮನದಿಂದ ಹೇಗೆ ನಿರ್ಗಮಿಸಬೇಕಾಯಿತೆಂಬುದನ್ನು ವಿವರಿಸಿದ್ದಾರೆ. ಗೊಬ್ಬರಗಳು ಮತ್ತು ಪಾನೀಯಗಳಲ್ಲಿ ಕೂಡ 'ಜೈವಿಕ'ದ ಸ್ಥಾನವನ್ನು ಕ್ರಮೇಣ 'ರಾಸಾಯನಿಕ'ಗಳು ಹೇಗೆ ಆಕ್ರಮಿಸಿಕೊಂಡುವೆಂಬುದನ್ನು ಆಲೋಚಿಸಿದರೆ, ಲೇಖಕರು ಬರ್ಸೆರಾ ಕುರಿತು ಹೇಳುತ್ತಿರುವ ಮಾತುಗಳ ಹಿಂದಿನ ಕಳಕಳಿ ಅರ್ಥವಾಗುತ್ತದೆ. ಏಳನೆ ಅಧ್ಯಯನದಲ್ಲಿ ನೀಲಗಿರಿ ನೆಡುತೋಪು ಕುರಿತ ಪ್ರಬಂಧವಿದೆ. ನೀಲಗಿರಿ ಎಂದೊಡನೆ ಮೂಗು ಮುರಿಯುವವರು ಕೂಡ ಒಮ್ಮೆ ಮೂಗರಳಿಸಿ ನೋಡುವಂತೆ 'ವರ್ಸಟೈಲ್ ಯೂಕಲಿಪ್ಟಸ್' ಎಂಬ ಸಂಶೋಧನಾತ್ಮಕ ಗ್ರಂಥದ ಮುಖ್ಯಾಂಶಗಳನ್ನು ತಿಳಿಸುತ್ತಾರೆ. ಹದಿಮೂರನೆ ಅಧ್ಯಯವು ಶ್ರೀಗಂಧದ ಮರವನ್ನು ಕುರಿತ ಪ್ರಬಂಧವಾಗಿದೆ. ಸಸ್ಯಗಳಲ್ಲಿರುವ ಸಂಪೂರ್ಣ ಪರಲಂಬಿಗಳು ಮತ್ತು ಅರೆ ಪರಾವಲಂಬಿಗಳನ್ನು ಪರಿಚಯಿಸುತ್ತಾ ಶ್ರೀಗಂಧವು ಸಸ್ಯಲೋಕದ ಪರ ಪುಷ್ಪ ಎಂಬುದನ್ನು ತಿಳಿಸಿದ್ದಾರೆ. ಹದಿನಾರು ಮತ್ತು ಹದಿನೇಳನೆ ಅಧ್ಯಯಗಳೂ ಹುಣಸೆಯನ್ನು ಕುರಿತ ಪ್ರಬಂಧಗಳಾಗಿವೆ. ಆದರೆ ಗಮನಿಸಬೇಕಾದ ಅಂಶವೆಂದರೆ, ಈ ಎಲ್ಲ ಪ್ರಬಂಧಗಳಲ್ಲೂ ಮಾರಪ್ಪನವರು ಜೀವಂತವಾಗಿದ್ದಾರೆ. ಒಳವಿವರಗಳಲ್ಲಿ ವಿಜ್ಞಾನ–ಜಾನಪದ–ಸಾಹಿತ್ಯ–ಇತಿಹಾಸ–ಸಂಶೋಧನೆ.. ಔದ್ಯಮಿಕ ಜಗತ್ತು–ಜೀವನಾನುಭವಗಳನ್ನು ಮೇಳೈಸಿಕೊಂಡಿರುವ ಈ ಬರೆಹವನ್ನು ಬಿ.ಜಿ.ಎಲ್. ಸ್ವಾಮಿ ಮಾದರಿ ಎನ್ನಬಹುದು.

ಹುಣಸೆ ಮತ್ತು ಟಮೋಟೊಗಳಂತೂ ತಮ್ಮ ಸಸ್ಯ ಪರಿವೇಷವನ್ನು ಕಳಚಿಕೊಂಡು ಬಾಳಿನ ಗತಿಶೀಲರೂಪಕಗಳಾಗಿ ಸ್ಥಿತ್ಯಂತರಗೊಂಡಿರುವುದು ನನಗೆ ಮುಖ್ಯವಾಗಿ ಕಂಡಿದೆ. ಕಾಡುತನ ಮತ್ತು ಬೀದಿತನಗಳನ್ನು ಮೈಗೂಡಿಸಿಕೊಂಡಿರುವ ಹುಣಸೆ ಬಡವರ ಬಂಧುವಾಗಿದೆ. ಈ ದೃಷ್ಟಿಯಿಂದ ಬೆರಳಕೂರಿಗೆಯ ಫಲ, ಬಡವರ ಲಾಲಿಪಪ್ (=ಪಿತ್ತನಿವಾರಕ ಹುಣಸೆ ಜೀರಿಗೆ ಬೆಲ್ಲದುಂಡೆ), ಹುಣಸೆಗೆ ಹಿಂಡಿದ ಹುಳಿ ಎಂಬ ಲೇಖಕರ ಮಾತುಗಳನ್ನು ಪರಿಭಾ

ವಿಸಬೇಕು. ಅರಣ್ಯವಾಸಿಗಳು, ಗಿರಿಜನರು, ಅಪಟ ಗ್ರಾಮೀಣರ ಪ್ರತಿನಿಧಿಯಂತೆ ಕಂಡುಬರುವ ಹುಣಸೆಮರಗಳು ಮಾನವಿಕ ನಿರ್ವಹಣೆ-ಆರೈಕೆಗಿಂತಲೂ ನೈಸರ್ಗಿಕ ನಿರ್ವಹಣೆ-ಆರೈಕೆಗಳಲ್ಲಿ ಬೇರು ಬಿಟ್ಟಿರುತ್ತವೆ. ಲೇಖಕರ ಮಾತುಗಳಲ್ಲಿ ಹೇಳುವುದಾದರೆ ಜೈವಿಕ ತಂತ್ರಜ್ಞಾನದ ಕೂಸು, ನವ ನಾಗರಿಕ ಟಮೋಟೊ ಸಂಪೂರ್ಣವಾಗಿ ಮಾನವಿಕ ನಿರ್ವಹಣೆ-ಆರೈಕೆಗಳನ್ನೆ ಆಧರಿಸಿರುತ್ತದೆ.

ಈ ಕಾರಣದಿಂದಾಗಿಯೇ ಟಮೋಟೊನಲ್ಲಿರುವಷ್ಟು ಕ್ರಿಮಿನಾಶಕದ ಪ್ರಮಾಣವು ಹುಣಸೆಯಲ್ಲಿ ಕಾಣಲು ಸಾಧ್ಯವಿಲ್ಲ. ಹುಣಸೆಗೆ ಅನ್ವಯವಾಗುವ ಕಾಡುತನ ಮತ್ತು ಬೀದಿತನಗಳು ಟಮೋಟೊಗೆ ಅನ್ವಯಿಸುವುದಿಲ್ಲ. ಹಾದಿ-ಬೀದಿಗಳಲ್ಲಿ ಹುಣಸೆ ಮರ ತಲೆಯೆತ್ತಿ ನಿಂತಿದ್ದರೆ, ಎ.ಪಿ.ಎಂ.ಸಿ. ಮಾರ್ಕೆಟ್ಟಿನ ಹೆದ್ದಾರಿಗಳ ಪಕ್ಕ ರಾಶಿ ರಾಶಿ ಟಮೋಟೊಗಳನ್ನು ಸುರಿದು ಹೋಗಿರುವ ದೃಶ್ಯಗಳನ್ನು ನೋಡಬಹುದು. ಇಂಥ ಬೀದಿ ಟಮೋಟೊ ಹಿಂದೆ ರೈತರ ಹತಾಶೆ-ಆತ್ಮಹತ್ಯೆಗಳ ನಿಟ್ಟುಸಿರು ಕೇಳಿಸುತ್ತದೆ. ಆದರೆ ಹುಣಸೆಯ ಪುಟಾಣಿ ಎಲೆಗಳ ಸಮೃದ್ಧಿಯಲ್ಲಿ ರೈತರ ನಗು ಮತ್ತು ತಂಪನ್ನು ಮನಗಾಣಬಹುದು. ಕೋಲಾರ ಜಿಲ್ಲೆಯ ಮೋಕಮೂಕಲಪಲ್ಲೆ ಹುಣಸೆ ಮರಗಳ ತೋಪನ್ನು ನೋಡಿದವರು ಇದಕ್ಕೆ ಕಾರಣರಾದ ಮಾರಪ್ಪನವರನ್ನು ಮರೆಯುವುದಿಲ್ಲ. ಬಯಲು ಸೀಮೆಯ ಉದ್ದಗಲಕ್ಕೂ ಹರಡಿಕೊಂಡಿರುವ ಹುಣಸೆಮರಗಳ ತಂಪು ನೆರಳಿಗೆ ಕಾರಣರಾದ್ದರಿಂದಲೇ ಜನತೆ ಅವರನ್ನು ಹುಣಸೆ ಮಾರಪ್ಪ ಎಂದು ಪ್ರೀತಿಯಿಂದ ನೆನಪಿಸಿಕೊಳ್ಳುತ್ತಾರೆ.

ಕರ್ನಾಟಕದ ಬೇರೆ ಬೇರೆ ಅರಣ್ಯ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಣೆ ಮಾಡಿರುವ ಮಾರಪ್ಪನವರ ಹಸಿರು ನೆನಪುಗಳನ್ನು ಶಿವಮೊಗ್ಗ-ಹೆಗ್ಗಡದೇವನ ಕೋಟೆ-ಸಕ್ರೆಬೈಲು-ನಲ್ಲಾಳ ಅರಣ್ಯ ಸಂಶೋಧನಾ ಕೇಂದ್ರ-ಮುದಿಗೆರೆ-ಮಡೇರಹಳ್ಳಿ ನರ್ಸರಿ-ಅಂತರಗಂಗೆ-ನಂದಿ ತಪ್ಪಲಿನ ಕಾಡು ಪ್ರದೇಶ-ಮುಳುಬಾಗಿಲನ್ ಗೋಕುರಟೆ-ರಾಣೆಬೆನ್ನೂರಿನ ಕೃಷ್ಣಮೃಗಧಾಮ-ದೇವರಾಯದುರ್ಗ ಅರಣ್ಯ ಪ್ರದೇಶ-ಮಡಿಕೇರಿಯ ರಾಜಾಸೀಟ್ ಸುತ್ತಮುತ್ತ-ಗದಗಿನ ಪ್ರಾಣಿ ಸಂಗ್ರಹಾಲಯ-ಕಪ್ಪತಗುಡ್ಡ ಪ್ರದೇಶ-ದಕ್ಷಿಣ ಕನ್ನಡದಲ್ಲಿ ಗೇರು ಅಭಿವೃದ್ಧಿ-ಆಗುಂಬೆಯಲ್ಲಿ ಬಿದಿರು ಬಡಮೇದಾರರಿಗೆ ಉಚಿತ ವಿತರಣೆ-ಮಲೆನಾಡಿನಲ್ಲಿ ತೇಗ-ಗಂಧಗಳ ಮೈತ್ರಿ ಮುಂತಾದ ಕಡೆಗಳಲ್ಲಿ ಇಂದಿಗೂ ಗುರುತಿಸಬಹುದು. ಕಾಡುಗಳ ಜೊತೆಗಿನ ಸಾವಯವ ಸಂಬಂಧ ಮತ್ತು ಪ್ರತ್ಯಕ್ಷಾನುಭವಗಳು ಮಾರಪ್ಪನವರಿಗೆ ಇತ್ತ ಬಿಂಬಜ್ಞಾನವು ಅಪೂರ್ವವಾದುದು. ಬಿಂಬಜ್ಞಾನವು ಇದ್ದಿದ್ದರಿಂದಲೇ ಮಾರಪ್ಪನವರಲ್ಲಿ ದಕ್ಷತೆ ಮತ್ತು ಕರ್ತೃತ್ವ ಶಕ್ತಿಗಳು ಎರಡು ಕಣ್ಣುಗಳಂತೆ ಜೊತೆಗೂಡಿದ್ದವು. ಅರಣ್ಯಗಳ ಬಗ್ಗೆ ಬಿಂಬಜ್ಞಾನವಿಲ್ಲದ ಇಂದಿನ ಎಷ್ಟೋ ಅಧಿಕಾರಿಗಳು ದಪ್ಪ ದಪ್ಪ ಗ್ರಂಥಗಳು, ಆಯಾ-ವ್ಯಯದ ದಾಖಲಾತಿಗಳಲ್ಲಿ ಸಿಕ್ಕಿ ಹೋಗಿದ್ದು ಕುರ್ಚಿಯ ಸವಾರರಾಗಿ ವಿರಾಜಮಾನರಾಗಿದ್ದಾರೆ.

> **ಕಾಡುಗಳ ಜೊತೆಗಿನ ಸಾವಯವ ಸಂಬಂಧ ಮತ್ತು ಪ್ರತ್ಯಕ್ಷಾನುಭವಗಳು ಮಾರಪ್ಪನವರಿಗೆ ಇತ್ತ ಬಿಂಬ ಜ್ಞಾನವು ಅಪೂರ್ವವಾದುದು. ಬಿಂಬಜ್ಞಾನವು ಇದ್ದಿದ್ದರಿಂದಲೇ ಮಾರಪ್ಪನವರಲ್ಲಿ ದಕ್ಷತೆ ಮತ್ತು ಕರ್ತೃತ್ವ ಶಕ್ತಿ ಗಳು ಎರಡು ಕಣ್ಣು ಗಳಂತೆ ಜೊತೆಗೂಡಿದ್ದವು.**

'ಈಜುಕೊಳ' ನಿಕೇತನವಾದರೆ, ಹರಿವನದಿಯು ಅನಿಕೇತನವಿದ್ದಂತೆ. ಈಜುಕೊಳವನ್ನು ನಿರ್ವಹಣೆ ಮಾಡುವುದಕ್ಕೂ ಹರಿವ ನದಿಯನ್ನು ನಿರ್ವಹಣೆ ಮಾಡುವುದಕ್ಕೂ ವ್ಯತ್ಯಾಸವಿದೆ. ಈಜುಕೊಳ ಕೈಗೆ ದಕ್ಕುವ ಅಭಿವ್ಯಕ್ತಿಯಾಗಿದ್ದರೆ, ಹರಿವನದಿಯು ಕೊಡದೊಳಗೆ ಹಿಡಿಸದ ಅಭಿವ್ಯಕ್ತಿಯಾಗಿದೆ. 'ತೋಟಗಾರಿಕೆ' ಎಂಬುದು ಈಜುಕೊಳಕ್ಕೆ ಸಮಾನ! ಅರಣ್ಯಗಾರಿಕೆಯು ಹರಿವನದಿಗೆ ಸಮಾನ! ತೋಟಗಾರಿಕೆಯನ್ನು ಯಶಸ್ವಿಯಾಗಿ ನಿರ್ವಹಿಸಿದ ಮಾರಪ್ಪನವರ ಗೆಳೆಯರೇ ಆದ ಎಂ.ಎಚ್. ಮರಿಗೌಡರನ್ನಾಗಲಿ, ಮರಿಗೌಡರು ರೂಪಿಸಿದ ಲಾಲ್‌ಬಾಗ್‌ಗನ್ನಾಗಲಿ ನಾಡಿನ ಜನರು ಮರೆತಿಲ್ಲ. ಮರಿಗೌಡರ ಹೆಸರನ್ನು ರಸ್ತೆಗೂ ಇಡಲಾಗಿದೆ. ಆದರೆ, ಅರಣ್ಯಗಾರಿಕೆಯನ್ನು ಯಶಸ್ವಿಯಾಗಿ ನಿಭಾಯಿಸಿದ ಮಾರಪ್ಪನವರನ್ನು ನಾಡಿನ ಜನರು (=ವಿಶೇಷವಾಗಿ ನಾಗರಿಕರು) ಮರೆತಿದ್ದಾರೆ. ಈ ಕೊರತೆಯನ್ನು ಮನಗಂಡಿರುವ ಪುರುಷೋತ್ತಮರಾವ್ ತಮ್ಮ ಕೈಲಾದಷ್ಟು ಪ್ರಾಮಾಣಿಕ ಪ್ರಯತ್ನದಿಂದ 'ಕಾಡು ಪ್ರತಿಭೆ ಮಾರಪ್ಪ' ಪುಸ್ತಕವನ್ನು ಹೊರತಂದಿದ್ದಾರೆ. ಲೇಖಕರ ನಿರೂಪಣೆಯ ಹದ ಪ್ರಶಂಸರ್ಹವಾಗಿದೆ. ಒಮ್ಮೆ ಕಾಡಿನ ಶಿಕಾರಿಗೆ ಹೊರಟ ತಂಡದಲ್ಲಿ ಮಾರಪ್ಪನವರೊಂದಿಗೆ ಅಸಿಸ್ಟೆಂಟ್ ಕಮೀಷನರ್ ಒಬ್ಬರಿದ್ದರು. ಕಾಡಾನೆಗಳು ಘೀಳಿಟ್ಟು ನುಗ್ಗುವುದನ್ನು ಕಂಡ ಎ.ಸಿ. ಸಾಹೇಬರ ಫಜೀತಿಯಿದು: "ಆನೆಗಳು ತಮ್ಮತ್ತ ಧಾವಿಸುವುದನ್ನು ಕಂಡ ಅಸಿಸ್ಟೆಂಟ್ ಕಮೀಷನರ್ ಸಾಹೇಬರಂತೂ ಯಾರ ಮುಲಾಜೂ ಇಲ್ಲದೆ ಅದುವರೆಗೂ ಬಲವಂತವಾಗಿ ಅದುಮಿಟ್ಟಿದ್ದ ತಮ್ಮ ಎಲ್ಲ ಗೇಟುಗಳನ್ನು ಒಮ್ಮೆಗೆ ತೆರೆದು ಬಿಟ್ಟರು" (ಪುಟ ೮೫), ಕೇಕುಗಳಂತೆ ಕತ್ತರಿಸಲ್ಪಟ್ಟು ರವಾನೆಯಾಗುತ್ತಿರುವ ಪರ್ವತನಾಶವನ್ನು ಕಂಡು ಲೇಖಕರ ಪ್ರತಿಕ್ರಿಯೆಯಿದು: "ದಿನೇ ದಿನೇ ಮರಗಳ್ಳ ದುಃಶಾಸನರಿಂದ ತನ್ನ ಹಸುರುಡುಗೆಯನ್ನು ಕಳಚಿಕೊಂಡು ನಗ್ನವಾಗುತ್ತಿರುವ ಕೋಲಾರದ ಗಿರಿಶ್ರೇಣಿಯ ಹಲವಾರು ಬೆಟ್ಟಗಳ ಒಡಲನ್ನು ಇಂದು ಕಲ್ಲು ಗಣಿ ಸಾಮ್ರಾಜ್ಯದ ಬೃಹತ್ ಯಂತ್ರಗಳು ನಿರ್ದಾಕ್ಷಿಣ್ಯವಾಗಿ ಬಗೆದು ಹಾಕುತ್ತಿವೆ" (೯೦), ಕೋಲಾರ ಜಿಲ್ಲೆಯ ಸಾಲುಕೆರೆಗಳನ್ನು ಲಕ್ಷದಲ್ಲಿಟ್ಟುಕೊಂಡಾಗ ಮೂಡಿಬಂದ ಸಾಲುಗಳಿವು: "(ಈಗ) ನದಿ ತೊರೆಗಳ ಉಸಿರು ಕಟ್ಟಿದೆ. ಅನೇಕ ಕೆರೆಗಳು ಈಗಾಗಲೇ ಜೀವ ತೆತ್ತಿವೆ. ಕೇವಲ ಮಳೆ ಮಾತ್ರದಿಂದಲೇ ಕೆರೆಗಳು ತುಂಬುವುದಂತೂ ಕನಸಿನ ಮಾತಷ್ಟೇ! (ಪುಟ ೩೨), ವಿನಾಶದತ್ತ ಮುಖ ಮಾಡಿರುವ ಬರ್ಸೆರಾ ಮರಗಳನ್ನು ಕಂಡು ಲೇಖಕರು ಹೇಳುವ ಮಾತಿದು: ....."ಅಳಿದುಳಿದ ಕೆಲವೇ ಬರ್ಸೆರಾ ಮರಗಳು ಸಂಶೋಧನಾ ಕೇಂದ್ರದ ಮೂಲೆಯೊಂದರಲ್ಲಿ ಇನ್ನೂ ಜೀವ ಉಳಿಸಿಕೊಂಡು ಉಸಿರಾಡುತ್ತಿವೆ. ಅವು ಜೀವ ಬಿಡುವ ಮುನ್ನ ನೀವೂ ಒಮ್ಮೆ ನೋಡಿ" (ಪುಟ೨೪) ಒಂದು ಕೆರೆ, ಒಂದು ಮರ ಕುರಿತು ಬರೆಯುವಾಗ ಅವುಗಳಿಗೂ ಜೀವವಿದೆಯೆಂದು ತಿಳಿದು ಸ್ಪಂದಿಸುವ ಮನಸ್ಸು ಮಾತ್ರ ಇಡೀ ಸೃಷ್ಟಿಯ ಬೀಜತತ್ವವನ್ನು ಚೆನ್ನಾಗಿ ಗ್ರಹಿಸಬಲ್ಲದು. ಇಂಥ ಪುಸ್ತಕ ಕೊಟ್ಟಿದ್ದಕ್ಕಾಗಿ ಪುರುಷೋತ್ತಮರಾವ್‌ಗೆ ಮತ್ತೊಮ್ಮೆ ಅಭಿನಂದನೆಗಳು. □

ಸಂವಾದ





ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಅದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಬ್ರಾಹ್ಮಿನ್ ಫೋಬಿಯಾ

(೨೯ನೇ ಪುಟದಿಂದ)

ಆಗಿದ್ದಾರೆ. ಆದರೆ ನಿರ್ದೇಶನಕ್ಕಾಗಿ ಬ್ರಾಹ್ಮಣರನ್ನೇ ಆಶ್ರಯಿಸುತ್ತಾರೆ. ಕಾರ್ಪೊರೇಟ್ ವಲಯದಲ್ಲಿರುವ ಮತ್ತು ಅನಿವಾಸಿ ಬ್ರಾಹ್ಮಣೇತರರಂತೂ 'ಬ್ರಾಹ್ಮಿನ್ ಫೋಬಿಯಾ' ರಕ್ತಗತ ಮಾಡಿಕೊಂಡು ತಮಗೆ ಅಂತಹ ಮಾನಸಿಕ ರೋಗವೇ ಸಹಜ ಬದುಕಿನ ಕ್ರಮವೇನೋ ಎಂಬಂತೆ ರೂಪುಗೊಂಡಿರುತ್ತಾರೆ. ಮೀಸಲಾತಿ ಸ್ವತಃ ತಮಗೆ ತಮ್ಮ ಜಾತಿಗಳಿಗೆ ಅನುಕೂಲವಾಗಿದ್ದರೂ ಸಹ ಬ್ರಾಹ್ಮಣ ಧರ್ಮದ ಮೆರಿಟ್ ಮಂತ್ರವನ್ನು ಪಠಿಸುತ್ತಾರೆ. ಯೋಚನಾಶೈಲಿ, ತಂತ್ರರೂಪಿಸುವಿಕೆ ಮೊದಲಾದವುಗಳಲ್ಲಿ ತಮ್ಮ ಅಪಹರಣಕಾರನನ್ನು ಮೀರಿಸುವಷ್ಟು ಮುಂದುವರಿದಿದ್ದಾರೆ. ಬ್ರಾಹ್ಮಣರ ಸಂಸ್ಥೆಯಾದ ಇನ್ಫೋಸಿಸ್‌ನಲ್ಲಿ ಕೆಲಸ ಮಾಡುವವರು, ಮತ್ತು ಅನಿವಾಸಿ ಭಾರತೀಯರನ್ನು ಬಹಳ ಸೂಕ್ಷ್ಮವಾದ ಸಮಾಜಶಾಸ್ತ್ರೀಯ ಪ್ರತಿಭೆಯಿಂದ, ಜಾತಿ ಸಂವೇದನೆಗಳನ್ನು ಅರ್ಥೈಸಬಲ್ಲವರಿಗೆ ಅಭಿವ್ಯಕ್ತಿ ಕ್ರಮಗಳನ್ನು ಅರ್ಥಮಾಡಿಕೊಳ್ಳ ಬಲ್ಲ ಸೂಕ್ಷ್ಮಜ್ಞರಿಗೆ ಇದು ಗೋಚರಿಸುತ್ತದೆ. ಖಾಸಗಿಯಾಗಿ ಬೇಟಿಯಾದಾಗ ಸಹೋದ್ಯೋಗಿ ಬ್ರಾಹ್ಮಣರ ಬಗೆಗೆ ತಾತ್ಕಾಲಿಕವಾದ ಕೋಪವನ್ನು ಹೊರಗೆಡೆಹುತ್ತಾರೆ: ಅದು ಹೀಗಿರುತ್ತದೆಯೆಂದರೆ ಅಕ್ಕಿಯಲ್ಲಾ ಬೆಂದು ಅನ್ನವಾದ ಮೇಲೆ ಕೂಗುವ ಕುಕ್ಕರ್‌ನ ಶಿಳ್ಳೆಯಂತಿರುತ್ತದೆ. ಬ್ರಾಹ್ಮಣ ಮಠದ ಸ್ವಾಮೀಜಿಗಳ ತತ್ವಗಳನ್ನು ಒಪ್ಪಿಕೊಂಡು ಸುಲಭವಾಗಿ ಅನುಯಾಯಿಗಳಾಗಿರುತ್ತಾರೆ. ಬ್ರಾಹ್ಮಿನ್‌ಫೋಬಿಯಕ್ಕೆ ಪೂರ್ಣಪ್ರಮಾಣದಲ್ಲಿ ತುತ್ತಾದ ಇವರು ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಮೌಲ್ಯಗಳ ನಡುವಣ ತರತಮ ಪ್ರಜ್ಞೆಯನ್ನೇ ಪೂರ್ಣವಾಗಿ ಮರೆತಿರುತ್ತಾರೆ. ಬ್ರಾಹ್ಮಿನ್ ಫೋಬಿಯಾಕ್ಕೆ ತುತ್ತಾದವರ ಪ್ರಮುಖ ಲಕ್ಷಣವೆಂದರೆ ಬ್ರಾಹ್ಮಣ ಮೌಲ್ಯಗಳನ್ನು ಶತಗತಾಯ ಜಾರಿಗೆ ತರಲು ಯತ್ನಿಸುತ್ತಿರುವ ಸಂಘ ಪರಿವಾರವನ್ನು ಸಾರಾಸಗಟಾಗಿ ಬೆಂಬಲಿಸುವುದು. ಅದರ ಅಜೆಂಡಾ ಅಥವಾ ತತ್ವಗಳ ಬಗೆಗೆ ಇವರಿಗೆ ಪರಿಚಯವಿರಬಹುದು ಅಥವಾ ಇಲ್ಲದೆಯೂ ಇರಬಹುದು.

ಮೇಲೆ ಹೆಸರಿಸಿರುವ, ಹೆಸರಿಸದೇ ಇರುವ ಅಸಂಖ್ಯಾತ ಭಾರತೀಯ ಜನ ಜನಸಮುದಾಯವನ್ನು ಈ ಬಗೆಯ ಫೋಬಿಯಾಕ್ಕೆ ಈಡು ಮಾಡಲು ಬ್ರಾಹ್ಮಣ ಧರ್ಮಕ್ಕೆ ಹೇಗೆ ಸಾಧ್ಯವಾಯಿತು. ಅದು ಹೂಡಿದ ತಂತ್ರಗಳೇನು? ಅದೊಂದು ಜಾತಿಯೇ ಧರ್ಮವೋ? ಅದನ್ನು ಅರ್ಥಮಾಡಿಕೊಳ್ಳಬೇಕಾಗಿರುವ ವಿಧಾನಗಳೇನು? ಭಾರತವೇ ಬೆಚ್ಚಿಬೀಳುವಂತೆ ಮಹಾತ್ಮ ಗಾಂಧಿಯವರ ಹತ್ಯೆಗೈದ ಈ ಧರ್ಮ ರಾಜಕೀಯ ಭಯೋತ್ಪಾದನೆಯನ್ನು ಸ್ವತಂತ್ರ ಭಾರತದಲ್ಲಿ ಉದ್ಘಾಟಿಸಲು ಸಾಧ್ಯವಾದದ್ದಾರೂ ಹೇಗೆ? ಅದನ್ನು ದಕ್ಕಿಸಿಕೊಂಡು ಇಂದಿಗೂ ಸಾಮಾಜಿಕ ಸಾಂಸ್ಕೃತಿಕ ನಾಯಕತ್ವವನ್ನು ಕಾಯ್ದುಕೊಂಡಿರುವ ರಹಸ್ಯವಾದರೂ ಏನು?

ಮುಂದಿನ ಸಂಚಿಕೆಯಲ್ಲಿ ಪರಿಶೀಲಿಸುವ

ಕಬೀರರ ವಚನಗಳು



೧.

ಹೋಗದಿರು ಹೂ ಬನಕೆ
ಓ ಗೆಳೆಯಾ! ಹೋಗದಿರು ಅಲ್ಲಿಗೆ
ನಿನ್ನ ಒಡಲೇ ಕಮನೀಯ ಹೂಬನ
ಸಹಸ್ರ ದಳದ ಕಮಲದಲ್ಲಿ ನಿನ್ನ ಪೀಠ ಸ್ವೀಕರಿಸು
ಅಲ್ಲಿದೆ ಸೌಂದರ್ಯದ ಅನಂತತೆ



೨.

ಓ ಸಾದು ನನ್ನ ನೆಲೆ ದುಃಖ ಮುಕ್ತವಾದುದು
ನಾನು ನಿಶಬ್ಧದ ಶಬ್ಧದಲ್ಲಿ ಎಲ್ಲರನ್ನು ಕರೆಯುತ್ತೇನೆ
ರಾಜನಿಂದ ಭಿಕ್ಷುಕನವರೆಗೆ, ಚಕ್ರವರ್ತಿಯಿಂದ ಸಂತನ ತನಕ
ಎತ್ತರದ ನೆಲೆಯಲ್ಲಿ ಯಾರು ಸೂರನ್ನು ಅರಸುವರೋ
ಅವರೆಲ್ಲಾ ಬನ್ನಿ ನನ್ನೀ ನೆಲೆಗೆ
ದಣಿದವರು ಬಂದರೆ ತಮ್ಮ ಆಯಾಸವ ಇಲ್ಲಿ ಇಟ್ಟು ಶಾಂತರಾಗುತ್ತಾರೆ
ನೆಲೆಸು ಇಲ್ಲಿ ಓ ನನ್ನ ಸೋದರ, ನೀ ಸುಲಭವಾಗಿ ಆ ದಡವ ದಾಟುವೆ
ಅದು ನೆಲ ಮುಗಿಲಿಲ್ಲದ ನೆಲ, ಚಂದ್ರ ತಾರೆಗಳೂ ಸಹ
ಇಲ್ಲಿ, ನನ್ನೊಡೆಯನ ಸಭಾಂಗಣದಲ್ಲಿ ಸತ್ಯದ ಶಾಂತಿ ಮಾತ್ರ ಹೊಳೆಯುತ್ತದೆ.
ಕಬೀರ ಹೇಳುತ್ತಾನೆ, ಓ ಆತ್ಮೀಯ ಬಂಧು ಶೂನ್ಯದ ಸುವಾಸನೆಯ ಸತ್ಯವ ರಕ್ಷಿಸು.

ಆಂಗ್ಲ ಮೂಲ: ರವೀಂದ್ರನಾಥ ಟ್ಯಾಗೋರ್
ಅನುವಾದ: ಬಿ. ಮಹೇಶ್ ಹರವೆ.

ಸಿದ್ದರಾಮಯ್ಯ 'ಅಹಿಂದ'ದ ದಿಕ್ಕು ತಪ್ಪಿಸಿದರೇ?

ವೈ. ಮರಿಸ್ವಾಮಿ

ಅತ್ಯಲ್ಪ ಅವಧಿಯಲ್ಲಿ ಬಿರುಗಾಳಿಯಂತೆ ಹಬ್ಬಿದ ಅಹಿಂದದ ಹವಾ, ಕಳೆದ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವನ್ನು ಅರೆಜೀವ ಮಾಡಿ ಬಿಟ್ಟಿತು. ಸಿದ್ದರಾಮಯ್ಯ ಮುಖಂಡತ್ವದ ಅಖಿಲ ಭಾರತ ಪ್ರಗತಿಪರ ಜನತಾದಳ ಗಮನಾರ್ಹ ಮತಗಳನ್ನು ಸೆಳೆದುಕೊಂಡು ಕೆಲವು ಕಡೆ ಕಿಂಗ್‌ಮೇಕರ್ ಆಗಿ ಹೊರ ಹೊಮ್ಮಿತು. ಇದರಿಂದ ಕನಲಿ ಹೋದ ದೇವೇಗೌಡರು, ಭವಿಷ್ಯದಲ್ಲಿ ತಮ್ಮ ಪಕ್ಷಕ್ಕೆ ಕಾದಿರುವ ಜನಮನದ ತೀರ್ಮಾನದಿಂದ, ತಮ್ಮ ಇಷ್ಟಾರ್ಥ ಸಿದ್ಧಿಸುವುದಿಲ್ಲವೆಂದು ಮನಗಂಡು, ಶತಾಯ ಗತಾಯ ಈ ಅವಧಿಯಲ್ಲಿಯೇ ಪುತ್ರ ಕುಮಾರ ಸ್ವಾಮಿಯನ್ನು ಮುಖ್ಯಮಂತ್ರಿ ಗಾದಿ ಗೇರಿಸಲು ತೀರ್ಮಾನಿಸಿ ಬಿಟ್ಟರು. ಪರಿಣಾಮವಾಗಿ ಮೊಟ್ಟ ಮೊದಲ ಬಾರಿಗೆ ಕನ್ನಡದ ನೆಲದಲ್ಲಿ ಜಾತಿವಾದಿ-ಕೋಮುವಾದಿ ಶಕ್ತಿಗಳ ಕೂಡಾವಳಿಯಾಗಿ 'ಕೋಜಾ' ಸರ್ಕಾರ ಅಸ್ತಿತ್ವಕ್ಕೆ ಬಂತು!

ಮಾಜಿ ಪ್ರಧಾನಿ ದೇವೇಗೌಡರು ತಮ್ಮ ಕುಟುಂಬ ರಾಜಕಾರಣದ ಕಕ್ಕುಲಾತಿಗಾಗಿ ಸಿದ್ದರಾಮಯ್ಯನವರನ್ನು ಉಪಮುಖ್ಯಮಂತ್ರಿ ಕುರ್ಚಿಯಿಂದ ಕೆಳಗೆ ದಬ್ಬಿದ ಪ್ರಕರಣ ಇಡೀ ರಾಜ್ಯದಲ್ಲಿ ಭೂಕಂಪನವನ್ನೇ ಸೃಷ್ಟಿಸಿದ್ದೀಗ ಇತಿಹಾಸ- ಮಾಜಿಪ್ರಧಾನಿಗಳು ಸಿದ್ದರಾಮಯ್ಯನವರ ಜೊತೆ ದಲಿತ ಜನಾಂಗದ ಎಚ್.ಸಿ. ಮಹದೇವಪ್ಪನವರನ್ನು, ಹಾಗೂ ನಾಯಕ ಜನಾಂಗದ ಸತೀಶ್ ಜಾರಕಿಹೊಳಿಯವರನ್ನು ತಡವಿಕೊಂಡು, ಮಂತ್ರಿಗಿರಿ ಕಸಿದುಕೊಂಡು ಆ ಸಮುದಾಯಗಳ ಪಾಲಿಗೆ ಖಳನಾಯಕರಾದರು. ದೇವೇಗೌಡರಿಂದ ಅದಾಗಲೇ ಹಲ್ವಾ ತಿಂದಿದ್ದ ಸಿ.ಎಂ. ಇಬ್ರಾಹಿಂ ಕೂಡ ಸಿದ್ದು ಪಾಳಯಕ್ಕೆ ಬಹಿರಂಗವಾಗಿ ಸೇರುವುದರ ಮೂಲಕ ಅಹಿಂದ ಗುಚರಿಗೆ ರಂಗೇರಿತು. ಲಿಂಗಾಯತ-ಒಕ್ಕಲಿಗರ ದರ್ಬಾರಿನಲ್ಲಿ ದನಿ ಕಳೆದುಕೊಂಡು ಮೂಕರೋಧನಕ್ಕೆ ಶರಣಾಗಿದ್ದ ಅಹಿಂದ ಸಮಾಜದಲ್ಲಿ ಮಡುಗಟ್ಟಿದ್ದ ಆಕ್ರೋಶ ಜ್ವಾಲಾರಸದಂತೆ ಹೊರಹೊಮ್ಮಲು ಸ್ವತಹ ದೇವೇಗೌಡರು ವೇದಿಕೆ ಒದಗಿಸಿಕೊಟ್ಟರು!

ಲಿಂಗಾಯತ-ಒಕ್ಕಲಿಗ ಜನಾಂಗದ ನಂತರ ಕರ್ನಾಟಕದ ಮೂರನೇ ಪ್ರಬಲ ಜನಾಂಗವಾಗಿರುವ ಕುರುಬ ಜನಾಂಗ ಸಿದ್ದರಾಮಯ್ಯನವರ ಬೆನ್ನಿಗೆ ನಿಂತು ಅಹಿಂದ ಕಾರ್ಯಕ್ರಮಗಳಿಗೆ ಸಕಲವನ್ನೂ ಧಾರೆಯೆರೆಯಿತು. ಕನಕಗೋಪುರ ವಿವಾದಕ್ಕೆ ಸಂಬಂಧಿಸಿದಂತೆ ಮಾಜಿ ಪ್ರಧಾನಿಗಳು ಪೇಜಾವರ ಸ್ವಾಮಿಯೊಂದಿಗೆ ಮಿಲಾಕತ್ ಮಾಡಿಕೊಂಡದ್ದು, ಇಡೀ ಕುರುಬ ಜನಾಂಗದ ಸ್ವಾಭಿಮಾನವನ್ನೇ ಕೆಣಕಿತ್ತು. ಸಂಘ ಪರಿವಾರದ ಹಮಾಲಿಯಾಗಿರುವ ಕೆ.ಎಸ್. ಈಶ್ವರಪ್ಪನವರನ್ನು ಹೊರತುಪಡಿಸಿ ಇತರ ಎಲ್ಲಾ ಪಕ್ಷಗಳ ಕುರುಬ ರಾಜಕೀಯ ಮುಖಂಡರು ಮತ್ತು ಅಹಿಂದ ಸಮಾಜದ ಸ್ವಾಮಿಗಳು ಅಹಿಂದದ ಹೋರಾಟದಲ್ಲಿ ಗುರುತಿಸಿಕೊಂಡು ಮತ್ತಷ್ಟು ಕಸುವು ತುಂಬಿದರು. ಕರ್ನಾಟಕದ ಫ್ಯೂಡಲ್ ಶಕ್ತಿಗಳ ವಿರುದ್ಧ ಸಮರ ಸಾರಿದ್ದ ಸಿದ್ದರಾಮಯ್ಯನವರ ನಾಯಕತ್ವವನ್ನು ಸಂಪೂರ್ಣವಾಗಿ ಒಪ್ಪಿಕೊಂಡ ಅಹಿಂದ ಸಮಾಜ, ಅಹಿಂದದ ಕಾರ್ಯಕ್ರಮಗಳಿಗೆ ಲಕ್ಷಾಂತರ ಸಂಖ್ಯೆಯಲ್ಲಿ ಹರಿದು ಬರುತ್ತಿತ್ತು. ಸಿದ್ದರಾಮಯ್ಯನವರಲ್ಲಿ ದೇವರಾಜ ಅರಸರ ಪ್ರತಿರೂಪವನ್ನು ಕಲ್ಪಿಸಿಕೊಂಡು 'ಅಂದು ಅರಸು-ಇಂದು ಸಿದ್ದರಾಮಯ್ಯ' ಎಂದು ಘೋಷಿಸಿ ಸಂಭ್ರಮಿಸಿತು!



ಅತ್ಯಲ್ಪ ಅವಧಿಯಲ್ಲಿ ಬಿರುಗಾಳಿಯಂತೆ ಹಬ್ಬಿದ ಅಹಿಂ ದದ ಹವಾ, ಕಳೆದ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಜೆಡಿಎಸ್ ಪಕ್ಷ ವನ್ನು ಅರೆಜೀವ ಮಾಡಿ ಬಿಟ್ಟಿತು. ಸಿದ್ದರಾಮಯ್ಯ ಮುಖಂಡತ್ವದ ಅಖಿಲ ಭಾರತ ಪ್ರಗತಿಪರ ಜನತಾದಳ ಗಮನಾರ್ಹ ಮತಗಳನ್ನು ಸೆಳೆದುಕೊಂಡು ಕೆಲವು ಕಡೆ ಕಿಂಗ್‌ಮೇಕರ್ ಆಗಿ ಹೊರ ಹೊಮ್ಮಿತು. ಇದರಿಂದ ಕನಲಿ ಹೋದ ದೇವೇಗೌಡರು, ಭವಿಷ್ಯದಲ್ಲಿ ತಮ್ಮ ಪಕ್ಷಕ್ಕೆ ಕಾದಿರುವ ಜನಮನದ ತೀರ್ಮಾನದಿಂದ, ತಮ್ಮ ಇಷ್ಟಾರ್ಥ ಸಿದ್ಧಿಸುವುದಿಲ್ಲವೆಂದು ಮನಗಂಡು, ಶತಾಯ ಗತಾಯ ಈ ಅವಧಿಯಲ್ಲಿಯೇ ಪುತ್ರ ಕುಮಾರ ಸ್ವಾಮಿಯನ್ನು ಮುಖ್ಯಮಂತ್ರಿ ಗಾದಿಗೇರಿಸಲು ತೀರ್ಮಾನಿಸಿಬಿಟ್ಟರು. ಪರಿಣಾಮವಾಗಿ ಮೊಟ್ಟ ಮೊದಲ ಬಾರಿಗೆ ಕನ್ನಡದ ನೆಲದಲ್ಲಿ ಜಾತಿವಾದಿ-ಕೋಮುವಾದಿ ಶಕ್ತಿಗಳ ಕೂಡಾವಳಿಯಾಗಿ 'ಕೋಜಾ' ಸರ್ಕಾರ ಅಸ್ತಿತ್ವಕ್ಕೆ ಬಂತು!

ಈ ಬೆಳವಣಿಗೆಯಿಂದ ಅಪ್ಪ-ಮಗನ ಅಧಿಕಾರ ದಾಹದ ನಾಚಕ ಜನತೆಯ ಮುಂದೆ ಅನಾವರಣಗೊಂಡು, ಸಿದ್ದರಾಮಯ್ಯನವರ ಆರೋಪ ಸಾಬೀತಾಯಿತು. ಮಾಜಿ ಪ್ರಧಾನಿಗಳ ಹೇಸಿಗೆಯ ರಾಜಕೀಯ 'ಅಹಿಂದ ಸಮಾಜದಲ್ಲಿ ವಾಕರಿಕೆ ಮೂಡಿಸಿತು. ಜಾತಿವಾದಿ-ಕೋಮುವಾದಿ ಶಕ್ತಿಗಳ ವಿರುದ್ಧ ತೀವ್ರ ರೀತಿಯ ಸಾಮಾಜಿಕ-ಸಾಂಸ್ಕೃತಿಕ-ರಾಜಕೀಯ ಆಂದೋಲನ ನಡೆಸುವ ಅವಕಾಶ ಸಿದ್ದರಾಮಯ್ಯನವರಿಗೆ ಸಿಕ್ಕಿತು. ಆರಂಭದಿಂದಲೇ ಅಹಿಂದದ ಸಾಮರ್ಥ್ಯವನ್ನು ವಾಸನೆಯಿಂದಲೇ ಗ್ರಹಿಸಿದ್ದ ಕಾಂಗ್ರೆಸ್ ಪಕ್ಷದ ಮುಖಂಡರು, ಅಹಿಂದದ ಹುಲುಸಾದ ಬೆಳೆಯನ್ನು ಕಟ್ಟಾವು ಮಾಡಿಕೊಳ್ಳಲು, ಸಿದ್ದರಾಮಯ್ಯನವರಿಗೆ ಗಾಳ ಹಾಕಿ ಕುಳಿತುಕೊಂಡಿದ್ದರು. ಮೊದಲಿನಿಂದಲೂ ಕಾಂಗ್ರೆಸ್ ವಿರೋಧಿ ರಾಜಕೀಯ ಮಾಡಿಕೊಂಡು ಬಡಿದಾಡುತ್ತಾ ಬಂದಿದ್ದ ಸಿದ್ದರಾಮಯ್ಯನವರು, ಖಂಡಿತವಾಗಿಯೂ ಕಾಂಗ್ರೆಸ್‌ಗಾಳಕ್ಕೆ ಸಿಕ್ಕಿಕೊಳ್ಳುವುದಿಲ್ಲವೆಂದು ಅಹಿಂದ ಸಮಾಜ ಗಾಢವಾಗಿ ನಂಬಿತ್ತು.

ಏಕೆಂದರೆ ಅಹಿಂದ ಸಮಾಜವನ್ನು ಓಟಿನ ಡಬ್ಬಿಯನ್ನಾಗಿ ಬಳಸಿಕೊಂಡಿದ್ದ ಕಾಂಗ್ರೆಸ್ ಪಕ್ಷವು ತಾನು ಅಧಿಕಾರ ಹಿಡಿದ ಸಂದರ್ಭದಲ್ಲೆಲ್ಲಾ ಶೋಷಿತ ಸಮುದಾಯಗಳ ಹಿತಾಸಕ್ತಿಗಳನ್ನು ಎಲೆಯಂತೆ ಜಬಡಿ ಉಗುಳಿ ಬಿಡುತ್ತಿತ್ತು! ಹಾಗಾಗಿ ಸಿದ್ದರಾಮಯ್ಯನವರು ನೆರೆಯ ತಮಿಳುನಾಡು, ಆಂಧ್ರ ರಾಜ್ಯಗಳಲ್ಲಿರುವಂತೆ ಪ್ರಾದೇಶಿಕ ಪಕ್ಷ ಕಟ್ಟಿ, ಸದಾ ಕಾಲ ಕರ್ನಾಟಕದ ಹಿತಾಸಕ್ತಿಯನ್ನು ಬಲಿಕೊಡುತ್ತಿರುವ ಕೇಂದ್ರ ಸರ್ಕಾರಗಳನ್ನು ಹಣಿಯಬಹುದೆಂದು ಆಸೆ ಇಟ್ಟುಕೊಂಡಿತ್ತು. ಒಂದು ವೇಳೆ ಏಕಾಂಗಿಯಾಗಿ ಜೆಡಿಎಸ್, ಬಿಜೆಪಿ, ಕಾಂಗ್ರೆಸ್ ಪಕ್ಷಗಳ ವಿರುದ್ಧ ಸೆಣಸಲಾಗದಿದ್ದರೆ, ಕರ್ನಾಟಕದಲ್ಲಿ ಪ್ರಗತಿಪರ ಪರ್ಯಾಯ ರಾಜಕೀಯ ಪಕ್ಷಗಳಾಗಿ ಅಸ್ತಿತ್ವದಲ್ಲಿರುವ ಬಹುಜನ ಸಮಾಜ ಪಕ್ಷ, ಕರ್ನಾಟಕ ಸರ್ವೋದಯ ಪಕ್ಷ, ಸಿಪಿಐ, ಸಿಪಿಎಂ ಇತ್ಯಾದಿಗಳೊಂದಿಗೆ ಮೈತ್ರಿ ಮಾಡಿಕೊಂಡು ತೃತೀಯ ಶಕ್ತಿಯನ್ನು ರೂಪಿಸಿಕೊಳ್ಳುವುದರ ಮುಖಾಂತರ ಅಧಿಕಾರ ವಂಚಿತರ ಕೈಗೆ ಅಧಿಕಾರ, ಬದುಕಿಗೆ ಸ್ವಾಭಿಮಾನ ತಂದುಕೊಡಬಹುದೆಂಬ ದೂರಾಲೋಚನೆಯಿತ್ತು.

ಪರ್ಯಾಯ ರಾಜಕಾರಣದ ಸಂಗ್ರಾಮದಲ್ಲಿ ತಕ್ಷಣ

ಆಸೆ, ಆಕಾಂಕ್ಷೆ, ನಂಬಿಕೆ, ವಿಶ್ವಾಸ ಮತ್ತು ಪ್ರೀತಿವಾತ್ಸಲ್ಯದ ಅಹಿಂದ ಸಮಾಜದ ಬಲೂನಿಗೆ ಸೂಜಿ ಚುಚ್ಚಿದ ಸಿದ್ದರಾಮಯ್ಯ, ದೇವೇಗೌಡರ ಕುಟುಂಬ ರಾಜಕಾರಣವನ್ನು ವಿರೋಧಿಸುವ ರಭಸದಲ್ಲಿ ನೆಹರು ಕುಟುಂಬದ ಪ್ರಪಾತಕ್ಕೆ ಜಾರಿ ಬಿದ್ದಿದ್ದಾರೆ. ಕಾಂಗ್ರೆಸ್ಸಿಗರ ಗಾಳಕ್ಕೆ ಸಿಕ್ಕಿ ಬಿದ್ದಿದ್ದಾರೆ.

ಮೆಜಾರಿಟಿ ಸಿಗದಿದ್ದರೂ, ಮೆಜಾರಿಟಿಯ ಹತ್ತಿರ ಬರಬಹುದೆಂಬ ತವಕವಿತ್ತು. ಒಂದು ವೇಳೆ ಪುನಃ ರಾಜಕೀಯ ಅನಿಶ್ಚಿತತೆ ಮೂಡಿ, ಯಾವುದೇ ಪಕ್ಷಕ್ಕೆ ಬಹುಮತ ದೊರೆಯದಿದ್ದಾಗ 'ಕಿಂಗ್ ಮೇಕರ್' ಆಗಿ Power Bargain ಮಾಡುವ ತಾಕತ್ತಾಗಿ ಮಟಿದೇಳಬಹುದೆಂಬ ಆಕಾಂಕ್ಷೆಯಿತ್ತು. ಇವುಗಳ ಮುಂದಿನ ರಹದಾರಿಯೇ ಮುಖ್ಯಮಂತ್ರಿ ಗಾದಿ! ದೇವೇಗೌಡರಂತೆ ಸ್ವಾರ್ಥಕ್ಕಾಗಿ ಸಿದ್ದರಾಮಯ್ಯನವರು ತಾವು ಇದುವರೆಗೆ ಪ್ರತಿಪಾದಿಸಿಕೊಂಡು ಬಂದ ತತ್ವ ಸಿದ್ಧಾಂತವನ್ನು ಗಾಳಿಗೆ ತೂರಿ, ಈಗ ತಮ್ಮ ಬೆನ್ನ ಹಿಂದೆ ಪ್ರಚಂಡ ಶಕ್ತಿಯಾಗಿ ನಿಂತಿರುವ ಅಹಿಂದ ಸಮಾಜವನ್ನು ನಡುನೀರಿನಲ್ಲಿ ಕೈ ಬಿಡಲಾರರೆಂಬ ಅಚಲ ವಿಶ್ವಾಸವಿತ್ತು. ಅವರು ಪ್ರವಾಹಕ್ಕೆ ವಿರುದ್ಧವಾಗಿ ಈಜುತ್ತಾರೆಯೇ ಹೊರತು ಪ್ರವಾಹದೊಂದಿಗೆ ಕೊಚ್ಚಿ ಹೋಗಲಾರರೆಂಬ ಧೈರ್ಯವಿತ್ತು.

ಈ ಆಸೆ, ಆಕಾಂಕ್ಷೆ, ನಂಬಿಕೆ, ವಿಶ್ವಾಸ ಮತ್ತು ಪ್ರೀತಿವಾತ್ಸಲ್ಯದ ಅಹಿಂದ ಸಮಾಜದ ಬಲೂನಿಗೆ ಸೂಜಿ ಚುಚ್ಚಿದ ಸಿದ್ದರಾಮಯ್ಯ, ದೇವೇಗೌಡರ ಕುಟುಂಬ ರಾಜಕಾರಣವನ್ನು ವಿರೋಧಿಸುವ ರಭಸದಲ್ಲಿ ನೆಹರು ಕುಟುಂಬದ ಪ್ರಪಾತಕ್ಕೆ ಜಾರಿ ಬಿದ್ದಿದ್ದಾರೆ. ಕಾಂಗ್ರೆಸ್ಸಿಗರ ಗಾಳಕ್ಕೆ ಸಿಕ್ಕಿ ಬಿದ್ದಿದ್ದಾರೆ. ಪ್ರವಾಹದ ಎದುರು ಈಜದೇ–ಪ್ರವಾಹದೊಂದಿಗೆ ಕೊಚ್ಚಿಕೊಂಡು ಹೋಗಿ, ತಮ್ಮನ್ನು ನಂಬಿದ್ದ ಅಹಿಂದ ಸಮಾಜವನ್ನು ನಡುನೀರಿನಲ್ಲಿ ಕೈ ಬಿಟ್ಟಿದ್ದಾರೆ.

ಇಂದಿನ ರಾಜಕೀಯ ತೀರಾ ಭ್ರಷ್ಟಗೊಂಡಿದ್ದು, ಕೊಪ್ಪರಿಗೆ ಹಣವಿಲ್ಲದೆ ರಾಜಕೀಯ ಪಕ್ಷವನ್ನು ಕಟ್ಟುವುದಾಗಲೀ, ತೃತೀಯ ರಂಗವನ್ನು ಪುನಶ್ಚೇತಗೊಳಿಸುವುದಾಗಲೀ ಸಾಧ್ಯವಿಲ್ಲದ ಮಾತು. ಈ ಕಾರಣದಿಂದಲೇ ಸಿದ್ದರಾಮಯ್ಯನವರು ಕಾಂಗ್ರೆಸ್ ಸೇರಿದ್ದಾರೆ ಎಂದು ಕೆಲವು ಬಾಲ ಬಡುಕರು ಸಿದ್ದರಾಮಯ್ಯನವರ ಕಾಂಗ್ರೆಸ್ ಸೇರ್ಪಡೆಯನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಈ ಸಮರ್ಥನೆ ತೀರಾ ಬಾಲಿಶತನದಿಂದ ಕೂಡಿದ್ದು, ಕರ್ನಾಟಕದ ಪ್ರಬುದ್ಧ ಜನತೆಗೆ ಮಾಡುತ್ತಿರುವ ಅವಮಾನವಾಗಿದೆ. ಹಣಬಲವೇ ಅಂತಿಮವಾಗಿದ್ದರೆ ಭಾರತದಲ್ಲಿ ಕಾಂಗ್ರೆಸ್ಸೇತರ ಪಕ್ಷಗಳು, ಸರ್ಕಾರಗಳು ಚಲಾವಣೆಗೆ ಬರುತ್ತಲೇ ಇರಲಿಲ್ಲ. ತೃತೀಯರಂಗ ಎನ್ನುವ ಪರಿಕಲ್ಪನೆಯೇ ಹುಟ್ಟಿಕೊಳ್ಳುತ್ತಿರಲಿಲ್ಲ. ಪ್ರತಿಯೊಂದಕ್ಕೂ ರೊಕ್ಕಾನೇ ಮುಖ್ಯ ಎಂದಾಗಿದ್ದರೆ, ಕರ್ನಾಟಕದಲ್ಲಿ ಫ್ಯೂಡಲ್ ಶಕ್ತಿಗಳ ವಿರುದ್ಧ ದೇವರಾಜ ಅರಸು ಪ್ರಚಂಡ ಬಹುಮತದಿಂದ ಗೆದ್ದು ಬಂದು ದುರ್ಬಲ ಜನಾಂಗಗಳಿಗೆ ರಾಜಕೀಯ ಶಕ್ತಿಯನ್ನು ತುಂಬಲಾಗುತ್ತಿರಲಿಲ್ಲ. ಅಷ್ಟೇ ಏಕೆ, ಇದೇ ದೇವೇಗೌಡ–ಸಿದ್ದರಾಮಯ್ಯ ರಾಜಕೀಯ ರಂಗದಲ್ಲಿ ತಲೆ ಎತ್ತಲು ಸಾಧ್ಯವಾಗುತ್ತಿರಲೇ ಇಲ್ಲ!

ಪರ್ಯಾಯ ರಾಜಕಾರಣಕ್ಕೆ ಬದ್ಧರಾಗಿದ್ದರೆ, ರೊಕ್ಕ ಹೊಂದಿಸುವ ಕೆಲಸ ಸಿದ್ದರಾಮಯ್ಯನವರಿಗೆ ಸವಾಲಾಗುತ್ತಲೇ ಇರಲಿಲ್ಲ. ಈ ರಾಜ್ಯದ ಉಪಮುಖ್ಯಮಂತ್ರಿಯಾಗಿ, ಸಮರ್ಥ ಹಣಕಾಸು ಮಂತ್ರಿಯಾಗಿ ಕಾರ್ಯನಿರ್ವಹಿಸಿರುವ ಅವರಿಗೆ, ಒಂದು ಪಕ್ಷದ ರಾಜ್ಯಾಧ್ಯಕ್ಷರಾಗಿ ಹೆಣಗಿರುವ ಸಿದ್ದರಾಮಯ್ಯನವರಿಗೆ ಇತರರಿಗಿಂತ ಬಹಳ ಚೆನ್ನಾಗಿ ಸಂಪನ್ಮೂಲಗಳ ಮೂಲಗೊತ್ತಿದೆ. ಭ್ರಷ್ಟರನ್ನು ಮುಗಿಸಲು ಮತ್ತೊಂದು ಭ್ರಷ್ಟರ ಬಣ ಸೇರುವುದು–ರೊಕ್ಕಸ್ತರನ್ನು ಮುಗಿಸಲು–ರೊಕ್ಕಸ್ತರನ್ನೇ ಆಶ್ರಯಿಸುವುದು, ವ್ಯವಸ್ಥೆಯ ವಿರುದ್ಧ ಮಾತಾಡುವ ಸಿದ್ದರಾಮಯ್ಯನವರಂಥ ಹಿರಿಯಣ್ಣನಿಗೆ ಶೋಭಿಸುವುದಿಲ್ಲ!

ಪರ್ಯಾಯ ರಾಜಕಾರಣದಿಂದ ಭವಿಷ್ಯದಲ್ಲಿ ವಿರೋಧ ಪಕ್ಷದ ನಾಯಕನಾಗಿ, ಕಿಂಗ್‌ಮೇಕರ್ ಆಗಿ, ಕೊನೆಗೆ ಮುಖ್ಯಮಂತ್ರಿಯಾಗುವ ಅವಕಾಶ ಹೊಂದಿದ್ದ ಸಿದ್ದರಾಮಯ್ಯನವರು ಈಗ ಕಾಂಗ್ರೆಸ್‌ನಿಂದ ಪಡೆದುಕೊಳ್ಳುವುದಾದರೂ ಏನು? ಬರುವ ವಿಧಾನಸಭಾ ಚುನಾವಣೆಯ ನಂತರ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಸೀನಿಯಾರಿಟಿ ಮತ್ತು ದಲಿತ ಕೋಟಾದಡಿ 'ಪಟೇಲ್' ಖರ್ಗೆಯವರು ಮುಖ್ಯಮಂತ್ರಿಯಾಗಲಿದ್ದಾರೆ. ನಂತರದ ಅವಕಾಶಕ್ಕಾಗಿ (ಕಬಳಿಕೆಗಾಗಿ) ಲಿಂಗಾಯತ ಜನಾಂಗದಿಂದ ಎಚ್.ಕೆ. ಪಾಟೀಲ್, ಒಕ್ಕಲಿಗ ಜನಾಂಗದಿಂದ ಡಿ.ಕೆ. ಶಿವಕುಮಾರ್, ಬ್ರಾಹ್ಮಣ ಲಾಬಿಯಿಂದ ಆರ್.ವಿ. ದೇಶಪಾಂಡೆ ಒಳಗೊಂಡಂತೆ ಕನಿಷ್ಟ ಒಂದು ಡಜನ್ ಮಂದಿ ಸಾಲಿನಲ್ಲಿ ನಿಂತುಕೊಂಡಿದ್ದಾರೆ. ಪರಿಸ್ಥಿತಿ ಇಷ್ಟೊಂದು ಬಿಗಡಾಯಿಸಿರುವಾಗ ಸಿದ್ದರಾಮಯ್ಯನವರನ್ನು ವಿಚಾರಿಸಿಕೊಳ್ಳುವವರು ಯಾರು? ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಅವರು ಸಂಸದರಾಗಿ ಆಯ್ಕೆಯಾದರೂ ಮತ್ತೆ ಕೇಂದ್ರದಲ್ಲಿ ಯುಪಿಎ ಸರ್ಕಾರ ಅಧಿಕಾರಕ್ಕೆ ಬರಬಹುದೆಂಬ ಗ್ಯಾರಂಟಿ ಏನು? ಆಗ ಕೇಂದ್ರದಲ್ಲಿ ಮಂತ್ರಿಯೂ ಆಗದೆ, ರಾಜ್ಯದ ರಾಜಕೀಯದ ಮೇಲೆ ಹಿಡತವಿಲ್ಲದೆ 'ದಾರಿ ತಪ್ಪಿದ ಮಗ'ನಾಗಿ ಕಾಂಗ್ರೆಸ್ ಎಂಬ ಸಮುದ್ರದಲ್ಲಿ ಒಂದು ಹನಿಯಾಗಿ ಕಳೆದು ಹೋದರೆ ಪ್ರಯೋಜನವೇನು?

ಕುಟುಂಬ ರಾಜಕಾರಣಕ್ಕಾಗಿ ಬಿಜೆಪಿಯೊಂದಿಗೆ ಕೂಡಾವಳಿ ಮಾಡಿಕೊಂಡು, ಆಂತರಿಕ ಕಚ್ಚಾಟ ಹಾಗೂ ಬಂಗಾರಪ್ಪನವರ ನಿರ್ಗಮನದಿಂದ ಸ್ವತಹ ವಿನಾಶದ ಅಂಚು ತಲುಪಿದ್ದ ಬಿಜೆಪಿಗೆ ಪುನರ್‌ಜನ್ಮದೊಂದಿಗೆ ಅಧಿಕಾರದ ರುಚಿ ಹತ್ತಿಸಿ ಕರ್ನಾಟಕದ ಪ್ರಬುದ್ಧ ಮತದಾರರಿಗೆ ದೇವೇಗೌಡರು ದೋಖಾ ನೀಡಿದ್ದಾರೆ. ಮಾಜಿ ಪ್ರಧಾನಿಗಳ ಕುಟುಂಬ ರಾಜಕಾರಣವನ್ನು ಮುಗಿಸಲು ಕಾಂಗ್ರೆಸ್‌ನೊಂದಿಗೆ ಕೈ ಜೋಡಿಸಿರುವ ಸಿದ್ದರಾಮಯ್ಯನವರು, ಈ ನೆಲದಲ್ಲಿ ಸಾಧ್ಯವಾಗಬಹುದಾಗಿದ್ದ ಪ್ರಾದೇಶಿಕ ಪಕ್ಷ ಅಥವಾ ತೃತೀಯ ಶಕ್ತಿಯ ಪರ್ಯಾಯ ರಾಜಕಾರಣದ ಕತ್ತುಹಿಸುಕಿ, ಕಾಂಗ್ರೆಸ್‌ಗೆ ಪರ್ಯಾಯವಾಗಿ ಕೋಮುವಾದಿ ಬಿಜೆಪಿ ಅಸ್ತಿತ್ವದಲ್ಲಿರುವಂತೆ ನೋಡಿಕೊಂಡಿದ್ದಾರೆ. ಅಹಿಂದ ಸಮಾಜಕ್ಕೆ ದ್ರೋಹವೆಸಗಿದ್ದಾರೆ. ಅಹಿಂದ ಸಮಾಜವನ್ನು ತಮ್ಮ ರಾಜಕೀಯದ ಹಾವು ಏಣಿ ಆಟಕ್ಕೆ ದಾಳವಾಗಿಸಿಕೊಂಡಿದ್ದಾರೆ. ಅಹಿಂದ ಚಳುವಳಿಯು ಬಹುಜನ ಶೋಷಿತ ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಳುವಳಿಯಾಗಿ ಬೆಳೆಯದಂತೆ ಊನಗೊಳಿಸಿದ್ದಾರೆ. ☐

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಅಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಇಂದಿನ ರಾಜಕೀಯ ನಾಯಕರು ಮಹಿಳೆಯರ ಬಗ್ಗೆ ಮತ್ತವರ ಸ್ವಾತಂತ್ರ್ಯ ಸಮಾನತೆ ಮೀಸಲಾತಿಯ ಕುರಿತಂತೆ ಮೊಸಳೆ ಕಣ್ಣೀರು ಹಾಕುತ್ತಿರುತ್ತಾರೆ. ತಮ್ಮ ಮನೆಯಲ್ಲಿ ಸೀಮೆ ಎಣ್ಣೆ ಆ್ಯಸಿಡ್ ಹಾಕುತ್ತಾರೆ. ಪುರುಷಾಧಿಪತ್ಯ ನಿರಂತರವಾಗಿ ಮಹಿಳೆಯರನ್ನ ತನ್ನ ಅಂಕೆಯಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಿದೆ. ಆದರೆ ಇದಕ್ಕೆ ಕಾಕತಾಳೀಯ ವೆಂಬಂತೆ ಅಂಬೇಡ್ಕರ್‌ರವರು ೧೯೩೫ ಮೇ ೨೭ ರಂದು ತಮ್ಮ ಪತ್ನಿ ರಮಾಬಾಯಿ ನಿಧನರಾದಾಗ ಬಹಳ ನೊಂದುಕೊಳ್ಳುತ್ತಾರೆ. ತಮ್ಮ ಪ್ರತಿ ಹೋರಾಟಗಳಿಗೆ ಸ್ಫೂರ್ತಿಯ ಚಿಲುಮೆಯಾಗಿದ್ದ ಪತ್ನಿಗೆ ಅಂಬೇಡ್ಕರ್ ಸ್ವಾಭಿಮಾನ ಕಲಿಸಿಕೊಟ್ಟ ವ್ಯಕ್ತಿಯಾಗಿರುತ್ತಾರೆ. ಹಾಗಾಗಿಯೇ ರಮಾಬಾಯಿಯವರು ಚಳವಳಿಯ ನೆಲೆಯಲ್ಲಿ ಬಂದ ಹತ್ತು ಹಲವು ಕಿರಿಪಿರಿಗಳನ್ನು ಸಹಿಸಿಕೊಂಡು ಅಂಬೇಡ್ಕರ್‌ರವರಿಗೆ ಸಾಥ್ ನೀಡುತ್ತಾರೆ.

ಸಣ್ಣಂಗಿರಾಜ

"ಅತು ಮುಟ್ಟದ ಕ್ಷೇತ್ರವಿಲ್ಲ ಎಂಬ ಮಾತಿದೆ. ಅಂತೆಯೇ ಅಂಬೇಡ್ಕರ್ ಅರಿಯದ ಕ್ಷೇತ್ರವೇ ಇಲ್ಲವೇನೋ? ಸಮಾಜದ ಉನ್ನತಿಗಾಗಿ ಹತ್ತು ಹಲವು ವಿಷಯ, ವಿಚಾರಗಳ ಕುರಿತು ಆಳವಾದ ತಿಳುವಳಿಕೆಯನ್ನು ಹೊಂದಿದ್ದ ಅಪರೂಪದ ವ್ಯಕ್ತಿ, ಅಂಬೇಡ್ಕರ್

ಇಂಥದೊಂದು ಗ್ರಹಿಕೆ ಇಟ್ಟುಕೊಂಡಿದ್ದ ಅವರು, ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ತುಳಿತಕ್ಕೊಳಗಾದ, ದಮನಿತರಲ್ಲೆ, ದಮನಿತರೆನಿಸಿಕೊಂಡಿದ್ದ ಮಹಿಳೆಯರು ಮತ್ತವರ ಚಳುವಳಿಯ ಅಗತ್ಯತೆಯ ಬಗ್ಗೆ ಒಲವು ಮತ್ತು ಒಳಹುಗಳನ್ನು ಹೊಂದಿದವರಾಗಿದ್ದರು.

"ಮಕ್ಕಳ ಭವಿಷ್ಯ ತಾಯಂದಿರ ಕೈಯಲ್ಲಿದೆ" ಹಾಗಾಗಿ ಗಂಡು ಮಕ್ಕಳಂತೆ ಹೆಣ್ಣು ಮಕ್ಕಳಿಗೂ ಸಹ ಶಿಕ್ಷಣ ನೀಡಬೇಕು ಆಗಲೆ ಪ್ರಗತಿ ಸಾಧ್ಯವೆಂದು ೧೯೧೩ರಲ್ಲೆ ಅಂಬೇಡ್ಕರ್‌ರವರು ತಮ್ಮ ಚಿಕ್ಕ ವಯಸ್ಸಿನಲ್ಲೆ ಪ್ರತಿಪಾದಿಸುತ್ತಾರೆ. ಹಾಗೆನೇ ಮೀಸಲಾತಿಯ ಪರಿಕಲ್ಪನೆಯಲ್ಲೂ ಮಹಿಳೆಯರಿಗೆ ಪ್ರಧಾನ ಆದ್ಯತೆ ಅವರು ನೀಡುತ್ತಾರೆ.

ಸದ್ಯ ಆಳ್ವಿಕೆ ನಡೆಸುತ್ತಿರುವ ಮತ್ತು ಹಿಂದೆ ಆಳಿ ಅಳಿದು ಹೋದ ಸರ್ಕಾರಗಳಿಗೆ ಆಘಾತವಾಗುವಂತೆಯೇ ಅವರು ಪಾನ ನಿರೋಧ ಮತ್ತು ಮದ್ಯಪಾನ ನಿಷೇಧ ಕುರಿತು ಮಾತನಾಡಿದ್ದಾರೆ. ೧೯೨೭ ಮಾರ್ಚ್ ೧೦ರಂದು ಬಾಬಾ ಸಾಹೇಬರು ಈ ಕುರಿತು ತಮ್ಮ ಸುದೀರ್ಘ ಮಾತುಗಳನ್ನಾಡಿದ್ದಾರೆ. "ಮಹಿಳೆಯ ಕಷ್ಟ ಕಾರ್ಪಣ್ಯಗಳನ್ನು ಗ್ರಹಿಸದೆ ಹೀಗೆ ಮಾತನಾಡಲು ಸಾಧ್ಯವಿಲ್ಲ. ನಿಷೇಧ ಸಾಧ್ಯವಿಲ್ಲವೆಂದು ಹೇಳುವ ಜನರಿಗೆ ಅರಿವಾಗಬೇಕು. "ಮದ್ಯಪಾನ ನಿಷೇಧ ಸರ್ಕಾರಕ್ಕೆ ನಷ್ಟವಲ್ಲ, ಜನರಿಗೆ ತೊಂದರೆಯಾದರೆ ಸರ್ಕಾರವೆ ಅದಕ್ಕೂ ಸಹ ಹಣ ಬರಿಸಬೇಕಾಗುತ್ತದೆ. ಜನರನ್ನ ಅನೈತಿಕತೆಗೆ ತಳ್ಳಿ ಸರ್ಕಾರ ಹಣ ಮಾಡುವ ಅಗತ್ಯವಿಲ್ಲ"ವೆಂದು ಹೇಳಿದ್ದಾರೆ. ಅಂಬೇಡ್ಕರ್‌ರವರು ಎಷ್ಟು ಮಾದರಿಯಾಗಿದ್ದರು ಎಂಬುದಕ್ಕೆ ಇದಕ್ಕಿಂತ ಇನ್ನೇನು ಬೇಕಿಲ್ಲವೆಂದು ಕಾಣುತ್ತದೆ. ೧೯೨೮ ಫೆಬ್ರವರಿ ೨೧ರಂದು ಬಾಂಬೆ ಅಸೆಂಬ್ಲಿಯಲ್ಲೂ ದೇಶದ ತಾಯಂದಿರಿಗೆ, ತಾಯ್ತನದ ಬಗ್ಗೆ ನಿರ್ದಿಷ್ಟ ಕಾಲವಧಿಯ ವಿಶ್ರಾಂತಿ ಸಿಗಬೇಕು. ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳ ಮಾಲೀಕರು ಹೆರಿಗೆ ಭತ್ಯೆಯನ್ನು ನೀಡಬೇಕು ಎಂದು ಅವರು ಒತ್ತಾಯಿಸುತ್ತಾರೆ.

"ಮಕ್ಕಳ ಭವಿಷ್ಯ ತಾಯಂದಿರ ಕೈಯಲ್ಲಿದೆ" ಹಾಗಾಗಿ ಗಂಡು ಮಕ್ಕಳಂತೆ ಹೆಣ್ಣು ಮಕ್ಕಳಿಗೂ ಸಹ ಶಿಕ್ಷಣ ನೀಡಬೇಕು ಆಗಲೆ ಪ್ರಗತಿ ಸಾಧ್ಯವೆಂದು ೧೯೧೩ರಲ್ಲೆ ಅಂಬೇಡ್ಕರ್‌ರವರು ತಮ್ಮ ಚಿಕ್ಕ ವಯಸ್ಸಿನಲ್ಲೆ ಪ್ರತಿಪಾದಿಸುತ್ತಾರೆ. ಹಾಗೆನೇ ಮೀಸಲಾತಿಯ ಪರಿಕಲ್ಪನೆಯಲ್ಲೂ ಮಹಿಳೆಯರಿಗೆ ಪ್ರಧಾನ ಆದ್ಯತೆ ಅವರು ನೀಡುತ್ತಾರೆ.

೧೯೩೩ರ ಡಿಸೆಂಬರ್‌ನಲ್ಲೂ ಲೈಂಗಿಕ ವಿಜ್ಞಾನದ ಕುರಿತು ಒಂದು ವೈಜ್ಞಾನಿಕ ಲೇಖನ ಪ್ರಕಟಿಸಿದ್ದಕ್ಕೆ ಪುರೋಹಿತಶಾಹಿ ವ್ಯವಸ್ಥೆ ಆ ವ್ಯಕ್ತಿಯನ್ನು ಬಂಧಿಸುತ್ತದೆ. ಆ ಸಂದರ್ಭದಲ್ಲಿ ಬಾಬಾಸಾಹೇಬರು "ಅಶ್ಲೀಲತೆ ಎಂಬುದು ಅರ್ಥದ ಮೇಲೆ ಅವಲಂಬಿಸಿದೆ. ಭಾಷೆಯ ಮೇಲೆ ಅವಲಂಬಿಸಿದೆ. ಸಾಮಾಜಿಕ ಸ್ವಾಸ್ಥ್ಯಕ್ಕೆ ವೈಜ್ಞಾನಿಕ ವಿಚಾರಧಾರೆಗಳ ಅಗತ್ಯವಿದೆ ಎಂದು ಒತ್ತಿ ಒತ್ತಿ ಹೇಳುತ್ತಾರೆ.

ಇಂದಿನ ರಾಜಕೀಯ ನಾಯಕರು ಮಹಿಳೆಯರ ಬಗ್ಗೆ ಮತ್ತವರ ಸ್ವಾತಂತ್ರ್ಯ ಸಮಾನತೆ ಮೀಸಲಾತಿಯ ಕುರಿತಂತೆ ಮೊಸಳೆ ಕಣ್ಣೀರು ಹಾಕುತ್ತಿರುತ್ತಾರೆ. ತಮ್ಮ ಮನೆಯಲ್ಲಿ ಸೀಮೆ ಎಣ್ಣೆ ಆ್ಯಸಿಡ್ ಹಾಕುತ್ತಾರೆ. ಪುರುಷಾದಿಪತ್ಯ ನಿರಂತರವಾಗಿ ಮಹಿಳೆಯರನ್ನ ತನ್ನ ಅಂಕೆಯಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಿಡೆ. ಆದರೆ ಇದಕ್ಕೆ ಕಾಕತಾಳೀಯವೆಂಬಂತೆ ಅಂಬೇಡ್ಕರ್‌ರವರು ೧೯೩೫ ಮೇ ೨೭ ರಂದು ತಮ್ಮ ಪತ್ನಿ ರಮಾಬಾಯಿ ನಿಧನರಾದಾಗ ಬಹಳ ನೊಂದುಕೊಳ್ಳು

ಅಂಬೇಡ್ಕರ್ ಮತ್ತು ಮಹಿಳಾ ಚಳವಳಿ

ತ್ತಾರೆ. ತಮ್ಮ ಪ್ರತಿ ಹೋರಾಟಗಳಿಗೆ ಸ್ಫೂರ್ತಿಯ ಚಿಲುಮೆಯಾಗಿದ್ದ ಪತ್ನಿಗೆ ಅಂಬೇಡ್ಕರ್ ಸ್ವಾಭಿಮಾನ ಕಲಿಸಿಕೊಟ್ಟ ವ್ಯಕ್ತಿಯಾಗಿರುತ್ತಾರೆ. ಹಾಗಾಗಿಯೇ ರಮಾಬಾಯಿಯವರು ಚಳವಳಿಯ ನೆಲೆಯಲ್ಲಿ ಬಂದ ಹತ್ತು ಹಲವು ಕಿರಿಪಿರಿಗಳನ್ನು ಸಹಿಸಿಕೊಂಡು ಅಂಬೇಡ್ಕರ್‌ರವರಿಗೆ ಸಾಥ್ ನೀಡುತ್ತಾರೆ. ಹೀಗಿದ್ದ ರಮಾಬಾಯಿಯವರ ಶವಸಂಸ್ಕಾರಕ್ಕೆ ಸುಮಾರು ೨೦ ಸಾವಿರಕ್ಕೂ ಅಧಿಕ ಸಂಖ್ಯೆ ಜನ ನೆರೆಯುತ್ತಾರೆ. ಇದು ರಮಾಬಾಯಿಯವರ ಜನ ಹೋರಾಟದ ಪ್ರತೀಕವಾಗಿದೆಯೇ ಹೊರತು ಬೇರೆನಲ್ಲ!

ಅಸಮಾನತೆಗಳ ಏಣಿ ಶ್ರೇಣಿಗಳ ಮೇಲೆ ನಿಂತಿರುವ ಬ್ರಾಹ್ಮಣ ವಾದದ "ಹಿಂದೂ ಧರ್ಮ" ಮತ್ತದರೊಳಗಿನ ಹುಳುಕುಗಳನ್ನು ದೇಶಕ್ಕೆ ಎತ್ತಿ ತೋರಿದವರಲ್ಲಿ ಅಗ್ರಗಣ್ಯರು ಅಂಬೇಡ್ಕರ್. "ಮನು ಧರ್ಮ ಮಹಿಳೆಯರ ಆಜನ್ಮ ವೈರಿಯಾಗಿದೆ", "ಹಿಂದೂ ಧರ್ಮ"ವೆಂದರೆ ಅಸಮಾನತೆಗಳ ಆತ್ಮ ಎಂದು ೧೯೩೫ ರಲ್ಲಿ ಮಹಿಳೆಯರನ್ನು ಕುರಿತು ಅವರು ಭಾಷಣ ಮಾಡುತ್ತಾರೆ.

ಪ್ರಾಯಶಃ ನಾಗಪುರದಲ್ಲೆ ಇರಬೇಕು. ೧೯೩೭ ಡಿಸೆಂಬರ್ ೩೦ರಂದು ಸುಮಾರು ೫ ಸಾವಿರ ಜನ ಮಹಿಳೆಯರು ಸೇರಿಸುತ್ತಾರೆ. ಆಗ ಅಲ್ಲಿ ಅಂಬೇಡ್ಕರ್ "ಪುರುಷರು ತಪ್ಪು ಮಾಡಿದರೆ ಅವರ ವಿರುದ್ಧ ಬಂಡು ಹೂಡಬೇಕು". "ಸಮಾಜದ ಪ್ರಗತಿ, ಮಾನ, ಮಾರ್ಯದೆ ಎಲ್ಲಾ ಸ್ತ್ರೀಯರ ಕೈಯಲ್ಲಿರುತ್ತದೆ" ಎಂದು ಹೇಳುತ್ತಾರೆ. ಹಾಗೆಯೇ ಮುಂದುವರೆದು ಧರ್ಮಾಂತರಕ್ಕೆ ಸಂಬಂಧಿಸಿ ದಂತೆ ನಾವು ನೀವೆಲ್ಲ ಸೇರಿ ನಿರ್ಧರಿಸದೆ ಯಾರು ಸಹ ಧರ್ಮಾಂತರಕ್ಕಾಗಿ ದುಡುಕಬೇಡಿ ನೀವೆಲ್ಲರು ಸಹ ಇರಬೇಕು" ಎಂದವರು ಬಯಸುತ್ತಾರೆ. ಇದನ್ನ ಅವರು ಆಚರಣೆಗೂ ಸಹ ತಂದಿದ್ದಾರೆ.

೧೯೩೭ ಜನವರಿ ೧೪ ಅಂಬೇಡ್ಕರ್ ಯೂರೋಪ್ ಪ್ರವಾಸ ಮುಗಿಸಿ ಹಿಂದಿರುಗುವಾಗ ಬಾಂಬೆಯ ಆಂಗ್ಲ ಪತ್ರಿಕೆಯೊಂದು "ಅಂಬೇಡ್ಕರ್ ಇನ್ನೊಂದು ಮದುವೆ ಆಗಿದ್ದಾರೆಂದು" ವರದಿ ಮಾಡುತ್ತದೆ. ಆಗ ಜನ ಅಂಬೇಡ್ಕರ್‌ರವರ ಪತ್ನಿಯನ್ನು ನೋಡಲು ಅಪಾರ ಸಂಖ್ಯೆಯಲ್ಲಿ ಸೇರಿರುತ್ತಾರೆ. ಅಲ್ಲಿ ಪತ್ರಕರ್ತರು ಪ್ರಶ್ನಿಸುತ್ತಾರೆ. ಆಗ ಅಂಬೇಡ್ಕರ್ "ನನಗೆ ಕದ್ದು ಮದುವೆಯಾಗುವ ಅಗತ್ಯವಿಲ್ಲ"ವೆಂದು ಅತ್ಯಂತ ಮಾರ್ಮಿಕವಾಗಿ ಹೇಳುತ್ತಾರೆ. ಪುರೋಹಿತರ ಮೇಲು ಗೈಯಂತಿರುವ ಪತ್ರಿಕೆಗಳು ಹೇಗೆ ವ್ಯಕ್ತಿಯ ತೇಜೋವಧೆಗೆ ನಿಂತಿರುತ್ತವೆ ಎಂಬುದಕ್ಕೆ ಇದಕ್ಕಿಂತ ಇನ್ನೇನು ಬೇಕಿಲ್ಲ ವೆಂದುಕೊಂಡಿರುವೆ.

ನಾಗಪುರದಲ್ಲಿ ೧೯೪೨ ಜುಲೈ ೨೨ ರಂದು ಅಖಿಲ ಭಾರತ ದಲಿತ ಫೆಡರೇಷನ್‌ನ ಮೊದಲ ಅಧಿವೇಶನ ನಡೆಯುತ್ತದೆ. ಈ ಅಧಿವೇಶನಕ್ಕೆ ೭೫ ಸಾವಿರ ಜನ ಆಗಮಿಸಿರುತ್ತಾರೆ. ಇದರಲ್ಲಿ ೨೫ ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಮಹಿಳೆಯ ನೆರೆದಿರುತ್ತಾರೆ. ಇದರಲ್ಲಿ ದಲಿತ ವರ್ಗದ ಮಹಿಳಾ ಪರಿಷತ್ತು ಸಹ ಇರುತ್ತದೆ. ಸೌ. ಸುಲೋಚನ ಬಾಯಿ ಡೋಗ್ರೆಯವರ ಅಧ್ಯಕ್ಷತೆಯಲ್ಲಿ ಸಭೆ ಜರುಗುತ್ತದೆ. ಆ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅಂಬೇಡ್ಕರ್ "ಸ್ತ್ರೀ ಸಮಾಜದ ಪ್ರಗತಿಯಿಂದಲೇ ನಾನು ದಲಿತ ಸಮಾಜದ ಪ್ರಗತಿಯನ್ನು ಹೇಳುತ್ತೇನೆ." "ಮಹಿಳೆಯರು ಹೆಚ್ಚು ಹೆಚ್ಚು ಸಂಘಟಿತರಾಗಬೇಕು".

"ಸ್ವಚ್ಛವಾಗಿರುವುದನ್ನು ರೂಢಿಸಿಕೊಳ್ಳಬೇಕು. ದುರ್ಗುಣಗಳಿಂದ ದೂರವಿರಬೇಕು. ಮಕ್ಕಳಿಗೆ ತಪ್ಪದೆ ಶಿಕ್ಷಣ ಕೊಡಿಸಿ. ಅವರಲ್ಲೂ ಮಹತ್ವಾಕಾಂಕ್ಷೆ ನಿರ್ಮಾಣವಾಗುವಂತೆ. ಮಾಡಿ. ಸೂಕ್ತ ಸಮಯಕ್ಕೆ ಮದುವೆ ಮಾಡಿರೆಂದು ಕರೆ ಕೊಡುತ್ತಾರೆ. ಇವರ ಭಾಷಣಕ್ಕೆ ಮಹಿಳೆಯರು ನೀಡಿದ ಪ್ರೋತ್ಸಾಹ ಕಂಡು ಅಂಬೇಡ್ಕರ್‌ರವರು ಮಹಿಳೆಯರ ಶಿಸ್ತು ನೋಡಿ ಅಧಿವೇಶನ ವೈಶಿಷ್ಟ್ಯ ಪೂರ್ಣವಾಗಿದೆ. ನನಗೆ ಆನಂದ ತಂದಿದೆ" ಎಂದು ಮನ ದುಂಬಿ ನುಡಿಯುತ್ತಾರೆ.

೧೯೪೪ ಜನವರಿ ೨೯ ರಂದು ದಲಿತ ಫೆಡರೇಷನ್‌ನ ಎರಡನೇ ಅಧಿವೇಶನದಲ್ಲಿ "ಸ್ತ್ರೀಯರ ಸಹಕಾರವಿಲ್ಲದೆ ಯಾವ ಚಳುವಳಿ ಯಶಸ್ವಿಯಾಗುವುದಿಲ್ಲ"ವೆಂದು ಹೇಳುತ್ತಾರೆ. ಅಂದರೆ ಅವರು ಸ್ತ್ರೀಯರ ಪಾಲುಗೊಳ್ಳುವಿಕೆಯನ್ನು ಗ್ರಹಿಸಿಯೇ ಹೀಗೆಲ್ಲ ಆಡಿರುತ್ತಾರೆಂಬುದು ಸ್ಪಷ್ಟ ಸ್ತ್ರೀಯರಿಗೆ ಸಮಾನವಾದ ವೇತನ ನೀಡಬೇಕೆಂದು ಸಹ ಅವರು ಪ್ರತಿಪಾದಿಸುತ್ತಾರೆ.

ನಾಗಪುರದಲ್ಲಿ ೧೯೪೨ ಜುಲೈ ೨೨ ರಂದು ಅಖಿಲ ಭಾರತ ದಲಿತ ಫೆಡರೇಷನ್‌ನ ಮೊದಲ ಅಧಿವೇಶನ ನಡೆಯುತ್ತದೆ. ಈ ಅಧಿವೇಶನಕ್ಕೆ ೭೫ ಸಾವಿರ ಜನ ಆಗಮಿಸಿರುತ್ತಾರೆ. ಇದರಲ್ಲಿ ೨೫ ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಮಹಿಳೆಯ ನೆರೆದಿರುತ್ತಾರೆ. ಇದರಲ್ಲಿ ದಲಿತ ವರ್ಗದ ಮಹಿಳಾ ಪರಿಷತ್ತು ಸಹ ಇರುತ್ತದೆ. ಸೌ. ಸುಲೋಚನ ಬಾಯಿ ಡೋಗ್ರೆಯವರ ಅಧ್ಯಕ್ಷತೆಯಲ್ಲಿ ಸಭೆ ಜರುಗುತ್ತದೆ. ಆ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅಂಬೇಡ್ಕರ್ "ಸ್ತ್ರೀ ಸಮಾಜದ ಪ್ರಗತಿಯಿಂದಲೇ ನಾನು ದಲಿತ ಸಮಾಜದ ಪ್ರಗತಿಯನ್ನು ಹೇಳುತ್ತೇನೆ." "ಮಹಿಳೆಯರು ಹೆಚ್ಚು ಹೆಚ್ಚು ಸಂಘಟಿತರಾಗಬೇಕು". "ಸ್ವಚ್ಛವಾಗಿರುವುದನ್ನು ರೂಢಿಸಿಕೊಳ್ಳ ಬೇಕು. ದುರ್ಗುಣಗಳಿಂದ ದೂರವಿರಬೇಕು. ಮಕ್ಕಳಿಗೆ ತಪ್ಪದೆ ಶಿಕ್ಷಣ ಕೊಡಿಸಿ. ಅವರಲ್ಲೂ ಮಹತ್ವಾಕಾಂಕ್ಷೆ ನಿರ್ಮಾಣ ವಾಗುವಂತೆ ಮಾಡಿ, ಸೂಕ್ತ ಸಮಯಕ್ಕೆ ಮದುವೆ ಮಾಡಿರೆಂದು ಕರೆ ಕೊಡುತ್ತಾರೆ.

ಜನ ವಿರೋಧಿ, ಜೀವ ವಿರೋಧಿ "ದಾರದ ಧರ್ಮ"ಕ್ಕೆ ತೀವ್ರ ಹೊಡೆತ ನೀಡಬೇಕೆಂದು, ಮುಂದಡಿ ಇಟ್ಟ ಬಾಬಾಸಾಹೇಬರು ಧರ್ಮಾಂತರದ ಸಂದರ್ಭದಲ್ಲಿ "ಬುದ್ಧ ಸ್ತ್ರೀಯರಿಗೆ ಭಿಕ್ಷುಣಿಯಾಗುವ ಅವಕಾಶ ನೀಡಿದ್ದಾನೆ." ವಿದ್ಯಾ ಸಂಪತ್ತು ಮತ್ತು ಆತ್ಮೋನ್ನತಿಯ ಸ್ವಾತಂತ್ರ್ಯವನ್ನು ಸ್ತ್ರೀಯರಿಗೆ ಇತ್ತಿದ್ದಾರೆ. ಇದರಿಂದ ಸ್ತ್ರೀಯರಿಗೆ ಸ್ವಾತಂತ್ರ್ಯ, ಗೌರವ, ಪ್ರತಿಷ್ಠೆ. ಬರುತ್ತದೆ ಎಂದು ಸಹ ಅಂಬೇಡ್ಕರ್ ನುಡಿಯುತ್ತಾರೆ. ೧೯೫೬ರಲ್ಲಿ ಆಕ್ಟೋಬರ್ ೧೪ ರಂದು ಧರ್ಮಾಂತರದ ಸಂದರ್ಭದಲ್ಲಿ ತಮ್ಮ ಪತ್ನಿಯೊಂದಿಗೆ ಭಿಕ್ಷುಣಿ "ಚಂದ್ರಮಣಿ"ಯವರ ಕೈಯಿಂದಲೆ ಧೀಕ್ಷೆ ಸ್ವೀಕರಿಸುತ್ತಾರೆ.

ಅಂದರೆ ಬಾಬಾಸಾಹೇಬರು ಎಷ್ಟು ವಿಚಾರದ ಗ್ರಹಿಕೆ, ಸಮಾಜದ ಗ್ರಹಿಕೆಗಳನ್ನು ಮತ್ತು ಆ ತೀವ್ರತೆಯನ್ನು ಅರಗಿಸಿಕೊಂಡಿದ್ದರು ಎಂದು ತಿಳಿಯುತ್ತದೆ. ನಾನು ಅಲ್ಲಿ ಇಲ್ಲಿ ಚೂರು ಪಾರು ಓದಿ ತಿಳಿದ ಸಂಗತಿಗಳು ಮಾತ್ರವೆ ಇವು. ಇಂಥ ಮೇರು ವೈಚಾರಿಕತೆಯ ಸಮಾಜ, ಸಮುದಾಯಗಳ ಬಗ್ಗೆ ಅಗಾದ ತುಡಿತಗಳನ್ನಿಟ್ಟುಕೊಂಡಿದ್ದ ಬಾಬಾಸಾಹೇಬರು ಇಂದಿಗೂ ಜೀವಂತವಾಗಿದ್ದಾರೆ.

ದಮನಿತರಿಗೆ ಅನ್ನದಷ್ಟೇ ಅಕ್ಷರದ ಮಹತ್ವವನ್ನೂ ಸಹ ತಿಳಿಸಿ, ಆ ದಾಹ ತೀರಿಸಲಿಕ್ಕಾಗಿ ತಮ್ಮ ಜೀವನವನ್ನೇ ತೇದಿದ್ದಾರೆ. ಅಂಥದೊಂದು ಕ್ಲಿಷ್ಟ ದಾರಿಯಲ್ಲಿ ಮನುವಿನ ಮನೋವಿಕೃತಿಗೆ ಸಿಲುಕಿ ನಲುಗಿ, ನೊಂದು ಬೆಂದ ಮಹಿಳೆಯರ ನೋವುಗಳನ್ನು ಸಮಾಜಕ್ಕೆ ತಿಳಿಸಿ ಕೊಟ್ಟಿದ್ದಾರೆ. "ದಾರದ ಧರ್ಮ"ದೊಳಗಿನ ಅನಿಷ್ಟ ಪದ್ಧತಿಗಳನ್ನ ವಿರೋಧಿಸಿದ್ದು ಅಲ್ಲದೆ, "ಸತಿ ಪದ್ಧತಿ ಬಗ್ಗೆ ಹೇಳುತ್ತಾ, "ಸತಿ" ಪದ್ಧತಿ ಹೆಸರಲ್ಲಿ ವಿಧವೆಯನ್ನು ಸುಡುವ ನೀವು, ವಿಧುರರನ್ನೇಕೆ ಸುಡಬಾರದು" ಎಂದು ಸವಾಲು ಹಾಕುತ್ತಾರೆ.

ವಿವಾಹದಲ್ಲಿ ಪ್ರಧಾನ ಪಾತ್ರ ಹೊಂದಿರುವ ಮಹಿಳೆಯರ ಕುರಿತು, ಜಾತಿ ವಿನಾಶದ ದೃಷ್ಟಿಯಲ್ಲಿ ಅಂತರ್ ಜಾತಿಯ ವಿವಾಹದ ಪ್ರಾಮುಖ್ಯತೆಯನ್ನು ಹೇಳುತ್ತಾ ಅಂಥ ವಿವಾಹಗಳಿಗೆ ಪ್ರಾಧನ್ಯತೆ ನೀಡುತ್ತಾರೆ. ಅಂತರ್ ಜಾತಿ ವಿವಾಹವಾದರೆ ಜಾತಿಯ ಪಾವಿತ್ರ್ಯತೆ ಹಾಳಾಗುತ್ತದೆ ಎಂದು ಹೇಳುವ "ಹರಿಜನೋದ್ಧಾರಕರನ್ನು ಪ್ರತಿಭಟಿಸಿ ನಿಂತು, ಸಮ ಸಮಾಜಕ್ಕೆ ಅಂತರ್‌ಜಾತಿ ವಿವಾಹ ಮತ್ತು ಸಹಭೋಜನ ಇಂದಿನ ತುರ್ತು ಎಂದು ಹೇಳಿ ಜಾತಿವಿನಾಶಕ್ಕಾಗಿ ಶ್ರಮಿಸಿದ್ದಾರೆ. "ರೋಟಿ-ಬೇಟಿ" ಸಂಬಂಧವಾದರೆ ಮಾತ್ರವೆ ಒಂದು ಆರೋಗ್ಯಕರ ಸಮಾಜಕ್ಕೆ ನಾಂದಿಯಾಗುತ್ತದೆಂದು ಅಂಬೇಡ್ಕರ್ ನಂಬಿದ್ದರು.

ಇಂಥ ಮೇರು ವ್ಯಕ್ತಿತ್ವದ ವ್ಯಕ್ತಿಯನ್ನು ಒಂದು ಸಮುದಾಯದ ನಾಯಕನಂತೆ ಬಿಂಬಿಸುತ್ತಿರುವುದರ ಹಿಂದಿನ ಕುತಂತ್ರವಾದರೂ ಏನು? ಗಮನಿಸಬೇಕು. ಅವರ ಅರಿವಿನ ದೀವಿಗೆಯ ದಿಕ್ಕಿನಲ್ಲಿ ಹೊಸ ಹುಡುಕಾಟಗಳಿಗಾಗಿ ತಡಕಾಡಬೇಕು. ಆಗಲೆ ನಾವು ಅವರಿಗೆ ಸಲ್ಲಿಸಬಹುದಾದ ದೊಡ್ಡ ಗೌರವ ಸಲ್ಲಿಸಿದಂತಾಗುತ್ತದೆ. ದಮನಿತ ಮಹಿಳಾ ಮಣಿಗಳು, ಮಹಿಳಾ ಚಳುವಳಿಯ ನೇತಾರರು ಇದನ್ನ ಗ್ರಹಿಸಬೇಕಾಗಿದೆ.

ಇಲ್ಲವಾದರೆ ಅಂಬೇಡ್ಕರ್ ಹೇಳಿರುವಂತೆ "ಇತಿಹಾಸವನ್ನು ತಿಳಿಯದವ ಇತಿಹಾಸ ಸೃಷ್ಟಿಸಲಾರ"ನೆಂಬ ಮಾತಿನಂತೆ ನಾವು ಸಹ ಅವರನ್ನು ಸಮಗ್ರವಾಗಿ ಗ್ರಹಿಸಿ ಅರಿತು ನಡೆಯಬೇಕಿದೆ. □

ಕಾರ್ಪೊರೇಟ್ ಶಾಲೆಗಳು

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ದಲಿತ/ಆದಿವಾಸಿಗಳಿಗಾಗಿ ಹೊರತಂದಿರುವ ಸಿಐಐ-ಅಸೋಚಮ್‌ನ ಸಕಾರಾತ್ಮಕ ಕ್ರಿಯಾ ಯೋಜನೆಯು ವಿದ್ಯಾರ್ಥಿಗಳಿಗಾಗಿ ಒಂದು ದೊಡ್ಡ ತರಬೇತಿ ಮತ್ತು ಶಿಕ್ಷಣ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಈ ಯೋಜನೆಯ ಪ್ರಕಾರ ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿರುವ ೧೦ ಸಾವಿರ ದಲಿತ/ಆದಿವಾಸಿ ವಿದ್ಯಾರ್ಥಿಗಳು ಕಾಲೇಜು ಬಿಡುವುದನ್ನು (ತಮ್ಮ ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸುವ ಪ್ರವೃತ್ತಿಯನ್ನು) ತಡೆಗಟ್ಟಲು ಅವರಿಗೆ ವಿಶೇಷ ಕೋಚಿಂಗ್ ತರಗತಿಗಳನ್ನು ಹಾಕಿಕೊಳ್ಳಲಾಗಿದೆ. ೨೦೯ನೇ ಇಸವಿಯ ವೇಳೆಗೆ ಈ ವಿದ್ಯಾರ್ಥಿಗಳ ಸಂಖ್ಯೆ ವರ್ಷವೊಂದಕ್ಕೆ ೫೦,೦೦೦ಕ್ಕೆ ಏರಬಹುದೆಂದು ಅಂದಾಜಿಸಲಾಗಿದೆ.

ಹಾಗೆಯೇ ಈ ಯೋಜನೆಯ ಪ್ರಕಾರ ವೃತ್ತಿಪರ ಶಿಕ್ಷಣ ಪ್ರವೇಶ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುವಂತೆ ಪ್ರತಿ ವರ್ಷ ೫೦೦೦ ದಲಿತ/ಆದಿವಾಸಿ ವಿದ್ಯಾರ್ಥಿಗಳಿಗೆ ಕೋಚಿಂಗ್ ನೀಡಲಾಗುತ್ತದೆ. ಅಲ್ಲದೆ ದಲಿತರು/ಆದಿವಾಸಿಗಳು ಹೆಚ್ಚಾಗಿರುವ ೧೦೪ ಜಿಲ್ಲೆಗಳಲ್ಲಿ ಸರ್ಕಾರ ಸಹಭಾಗಿತ್ವದೊಂದಿಗೆ ಈ ಯೋಜನೆಯು ಮಧ್ಯಾಹ್ನ ಊಟ ಕಾರ್ಯಕ್ರಮವನ್ನು ಹಾಕಿಕೊಳ್ಳಲು ಬಯಸಿದೆ ಮತ್ತು ಐಐಟಿ/ಐಐಎಂಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ದಲಿತ/ಆದಿವಾಸಿ ವಿದ್ಯಾರ್ಥಿಗಳಿಗೆ ೧೦೦ ರು. ವಿದ್ಯಾರ್ಥಿ ವೇತನ ನೀಡುವ ಉದ್ದೇಶವನ್ನು ಹೊಂದಿದೆ. ಹೀಗೆ ಈ ಯೋಜನೆಯು ಪ್ರತಿ ವರ್ಷ ಕನಿಷ್ಠವೆಂದರೂ ೫ ಮಂದಿ ದಲಿತ/ಆದಿವಾಸಿ ವಿದ್ಯಾರ್ಥಿಗಳನ್ನು ವಿದೇಶಗಳಲ್ಲಿ ವಿದ್ಯಾಭ್ಯಾಸ ಮಾಡಲು ಕಳಿಸಲು ಉದ್ದೇಶಿಸಿದೆ.

ಸಿಐಐ/ಅಸೋಚಮ್‌ಗಳ ನೇತೃತ್ವದ ಖಾಸಗಿ ವಲಯವು ಚಾರಿತ್ರೆಯ ನಿಯಂತ್ರಣದ ಜಗತ್ತಿನಿಂದ ಬಿಡಿಸಿಕೊಂಡು ಹೊರಬಂದಂತೆ ಕಾಣಿಸುತ್ತದೆ. ಏಕೆಂದರೆ ದಲಿತ/ಆದಿವಾಸಿಗಳನ್ನು ಸ್ವೀಕರಿಸುವ ಹೊಸ ಹುರುಪೊಂದು ಅಲ್ಲಿ ಕಾಣಿಸುತ್ತಿದೆ. ಅಂದರೆ ಈ ಖಾಸಗಿ ವಲಯದ ಹೃದಯವು ದಲಿತ/ ಆದಿವಾಸಿಗಳಿಗೆ ಈಗ ತೆರೆದು ಕೊಂಡಿದೆ. ಆದರೂ ಈ ಕೈಗಾರಿಕೋದ್ಯಮವು ದಲಿತ/ಆದಿವಾಸಿ ಜಗತ್ತಿನ ಬಗ್ಗೆ ಅಜ್ಞಾನಿಯಾಗಿದೆ ಎಂದರೆ ತಪ್ಪಾಗಲಾರದು.

ಅವರ ಗ್ರಹಿಕೆ ಪ್ರಕಾರ ದಲಿತ/ಆದಿವಾಸಿ ವಿದ್ಯಾರ್ಥಿಗಳಿಗೆ ಕೋಚಿಂಗ್ ದೊರೆಯದಿದ್ದಲ್ಲಿ ಅವರು ಪ್ರವೇಶ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದಿಲ್ಲ ಎನ್ನುವುದು ಸರಿಯಲ್ಲ. ಹಾಗೆಯೇ ಉನ್ನತ ಶಿಕ್ಷಣದಲ್ಲಿ ದಲಿತ/ಆದಿವಾಸಿ ವಿದ್ಯಾರ್ಥಿಗಳಿಗೆ ಸರಿಯಾದ ಕೋಚಿಂಗ್ ಇಲ್ಲದಿದ್ದರೆ ತೇರ್ಗಡೆಯಾಗಲಾರರು ಎನ್ನುವುದೂ ಸಹ ತಪ್ಪಾದ ಗ್ರಹಿಕೆ. ಅಲ್ಲದೆ ದಲಿತ/ಆದಿವಾಸಿಗಳಿಗೆ ಸರಿಯಾದ ತರಬೇತಿ ಸಿಗಲಿಲ್ಲವೆಂದರೆ ಅವರು ನಿರುದ್ಯೋಗಿಗಳಾಗಿ ಉಳಿಯುತ್ತಾರೆನ್ನುವುದೂ ಸಹ ತಪ್ಪಾದುದು. ಹೀಗಿದ್ದರೂ ಸರಿಯಾಗಿ ಅರ್ಥೈಸಿರುವ ಸಂಗತಿಯೆಂದರೆ ಪ್ರತಿಯೊಂದು ಆರಂಭಿಕ ಹಂತದಲ್ಲೂ ದಲಿತ/ಆದಿವಾಸಿಗಳಿಗೆ ಬೆಂಬಲ ಅಗತ್ಯವಾದುದು. ಹಾಗಾದರೆ ಯಶಸ್ಸು ಅವರನ್ನು ಹಿಂಬಾಲಿಸುತ್ತದೆ. ದಲಿತ/ಆದಿವಾಸಿಗಳು ಯಾವುದೇ ವೈರುಧ್ಯದ ನಡುವೆಯೂ ದುಡಿದು ಯಶಸ್ವಿಯಾಗಬಲ್ಲರು. ಅವರು ಅನೇಕ ಸಲ ನಿಷ್ಠೆಯಿಂದ ಪ್ರಭಾವಿತರಾದವರು. ಗಮನಹರಿಸಿ ದುಡಿಯುವುದು ಅವರಿಗೆ ಸಾಧ್ಯವಾದುದು. ಅಲ್ಲದೆ ಕೆಲಸದ ಸ್ಥಳಗಳಲ್ಲಿ ಅವರು ಶಿಸ್ತುಳ್ಳವರಾಗಿದ್ದಾರೆ.

ಅಲ್ಲದೆ ಪ್ರಾಥಮಿಕ ಹಂತದಲ್ಲೇ ಇರುವ ಸುಮಾರು ೬.೦ ಮಿಲಿಯನ್ ದಲಿತ/ಆದಿವಾಸಿ ವಿದ್ಯಾರ್ಥಿಗಳ ಬೃಹತ್ ಸಂಖ್ಯೆಯನ್ನು ಗಮನಿಸಿದರೆ ಅಲ್ಲಿ ಎಷ್ಟೇ ಮಂದಿ ಶಾಲೆಯನ್ನು ಅರ್ಧಕ್ಕೆ ನಿಲ್ಲಿಸುತ್ತಿದ್ದಾರಾದರೂ, ಮಿಲಿಯನ್ ವಿದ್ಯಾರ್ಥಿಗಳು ಯಶಸ್ಸಿನ ಏಣಿಯನ್ನು ಏರೇ ಏರುತ್ತಾರೆ. ಹಾಗೆಯೆ ಈಗ ದಲಿತ/ಆದಿವಾಸಿಗಳಲ್ಲಿ ದೊಡ್ಡ ಗಾತ್ರದ ಮಧ್ಯಮವರ್ಗವೊಂದು ಉದಯಿಸಿದ್ದು, ಅವರೇ ವೃತ್ತಿಪರ ಉದ್ಯೋಗಸ್ತರಿಗೆ ಕಾರಣರಾಗುತ್ತಾರೆ. ಮಿಲಿಯಗಟ್ಟಳೆ ದಲಿತ/ಆದಿವಾಸಿ ವಿದ್ಯಾರ್ಥಿಗಳು ತಮ್ಮ ಕೋಚಿಂಗ್ ವ್ಯವಸ್ಥೆಯನ್ನು ಮಾಡಿಕೊಳ್ಳಲು ಸಮರ್ಥರಿದ್ದಾರೆ. ಅಲ್ಲದೆ ಅವರಲ್ಲಿ ಅನೇಕರು ವಿದೇಶಗಳಲ್ಲಿ ವಿದ್ಯಾಭ್ಯಾಸ ಮಾಡಲು ವ್ಯವಸ್ಥೆಯನ್ನು ಮಾಡಿಕೊಳ್ಳಬಹುದಾಗಿದೆ. ಹೀಗಿರುವಲ್ಲಿ ಯಾವ ದಲಿತ/ಆದಿವಾಸಿ ಮಧ್ಯಮ ವರ್ಗ ಹಾಗೂ ಸರ್ಕಾರ ಈಗಾಗಲೇ ಏನನ್ನು ಮಾಡುತ್ತಿವೆಯೋ ಅದನ್ನೇ ಖಾಸಗಿ ವಲಯ ಅನುಸರಿಸುವುದು ಸರಿಯಾದುದಲ್ಲ.

ಹಾಗಾದರೆ ಎಲ್ಲಿ ದಲಿತ/ಆದಿವಾಸಿ ಮಧ್ಯಮ ವರ್ಗ ಹಾಗೂ ಸರ್ಕಾರ ಕೆಲಸ ಮಾಡಲು ಸಾಧ್ಯವಿಲ್ಲವೋ ಅಂತಹ ಎಡೆಗಳಲ್ಲಿ ಖಾಸಗಿ ವಲಯವು ಪ್ರವೇಶಮಾಡಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು ಸೂಕ್ತವಾದುದು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಎರಡು ರೀತಿಯ ಮಾದರಿಗಳು ಶಿಕ್ಷಣದಲ್ಲಿ ಅದ್ಭುತ ಯಶಸ್ಸನ್ನು ಕಂಡಿವೆ: ಮೊದಲನೆಯದ್ದು – ಭಾರತದಲ್ಲಿರುವ ಐಐಟಿಗಳು ಜಾಗತಿಕವಾಗಿ ತಮ್ಮದೇ ಆದ ಬ್ರಾಂಡ್ ಹೆಸರನ್ನು ಪಡೆದಿವೆ. ಎರಡನೆಯದ್ದು – ಭಾರತಾದ್ಯಂತವು ಇಂದು ನವೋದಯ ವಿದ್ಯಾಲಯಗಳು ಪಸರಿಸಿದ್ದು ಅವು ಜನಪ್ರಿಯವಾಗಿವೆ. ಒಟ್ಟು ೪೮೫ ರಷ್ಟಿರುವ ಈ ನವೋದಯ ಶಾಲೆಗಳಲ್ಲಿ ಗ್ರಾಮೀಣ ಹಿನ್ನೆಲೆಯ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತಿದ್ದು, ಅವರೆಲ್ಲಾ ಕೇಂದ್ರೀಯ ಮಂಡಲಿ ನಡೆಸುವ ಪರೀಕ್ಷೆಗಳಲ್ಲಿ ಅತ್ಯುತ್ತಮ ಫಲಿತಾಂಶ ಪಡೆಯುತ್ತಿದ್ದಾರೆ. ಈ ಶಾಲೆಗಳ ವಿದ್ಯಾರ್ಥಿಗಳು ಅತ್ಯುತ್ತಮವೆಂದು ಪರಿಗಣಿತವಾಗಿರುವ ಸಾರ್ವಜನಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಸಮನಾಗಿ ನಿಲ್ಲುತ್ತಾರೆ.

ಈ ನವೋದಯ ಶಾಲೆಗಳು ತರಗತಿ ೬ ರಿಂದ ವಿದ್ಯಾರ್ಥಿಗಳನ್ನು ಒಳತೆಗೆದುಕೊಳ್ಳುತ್ತಿದ್ದು ಪಿಯುಸಿ ತನಕ ಅಲ್ಲಿಯೇ ವಿದ್ಯಾಭ್ಯಾಸ ಸಿಗುತ್ತದೆ. ಈ ವಿದ್ಯಾರ್ಥಿಗಳಿಗೆ ಪುಕ್ಕಟೆ ಊಟ, ವಸತಿ, ಸಮವಸ್ತ್ರ, ಹಾಗೂ ಇತರೆ ಅಭ್ಯಾಸ ವಸ್ತುಗಳನ್ನು ನೀಡಲಾಗುತ್ತಿದೆ. ವಾರ್ಷಿಕವಾಗಿ ೩೨,೦೦೦ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತಿದ್ದು, ಒಟ್ಟರೆ ೧.೫೮ ಲಕ್ಷ ವಿದ್ಯಾರ್ಥಿಗಳು ಈ ನವೋದಯ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ಪ್ರತಿಯೊಬ್ಬ ವಿದ್ಯಾರ್ಥಿಗೂ ಸರಾಸರಿ ರೂ.೬೫,೦೦೦/- ವಾರ್ಷಿಕವಾಗಿ ವ್ಯಯಿಸಲಾಗುತ್ತಿದೆ.

ಹೀಗಿರುವಾಗ ಭಾರತದ ಪ್ರಸಿದ್ಧ ನೂರು ಕೈಗಾರಿಕೋದ್ಯಮಗಳು ಮೇಲಿನ ನವೋದಯ ಮಾದರಿಯ ಒಂದೊಂದು ಶಾಲೆಗೆ ಹಣವನ್ನು ಪ್ರಾಯೋಜಿಸಿ, ಸರ್ಕಾರವೇ ಅಂಥ ಶಾಲೆಗಳನ್ನು ನಡೆಸುವಂತೆ ನೆರವಾಗಲಿ. ಹೀಗೆ ಆ ಶಾಲೆಗಳ ಸಂಖ್ಯೆ ೫೯೯ಕ್ಕೆ ಏರಲಿ. ಅಂದರೆ ಪ್ರತಿಯೊಂದು ಜಿಲ್ಲೆಗೂ ಒಂದೊಂದು ಶಾಲೆಗಳು ದೊರೆತಂತಾಗುತ್ತದೆ. ಈ ಶಾಲೆಗಳು ಟಾಟಾ ನವೋದಯ, ಬಿರ್ಲಾ ನವೋದಯ, ಇನ್ಫೋಸಿಸ್ ನವೋದಯ ಎಂದು ಪ್ರಾಯೋಜಕರ ಹೆಸರಿನಲ್ಲಿ ಸ್ಥಾಪನೆಯಾಗಬಹುದು.

ದಲಿತ/ಆದಿವಾಸಿ ವಿದ್ಯಾರ್ಥಿಗಳಿಗೆ ಕೋಚಿಂಗ್ ದೊರೆಯದಿದ್ದಲ್ಲಿ ಅವರು ಪ್ರವೇಶ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದಿಲ್ಲ ಎನ್ನುವುದು ಸರಿಯಲ್ಲ. ಹಾಗೆಯೇ ಉನ್ನತ ಶಿಕ್ಷಣದಲ್ಲಿ ಕೋಚಿಂಗ್ ಇಲ್ಲದಿದ್ದರೆ ತೇರ್ಗಡೆಯಾಗಲಾರರು ಎನ್ನುವುದೂ ಸಹ ತಪ್ಪಾದ ಗ್ರಹಿಕೆ. ಅಲ್ಲದೆ ತರಬೇತಿ ಸಿಗಲಿಲ್ಲವೆಂದರೆ ಅವರು ನಿರುದ್ಯೋಗಿಗಳಾಗಿ ಉಳಿಯುತ್ತಾರೆನ್ನುವುದೂ ಸಹ ತಪ್ಪಾದುದು. ಹೀಗಿದ್ದರೂ ಸರಿಯಾಗಿ ಅರ್ಥೈಸಿರುವ ಸಂಗತಿಯೆಂದರೆ ಪ್ರತಿಯೊಂದು ಆರಂಭಿಕ ಹಂತದಲ್ಲೂ ದಲಿತ/ಆದಿವಾಸಿಗಳಿಗೆ ಬೆಂಬಲ ಅಗತ್ಯವಾದುದು. ಹಾಗಾದರೆ ಯಶಸ್ಸು ಅವರನ್ನು ಹಿಂಬಾಲಿಸುತ್ತದೆ. ಅವರು ಯಾವುದೇ ವೈರುಧ್ಯದ ನಡುವೆಯೂ ದುಡಿದು ಯಶಸ್ವಿಯಾಗಬಲ್ಲರು. ಅವರು ಅನೇಕ ಸಲ ಸ್ವಾಮಿನಿಷ್ಠೆಯಿಂದ ಪ್ರಭಾವಿತರಾದವರು. ಗಮನಹರಿಸಿ ದುಡಿಯುವುದು ಅವರಿಗೆ ಸಾಧ್ಯವಾದುದು. ಅಲ್ಲದೆ ಕೆಲಸದ ಸ್ಥಳಗಳಲ್ಲಿ ಅವರು ಶಿಸ್ತುಳ್ಳವರಾಗಿದ್ದಾರೆ.

ಅನು: ಡೊಮಿನಿಕ್. ಡಿ

ಭಾರತೀಯ ಉದ್ದಿಮೆಗಳಿಗೆ ಆ್ಯಸಿಡ್ ಪರೀಕ್ಷೆ:

ಈ ಹೊಸ ಸರಣಿ ಶಾಲೆಗಳಲ್ಲಿ ಶೇ.೫೦ ರಷ್ಟು ಪ್ರವೇಶವನ್ನು ಅನಕ್ಷರಸ್ತ ಹಾಗೂ ಬಡತನರೇಖೆಗಿಂತ ಕೆಳಗಿನ ದಲಿತ/ಆದಿವಾಸಿ ಕುಟುಂಬಗಳ ಪಟ್ಟಿಯಲ್ಲಿರುವ ವಿದ್ಯಾರ್ಥಿಗಳಿಗೆ ನೀಡಲಿ.

ಈ ಹೊಸ ಶಾಲೆಗಳು ತರಗತಿ ಒಂದರಿಂದಲೇ ವಿದ್ಯಾರ್ಥಿಗಳನ್ನು ಒಳತೆಗೆದುಕೊಳ್ಳುವಂತಾಗಲಿ. ಹೀಗೆ ಹೊಸದಾಗಿ ವ್ಯಾಖ್ಯಾನಿತವಾಗಿರುವ ಸಿಐಐ–ಅಸೋಚಮ್‌ಗಳು ದಲಿತ/ಆದಿವಾಸಿ ಮಕ್ಕಳನ್ನು ಚಿನೇ ವಯಸ್ಸಿನಲ್ಲೇ ತಮ್ಮ ಮನೆಗಳಿಂದ ತಂದೆ–ತಾಯಿಗಳ ಒಪ್ಪಿಗೆ ಪಡೆದು ಕಿತ್ತುಕೊಳ್ಳಲಿ ಬಿಡಿ. ಈ ಮಕ್ಕಳನ್ನು ಶಾಲೆಯಲ್ಲಿ ಕಲಿಯಲು ಅವಕಾಶ ಮಾಡಿಕೊಟ್ಟ ತಂದೆ–ತಾಯಿಗಳಿಗೆ ಮಗುವೊಂದಕ್ಕೆ ಕೊನೇ ಪಕ್ಷ ಒಂದು ರೂ.ನಂತೆ ಪರಿಹಾರವನ್ನು ನೀಡಲಿ.

ಹೀಗೆ ಅವಕಾಶ ವಂಚಿತ ಆದಿವಾಸಿ/ದಲಿತ ಕುಟುಂಬಗಳ ಮಕ್ಕಳನ್ನು ಶಾಲಾ ವ್ಯವಸ್ಥೆಗೆ ತರುವಂಥ ಚಾರಿತ್ರಿಕ ಸಾಧನೆಯನ್ನು ಭಾರತೀಯ ಕೈಗಾರಿಕೋದ್ಯಮವು ಸಾಧಿಸಬಹುದಾಗಿದೆ. ಈ ವರ್ಗದ ಎಲ್ಲಾ ಮಕ್ಕಳು ಇಂಥ ವ್ಯವಸ್ಥೆಯಿಂದ ಪ್ರಯೋಜನ ಪಡೆಯುತ್ತದೆಂದು ಭಾವಿಸಬೇಕಾಗಿಲ್ಲ. ಆದರೂ ಅವಕಾಶ ಪ್ರಯೋಗ ಈ ವಂಚಿತ ಸಮುದಾಯಗಳ ಮಕ್ಕಳಲ್ಲಿ ಹೊಸ ಭರವಸೆಯ ಕಿಡಿಯನ್ನು ಹೊತ್ತಿಸೀತು.

ಗೊತ್ತಿರುವ ಭಾರತದ ಚರಿತ್ರೆಯಲ್ಲಿ ಮೊದಲ ಬಾರಿಗೆ ದಲಿತ/ಆದಿವಾಸಿಗಳನ್ನು ಖಾಸಗಿ ವಲಯವು ತನ್ನ ಶ್ರಮ ಶಕ್ತಿ ಮತ್ತು ಆರ್ಥಿಕತೆಯಲ್ಲಿ ವಿಲೀನಗೊಳಿಸಿಕೊಳ್ಳುವ ಭರವಸೆಯನ್ನು ಮುಂದಿಟ್ಟಿದೆ. ಈ ವರ್ಷದ ಜುಲೈ ೨೮ ರಂದು ಸಿಐಐ–ಅಸೋಚಮ್ ಸಕಾರಾತ್ಮಕ ಕ್ರಿಯಾ ವರದಿಯನ್ನು ಬಿಡುಗಡೆಗೊಳಿಸಿತು. ಆದರೂ ಇಲ್ಲಿಯವರೆಗೆ ಅದನ್ನು ಯಾರೂ ಗಂಭೀರವಾಗಿ ಪರಿಗಣಿಸಿಯೇ ಇಲ್ಲ.

ಆ ವರದಿಯನ್ನು ಪ್ರಧಾನಮಂತ್ರಿಗಳಿಗೆ ಸಲ್ಲಿಸಲಾಯಿತು. ಆದರೂ ಪ್ರಧಾನಮಂತ್ರಿ ಕಛೇರಿಯಿಂದ ಯಾವುದೇ ಪ್ರತಿಕ್ರಿಯೆ ಇದುವರೆಗೂ ಬಂದಿಲ್ಲ. ಎಲ್ಲರೂ ಮೌನವಹಿಸಿದ್ದಾರೆ. ಆದಾಗ್ಯೂ "ನಾವ್ಯಾರು ನಿಮ್ಮನ್ನು ನಂಬುವುದಿಲ್ಲ" ಎಂಬ ಧ್ವನಿಯೊಂದು ಈ ಮೌನದಲ್ಲೂ ಗುಡುಗಿನಂತೆ ಮೊಳಗಿದೆ! ಈ ಭಾರತೀಯ ಉದ್ದಿಮೆಗಳನ್ನು ನಂಬುವಂತಿಲ್ಲ ಎನ್ನುವ ಸಂಗತಿ ಭಾರತೀಯ ಮನೋಭೂಮಿಕೆಯಲ್ಲಿ ಸಾಮಾನ್ಯವಾದುದು. ಈ ಮನೋಭೂಮಿಕೆಗೆ ಹಲವಾರು ಕಾರಣಗಳು ಇವೆ. ಒಂದು, ಕೈಗಾರಿಕೋದ್ಯಮವೂ ಸಾಮಾಜಿಕವಾಗಿ ಎಂದೂ ತೊಡಗಿಸಿಕೊಂಡಿದ್ದಿಲ್ಲ. ಎರಡು, ಅದು ಎಂದೂ ಸಹ ತನ್ನ ಉದ್ಯೋಗಿಗಳಿಗೆ ಆಧುನಿಕ ರೀತಿಯಲ್ಲಿ ಸ್ಪಂದಿಸಿದ್ದಿಲ್ಲ. ಕೊನೆಯದಾಗಿ, ಕೈಗಾರಿಕೋದ್ಯಮವು ಲಾಭಗಳಿಸುವುದಕ್ಕಿಂತಲೂ ಹೆಚ್ಚಾಗಿ ಪೂರ್ವಗ್ರಹಗಳನ್ನೇ ಗಳಿಸಿಕೊಂಡಿದೆ.

ಭಾರತೀಯ ಕೈಗಾರಿಕೋದ್ಯಮವನ್ನು ಸಂದೇಹಿಸಲು ಮತ್ತೊಂದು ಕಾರಣ ನಮ್ಮ ಆಧುನಿಕ ದಲಿತ/ಆದಿವಾಸಿಗಳಿಗೆ ದೊರೆತಿದೆ. ಇನ್ಫೋಸಿಸ್ ನಾರಾಯಣ ಮೂರ್ತಿ ಮತ್ತು ರಾಹುಲ್ ಬಜಾಜ್‌ರಂವರಿಂದ ಮುನ್ನಡೆಸಲ್ಪಡುತ್ತಿರುವ ಭಾರತೀಯ ಕೈಗಾರಿಕೋದ್ಯಮವು ಮೀಸಲಾತಿಯನ್ನು ದೊಡ್ಡ ಕೂಗಿನಲ್ಲಿ ವಿರೋಧಿಸಿರುವುದು.

ದಲಿತರು ವಿಶೇಷವಾಗಿ ಊಳಿಗಮಾನ್ಯ ಪದ್ಧತಿಯ ಭಾರದಿಂದ ತಪ್ಪಿಸಿಕೊಳ್ಳಲು ಯಾವಾಗಲು ಕನಸು ಕಾಣುತ್ತಿದ್ದರು. ಮಿಲಿಯಗಟ್ಟಲೆ ದಲಿತರು ಗಂಗಾ ಬಯಲಿನಿಂದ ಪಟ್ಟಣಗಳಿಗೆ ಪಲಾಯನಗೈದರು. ಭೂಮಾಲೀಕರ ವಿರುದ್ಧ ಹೋರಾಟಮಾಡಿದ ನನ್ನ ಚಿಕ್ಕಪ್ಪಂದಿರೆ ೨೦ರ ದಶಕದಲ್ಲಿ ಮುಂಬಾಯಿಗೆ ಪಲಾಯನಗೈದರು. ಹೀಗಿರುವಲ್ಲಿ ಬರ್ಮಾದಲ್ಲಿ ನೆಲೆಸಿದ ಅವರು ಎರಡನೇ ಮಹಾಯುದ್ಧದ ಸಂರ್ಭದಲ್ಲಿಯಷ್ಟೆ ತಮ್ಮ ಮನೆಗಳಿಗೆ ವಾಪಾಸ್ಸಾದುದು. ಸ್ವಾತಂತ್ರ್ಯ ಪೂರ್ವದ ಭಾರತದಲ್ಲಿ ದಲಿತರು ತಮ್ಮ ರಕ್ಷಣೆಯ ಕವಚವನ್ನು ಪಡೆದ್ದದ್ದು ರಾಜ್ಯಾಂಗದಿಂದ ಅಥವಾ ರಾಜಕೀಯ ವ್ಯವಸ್ಥೆಯಿಂದ ಅಲ್ಲ. ಬದಲು ಖಾಸಗಿವಲಯದಿಂದ ಮಾತ್ರವೇ!

ಭಾರತೀಯ ಉದ್ದಿಮೆಗಳು ಹಾಗೂ ಸಾರ್ವಜನಿಕರು ತಮ್ಮ ಅಭಿಪ್ರಾಯಗಳಲ್ಲಿ ಪಕ್ಷಪಾತಿ ನಿಲುವುಗಳಲ್ಲಿ ನಿಂತಿದ್ದಾರೆ. ಜನಪ್ರಿಯ ಸಾರ್ವಜನಿಕ ಅಭಿಪ್ರಾಯದಲ್ಲಿ ಕೈಗಾರಿಕೋದ್ಯಮಿಗಳು ರಕ್ತ ಪೀಪಾಸುಗಳು, ಶೋಷಕರು ಮತ್ತು ದುರಾಸೆ ಯುಳ್ಳವರು. ಈ ಗ್ರಹಿಕೆಯನ್ನು ಚಾರಿತ್ರಿಕವಾಗಿ ಸಮರ್ಥಿಸಿಕೊಳ್ಳಬಹುದೇ?

ದಲಿತರು ವಿಶೇಷವಾಗಿ ಊಳಿಗಮಾನ್ಯ ಪದ್ಧತಿಯ ಭಾರದಿಂದ ತಪ್ಪಿಸಿಕೊಳ್ಳಲು ಯಾವಾಗಲು ಕನಸು ಕಾಣುತ್ತಿದ್ದರು. ಮಿಲಿಯಗಟ್ಟಲೆ ದಲಿತರು ಗಂಗಾ ಬಯಲಿನಿಂದ ಪಟ್ಟಣಗಳಿಗೆ ಪಲಾಯನಗೈದರು. ಭೂಮಾಲೀಕರ ವಿರುದ್ಧ ಹೋರಾಟಮಾಡಿದ ನನ್ನ ಚಿಕ್ಕಪ್ಪಂದಿರೆ ೨೦ರ ದಶಕದಲ್ಲಿ ಮುಂಬಾಯಿಗೆ ಪಲಾಯನಗೈದರು. ಹೀಗಿರುವಲ್ಲಿ ಬ್ರರ್ಮಾದಲ್ಲಿ ನೆಲೆಸಿದ ಅವರು ಎರಡನೇ ಮಹಾಯುದ್ಧದ ಸಂರ್ಭದಲ್ಲಿಯಷ್ಟೆ ತಮ್ಮ ಮನೆಗಳಿಗೆ ವಾಪಾಸ್ಸಾದುದು. ಸ್ವಾತಂತ್ರ್ಯ ಪೂರ್ವದ ಭಾರತದಲ್ಲಿ ದಲಿತರು ತಮ್ಮ ರಕ್ಷಣೆಯ ಕವಚವನ್ನು ಪಡೆದ್ದದ್ದು ರಾಜ್ಯಾಂಗದಿಂದ ಅಥವಾ ರಾಜಕೀಯ ವ್ಯವಸ್ಥೆಯಿಂದ ಅಲ್ಲ. ಬದಲು ಖಾಸಗಿ ವಲಯದಿಂದ ಮಾತ್ರವೇ! ಕೈಗಾರಿಕಾ ಪಟ್ಟಣ ಗಳಿಂದಲೇ ಮೊದಲ ತಲೆಮಾರಿನ ದಲಿತರು ಶಾಲೆಗಳಿಗೆ ಪ್ರವೇಶ ಪಡೆದಿದ್ದು. ಬಾಬಾ ಸಾಹೇಬ್ ಅಂಬೇಡ್ಕರ್ ರವರ ಸಂವಿಧಾನ ದಿಂದ ಫಲಾನುಭವಿಗಳಾದವರೂ ಸಹ ಈ ಕೈಗಾರಿಕಾ ಪಟ್ಟಣಗಳಲ್ಲಿ ಆಶ್ರಯ ಪಡೆದ ದಲಿತರೇ ಆಗಿದ್ದಾರೆ. ಹೀಗಿರುವಲ್ಲಿ ದಲಿತರೇಕೆ ಖಾಸಗಿ ವಲಯವನ್ನು ಸಂದೇಹದಿಂದ ನೋಡುವುದು?

ಕಾರಣ ದಲಿತರಲ್ಲಿ ಅನೇಕರು ಈ ಖಾಸಗಿ ವಲಯದಲ್ಲಿ ಕೆಳಗಿನ ಶ್ರೇಣಿಯ ಉದ್ಯೋಗಸ್ಥರಾಗಿರುವುದರಿಂದ ಹಾಗೂ ತಮ್ಮ ಸಮುದಾಯದ ಯಾರೂ ಕೂಡಾ ಉನ್ನತ ಹುದ್ದೆಗಳನ್ನು ಅಲಂಕರಿಸಲಿಲ್ಲವಾದ್ದರಿಂದ ಖಾಸಗಿ ವಲಯದ ಬಗ್ಗೆ ಮೇಲಿನ ನಿಲುವು ಸಹಜವಾದದ್ದೇ. ಆದರೆ ರಾಜ್ಯಾಂಗವು ಮತ್ತೊಂದೆಡೆ ಉನ್ನತ ನೌಕರಶಾಹಿಯಲ್ಲಿ ದಲಿತ ರಲ್ಲಿ ಅನೇಕರನ್ನು ಒಳಗೆ ತೆಗೆದುಕೊಂಡಿತು. ಆದ್ದರಿಂದಾಗಿ ಅನೇಕ ದಲಿತರು/ಆದಿವಾಸಿಗಳು ಜಿಲ್ಲಾಧಿಕಾರಿಗಳಾಗಿ, ಪೋಲೀಸ್ ಆಯುಕ್ತರಾಗಿ ಕಾನೂನು ರೂಪಿಸುವ ಮಂತ್ರಿಗಳಾಗಿ ಹೊರಹೊಮ್ಮಿದರು. ಆದರೆ ಅವರ್‍ಯಾರು ಖಾಸಗಿ ವಲಯದಲ್ಲಿ ಸೇಲ್ಸ್ ವ್ಯಕ್ತಿಗಳಾಗಿ ಕೆಲಸ ಮಾಡಲು ಸಾಧ್ಯವಾಗಿಲ್ಲ. ಹಾಗಾಗಿ ಹೊಸ ದಲಿತರು ರಾಜ್ಯಾಂಗವನ್ನು ಖಾಸಗಿವಲಯದೊಂದಿಗೆ ಹೋಲಿಸಿ ಮೌಲ್ಯಮಾಪನ ಮಾಡುತ್ತಾರೆ. ಅಲ್ಲದೆ ಇತ್ತೀಚಿಗೆ ಭಾರತೀಯ ಕೈಗಾರಿಕೋದ್ಯಮವು ದಲಿತ/ಆದಿವಾಸಿಗಳ ಯಾವುದೇ ರೀತಿಯ ಸಬಲಿಕರಣಕ್ಕೆ ವಿರೋಧವನ್ನು ದೊಡ್ಡ ಧ್ವನಿಯಲ್ಲಿ ಮಾಡಿದ್ದಾರೆ.

ಧರೆ ಈಗ ಹೊಸ ಬದಲಾವಣೆ ಕಾಣಿಸಿಕೊಂಡು ಭಾರತೀಯ ಕೈಗಾರಿಕೋದ್ಯಮವು ಮುಂದೆ ಬಂದಿದೆ. ಚರಿತ್ರೆ ತೋರಿಸುವಂತೆ ಎರಡು ವಿರೋಧಿ ಧ್ರುವಗಳು

ಅಂತಿಮವಾಗಿ ಸಮಾಗಮವಾಗುತ್ತದೆ. ಅಮೆರಿಕಾವು ಜಪಾನ್ ಮೇಲೆ ಬಾಂಬ್ ದಾಳಿ ನಡೆಸಿತು. ಆದರೆ ಎರಡನೇ ಮಹಾಯುದ್ಧದ ನಂತರ ಅಮೆರಿಕಾವು ಜಪಾನ್ ಆರ್ಥಿಕತೆಯ ರಕ್ಷಕನಾಗಿ ಬದಲಾಯಿತು. ಜಪಾನಿನ ಗೊಂಬೆಗಳನ್ನು ಅಧಿಕವಾಗಿ ಆಮದು ಮಾಡಿಕೊಂಡ ಅಮೆರಿಕಾವು ಅದರ ಆರ್ಥಿಕ ಶಕ್ತಿಯನ್ನು ವೃದ್ಧಿಸಿತು. ಬಾಬಾ ಸಾಹೇಬ್ ಅಂಬೇಡ್ಕರ್ ಬರುವವರೆಗೆ ಬ್ರಿಟಿಷರು ಮತ್ತು ಖಾಸಗಿಯವರೇ ದಲಿತರ ರಕ್ಷಕರಾಗಿದ್ದರು. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಹಾಕಿಕೊಟ್ಟ ಮಾರ್ಗದಲ್ಲಿ ರಾಜ್ಯಾಂಗವು ರಾಷ್ಟ್ರ ಕಟ್ಟುವ ಯೋಜನೆಯಲ್ಲಿ ಮುಳುಗಿದಂತೆ ಕೈಗಾರಿಕೋದ್ಯಮವು ಮಾಡಿದಲ್ಲಿ ದಲಿತ/ಆದಿವಾಸಿಗಳಲ್ಲಿ ಅದು ಒಂದು ಸಾಮಾಜಿಕ ಗೆಳೆತನವನ್ನು ಪಡೆಯುತ್ತಿತ್ತು.

ಸಿಐಐ ಮತ್ತು ಅಸೋಚಮ್‌ಗಳ ವರದಿಯೊಂದಿಗೆ ಅಲ್ಲಿ ಇದ್ದ ಮಂಜುಗಡ್ಡೆ ಕರಗಿದೆ. ಆದರೂ ಯಾರೂ ಅದನ್ನು ನಂಬುತ್ತಿಲ್ಲ. ಹಾಗಾದರೆ ಭಾರತೀಯ ಕೈಗಾರಿಕೋದ್ಯಮವು ಮಾಡಬೇಕಾಗಿರುವುದು ಏನು? ಅದರ ಸಕಾರಾತ್ಮಕ ಕಾರ್ಯದ ಭರವಸೆಯೊಂದಿಗೆ ಭಾರತೀಯ ಕೈಗಾರಿಕೋದ್ಯಮವು ನೆನಪಿಡಬೇಕಾದ ಸಂಗತಿಯೆಂದರೆ ಒಂದು ಸಾಮಾಜಿಕ ಕಂದರ ಸೃಷ್ಟಿಯಾಗಿದ್ದು ಯಾವುದೇ ರಾಜಕೀಯ ಪಕ್ಷ ಆ ವರದಿಯನ್ನು ಅಭಿನಂದಿಸಲು ಅಥವಾ ನಿಂದಿಸಲು ಮುಂದೆ ಬರುವುದಿಲ್ಲ. ಹಾಗೆಯೇ ದಲಿತ ರಾಜಕಾರಣಿಗಳು ಸಹ ಕೂಡಲೇ ಬೆಂಬಲಿಸಲು ನಿಲ್ಲುವುದಿಲ್ಲ. ಕಾರಣ ಹಾಗೇನಾದರೂ ಆದಲ್ಲಿ ಅವರ ವಿರುದ್ಧ ಸಾರ್ವಜನಿಕ ಪ್ರತಿಭಟನೆ ಪಾರ್ಲಿಮೆಂಟ್‌ನೊಳಗೆ ಮತ್ತು ಹೊರಗೆ ಕಾಣಿಸಿಕೊಳ್ಳುತ್ತದೆ.

ಇದು ಚುನಾವಣಾ ರಾಜಕೀಯದ ಮಿತಿಯಾಗಿರುವುದರಿಂದ ನಾವು ಅದರಿಂದ ತಪ್ಪಿಸಿಲೊಳ್ಳಲಾಗದು. ಈ ಸನ್ನಿವೇಶದಲ್ಲಿ ಭಾರತೀಯ ಉದ್ಯಮವು ದಲಿತ ಸಮುದಾಯಗಳೊಡನೆ ನೇರವಾಗಿ ಸಂವಹನ ನಡೆಸಬೇಕು. ದಲಿತ/ಆದಿವಾಸಿಗಳನ್ನು ಉದ್ಯಮಶೀಲ ಮಾರ್ಗಗಳಲ್ಲಿ ತರಬೇಕೆಂದರೆ ಸರಬರಾಜು/ಡೀಲರ್‌ಶಿಪ್/ಗುತ್ತಿಗೆ ಮುಂತಾದ ಆರ್ಥಿಕ ಸರಣಿಯಲ್ಲಿ ಒಳಗೊಳ್ಳುವುದೇ ಸೂಕ್ತವಾದ ಮಾರ್ಗ.

ಆದ್ದರಿಂದ ಭಾರತೀಯ ಕೈಗಾರಿಕೋದ್ಯಮವು ಆ್ಯಸಿಡ್ ಪರೀಕ್ಷೆಯನ್ನು ಎದುರಿಸುತ್ತಿದೆ. ಅದರಲ್ಲಿ ಜಯಭೇರಿಯಾಗುತ್ತದೆ. ಸ್ವಾಮಿನಿಷ್ಠೆ ಎನ್ನುವುದು ದಲಿತರ ಶ್ರೇಷ್ಠ ಗುಣವಾಗಿದೆಯೆಂಬುದನ್ನು ಅದು ತಿಳಿಯಬೇಕಿದೆ.

ಅನೇಕ ಸಲ ಚರಿತ್ರೆಯು ಮುಸುಕ ಮರೆಯಲ್ಲಿರುತ್ತದೆ. ಯೋಗ್ಯರಾದವರಿಂದ ಅವಕಾಶಗಳನ್ನು ಅದು ಕಿತ್ತುಕೊಳ್ಳುತ್ತದೆ. ಭಾರತೀಯ ಸರ್ಕಾರದಲ್ಲೂ ಅದೇ ತರಹದ್ದು ಆಗಿಬಿಟ್ಟಿದೆ. ಚರಿತ್ರೆಯು ಕೇಂದ್ರ ಸರ್ಕಾರಕ್ಕೆ ತನ್ನ ಹೊಸ ಆರ್ಥಿಕ ಅಜೆಂಡಾವನ್ನು ಭಾರತದ ಅತ್ಯಂತ ಅನಕ್ಷರಸ್ಥ ನಿಮ್ನವರ್ಗಗಳಾದ ದಲಿತ/ಆದಿವಾಸಿಗಳಿಗೆ ಮಾರಲು ಅವಕಾಶ ನೀಡಿತ್ತು.

ಶಿಕ್ಷಣದ ಮೌಲ್ಯವನ್ನು ಅರಿತಿರುವ ಅಂಥ ಮಿಲಿಯಗಟ್ಟಲೆ ದಲಿತ/ಆದಿವಾಸಿ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದಾರೆ. ಅವರಲ್ಲಿ ೩/೪ರಷ್ಟು ಮಂದಿ ಪ್ರೌಢಶಾಲೆ ಮುಗಿಸದೆ, ಶಾಲೆ ಬಿಡುತ್ತಾರೆ. ಅಂಥ ಮಕ್ಕಳ ವಯಸ್ಸು ೧೧ ರಿಂದ ೧೬ ಇದ್ದು ಇವರೆಲ್ಲಾ ಬಾಲ ಕಾರ್ಮಿಕರಾಗಿ ದುಡಿಯುತ್ತಿರುತ್ತಾರೆ. ವೈರುಧ್ಯಗಳಿಂದ ಕೂಡಿದ ಸಾಮಾಜಿಕ ಪರಿಸ್ಥಿತಿಯಲ್ಲಿ ಅವರು ಗಣರಾಜ್ಯದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ. ದಲಿತರಲ್ಲಿ ಕ್ಯಾಪಿಟಲಿಸ್ಟ್ ವರ್ಗ ಇಲ್ಲದಿರುವುದರಿಂದ ಸಮುದಾಯ ಅಸಹಾಯಕತೆಯಿಂದ ಎದುರುನೋಡುತ್ತಿದೆ.

ಈ ನಿರ್ಲಕ್ಷಿತ ಸಮುದಾಯದಲ್ಲೂ ಒಂದು ವಿಭಾಗವು ತನ್ನ ಮಕ್ಕಳ ಶಿಕ್ಷಣಕ್ಕಾಗಿ ಕಂಕಣಬದ್ಧವಾಗಿದೆ. ಅವರ ಪ್ರಕಾರ ಮಕ್ಕಳನ್ನು ಜಿಲ್ಲಾ ಕೇಂದ್ರಗಳಿಗೆ ಕಳುಹಿಸುವುದೇ ಉಳಿದ ಮಾರ್ಗವಾಗಿದೆ. ಇದರ ಹಿಂದಿರುವ ಉಪಾಯವೆಂದರೆ ಮಕ್ಕಳು ಮನೆಯ ವಾತಾವರಣದಿಂದ ಹೊರಗಿದ್ದಲ್ಲಿ ಶಾಲೆ ಬಿಡದೆ ಕನಿಷ್ಠ ಪಿಯುಸಿತನಕವಾದರೂ ಓದಬಲ್ಲರೆಂಬುದು. ಅಂದರೆ ಇಂಥ ಮಕ್ಕಳು ಪೋಲೀಸ್ ಕಾನ್ಸ್ಟೇಬಲ್ಸ್ ಅಥವಾ ಗುಮಾಸ್ತರಾಗಲು ಅರ್ಹರಾಗುತ್ತಾರೆ. ಇಂಥ ದಲಿತರು ನಗರ ಪ್ರದೇಶಗಳಲ್ಲಿ ತಮ್ಮ ಸಂಬಂಧಿಕರನ್ನು ಹೊಂದಿಲ್ಲದ ಕಾರಣ ಹಾಗೂ ಹಣವಿಲ್ಲದ್ದರಿಂದ ಬಾಡಿಗೆಗೆ ರೂಮ್‌ಗಳನ್ನು ತೆಗೆದುಕೊಳ್ಳಲಾಗುವುದಿಲ್ಲ. ಆಗ ಅವರಿಗಿರುವ ಒಂದೇ ಒಂದು ಅವಕಾಶವೆಂದರೆ ರಾಜ್ಯ ಸರ್ಕಾರ ನಡೆಸುತ್ತಿರುವ ಹಾಸ್ಟೆಲ್‌ಗಳಲ್ಲಿ ಮಕ್ಕಳನ್ನು ಸೇರಿಸುವುದು. ಇಂಥ ಹಾಸ್ಟೆಲ್‌ಗಳಿಂದ ವಿದ್ಯಾಭ್ಯಾಸ ಮಾಡಿದ ಮಕ್ಕಳು ಅನಂತರದಲ್ಲಿ ಆಡಳಿತ ಸೇವೆ, ಡಾಕ್ಟರ್, ಇಂಜಿನಿಯರ್ ಹಾಗೂ ವಿಜ್ಞಾನಿಗಳಾಗಿ ಹೊರಹೊಮ್ಮಿದ್ದಾರೆ. ಯಾವುದೇ ಅಂಥ ಜಿಲ್ಲಾ ಕೇಂದ್ರಗಳಲ್ಲಿ ಕೆಲವು ಹಾಸ್ಟೆಲ್‌ಗಳಿದ್ದು ಮಕ್ಕಳಿಗೆ ಊಟ, ಸಮವಸ್ತ್ರ ಮುಕ್ತಕಟೆಯಾಗಿ ದೊರೆಯುತ್ತಿತ್ತು. ಆದರೆ ಉತ್ತರ ಪ್ರದೇಶದ ಇಂಥ ಹಾಸ್ಟೆಲ್‌ಗಳಲ್ಲಿ ಆಹಾರವಾಗಲೀ, ಸಮವಸ್ತ್ರವಾಗಲಿ ದಲಿತ ಮಕ್ಕಳು ಪಡೆಯುತ್ತಿಲ್ಲ. ಎಲ್ಲಿ ಊಟ ವಿರುತ್ತದೆಯೋ ಅಂತಕಡೆ ಹಸಿದ ಮಕ್ಕಳೇ ಊಟ ಮಾಡುವುದು.

೨೫ ವರ್ಷಗಳ ಹಿಂದೆ ಇಂಥ ಹಾಸ್ಟೆಲ್‌ಗಳು ಬಹಳ ಕೆಟ್ಟದ್ದಾಗಿ ನಡೆಯುತ್ತಿದ್ದವು. ಇಂದು ಅವುಗಳು ಮತ್ತಷ್ಟು ಹದೆಗೆಟ್ಟಿವೆ. ಕಳೆದ ದಶಕದಲ್ಲಿ ಭಾಗಶಃ ಉ.ಪ್ರದ ಪ್ರತಿಯೊಂದು ಹಾಸ್ಟೆಲ್‌ಗೂ ಭೇಟಿನೀಡಿದ್ದೇನೆ. ಅಲ್ಲಿನ ಪರಿಸ್ಥಿತಿ ಯೋಚಿಸಲಾರದಷ್ಟು ಕುಸಿದಿತ್ತು.

ಅನೇಕ ಹಾಸ್ಟೆಲ್‌ಗಳಲ್ಲಿ ಅಭ್ಯಾಸಕ್ಕೆಂದು ಕುರ್ಚಿ–ಮೇಜುಗಳ ಕಲ್ಪನೆಯೇ ಇರಲಿಲ್ಲ. ಹಾಸಿಗೆಗಳು ಇಟ್ಟಿಗೆಗಳ ಮೇಲೆ ಇಡಲಾಗಿರುತ್ತಿತ್ತು. ಶೌಚಾಲಯಗಳು ಭರ್ತಿಯಾಗಿ ವಾಕರಿಕೆಯನ್ನುಂಟಾಗುತ್ತಿತ್ತು. ಒಂದು ದೊಡ್ಡ ಕೋಣೆಯಲ್ಲಿ ಬಂಧಿತರಾದ ಡಜನ್ ವಿದ್ಯಾರ್ಥಿಗಳಿಗೆ ೧೦೦ ವಾಟ್ಸ್ ವಿದ್ಯುತ್ ದೀಪವಿರುತ್ತಿತ್ತು. ಆದರೂ ಅನೇಕ ಸಲ ವಿದ್ಯುತ್ತೇ ಇರುತ್ತಿರಲಿಲ್ಲ. ಉ.ಪ್ರ. ರಾಜ್ಯದ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳು ತಾವಿದ್ದ ಕೋಣೆಗಳಲ್ಲೇ ಅಡಿಗೆ ತಯಾರಿಸಿಕೊಳ್ಳಬೇಕಾಗುತ್ತಿತ್ತು. ವಾತಾರಣ ಕೆಟ್ಟು ನಾರುತ್ತಿತ್ತು. (ಇಂದಿಗೂ ಇದೇ ಸ್ಥಿತಿ ಉತ್ತರ ಕರ್ನಾಟಕದ ಬಳ್ಳಾರಿ, ಕೊಪ್ಪಳ ಮುಂತಾದ ಜಿಲ್ಲೆಗಳಲ್ಲಿರುವ ಹೆಣ್ಣು ಮಕ್ಕಳ ಹಾಸ್ಟೆಲ್‌ಗಳಲ್ಲಿ ಕಂಡುಬರುತ್ತಿದೆ).

ಈ ಎಲ್ಲಾ ಹಾಸ್ಟೆಲ್‌ಗಳನ್ನು ಕೇಂದ್ರ ಸರ್ಕಾರ ವಶಕ್ಕೆ ತೆಗೆದುಕೊಂಡು ಅವುಗಳನ್ನು ಆಧುನೀಕರಿಸಬೇಕಿತ್ತು. ಸರ್ಕಾರ ಆರ್ಥಿಕತೆಯನ್ನು ಉದಾರೀಕರಿಸಿದಂತೆ ಶಿಕ್ಷಣದ ಬಗ್ಗೆ ಗಮನಹರಿಸಿದ್ದಲ್ಲಿ ಸಮಾಜವನ್ನು ಸಹ ವಿಮೋಚನೆ ಗೊಳಿಸಬಹುದಿತ್ತು. ಅಲ್ಲದೆ ಈ ಒಂದು ಕಾರ್ಯ ದಲಿತರಲ್ಲಿ ಸರ್ಕಾರದ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡಿಸುತ್ತಿತ್ತು. ಈ ಅವಕಾಶವನ್ನು ಸರ್ಕಾರ ಕಳೆದುಕೊಂಡಿತು. ಹೀಗಿರುವಲ್ಲಿ ಖಾಸಗಿ ವಲಯವು ಶಾಲೆ ಬಿಡುವಿಕೆಯನ್ನು ತಡೆಗಟ್ಟಲು ಅನೇಕ ಯೋಜನೆಗಳನ್ನು ಪ್ರತಿಪಾದಿಸುತ್ತಿದೆ. ಅದಕ್ಕಾಗಿ ದೊಡ್ಡ ಮೊತ್ತವನ್ನೇ ಹೂಡಲಿದೆ.

ಈ ಕಲ್ಯಾಣ ಹಾಸ್ಟೆಲ್‌ಗಳನ್ನು ಆಧುನೀಕರಿಸಲು ಪ್ರತಿಯೊಂದಕ್ಕೂ ಸುಮಾರು ೩ ಲಕ್ಷ ರೂ.ಗಳಷ್ಟೆ ಸಾಕಾಗುತ್ತಿತ್ತು. ಅಂತಹ ಹಾಸ್ಟೆಲ್‌ಗಳನ್ನು ನಡೆಸಲು ತಿಂಗಳಿಗೆ ರೂ.೫೦೦೦/ ಸಾಕಾಗುತ್ತದೆ. ಒಂದು ಜನರೇಟರ್ ಮತ್ತು ಕಂಪ್ಯೂಟರ್‌ಗಳನ್ನು ಹಾಸ್ಟೆಲೊಂದರಲ್ಲಿ ಸ್ಥಾಪಿಸಲು ಒಂದು ಲಕ್ಷ ರೂ ಸಾಕಾಗುತ್ತದೆ.

ಹಾಗಾದರೆ ಈ ಹಾಸ್ಟೆಲ್‌ಗಳನ್ನು ಭಾರತೀಯ ಕೈಗಾರಿಕೋದ್ಯಮವೇಕೆ ದತ್ತು ತೆಗೆದುಕೊಳ್ಳಬಾರದು. ಜಿಲ್ಲೆಯೊಂದರಲ್ಲಿ ಸರಾಸರಿ ೫ ಹಾಸ್ಟೆಲ್‌ಗಳು ಇರಬಹುದು. ಇಂಥ ಹಾಸ್ಟೆಲ್ಲೊಂದನ್ನು ನವೀಕರಿಸಲು ರೂ.೪ ಲಕ್ಷ ಸಾಕು. ಮತ್ತೊಂದು ೬ ಲಕ್ಷ ಅವುಗಳನ್ನು ನಡೆಸಲು ಅಗತ್ಯವೆಂದಾದರೆ ಜಿಲ್ಲೆಯಲ್ಲಿನ ೫ ಹಾಸ್ಟೆಲ್‌ಗಳನ್ನು ನಡೆಸಲು ಸುಮಾರು ೫೦ ಲಕ್ಷ ಸಾಕಾಗುತ್ತದೆ.

೨೫ ವರ್ಷಗಳ ಹಿಂದೆ ಇಂಥ ಹಾಸ್ಟೆಲ್‌ಗಳು ಬಹಳ ಕೆಟ್ಟದ್ದಾಗಿ ನಡೆಯುತ್ತಿದ್ದವು. ಇಂದು ಅವುಗಳು ಮತ್ತಷ್ಟು ಹದೆಗೆಟ್ಟಿವೆ. ಕಳೆದ ದಶಕದಲ್ಲಿ ಭಾಗಶಃ ಉ.ಪ್ರದ ಪ್ರತಿಯೊಂದು ಹಾಸ್ಟೆಲ್‌ಗೂ ಭೇಟಿನೀಡಿದ್ದೇನೆ. ಅಲ್ಲಿನ ಪರಿಸ್ಥಿತಿ ಯೋಚಿಸಲಾರದಷ್ಟು ಕುಸಿದಿತ್ತು. ಅನೇಕ ಹಾಸ್ಟೆಲ್‌ಗಳಲ್ಲಿ ಅಭ್ಯಾಸಕ್ಕೆಂದು ಕುರ್ಚಿ–ಮೇಜುಗಳ ಕಲ್ಪನೆಯೇ ಇರಲಿಲ್ಲ. ಹಾಸಿಗೆಗಳು ಇಟ್ಟಿಗೆಗಳ ಮೇಲೆ ಇಡಲಾಗಿರುತ್ತಿತ್ತು. ಶೌಚಾಲಯಗಳು ಭರ್ತಿಯಾಗಿ ವಾಕರಿಕೆಯನ್ನುಂಟಾಗುತ್ತಿತ್ತು. ಒಂದು ದೊಡ್ಡ ಕೋಣೆಯಲ್ಲಿ ಬಂಧಿತರಾದ ಡಜನ್ ವಿದ್ಯಾರ್ಥಿಗಳಿಗೆ ೧೦೦ವಾಟ್ಸ್ ವಿದ್ಯುತ್ ದೀಪವಿರುತ್ತಿತ್ತು. ಆದರೂ ಅನೇಕ ಸಲ ವಿದ್ಯುತ್ತೇ ಇರುತ್ತಿರಲಿಲ್ಲ. ಉ.ಪ್ರ. ರಾಜ್ಯದ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳು ತಾವಿದ್ದ ಕೋಣೆಗಳಲ್ಲೇ ಅಡಿಗೆ ತಯಾರಿಸಿಕೊಳ್ಳಬೇಕಾಗುತ್ತಿತ್ತು. ವಾತಾರಣ ಕೆಟ್ಟು ನಾರುತ್ತಿತ್ತು.

ಕಾರ್ಪೋರೇಟ್ ಹಾಸ್ಟೆಲ್‌ಗಳು

ಉದಾಹರಣೆಗೆ ಟಾಟಾ ವಿವಿಧ ಸೇವಾ ಕಾರ್ಯಗಳಿಗಾಗಿ ಪ್ರತಿವರ್ಷವೂ ೧೦೦೦೦ ಮಿಲಿಯನ್ ರೂ. ವ್ಯಯಿಸುತ್ತಿದೆ. ಹಾಸ್ಟೆಲೊಂದರಲ್ಲಿ ೧೦೦ ಮಂದಿ ದಲಿತ ವಿದ್ಯಾರ್ಥಿಗಳಿದ್ದಾರೆಂದಾದರೆ ಟಾಟಾ ಒಂದೇ ಕಂಪನಿಯು ಅಂಥ ೫೦೦ ಮಂದಿ ಮಕ್ಕಳ ಬದುಕನ್ನು ಜಿಲ್ಲೆಯೊಂದರಲ್ಲಿ ಕಟ್ಟಬಹುದಾಗಿದೆ. ಸಿಐಐ ೬೦೦೦ ಮಂದಿ ಸದಸ್ಯರನ್ನು ಹೊಂದಿದ್ದರೆ ಅಸೋಚಮ್ ಎರಡು ಲಕ್ಷ ಸದಸ್ಯರನ್ನು ಹೊಂದಿದೆ.

ಬೀದಿಪಾಲಾಗುವ ಇಂಥ ದಲಿತ/ಆದಿವಾಸಿಗಳ ಮಕ್ಕಳನ್ನು ರಕ್ಷಿಸುವುದರಿಂದ ಭಾರತೀಯ ಉದ್ಯಮವು ದುಃಸ್ಥಿತಿಯಲ್ಲಿರುವ ಮಾನವತೆಗೆ ಅತಿ ದೊಡ್ಡ ಸೇವೆಯನ್ನು ಮಾಡಬಹುದು. ಆದ್ದರಿಂದ ಭಾರತೀಯ ಉದ್ಯಮಕ್ಕೆ ಇಂದು ಅವಕಾಶ ದೊರೆತಿದೆ. ಪ್ರಶ್ನೆಯೆಂದರೆ ಅದನ್ನು ಅವರು ಮಾಡಬಹುದೇ?

ಹಿಂದಿನ ಮಧ್ಯಪ್ರದೇಶದ ಮುಖ್ಯಮಂತ್ರಿ ದಿಗ್ವಿಜಯ್ ಸಿಂಗ್‌ಗೆ ನೀಲುಗಣ್ಣಿನ ಐಎಎಸ್ ಅಧಿಕಾರಿ ಡಾ.ರಾಜೇಶ್ ರಾಜೋರಾ ಎಂದರೆ ಬಲು ಇಷ್ಟ. ಆತ ಆ ರಾಜ್ಯದಲ್ಲಿ ಹಲವಾರು ಜಿಲ್ಲೆಗಳ ಕಲೆಕ್ಟರ್ ಆಗಿ ಸೇವೆ ಸಲ್ಲಿಸಿದ್ದ. ಉಮಾಭಾರತಿ ಅಧಿಕಾರಕ್ಕೆ ಬಂದ ಮೇಲೆ ಡಾ.ರಾಜೇಶ್‌ನನ್ನು ಮೌನಿಯಾಗಿಸಬಹುದು ಎಂದು ಭಾವಿಸಲಾಗಿತ್ತು. ಆದರೆ ಆತನನ್ನು ಇಂದೋರ್‌ನ ಕಲೆಕ್ಟರ್‌ನನ್ನಾಗಿ ನೇಮಕ ಮಾಡಲಾಯಿತು. ಈತ ದಲಿತನಾಗಿದ್ದು ಮೀಸಲಾತಿಯ ಮೂಲಕ ಎಂಬಿಬಿಎಸ್ ಹಾಗೂ ಐಎಎಸ್ ಮುಗಿಸಿದ್ದ.

ಭಾರತದಲ್ಲಿ ಹಾರ್ಟ್ ಸರ್ಜನ್ ಎಂದು ಖ್ಯಾತಿ ಗಳಿಸಿರುವ ವ್ಯಕ್ತಿಯೆಂದರೆ ಆಂಧ್ರ ಪ್ರದೇಶದ ಡಾ. ಪ್ರಸಾದ್ ರಾವ್. ಶಾಲಾ ಶಿಕ್ಷಕರ ಕುಟುಂಬದಲ್ಲಿ ಜನಿಸಿದ ಆತ ಮೀಸಲಾತಿಯಿಂದಲೇ ಎಂಬಿಬಿಎಸ್ ಸೇರಿದ್ದು. ಅವರ ಸೇವಾ ಪ್ರಾವೀಣ್ಯತೆಗೆ ಪದ್ಮಶ್ರೀ ಪ್ರಶಸ್ತಿ ದೊರೆತಿದೆ. ಹಾಗೆಯೇ ದೆಹಲಿಯ ಸಫ್ದರ್ ಜಂಗ್ ಆಸ್ಪತ್ರೆಯಲ್ಲಿರುವ ಕಾರ್ಡಿಯಾಲಜಿಸ್ಟ್ ಡಾ.ಜಗದೀಶ್ ಪ್ರಸಾದ್ ಸಹ ಪದ್ಮಶ್ರೀ ಪುರಸ್ಕೃತರಾದವರು. ಇವರೂ ಸಹ ದಲಿತರಾಗಿದ್ದು ಮೀಸಲಾತಿಯ ಮೂಲಕವೇ ಎಂಬಿಬಿಎಸ್ ಪಡೆದದ್ದು. ಇವರ ತಂದೆ ಗಣಿಗಾರಿಕೆಯಲ್ಲಿ ಕೆಲಸಮಾಡುತ್ತಿದ್ದರು.

ಈ ವರ್ಷದ ಏಪ್ರಿಲ್ ೧೦ರಂದು ಮೀರತ್‌ನಲ್ಲಿ ನಡೆದ ಬೆಂಕಿ ದುರಂತದಲ್ಲಿ ೫೦ ಮಂದಿ ಮೃತರಾದರು. ನಗರವು ಗೊಂದಲದಲ್ಲಿ ಮುಳುಗಿತ್ತು. ಜಿಲ್ಲಾಧಿಕಾರಿ ಕಛೇರಿಯನ್ನು ಬಿಡದೆ ಜನ ಛಿದ್ರಗೊಳಿಸಿದರು. ಆ ಸಂದರ್ಭದಲ್ಲಿ ಉ.ಪ್ರ ಸರ್ಕಾರ ಒಬ್ಬ ದಕ್ಷ ಐಎಎಸ್ ಅಧಿಕಾರಿಯ ಸೇವೆಯನ್ನು ಬಯಸಿತ್ತು. ಕೂಡಲೇ ಅಧಿಕಾರ ವಹಿಸಿದ ಮುಖೇಶ್ ಮೆಶ್ರಮ್ ಬಂದು ಗಲಭೆ ಪೀಡಿತ ಮೀರತ್ ಸಹಜ ಸ್ಥಿತಿಗೆ ಮರಳುವಂತೆ ಮಾಡಿದರು. ಇವರೂ ಸಹ ದಲಿತರೇ ಆಗಿದ್ದು ಮೀಸಲಾತಿಯ ಮೂಲಕವೇ ಅಧಿಕಾರಕ್ಕೆ ಬಂದದ್ದು.

ಬಿಹೆಚ್‌ಇಎಲ್‌ನಲ್ಲಿ ಸೀನಿಯರ್ ಇಂಜಿನಿಯರ್ ಆಗಿರುವವರೆಂದರೆ ಸಂತ್‌ಕುಮಾರ್. ಜರ್ಮನಿಯಲ್ಲಿ ಒಂದು ಬಯ್ಲರ್‌ನ್ನು ಸ್ಥಾಪಿಸಲು ನುರಿತ ಇಂಜಿನಿಯರ್ ಅಗತ್ಯವಿದ್ದು ಆ ಇಡೀ ಕೆಲಸದ ಉಸ್ತುವಾರಿಯನ್ನು ನೋಡಿಕೊಳ್ಳಬೇಕಿತ್ತು. ಅಲ್ಲಿಗೆ ಸಂತ್‌ಕುಮಾರರನ್ನು ಕಳುಹಿಸಿಕೊಡಲಾಯಿತು. ಇವರೂ ಸಹ ಮೀಸಲಾತಿಯನ್ನು ಉಪಯೋಗಿಸಿಕೊಂಡೇ ಬಂದವರು. ಇಂಜಿನಿಯರಿಂಗ್

ಬದ್ಧರಾಗಿರುವ ಜನ

ಪ್ರಜೆಕ್ಟ್ಸ್ ಲಿಮಿಟೆಡ್‌ನಲ್ಲಿ ಇಂಜಿನಿಯರ್ ಆಗಿರುವ ಎನ್‌ಬಿ ಗೌತಮ್ ಸಹ ವಿದೇಶದಲ್ಲಿ ಮತ್ತೊಂದು ಸ್ಥಾವರವನ್ನು ಸ್ಥಾಪಿಸಲು ಕಳುಹಿಸಿಕೊಡಲಾಯಿತು. ಇವರೂ ಸಹ ದಲಿತ ಹಿನ್ನೆಲೆಯಿಂದ ಬಂದಿದ್ದು ಮೀಸಲಾತಿಯನ್ನು ಬಳಸಿಕೊಂಡೇ ಇಂಜಿನಿಯರಿಂಗ್ ಪದವಿ ಮುಗಿಸಿದ್ದು. ಇಂಥ ಅನೇಕ ಶ್ರೇಷ್ಠ ದಲಿತರ ಉದಾಹರಣೆಗಳು ಎಲ್ಲಾ ಕಡೆಯಲ್ಲೂ ದೊರೆಯುತ್ತದೆ.

ಪ್ರಮೋಶನ್ ಹಾಗೂ ವಿದೇಶಗಳಲ್ಲಿ ಸೇವೆ ಸಲ್ಲಿಸಲು ಮೆರಿಟ್ ಅಗತ್ಯವೆಂದೇನೂ ಭಾವಿಸ ಬೇಕಿಲ್ಲ. ಜಾತಿ, ಸಾಮಾಜಿಕ ಸಂಪರ್ಕ ಮತ್ತು ರಾಜಕೀಯ ಪ್ರಭಾವ ಮುಖ್ಯವಾಗಿ ಬೇಕಾಗುತ್ತದೆ. ಈ ಆಟದಲ್ಲಿ ದಲಿತರು/ಆದಿವಾಸಿಗಳು ಸೋಲುತ್ತಿರುತ್ತಾರೆ.

ಈ ಎಲ್ಲಾ ವೈರುಧ್ಯಗಳನ್ನು ಮೀರಿ ಕೆಲವು ದಲಿತ/ಆದಿವಾಸಿ ವೃತ್ತಿಪರರು/ಅಧಿಕಾರಿಗಳು ತಮ್ಮ ಸಹಪಾಠಿಗಳನ್ನು ಮೀರಿ ನಿಲ್ಲುವುದು ಅಭಿನಂದನೀಯವೇ ಸರಿ. ಈ ಎಲ್ಲಾ ವಿದ್ಯಮಾನಗಳು ನನಗೆ ಅನೇಕ ದಿನಗಳಿಂದಲೂ ಸಿಕ್ಕಾಗಿತ್ತು – ಅಲ್ಪ ಮೊತ್ತದ ಅಂಕಗಳನ್ನು ಪಡೆದ ದಲಿತರು ತಮ್ಮ ಸಹಪಾಠಿಗಳನ್ನು ಮೆಟ್ಟಿ ನಿಲ್ಲುವುದಾದರೂ ಹೇಗೆ?

ದಲಿತರು ನೌಕರಿಯನ್ನು ತೆಗೆದುಕೊಳ್ಳುವಾಗ ಯಾವುದೇ ಹವ್ಯಾಸಗಳನ್ನು ಹೊಂದಿರುವುದಿಲ್ಲ. ಅವರಲ್ಲಿ ಯಾರೂ ಸಹ ಪಾರ್ಟಿ ಮಾಡಲು ಹೋಗುವುದು ವಿರಳವೇ. ಏಪ್ರಿಲ್ ೧೪, ಅಕ್ಟೋಬರ್ ೧೪ ಹಾಗೂ ಜನವರಿ ೨೬ ಆಚರಣಾತ್ಮಕ ದಿನಗಳಾಗಿದ್ದು ದಲಿತರಲ್ಲಿ ಅನೇಕರು ದೇವಸ್ಥಾನಗಳಿಗೆ ಭಕ್ತಾದಿಗಳಾಗಿ ಹೋಗುವುದಿಲ್ಲ. ಹಾಗಾಗಿ ಅವರಿಗೆ ಅಧಿಕ ಸಮಯ ದೊರೆಯುತ್ತದೆ. ಅಲ್ಲದೆ ಅವರಲ್ಲಿ ಅಧಿಕ ಮಂದಿಗೆ ಆಸ್ತಿಯೇನೂ ಇರುವುದಿಲ್ಲ. ಹಾಗಾಗಿ ಅವರಲ್ಲಿ ಅನೇಕರಿಗೆ ತಮ್ಮ ಮನೆ–ನೆಂಟರನ್ನು ಬಿಟ್ಟರೆ ಬೇರೆ ಕಾಳಜಿ ಇರುವುದಿಲ್ಲ. ಹಾಗಾಗಿ ತುಂಬಾ ಸಮಯ ಇರುವುದರಿಂದ ಮತ್ತು ಇತರೆ ಚಿಂತೆಗಳು ಇಲ್ಲದ್ದರಿಂದ ಅವರು ತಮ್ಮ ಕೆಲಸದಲ್ಲಿ ಮಗ್ನರಾಗುತ್ತಾರೆ. ದಲಿತ? ಆದಿವಾಸಿಗಳು ತಮ್ಮ ಕೆಲಸದಿಂದ ಮಾತ್ರ ಸುಖವನ್ನು ಪಡೆಯುತ್ತಾರೆ. ಇವರೆಲ್ಲಾ ತಮ್ಮ ಉತ್ಪಾದನೆಯನ್ನು ಮತ್ತು ಸೇವೆಗಳನ್ನು ತಮ್ಮ ವೈಯಕ್ತಿಕ ಆಸಕ್ತಿಯಿಂದ ಕಾಣುತ್ತಾರೆ.

ಇದಕ್ಕೆಲ್ಲಾ ಒಂದೇ ಉತ್ತರವೆಂದರೆ – ದಲಿತರಲ್ಲಿ ಅಧಿಕವಾದ ಶಕ್ತಿಯು ಒಳಗೊಳಗೇ ಬಂಧಿಯಾಗಿರುತ್ತದೆ. ಇಂತೆಡೆ ಅವಕಾಶವೊಂದು ಸಿಕ್ಕಲ್ಲಿ ಅಂಥ ಎಲ್ಲಾ ಶಕ್ತಿ ಹೊರಹೊಮ್ಮಿ ಫಲಿತಾಂಶ ಅಧಿಕವಾಗಿ ದೊರೆಯುತ್ತದೆ. ಆದರೂ ನನಗೆ ಏಕೆ ಎಂಬ ಪ್ರಶ್ನೆಗೆ ಉತ್ತರ ದೊರೆತ್ತಿದೆಯೇ ವಿನಃ ಹೇಗೆ ಎಂಬ ಪ್ರಶ್ನೆಗೆ ಅಲ್ಲ.

ಈ ವರ್ಷದ ಸೆಪ್ಟೆಂಬರ್ ೬ರಂದು ಡಾ.ಶ್ಯಾಮ್ ಬಾಬು, ಆನಂದ್ ಎಸ್ ಕೃಷ್ಣ ಹಾಗೂ ನಾನು ಭಾರತೀಯ ಉದ್ಯಮದ ಪ್ರಮುಖ ಸಿಇಒನನ್ನು ಭೇಟಿಯಾಗಿದ್ದೆವು. ಆ ಸಂದರ್ಭದ ಚರ್ಚೆಯಲ್ಲಿ ಬೌದ್ಧ ಧರ್ಮದಲ್ಲಿ ವಿದ್ವಾಂಸರಾಗಿರುವ ಆನಂದ್ ಒಂದು ಕತೆಯನ್ನು ಹೇಳಿದರು. ಕಾರಣ ಚರ್ಚೆಯು ದಲಿತರ ಕಾರ್ಯಕ್ಷಮತೆಯ ಬಗ್ಗೆ ಇತ್ತು. ಸಿವಿಲ್ ಸರ್ವಿಸ್ ಸಂದರ್ಶನದಲ್ಲಿ ಆನಂದರವರಿಗೆ ಒಂದು ಪ್ರಶ್ನೆಯನ್ನು ಕೇಳಲಾಯಿತು-ಎಸ್‌ಸಿ/ಎಸ್‌ಟಿ ಮೀಸಲಾತಿಯಡಿ ಆತನನ್ನೇಕೆ ಸಿವಿಲ್ ಸರ್ವಿಸ್‌ಗೆ ತೆಗೆದುಕೊಳ್ಳಬೇಕು? ಆತನು ನೀಡಿದ ಉತ್ತರ ಒಂದು ದೊಡ್ಡ ಥಿಯರಿಯಾಗಿದ್ದು ಎಲ್ಲಾ ರಹಸ್ಯಗಳನ್ನು ಬೇಧಿಸಿ ನಿಲ್ಲುತ್ತದೆ.

ದಲಿತರು ನೌಕರಿಯನ್ನು ತೆಗೆದುಕೊಳ್ಳುವಾಗ ಯಾವುದೇ ಹವ್ಯಾಸಗಳನ್ನು ಹೊಂದಿರುವುದಿಲ್ಲ. ಅವರಲ್ಲಿ ಯಾರೂ ಸಹ ಪಾರ್ಟಿ ಮಾಡಲು ಹೋಗುವುದು ವಿರಳವೇ. ಏಪ್ರಿಲ್ ೧೪, ಅಕ್ಟೋಬರ್ ೧೪ ಹಾಗೂ ಜನವರಿ ೨೬ ಆಚರಣಾತ್ಮಕ ದಿನಗಳಾಗಿದ್ದು ದಲಿತರಲ್ಲಿ ಅನೇಕರು ದೇವಸ್ಥಾನಗಳಿಗೆ ಭಕ್ತಾದಿಗಳಾಗಿ ಹೋಗುವುದಿಲ್ಲ. ಹಾಗಾಗಿ ಅವರಿಗೆ ಅಧಿಕ ಸಮಯ ದೊರೆಯುತ್ತದೆ. ಅಲ್ಲದೆ ಅವರಲ್ಲಿ ಅಧಿಕ ಮಂದಿಗೆ ಆಸ್ತಿಯೇನೂ ಇರುವುದಿಲ್ಲ. ಹಾಗಾಗಿ ಅವರಲ್ಲಿ ಅನೇಕರಿಗೆ ತಮ್ಮ ಮನೆ–ನೆಂಟರನ್ನು ಬಿಟ್ಟರೆ ಬೇರೆ ಕಾಳಜಿ ಇರುವುದಿಲ್ಲ.

ಹಾಗಾಗಿ ತುಂಬಾ ಸಮಯ ಇರುವುದರಿಂದ ಮತ್ತು ಇತರೆ ಚಿಂತೆಗಳು ಇಲ್ಲದ್ದರಿಂದ ಅವರು ತಮ್ಮ ಕೆಲಸದಲ್ಲಿ ಮಗ್ನರಾಗುತ್ತಾರೆ. ದಲಿತ? ಆದಿವಾಸಿಗಳು ತಮ್ಮ ಕೆಲಸದಿಂದ ಮಾತ್ರ ಸುಖವನ್ನು ಪಡೆಯುತ್ತಾರೆ. ಇವರೆಲ್ಲಾ ತಮ್ಮ ಉತ್ಪಾದನೆಯನ್ನು ಮತ್ತು ಸೇವೆಗಳನ್ನು ತಮ್ಮ ವೈಯಕ್ತಿಕ ಆಸಕ್ತಿಯಿಂದ ಕಾಣುತ್ತಾರೆ.

ಹೀಗೆ ಅವರಲ್ಲಿ ಅಧಿಕವಾದ ಸಾಮಾಜಿಕ–ಮಾನಸಿಕ ಬಿಕ್ಕಟ್ಟು ಅಥವಾ ಸ್ವಾಮಿನಿಷ್ಠೆಯಲ್ಲಿ ಬಿಕ್ಕಟ್ಟು ಇರದ ಕಾರಣ ತಮಗೆ ವಹಿಸಿದ ಕೆಲಸಗಳನ್ನು ಮುತುವರ್ಜಿಯಿಂದ ಮಾಡುತ್ತಾರೆ. ಅವರೆಲ್ಲಾ ಜ್ಞಾನ, ಭಾವನೆಗಳು ಹಾಗೂ ಶಕ್ತಿ ಎಲ್ಲವೂ ಸೇರಿ ಅತ್ಯುತ್ತಮ ಫಲಿತಾಂಶ ಪಡೆಯುತ್ತಾರೆ. ಆದ್ದರಿಂದ ದಲಿತ/ಆದಿವಾಸಿಗಳನ್ನು ತಮ್ಮ ಶ್ರಮಶಕ್ತಿಯಲ್ಲಿ ಒಳಗೊಳ್ಳುವುದರಿಂದ ಭಾರತೀಯ ಉದ್ಯಮವೇ ಅಧಿಕ ಲಾಭ ಪಡೆಯುವುದು. □

ಬುದ್ಧಾಯಣ

೧೫

ಕಾಡಿನ ಮೇಲ್ಭಾಗದಲ್ಲಿ ಕಿನ್ನರನೆಂಬ ಸುಂದರಾಂಗನು ಚಂದಾ ಎಂಬುವವಳನ್ನು ಮದುವೆಯಾಗಿ ಗುಡಿಸಲು ಕಟ್ಟಿಕೊಂಡು ನೆಮ್ಮದಿಯಿಂದ ಜೀವಿಸುತ್ತಿದ್ದರು. ಅವರು ಮಳೆಗಾಲದಲ್ಲಿ ಪರ್ವತದ ಮೇಲ್ಭಾಗದಲ್ಲಿಯೇ ಇರುತ್ತಿದ್ದರು. ಬೇಸಿಗೆಯಲ್ಲಿ ಕೆಳಗಿಳಿದು ಬರುತ್ತಿದ್ದರು. ಆ ಆದರ್ಶ ದಂಪತಿಗಳಿಗೆ ಜಲಕ್ರೀಡೆ ಎಂದರೆ ಪಂಚಪ್ರಾಣ. ಹಾಗಾಗಿ ಅವರು ಬೇಸಿಗೆಗಾಗಿ ಜಾತಕ ಪಕ್ಷಿಗಳಂತೆ ಕಾಯ್ದು ಕೂರುತ್ತಿದ್ದರು. ಅವರುಗಳು ಬೇಸಿಗೆಯ ಒಂದು ನಡು ಮಧ್ಯಾಹ್ನ ಸರೋವರವೊಂದರಲ್ಲಿ ಜಲಕ್ರೀಡೆಯಲ್ಲಿ ನಿರತರಾಗಿದ್ದರು. ಅಂತಹ ಸಂದರ್ಭದಲ್ಲಿ ವಾರಣಾಸಿಯ ರಾಜ ಆ ಸರೋವರದ ಬಳಿ ಬಂದ.

ಸಿ. ಎಚ್. ರಾಜಶೇಖರ್

'ನೀನಿಲ್ಲದಿರಲು ಎಲ್ಲವೂ ಶೂನ್ಯ!'

ವಾರಣಾಸಿಯ ರಾಜನಿಗೆ ಬೇಟೆ ಹುಚ್ಚು ಅಧಿಕವಾಗಲು ಕೆಲವು ದಿನಗಳ ಮಟ್ಟಿಗೆ ರಾಜ್ಯವನ್ನು ಅಮಾತ್ಯರ ವಶಕ್ಕೆ ಒಪ್ಪಿಸಿ ರಥವೇರಿ ಹಿಮಾಲಯದ ತಪ್ಪಲಿನ ದಟ್ಟ ಕಾಡಿನ ಕಡೆ ಪಯಣಿಸಿದ. ಅಲ್ಲಿ ಗೊತ್ತಾದ ಸ್ಥಳದಲ್ಲಿ ಡೇರೆ ಹಾಕಿ ನದಿಯ ತಪ್ಪಲಲ್ಲಿ ಬೇಟೆಗಾಗಿ ಕಾಯ್ದು ಕೂರುತ್ತಿದ್ದ. ನೀರು ಕುಡಿಯಲು ಬರುವ ಜಿಂಕೆ, ಹಂದಿ, ಮುಂತಾದ ಪ್ರಾಣಿಗಳನ್ನು ಕೊಂದು ಅದರ ಮಾಂಸವನ್ನು ಸುಟ್ಟು ತಿಂದು ಮತ್ತೆ ಹೊಸ ಬೇಟೆಯನ್ನು ಹುಡುಕುತ್ತ ಮುಂದೆ ಸಾಗುತ್ತಿದ್ದ.

ಅದೇ ಕಾಡಿನ ಮೇಲ್ಭಾಗದಲ್ಲಿ ಕಿನ್ನರನೆಂಬ ಸುಂದರಾಂಗನು ಚಂದಾ ಎಂಬುವವಳನ್ನು ಮದುವೆಯಾಗಿ ಗುಡಿಸಲು ಕಟ್ಟಿಕೊಂಡು ನೆಮ್ಮದಿಯಿಂದ ಜೀವಿಸುತ್ತಿದ್ದರು. ಅವರು ಮಳೆಗಾಲದಲ್ಲಿ ಪರ್ವತದ ಮೇಲ್ಭಾಗದಲ್ಲಿಯೇ ಇರುತ್ತಿದ್ದರು. ಬೇಸಿಗೆಯಲ್ಲಿ ಕೆಳಗಿಳಿದು ಬರುತ್ತಿದ್ದರು. ಆ ಆದರ್ಶ ದಂಪತಿಗಳಿಗೆ ಜಲಕ್ರೀಡೆ ಎಂದರೆ ಪಂಚಪ್ರಾಣ. ಹಾಗಾಗಿ ಅವರು ಬೇಸಿಗೆಗಾಗಿ ಜಾತಕ ಪಕ್ಷಿಗಳಂತೆ ಕಾಯ್ದು ಕೂರುತ್ತಿದ್ದರು. ಅವರುಗಳು ಬೇಸಿಗೆಯ ಒಂದು ನಡು ಮಧ್ಯಾಹ್ನ ಸರೋವರವೊಂದರಲ್ಲಿ ಜಲಕ್ರೀಡೆಯಲ್ಲಿ ನಿರತರಾಗಿದ್ದರು. ಒಬ್ಬರ ಮೇಲೊಬ್ಬರು ನೀರನ್ನು ಎರಚುತ್ತಾ ನಗುತ್ತಾ, ಕುಣಿಯುತ್ತಾ, ಅಣಕವಾಡುತ್ತಾ, ಒಗಟುಗಳನ್ನು ಕೇಳುತ್ತಾ ಉತ್ತರಿಸುತ್ತಾ ನಡುನಡುವೆ ಮಧುರವಾಗಿ ಹಾಡುತ್ತಾ ನೃತ್ಯ ಮಾಡುವುದರಲ್ಲಿ ಜಗತ್ತನ್ನೆ ಮರೆತ್ತಿದ್ದರು. ಅಂತಹ ಸಂದರ್ಭದಲ್ಲಿ ವಾರಣಾಸಿಯ ರಾಜ ಆ ಸರೋವರದ ಬಳಿ ಬಂದ.

ಮನುಷ್ಯರ ಧ್ವನಿ ಕೇಳಿ ಬೆಚ್ಚಿ ಬಿದ್ದ ಇಂಪಾದ ಹಾಡು ಅವನ ಕಿವಿಗೆ ಬೀಳಲು ಕಾತುರದಿಂದ ಕಣ್ಣಾಡಿಸಿದ. ಸರೋವರದಲ್ಲಿ ಸುಂದರ ಜೋಡಿಯೊಂದು ಹಾಡುತ್ತಾ ನೃತ್ಯ ಮಾಡುವುದನ್ನು ಕಂಡ ರಾಜ ದಟ್ಟ ಪೊದೆ ಮರೆಯಲ್ಲಿ ಅವಿತು ಕುಳಿತ. ಆತ ಚಂದಳ ರೂಪು ಲಾವಣ್ಯಕ್ಕೆ ಮೋಹಿತನಾದ. ಆ ಕಿನ್ನರನನ್ನೂ ಕೊಂದು ಆಕೆಯನ್ನು ಕೂಡುವ ಇಚ್ಚೆ ಆತನ ಮನಸ್ಸಿನಲ್ಲಿ ಮೂಡಲು ಕಿನ್ನರನ ಮೇಲೆ ಬಾಣ ಪ್ರಯೋಗಿಸಿದ.

ಸರೋವರದ ದಂಡೆಯ ಮೇಲೆ ಕುಳಿತು ತನ್ನ ಹೆಂಡತಿಯ ನೃತ್ಯಕ್ಕೆ ತಕ್ಕಂತೆ ಹಾಡುತ್ತಿದ್ದ ಆತನ ಬೆನ್ನಿಗೆ ಬಾಣವು ಹೊಕ್ಕಲು ಆತ ಹಾಡುವುದನ್ನು ನಿಲ್ಲಿಸಿ ನೋವಿನಿಂದ.

'ಹ್ಹೋ... ಚಂದಾ ಯಾರೋ ನನ್ನನ್ನು ಘಾತಿಸಿದರು. ನನ್ನ ಕಥೆ ಮುಗಿದಂತೆಯೇ ಸರಿ. ನೀನು ಇಲ್ಲಿಂದ ಓಡಿಹೋಗಿ ನಿನ್ನ ಪ್ರಾಣ ಮತ್ತು ಶೀಲ ಕಾಪಾಡಿಕೋ....!' ಎಂದು ಚೀರುತ್ತಾ ಮೂರ್ಛೆಗೆ ವಶನಾದ. ಚಂದಾಳು ತನ್ನ ಗಂಡನ ಬಳಿ ಓಡಿ ಬರುತ್ತಿರಲು ಮಾರ್ಗ ಮಧ್ಯೆ ಆಕೆಯ ದಾರಿಗೆ ಅಡ್ಡಲಾಗಿ ನಿಂತ ರಾಜ.

'ಎಲೈ ಸುರಸುಂದರಿ, ಏಕೆ ಪ್ರಲಾಪಿಸುತ್ತಿರುವೆ. ನಾನು ವಾರಣಾಸಿಯ ರಾಜ. ನಿನ್ನ ರೂಪ ಲಾವಣ್ಯಕ್ಕೆ ಮರುಳಾಗಿ ನಾನೇ ನಿನ್ನ ಪತಿಯನ್ನು ಕೊಂದೆ. ಚಿಂತಿಸದಿರು. ನಾನು ನಿನ್ನನ್ನು ಮದುವೆಯಾಗಿ ಪಟ್ಟದ ರಾಣಿಯನ್ನಾಗಿ ಮಾಡಿಕೊಳ್ಳುವೆ. ನನ್ನತ್ತ ಬಾ..... ನನ್ನ ಆಹ್ವಾನವನ್ನು ಸ್ವೀಕರಿಸು. ನೀನು ನನ್ನವಳಾಗು...!' ಎನ್ನಲು ಆಕೆ.

'ಎಲೈ ಅಧರ್ಮಿಯೇ, ನೀಚನೆ ನೀನು ರಾಜ ಪದವಿಗೆ ತಕ್ಕವನಲ್ಲ... ದೂರ ಸರಿದು ನಿಲ್ಲು. ನನ್ನನ್ನು ಬಯಸಲು ನಿನಗೆ ಅಧಿಕಾರವನ್ನು ಕೊಟ್ಟವರ್ಯಾರು? ನಿರ್ದೋಷಿಯಾದ ನನ್ನ ಪತಿಯು ನಿನಗೆ ಮಾಡಿದ ಅಪರಾಧವಾದರೂ ಏನು?'

'ಆತ ನಿನ್ನ ಗಂಡನಾದದ್ದು, ನನ್ನ ದಾರಿಗೆ ಮುಳ್ಳಾದದ್ದು!'

'ಒಬ್ಬ ಚಾಂಡಾಲನಾಡುವ ಮಾತುಗಳನ್ನು ನುಡಿಯುತ್ತಿರುವ ನೀನು ಹೇಡಿಯೋ, ವೀರನೋ?'

'ಸುಂದರಿ ಎಂಬ ಸಲುಗೆಗಾಗಿ ಸುಮ್ಮನಾಗಲು ಬಾಯಿಯನ್ನು ಹರಿ ಬಿಡಬೇಡ ಬಾ... ನನ್ನ ಬಳಿ ಬಾ.. ನನ್ನೊಂದಿಗೆ ಕೂಡು. ನಿನಗೆ ರಾಜ ಪದವಿ ಕೊಡುವೆ. ನಿನ್ನನ್ನು ರಾಜಕುಲವು ಪೂಜಿಸುವಂತೆ ಮಾಡುವೆ. ಬಾ, ಬಳಿ ಬಾ...!'

'ಎಲೈ ರಾಜಪುತ್ರನೇ, ನಾನು ಸತ್ತರೂ ಚಿಂತೆ ಇಲ್ಲ. ನಿನ್ನವಳಾಗಲಾರೆ...! ಎನ್ನಲು ಕೋಪಗೊಂಡ ರಾಜನು ಬಿಲ್ಲಿಗೆ ಬಾಣವನ್ನು ಏರಿಸಿ ಆಕೆಯ ಎದೆಯತ್ತ ಗುರಿ ಹಿಡಿದು ಹೀಗೇನು ಹೇಳುವೆ...?' ಎನ್ನಲು ಆಕೆ ದೃಢವಾಗಿ ನಿಂತು.

'ನಾನು ಅದನ್ನೆ ಉಚ್ಚರಿಸುವೆ...!' ಎನ್ನಲು ರಾಜನು ತಲ್ಲಣಗೊಂಡು ಎರಡೆಜ್ಜೆ ಹಿಂದೆ ಸರಿದು ನಿಂತ. ಆತನ ಕೈಯಲ್ಲಿದ್ದ ಬಿಲ್ಲು ಬಾಣವು ಕುಸಿದು ನೆಲಕ್ಕೆ ಬೀಳಲು ಆತ.

'ಎಲೈ ಸುರಸುಂದರಿ. ನೀನು ನಿಜಕ್ಕೂ ದಿಟ್ಟಳೇ ಸರಿ. ನಾನು ನಿನ್ನನ್ನು ಕಂಡುಮೋಹಕ್ಕೆ ವಶನಾದೆ. ನೀನಾದರೋ ನಿನ್ನ ಪ್ರೀತಿಗೆ ಮತ್ತು ನಿಷ್ಠೆಗೆ ಬದ್ಧಳಾದೆ. ನಾನು ತೋರಿದ ಪದವಿಯನ್ನು ಪಟ್ಟವನನ್ನು ನಿರಾಕರಿಸಿದೆ. ನನ್ನನ್ನೇ ಪ್ರಶ್ನಿಸಿ ನನ್ನ ಪದವಿಯನ್ನೆ ಪ್ರತಿಭಟಿಸಿಬಿಟ್ಟೆ. ನಾನು ಮರೆತ ನನ್ನ ಕರ್ತವ್ಯ ಪ್ರಜ್ಞೆಯನ್ನು ಎಚ್ಚರಿಸಿದೆ. ನಾನು ನಿನ್ನನ್ನು ಬೇಟೆಯಾಡ ಬಯಸಿದರೆ ನೀನೇ ನನ್ನನ್ನು ಬೇಟೆಯಾಡಿಬಿಟ್ಟೆ. ನಾನು ಹಿಂಸೆಯ ಶಿಕಾರಿಯಾದರೆ ನೀನು ಅಹಿಂಸೆಯ ಶಿಕಾರಿ. ನಿನ್ನ ಪ್ರೀತಿಯ ಲೋಕಕ್ಕೆ ಮಾದರಿಯಾಗಲಿ ಹೀಗೋ ನಾನು ನಿನಗೆ ತಲೆಬಾಗುತ್ತಿರುವೆ. ನಿನ್ನ ಪತಿಯ ಮೇಲೆ ನಾನು ಪ್ರಯೋಗಿಸಿದ್ದು ಕೇವಲ ನಿದ್ರಾಬಾಣವನ್ನು ಕೆಲವೇ ಕ್ಷಣಗಳಲ್ಲಿ ಆತ ಮೂರ್ಛೆಯಿಂದ ಎಚ್ಚರಗೊಳ್ಳುವ ಆತನೊಂದಿಗೆ ನಿನ್ನ ದಾಂಪತ್ಯ ಚಿರನೂತವಾಗಿರಲಿ. ಆತನಲ್ಲಿ ನಾನು ಕ್ಷಮೆಯಾಚಿಸಿದೆನೆಂಬ ಮಾತನ್ನು ಮರೆಯದೆ ತಿಳಿಸು. ನಾನಿನ್ನು ಬರುವೆ...!' ಎಂದ ರಾಜನು ಕಾಡಿನಲ್ಲಿ ನಡೆದು ಕಣ್ಮರೆಯಾದ.

ಅಷ್ಟರಲ್ಲಿ ಮೂರ್ಛೆಯಿಂದ ಮೇಲೆದ್ದು ಕುಳಿತ ಕಿನ್ನರನು 'ಚಂದಾ... ಚಂದಾ...!' ಎಂದು ಪ್ರಲಾಪಿಸಲು ಓಡಿ ಹೋಗಿ ಪತಿಯನ್ನು ತಬ್ಬಿಕೊಂಡು ಆನಂದ ಬಾಷ್ಪ ಸುರಿಸತೊಡಗಿದ ಆಕೆ

'ನೀನಿಲ್ಲದಿರಲು ಎಲ್ಲವೂ ನನ್ನ ಪಾಲಿಗೆ ಶೂನ್ಯವೇ ಸರಿ' ಎನ್ನುತ್ತಿರಲು ಆತ'

'ಯಾರು...? ಯಾರು...?! ನನ್ನ ಈ ದುಸ್ಥಿತಿಗೆ ಕಾರಣರ್ಯಾರು?' ಆಕೆ ನಡೆದ ಸಂಗತಿಯನ್ನು ಪತಿಗೆ ವಿವರಿಸಲು ಆತ ಶಾಂತನಾಗಿ:

'ಹೌದ... ಆತ ಧೀರನೇ ಸರಿ....!!' ಎಂದಾಗ ಆಕೆ ಕೂಡ ಧ್ವನಿ ಸೇರಿಸಿದಳು. □

‘ಆಸೆಯಿಂದ ಅನ್ಯಾಯ, ದುರಾಸೆಯಿಂದ ದುರಂತ!’

ವಾರಣಾಸಿಯ ಆ ಐನೂರು ಜನ ವ್ಯಾಪಾರಸ್ಥರು ಪಕ್ಕದ ಜನ ಪದಕ್ಕೆ ತಮ್ಮ ತಮ್ಮ ಎತ್ತಿನ ಗಾಡಿಯನ್ನು ಕಟ್ಟಿಕೊಂಡು ವ್ಯಾಪಾರಕ್ಕಾಗಿ ಹೋಗುವ ಮುನ್ನ ಚೇತನವನದಲ್ಲಿ ತಂಗಿದ್ದ ಬುದ್ಧರನ್ನು ಸಂಧಿಸಿ ಅವರಿಗೆ ನಮಸ್ಕರಿಸಿ:

‘ಭಂತೆ, ನಾವುಗಳು ಕ್ಷೇಮದಿಂದ ಹಿಂದಿರುಗಿ ಬಂದರೆ ಮತ್ತೆ ತಮ್ಮ ಚರಣಗಳೀಗೆ ವಂದನೆ ಮಾಡಲು ಬರುವೆವು ತಮಗೆ ಅಭಿವವಚನ ನೀಡಿ ಹಾರೈಸಿ!’ ಎನ್ನಲು ಬುದ್ಧರು:

‘ಎಲೈ ವ್ಯಾಪಾರಸ್ಥರೇ, ಆಸೆಯಿಂದ ಅನ್ಯಾಯವು ದುರಾಸೆಯಿಂದ ದುರಂತವು ತಪ್ಪಿದಲ್ಲ. ಆದ್ದರಿಂದ ಆಸೆಯನ್ನು ಮತ್ತು ದುರಾಸೆಯನ್ನು ಗೆಲ್ಲರಿ. ನಿಮ್ಮ ಶ್ರಮದ ನ್ಯಾಯೂಯತ ಫಲಕ್ಕೆ ಮಾತ್ರ ಬಾಧ್ಯರಾಗಿ ನಿಮಗೆ ಮಂಗಳವಾಗುತ್ತದೆ!’ ಎಂದು ಶುಭ ಹಾರೈಸಿ ಕಳುಹಿಸಿದರು.

ಆ ಐನೂರು ಎತ್ತಿನ ಗಾಡಿಗಳು ವಾರಣಾಸಿ ನಗರವನ್ನು ದಾಟಿ ಅರಣ್ಯವನ್ನು ಪ್ರವೇಶಿಸಿತು. ದಾರಿಯ ಜಾಡು ತಪ್ಪಲು ಅವರುಗಳು ಹಲವು ದಿನಗಳು ಕಾಡಿನಲ್ಲಿ ಅಲೆದಾಲೆದು ಬಸವಳಿದು ಕೊನೆಗೊಂದು ಅತ್ತಿಯ ಮರದ ವಿಶಾಲ ಬಯಲನ್ನು ತಲುಪಿದರು. ತಾವುಗಳು ಕಟ್ಟಿಕಂಡು ತಂದಿದ್ದ ಬುತ್ತಿಯೂ ಖಾಲಿಯಾಗಿತ್ತು. ಹಸಿವು ಮತ್ತು ನೀರಡಿಕೆಯಿಂದ ಬಳಲಿ ತತ್ತರಿಸಿ ಹೋಗಿದ್ದರು. ಅವರಿಗೆಲ್ಲ ನೆರಳು ನೀಡಿದ ವಿಶಾಲವಾದ ಮರದತ್ತ ಕಣ್ಣಾಡಿಸಿದರು. ನಾಲ್ಕು ದಿಕ್ಕಿಗೂ ನಾಲ್ಕು ಬೃಹಾದಕಾರದ ಕೊಂಬೆಯನ್ನು ಚಾಚಿ ನಿಂತಿದ್ದ ಆ ಮರವೂ ಒಬ್ಬೊಬ್ಬರಿಗೂ ಒಂದೊಂದು ಬಗೆಯಾಗಿ ಕಂಡಿತು. ಕೆಲವರಿಗೆ ಒಂದು ಹಳೆಯ ಕೋಟೆಯಂತೆ ಸಕಲ ಸಂಪತ್ತನ್ನೆಲ್ಲ ತನ್ನೊಳಗೆ ಉದುಗಿಸಿಕೊಂಡಿರುವ ಖಜಾನೆಯಂತೆ ಕಂಡರೆ ಮತ್ತೆ ಕೆಲವರಿಗೆ ಒಂದು ಮಾಯಾನಗರಿಯಂತೆ ಕಾಲನ ವಿಕೋಪಕ್ಕೆ ತುತ್ತಾಗಿ ಝುರ್ ಜಂತವಾದ ಪಾಳು ಅರಮನೆಯಂತೆ ಕಂಡಿತು. ಮಗದೊಬ್ಬರಿಗೆ ಯಾವುದೋ ಶಕ್ತಿಶಾಲಿ ರಾಜನ ವಾಸಸ್ಥಾನದಂತೆ ಕಂಡಿತು.

ಅವರೆಲ್ಲ ಆ ಬೃಹಾದಾಕಾರವಾದ ಅತ್ತಿಮರವನ್ನು ಮುಟ್ಟುತ್ತಾ ತಟ್ಟುತ್ತಾ ಆಶ್ಚರ್ಯ ಚಕಿತರಾಗಿ ಮೇಲೆ ಕೆಳಗೆ ನೋಡುತ್ತಾ ಒಂದು ಸುತ್ತ ಹಾಕಿದರು. ಅದರಲ್ಲಿ ಒಬ್ಬ ವ್ಯಾಪಾರಸ್ಥನು ಉತ್ತರದ ರೆಂಬೆಗೆ ಕಿವಿ ಇಕ್ಕಿ ಆಲಿಸಿದ. ಅಲ್ಲಿ ಅಪಾರ ನೀರಿನ ಝುರಿಯು ‘ಝುಳುರುಝುಳು’ ಎಂದು ಹರಿದು ದುಮ್ಮಿಕ್ಕುವ ಶಬ್ಧ ಕೇಳಲು ಆತ:

‘ನೀರು... ನೀರು... ನೀರಿನ ಜಲ....!?’ ಎಂದು ಬೊಬ್ಬಿಟ್ಟ, ಉಳಿದುವವರು ತಮ್ಮ ತಮ್ಮ ಕಿವಿಯನ್ನು ಆ ರೆಂಬೆ ಅನಿಸಿ ಕೇಳಿದರು. ಅವನ ಮಾತು ನಿಜವೆನಿಸಿತು. ಆ ರೆಂಬೆಯನ್ನು ಕಡಿದರು.‘ಪನ್ನೀರು’ ಚಿಮ್ಮ ತೊಡಗಿತು. ಅವರೆಲ್ಲ ಸಾಕಾಗುವಷ್ಟು ನೀರು ಕುಡಿದು ಸ್ನಾನ ಮಾಡಿದಾಗ ಹೋದ ಜೀವ ಬಂದಂತಾಗಿತು. ಆ ಮರಕ್ಕೆ ವಂದಿಸಿ ಮುಂದುವರಿಯಲು ತಯಾರಿ ನೆಡೆಸುತ್ತಿರಲು ಒಬ್ಬ ವ್ಯಾಪಾರಿ ದಕ್ಷಿಣ ದಿಕ್ಕಿನ ರೆಂಬೆಗೆ ಕಿವಿಯಾನಿಸಿದ, ಒಳಗೆ ಏನೋ ಕೊತಕೊತನೆ ಕುದಿಯುತ್ತಿರುವ ಸದ್ದಾಯಿತು. ಅನುಮಾನದಿಂದ ಮೂಗಿನಿಂದ ಅಪ್ರಾಣಿಸಿದ. ಭಕ್ಷ್ಯಭೋಜನಗಳ ವಾಸನೆಯು ಅನುಭವಕ್ಕೆ ಬರಲು ಅತ:

‘ಅನ್ನ... ಆಹಾರ... ಭಕ್ಷ್ಯಭೋಜನಗಳು.....!?’ ಎಂದು ಚೀರಿದ. ಉಳಿದವರು ಓಡಿ ಬಂದು ಮೂಸಲು ನಿಜವೆನಿಸಿತು. ದಕ್ಷಿಣ ಭಾಗದ ಕೊಂಬೆಯನ್ನು ಕಡಿದರು. ಭಕ್ಷ್ಯ ಭೋಜನಗಳು ದೊರೆಯಲು ಸಾಕು ಸಾಕುವೆನ್ನುವಷ್ಟು ತಿಂದು ಹಸಿವನ್ನು ನೀಗಿಸಿಕೊಂಡಿದ್ದೆ ಅಲ್ಲದೆ ಮುಂದಿನ ಪ್ರಯಾಣಕ್ಕೆ ಸಾಕೇನಿಸುವಷ್ಟು ಬುತ್ತಿಯನ್ನು ಕಟ್ಟಿಕೊಂಡರು.

ಬಳಿಕ ಎಲ್ಲರೂ ಆ ಮರಕ್ಕೆ ಕೃತಜ್ಞೆತೆಯಿಂದ ವಂದಿಸುವುದನ್ನು ಮರೆತು ಆಸೆ ತುಂಬಿದ ಕಣ್ಣುಗಳಿಂದ ನೋಡ ತೊಡಗಿದರು. ಅವರಲ್ಲಿ ಒಬ್ಬ ವ್ಯಾಪಾರಿಯು ಪಶ್ಚಿಮದ ಕೊಂಬೆಯ ಬಳಿ ಹೋಗಿ ತನ್ನ ಕಿವಿ ಅನಿಸಿದ, ಏನು ಕೇಳಿಸಲಿಲ್ಲ. ಮೂಗನ್ನು ತಗುಲಿಸಿ ವಾಸನೆ ನೋಡಿದ. ಏನು ಅನ್ನಿಸಲಿಲ್ಲ. ಒಂದು ಪೊಟರೆಯ ಕಿಂಡಿಗೆ ಕಣ್ಣನ್ನು ತೂರಿಸಿದ, ಬೆಚ್ಚಿಬಿದ್ದು:

‘ಹೆಣ್ಣು.....ಹೆಣ್ಣು.... ರಂಬೆ... ಊರ್ವಶಿಯರು...!?’ ಎಂದು ಚೀರಿದ ಅವರಗಳೆಲ್ಲ ಸೇರಿ ಪಶ್ಚಿಮದ ಆ ಕೊಂಬೆಯನ್ನು ಕಡಿದರು. ಐನೂರು ಸುಂದರ ಸ್ತ್ರೀಯರು ಮಧುರ ಪಾತ್ರೆಯನ್ನು ಕೈಯಲ್ಲಿ ಹಿಡಿದುಕೊಂಡು ಹೊರ ಬಂದರು. ಅವರೊಡನೆ ಕುಡಿದು ಕುಣಿದು ಮನ ತಣಿಯುವಷ್ಟು ರಮಿಸಿ ಇಡೀ ರಾತ್ರಿ ತಮ್ಮ ಕಾಮದಾಹವನ್ನು ತೀರಿಸಿಕೋಂಡು.

ಸೂರ್ಯೋದಯವಾಗುತ್ತಿದ್ದಂತೆ ತಮ್ಮ ಮುಂದಿನ ಪ್ರಯಾಣಕ್ಕೆ ಅಣಿ ಮಾಡಿಕೊಂಡರು. ಆದರೆ ಅವರಲ್ಲಿ ಒಬ್ಬ ಆಸೆ ಬುರಕ ಉಳಿದ ಪೂರ್ವದಿಕ್ಕಿನ ಏಕೈಕ ಕೊಂಬೆಯ ಬಳಿ ಹೋಗಿ ಕಿವಿ, ಮೂಗು, ಕಣ್ಣನ್ನು ಆನಿಸಿ ಪರೀಕ್ಷಿಸಿದ. ಯಾವ ಸುಳಿವು ದೊರೆಯದೆ ಹೋಗಲು ನಿರಾಸೆಯಿಂದ ಪೊಟರೆಯೊಂದಕ್ಕೆ ಕೈ ತೂರಿಸಿದ. ಯಾವುದೋ ಲೋಹ ಸ್ಪರ್ಶಿಸಿದಂತಾಯಿತು. ಹಿಡಿದು ಮೇಲೆತ್ತಿ ನೋಡಿ:



‘ಚಿನ್ನ... ಬೆಳ್ಳಿ... ಮುತ್ತು... ರತ್ನ... ವಜ್ರ ವೈಢೂರ್ಯ...!?’ ಎಂದು ಆಕಾಶವೆ ಬೆಚ್ಚುವಂತೆ ಚೀರಿದ. ಅವರೆಲ್ಲ ಓಡಿ ಬಂದು ಪೂರ್ವದ ಕೊಂಬೆಯನ್ನು ಕಡಿದರು. ಐನೂರು ಗಾಡಿಗಳಿಗೂ ಸಾಕಾಗುವಷ್ಟು ಚಿನ್ನ, ಬೆಳ್ಳಿ, ಮುತ್ತು, ರತ್ನ ವಜ್ರ, ವೈಢೂರ್ಯವನ್ನೆಲ್ಲ ತುಂಬಿ ಕೊಂಡು ಮೊದಲು ಇಲ್ಲಿಂದ ಸುರಕ್ಷಿತವಾಗಿ ಪಾರಾಗಿ ಈ ಅಪೂರ್ವ ಸಂಪತ್ತನ್ನು ಎಲ್ಲಾದರೂ ಅಡಿಗಿಸಿ ಇಡುವ ವ್ಯವಸ್ಥೆಯನ್ನು ಮಾಡೋಣವೆಂದು ಬರಬರನೆ ಗಾಡಿ ಏರಿ ಕುಳಿತರು.

ಆದರೆ ಆ ಐನೂರು ಜನ ವ್ಯಾಪಾರಸ್ಥರ ಮನಸ್ಸಿನಲ್ಲಿ ಮತ್ತು ದುರಾಸೆಯು ಮೂಡಲು ಗಾಡಿಯ ಮೂಕಿನಿಂದ ಜಿಗಿದು, ನಿಂತರು ಬೊಳಾದ ಮರದ ಬುಡದ ಮಣ್ಣನ್ನು ಸರಿಸಿ ಬೇರನ್ನು ಕಡಿಯಲು ಪ್ರಾರಂಭಿಸಿದರು. ಆ ಸಂದರ್ಭದಲ್ಲಿ ಮರದ ಬುಡದಲ್ಲಿದ್ದ ಹುತ್ತವೊಂದು ಛಿದ್ರವಾಗಲು ಅದರಲ್ಲಿ ವಾಸಿಸುತ್ತಿದ್ದ ನೂರಾರು ವಿಷ ಸರ್ಬಗಳು ಬುಸ್ ಎಂದು ಹೆಡೆ ಎತ್ತಿ ನಿಂತವು. ಐನೂರು ವ್ಯಾಪಾರಿಗಳಿಗೂ ಕಚ್ಚಿದವು ಮರುಕ್ಷಣವೆ ಅವರಿಗೆಲ್ಲ ವಿಷವೇರಿ ಬಾಯಲ್ಲಿ ಬಿಳಿಯ ನೊರೆಯನ್ನು ಕಾರುತ್ತಾ ಕೊನೆಯ ಉಸಿರನ್ನು ಎಳೆಯುವ ಮುನ್ನ ಬುದ್ಧದನ್ನು ಹೀಗೆ ಸ್ಮರಿಸಿದರು.

‘ಹೌದು ತಂದೆ, ತಾವುಗಳು ಹೇಳಿದಂತೆ ನಾವುಗಳು ಆಸೆಯನ್ನು ದುರಾಸೆಯನ್ನು ನೀಗಿಕೊಳ್ಳಲಿಲ್ಲ. ಬದಲಿಗೆ ತಬ್ಬಿಕೊಂಡೆವು. ನಮ್ಮಗಳ ಸರ್ವನಾಶಕ್ಕೆ ಕಾರಣಕರ್ತರಾದೆವು. ದಯವಿಟ್ಟು ಈ ಪಾಪಿಗಳನ್ನು ಮನ್ನಿಸು ಪ್ರಭು....!!’ ಎಂದರು. □

'SAMVADA' Kannada Monthly, Nov 2006 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month À

ಡೆಂಗಿ ಜ್ವರ ತಡೆಗಟ್ಟುವ ಬಗ್ಗೆ ಕ್ರಮಗಳು

ಡೆಂಗಿ ಜ್ವರ ಎಂದರೇನು?

ಡೆಂಗಿ ಜ್ವರವು ಡೆಂಗಿ ವೈರಸ್‌ನಿಂದ ಉಂಟಾಗುವ ಕಾಯಿಲೆ. ಈ ಕಾಯಿಲೆಯು ಸೋಂಕು ಹೊಂದಿದ ಈಡಿಸ್ ಈಜಿಪ್ಟೈ ಎಂಬ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ.

ಈ ರೋಗದ ಮುಖ್ಯ ಲಕ್ಷಣಗಳು

ಇದ್ದಕ್ಕಿದ್ದಂತೆ ತೀವ್ರಜ್ವರ, ವಿಪರೀತ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುವುದು ಈ ರೋಗದ ಲಕ್ಷಣ. ಹಲವು ಬಾರಿ ಮೂಗು, ಬಾಯಿ ಮತ್ತು ವಸಡುಗಳಲ್ಲಿ ರಕ್ತಸ್ರಾವದ ಚಿಹ್ನೆಗಳು ಕಂಡುಬರುತ್ತವೆ. ಈ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ರಕ್ತಪರೀಕ್ಷೆ ಮಾಡಿಸಿ, ಸೂಕ್ತ ಚಿಕಿತ್ಸೆ ಪಡೆಯುವುದು.

ಸಾರ್ವಜನಿಕರು ಡೆಂಗಿ ರೋಗವನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು:-

೧. ಡೆಂಗಿ ಹರಡುವ ಈಜಿಪ್ಟೈ ಸೊಳ್ಳೆಗಳು ಮನೆಯಲ್ಲಿನ ನೀರು ಶೇಖರಿಸುವ ಸಿಮೆಂಟ್ ತೊಟ್ಟಿಗಳು, ಬ್ಯಾರಲ್‌ಗಳು, ಡ್ರಮ್‌ಗಳು, ಏರ್‌ಕೂಲರ್, ಹೂಕುಂಡದ ನೀರಿನ ಸಂಗ್ರಹಗಳು ಇತ್ಯಾದಿಗಳಲ್ಲಿ ಉತ್ಪತ್ತಿಯಾಗುವುದರಿಂದ ಇವುಗಳನ್ನು ವಾರಕ್ಕೊಮ್ಮೆ ಸಂಪೂರ್ಣವಾಗಿ ಶುಚಿಗೊಳಿಸಿ, ಯಾವಾಗಲೂ ಭದ್ರವಾದ ಮುಚ್ಚಳಿಕೆಯಿಂದ ಮುಚ್ಚಿ ಸೊಳ್ಳೆ ಉತ್ಪತ್ತಿಯಾಗದಂತೆ ಎಚ್ಚರವಹಿಸಿ.

೨. ಬಯಲಲ್ಲಿ ಪೈರು, ಎಳನೀರಿನ ಚಿಪ್ಪು ಮತ್ತು ತ್ಯಾಜ್ಯ ವಸ್ತುಗಳಲ್ಲಿ ನೀರು ಸಂಗ್ರಹವಾಗದಂತೆ ಸೂಕ್ತ ವಿಲೇವಾರಿ ಮಾಡುವುದು ಅಥವಾ ನಾಶಗೊಳಿಸುವುದು.

೩. ಈ ರೋಗ ಹರಡುವ ಸೊಳ್ಳೆಗಳು ಹಗಲಲ್ಲಿ ಕಚ್ಚುವುದರಿಂದ ಸೊಳ್ಳೆ ಕಡಿತದಿಂದ ಪಾರಾಗಲು ಮಕ್ಕಳು, ವಿಶ್ರಾಂತಿ ಪಡೆಯುವ ವಯೋವೃದ್ಧರು ಕಾಯಿಲೆಯಿಂದ ನರಳುವವರು ತಪ್ಪದೇ ಸೊಳ್ಳೆಪರದೆಯನ್ನು ಉಪಯೋಗಿಸುವುದು ಹಾಗೂ ಇತರೆ ಸೊಳ್ಳೆ ನಿರೋಧಕಗಳನ್ನು ಬಳಸುವುದು. ಹೀಗೆ ಮಾಡುವುದರಿಂದ ಈ ರೋಗವನ್ನು ತಡೆಗಟ್ಟುವುದು ಸುಲಭ.

ನಿಮ್ಮ ಮನೆಯ ಒಳಗೆ ಹಾಗೂ ಮನೆಯ ಸುತ್ತಮುತ್ತ ಸೊಳ್ಳೆ ಉತ್ಪತ್ತಿಯನ್ನು ತಡೆಗಟ್ಟಿ ಡೆಂಗಿ ಜ್ವರ ನಿಯಂತ್ರಿಸಿ

ಕರ್ನಾಟಕ ವಾರ್ತೆ
Karnataka Information